ಬುಧವಾರ, ಫೆಬ್ರುವರಿ 7, 2024 | ₹ 7.00
www.prajavani.net
prajavani.net prajavani prajavani prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ನಗು...
ಬಜೆಟ್ ಅಧಿವೇಶನದ ಸಂದರ್ಭದಲ್ಲಿ ಸಂಸತ್ ಭವನದಲ್ಲಿ ಟಿಎಂಸಿ ಸಂಸದೆ ನುಸ್ರತ್ ಜಹಾನ್ ಕಾಣಿಸಿಕೊಂಡಿದ್ದು ಹೀಗೆ...



ಬಿಬಿಎಂಪಿ: ತಪ್ಪು ಮಾಹಿತಿ ನೀಡಿರುವ ಆಸ್ತಿ ತೆರಿಗೆ ಪಾವತಿದಾರರಿಗೆ ನಿರಾಳ

ದುಪ್ಪಟ್ಟು ದಂಡ ಇಲ್ಲ, ಬ್ಯಾಂಕ್ ಬಡ್ಡಿ ದರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ವಯಂ ಘೋಷಣೆ ಆಸ್ತಿ ತೆರಿಗೆ ಪದ್ಧತಿಯಲ್ಲಿ ವಲಯ ವರ್ಗೀಕರಣವನ್ನು ತಪ್ಪಾಗಿ ಘೋಷಿಸಿಕೊಂಡ ಆಸ್ತಿ ಮಾಲೀಕರಿಗೆ ದುಪ್ಪಟ್ಟು ದಂಡ ಮನ್ನಾ ಮಾಡಿ, ವ್ಯತ್ಯಾಸದ ಮೊತ್ತ ಮತ್ತು ಆ ಮೊತ್ತಕ್ಕೆ ಬ್ಯಾಂಕ್ ಬಡ್ಡಿ ದರ ಸಂಗ್ರಹಿಸಲು ಬಿಬಿಎಂಪಿ ನಿರ್ಧರಿಸಿದೆ.

'ಸ್ವಯಂ ಘೋಷಣೆ ಆಸ್ತಿ ತೆರಿಗೆ ಪದ್ಧತಿಯಲ್ಲಿ ವಲಯಗಳನ್ನು ಆಯ್ಕೆ ಮಾಡಿಕೊಳ್ಳುವಾಗ ಆಸ್ತಿ ಮಾಲೀಕರು ತಪ್ಪು ಮಾಡಿದ್ದಾರೆ. ಈ ತಪ್ಪನ್ನು ಬಿಬಿಎಂಪಿ ಸರಿಯಾದ ಸಮಯಕ್ಕೆ ಮಾಲೀಕರಿಗೆ ತಿಳಿಸಿಲ್ಲ. ಹೀಗಾಗಿ, ತೆರಿಗೆದಾರರಿಂದ ದುಪ್ಪಟ್ಟು ಆಸ್ತಿ ತೆರಿಗೆ ಹಣವನ್ನು ಸಂಗ್ರಹಿಸುವಂತಿಲ್ಲ. ವ್ಯತ್ಯಾಸದ ಮೊತ್ತ ಮತ್ತು ಅದಕ್ಕೆ ಬ್ಯಾಂಕ್ ಬಡ್ಡಿ ದರವನ್ನು ವಿಧಿಸಬಹುದು' ಎಂದು 2023ರ ಸೆಪ್ಟೆಂಬರ್ 13ರಂದು ಸರ್ಕಾರ ಆದೇಶಿಸಿತ್ತು. ಅದನ್ನು ಜಾರಿಗೆ ತರಲು ಬಿಬಿಎಂಪಿ ಫೆ.3ರಂದು ಸುತ್ತೋಲೆ ಹೊರಡಿಸಿದೆ.

2016–17ನೇ ಸಾಲಿನಿಂದ ತಪ್ಪು ವರ್ಗೀಕರಣದಲ್ಲಿ ಆಸ್ತಿ ತೆರಿಗೆ ಪಾವತಿಸಿದ್ದರೆ, ದುಪ್ಪಟ್ಟು ದಂಡದ ಬದಲು ಬ್ಯಾಂಕ್ ಬಡ್ಡಿ ದರ ಅಂದರೆ ಶೇ 6.75ರಷ್ಟನ್ನು ಪೂರ್ಣ ಅವಧಿಗೆ ವಿಧಿಸಬೇಕು ಎಂದು ಬಿಬಿಎಂಪಿ ಸುತ್ತೋಲೆಯಲ್ಲಿ ತಿಳಿಸಿದೆ.

ಸ್ವಯಂ ಘೋಷಣೆ ಆಸ್ತಿ ತೆರಿಗೆಯಲ್ಲಿ ವಲಯ ವರ್ಗೀಕರಣವನ್ನು 78,254 ಆಸ್ತಿಗಳಲ್ಲಿ ತಪ್ಪಾಗಿ ನಮೂದಿಸಲಾಗಿದೆ. ಇದರಲ್ಲಿ 11,725 ನೋಟಿಸ್ ಜಾರಿ ಮಾಡಲಾಗಿದೆ. 7,891 ನೋಟಿಸ್‌ಗಳಿಗೆ ತೆರಿಗೆದಾರರು ಪ್ರತಿಕ್ರಿಯಿಸಿ, ಆಸ್ತಿ ತೆರಿಗೆಯನ್ನೂ ಪಾವತಿಸಿದ್ದಾರೆ. ಇಂತಹವರಿಂದ ಹೆಚ್ಚುವರಿ ಪಾವತಿಸಿಕೊಂಡಿರುವ ಹಣವನ್ನು ಮುಂದಿನ ಆಸ್ತಿ ತೆರಿಗೆ ಸಾಲಿನಲ್ಲಿ ಹೊಂದಾಣಿಕೆ ಮಾಡಬೇಕು ಎಂದು ಎಲ್ಲ ವಲಯ ಆಯುಕ್ತರು ಹಾಗೂ ಕಂದಾಯ ವಿಭಾಗದ ಅಧಿಕಾರಿಗಳಿಗೆ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಸೂಚಿಸಿದ್ದಾರೆ.

ವಲಯ ವರ್ಗೀಕರಣ ವಿವರಗಳು ಆಸ್ತಿ ತೆರಿಗೆ ತಂತ್ರಾಂಶದಲ್ಲಿ ತಪ್ಪಾಗಿ ನಮೂದಿತವಾಗಿದ್ದರೆ, ಅಂತಹ ಪ್ರಕರಣಗಳ ನೋಟಿಸ್‌ಗಳನ್ನು ರದ್ದುಪಡಿಸಬೇಕು. ವಲಯ ವರ್ಗೀಕರಣಕ್ಕಿಂತ ಹೆಚ್ಚಿನ ವರ್ಗವನ್ನು ಆಯ್ದುಕೊಂಡಿದ್ದರೆ ಅಂತಹ ಪ್ರಕರಣಗಳಲ್ಲಿ ಮರುಪಾವತಿಗೆ ಸರ್ಕಾರದ ಆದೇಶದಲ್ಲಿ ಸೂಚನೆಯಿಲ್ಲ. ಆ ಪ್ರಕರಣಗಳಲ್ಲಿ ಹೆಚ್ಚುವರಿ ಹಣವನ್ನು ಹೊಂದಾಣಿಕೆ ಮಾಡಲಾಗುವುದಿಲ್ಲ ಎಂದು ಸುತ್ತೋಲೆಯಲ್ಲಿ ತಿಳಿಸಿದ್ದಾರೆ.

ವಲಯ	2023–24ನೇ ಸಾಲಿನ ಗುರಿ	ಸಂಗ್ರಹ 2024ರ ಫೆ.6ರಂತೆ (₹ ಕೋಟಿಗಳಲ್ಲಿ)
ಒಟ್ಟು	4,561	3,518.47
ಪೂರ್ವ	764	629.44
ದಕ್ಷಿಣ	627	502.52
ಬೊಮ್ಮನಹಳ್ಳಿ	501	397.01
ಮಹದೇವಪುರ	1238	956.04
ಪಶ್ಚಿಮ	493	373.75
ಯಲಹಂಕ	429	313.61
ಆರ್‌.ಆರ್‌. ನಗರ	345	241.61
ದಾಸರಹಳ್ಳಿ	164	104.49

ಶೇ 50ರಷ್ಟು ಪಾವತಿಸಿದರೆ ಜಪ್ತಿ ಇಲ್ಲ!

'ಬಿಬಿಎಂಪಿ ವ್ಯಾಪ್ತಿಯಲ್ಲಿ ₹10 ಲಕ್ಷಕ್ಕೂ ಹೆಚ್ಚು ಆಸ್ತಿ ತೆರಿಗೆ ಬಾಕಿ ಉಳಿಸಿಕೊಂಡಿರುವ ಮಾಲೀಕರು ಒಟ್ಟಾರೆ ಬಾಕಿ ಮೊತ್ತದಲ್ಲಿ ಶೇ 50ರಷ್ಟು ಹಣ ಪಾವತಿ ಮಾಡಿದರೆ ಕಟ್ಟಡ ಜಪ್ತಿ ಅಥವಾ ಬೀಗ ಹಾಕಬಾರದು' ಎಂದು ಬಿಬಿಎಂಪಿ ಕಂದಾಯ ವಿಭಾಗದ ವಿಶೇಷ ಆಯುಕ್ತರು ಕಂದಾಯ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

'ಆಸ್ತಿ ತೆರಿಗೆಗೆ ದಂಡ ಹಾಗೂ ಬಡ್ಡಿ ಹೆಚ್ಚಾಗಿದ್ದು, ಬಿಬಿಎಂಪಿ ಅಧಿಕ ಮೊತ್ತ ಪಾವತಿಸುವಂತೆ ನೋಟಿಸ್ ಜಾರಿ ಮಾಡಿದೆ. ಇದನ್ನು ಪಾವತಿಸಲು ಸಾಧ್ಯವಿಲ್ಲ' ಎಂದು ಹಲವು ಮಾಲೀಕರು ದೂರು ನೀಡಿದ್ದರು. ಅವರಿಗೆ ಅನುಕೂಲವಾಗುವಂತೆ ಶೇ 50ರಷ್ಟು ತೆರಿಗೆ ಪಾವತಿಸಿದರೆ, ಮುಂದಿನ ಕ್ರಮ ಕೈಗೊಳ್ಳಬಾರದು. ಅವರ ದೂರುಗಳನ್ನು ಪಡೆದು ಅದನ್ನು ಪರಿಶೀಲಿಸುವಂತೆ ಹೇಳಿದ್ದಾರೆ.

ಆಸ್ತಿ ಸಂಗ್ರಹ: ಹೊಸ ದಾಖಲೆ

ಬಿಬಿಎಂಪಿ ಆಸ್ತಿ ತೆರಿಗೆಯಲ್ಲಿ ಹೊಸ ದಾಖಲೆಯಾಗಿದ್ದು, ಮೊದಲ ಬಾರಿಗೆ ಆಸ್ತಿ ತೆರಿಗೆ ಸಂಗ್ರಹ ₹3,500 ಕೋಟಿ ಗಡಿಯನ್ನು ದಾಟಿದೆ. 2022–23ನೇ ಸಾಲಿನಲ್ಲಿ ಒಟ್ಟು ₹3,340.86 ಕೋಟಿ ಸಂಗ್ರಹವಾಗಿತ್ತು. ₹4558.52 ಕೋಟಿ ಗುರಿಯಲ್ಲಿ ಶೇ 77ರಷ್ಟನ್ನು ಸಾಧಿಸಲಾಗಿದ್ದು, ಇನ್ನೂ ಎರಡು ತಿಂಗಳಲ್ಲಿ ಕೆಲವು ನೂರು ಕೋಟಿ ಸಂಗ್ರಹವಾಗುವ ನಿರೀಕ್ಷೆ ಇದೆ. ಕಳೆದ ಸಾಲಿನ ಫೆಬ್ರುವರಿಗೆ ಹೋಲಿಸಿದರೆ ₹563 ಕೋಟಿ ಹೆಚ್ಚು ಸಂಗ್ರಹವಾಗಿದೆ ಎಂದು ಕಂದಾಯ ವಿಭಾಗದ ಅಧಿಕಾರಿಗಳು ತಿಳಿಸಿದರು.

ಎಲ್ಲ ವಲಯಗಳೂ ಹಿಂದಿನ ವರ್ಷಕ್ಕೆ ಹೋಲಿಸಿದರೆ ಹೆಚ್ಚಿನ ಆಸ್ತಿ ತೆರಿಗೆ ಸಂಗ್ರಹಿಸಿದ್ದು, ಪೂರ್ವ, ದಕ್ಷಿಣ, ಬೊಮ್ಮನಹಳ್ಳಿ ವಲಯಗಳು ಅಗ್ರ ಮೂರು ಸ್ಥಾನಗಳಲ್ಲಿವೆ.

ಸುದ್ದಿ 2 ನಿಮಿಷ


ನಾನೂ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಯೇ: ವಿಶ್ವನಾಥ್

ಮಡಿಕೇರಿ: 'ಲೋಕಸಭಾ ಚುನಾವಣೆಗೆ ಕಾಂಗ್ರೆಸ್‌ನಿಂದ ಸ್ಪರ್ಧಿಸಲು ನಾನು ಕೂಡ ಆಕಾಂಕ್ಷಿಯೇ. ನನ್ನ ಅನುಭವ ಪರಿಗಣಿಸಿ ಟಿಕೆಟ್ ನೀಡಿದರೆ ಸ್ಪರ್ಧಿಸಲು ಸಿದ್ಧ' ಎಂದು ವಿಧಾನ ಪರಿಷತ್ ಸದಸ್ಯ ಅಡಗೂರು ಎಚ್ ವಿಶ್ವನಾಥ್ ಪ್ರತಿಪಾದಿಸಿದರು.

'ನಾನೊಬ್ಬನೇ ಪಕ್ಷಾಂತರ ಮಾಡಿಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯ, ಬಿಜೆಪಿಯ ಹಿರಿಯ ನಾಯಕ ಬಿ.ಎಸ್.ಯಡಿಯೂರಪ್ಪ ಸೇರಿದಂತೆ ಬಹುತೇಕ ರಾಜಕಾರಣಿಗಳು ಬೇರೆ ಬೇರೆ ಪಕ್ಷಗಳಲ್ಲಿದ್ದವರೇ. ನಾನು ಯಾರಿಂದಲೂ, ಯಾವುದನ್ನೂ ಮುಚ್ಚಿಟ್ಟಿಲ್ಲ. ನಾನು ಮಾಡಿರುವ ಅಭಿವೃದ್ಧಿ ಕಾರ್ಯಗಳ ಬಗ್ಗೆ ಎಲ್ಲರಿಗೂ ತಿಳಿದಿದೆ. ನನಗೂ ಮಲ್ಲಿಕಾರ್ಜುನ ಖರ್ಗೆಯವರು ರಾಜಕೀಯವಾಗಿ ಪ್ರೋತ್ಸಾಹ ನೀಡಿದ್ದಾರೆ' ಎಂದು ನಗರದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

'ದೇಶದಲ್ಲಿ ದ್ವೇಷದ ರಾಜಕಾರಣ ನಡೆಯುತ್ತಿದ್ದು, ಎದುರಾಳಿಗಳನ್ನು ವೈರಿಗಳಂತೆ ಪರಿಗಣಿಸಿ, ಜಾರಿ ನಿರ್ದೇಶನಾಲಯದ ಮೂಲಕ ದ್ವೇಷ ಸಾಧಿಸಲಾಗುತ್ತಿದೆ. ಇದು ನಿಜಕ್ಕೂ ಪ್ರಜಾಪ್ರಭುತ್ವ ವ್ಯವಸ್ಥೆಗೆ ಮಾರಕ' ಎಂದರು.

'ದಕ್ಷಿಣ ಭಾರತದ ಜನರ ಹಣ ಉತ್ತರ ಭಾರತದ ಕಡೆಗೆ ಹರಿಯುತ್ತಿದೆ. ಈ ದೇಶದ ಅಸ್ಮಿತೆಯಾದ ಶ್ರೀರಾಮ ಒಂದು ಪಕ್ಷಕ್ಕೆ ಸೀಮಿತವಾಗಿ, ಮುಂಬರುವ ಚುನಾವಣೆಯ ವಿಷಯವಾಗಿರುವುದು ಸರಿಯಲ್ಲ' ಎಂದು ಟೀಕಿಸಿದರು.



ದಟ್ಟ ಮಂಜು: 46 ವಿಮಾನ ಹಾರಾಟ ವ್ಯತ್ಯಯ

ದೇವನಹಳ್ಳಿ (ಬೆಂಗಳೂರು ಗ್ರಾಮಾಂತರ ಜಿಲ್ಲೆ): ಇಲ್ಲಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಮಂಗಳವಾರ ಮುಂಜಾನೆ ದಟ್ಟ ಮಂಜು ಆವರಿಸಿದ್ದರಿಂದ 46 ವಿಮಾನಗಳ ಹಾರಾಟದಲ್ಲಿ ವ್ಯತ್ಯಯವಾಗಿದೆ ಎಂದು ಬೆಂಗಳೂರು ವಿಮಾನ ನಿಲ್ದಾಣ ಪ್ರಾಧಿಕಾರದ ಮೂಲಗಳು ತಿಳಿಸಿವೆ

ದೆಹಲಿ, ಅಹಮದಾಬಾದ್, ಮುಂಬೈನಿಂದ ಬೆಂಗಳೂರಿಗೆ ಬರಬೇಕಿದ್ದ ವಿಮಾನಗಳ ಮಾರ್ಗ ಬದಲಿಸಿ ಚೆನ್ನೈನಲ್ಲಿ ಇಳಿಸಲಾಗಿದೆ. ರನ್ ವೇ ಮೇಲ್ಮೈ ಭಾಗದಲ್ಲಿ 50 ಮೀಟರ್ ಎತ್ತರದಷ್ಟು ಮಂಜು ದಟ್ಟವಾಗಿ ಆವರಿಸಿದ್ದರಿಂದ ವಿಮಾನ ಇಳಿಯಲು ಸಾಧ್ಯವಾಗಲಿಲ್ಲ.

ಮಂಗಳವಾರ ಮಧ್ಯಾಹ್ನದ ನಂತರ ಮಂಜು ಕರಗಿದ ಕಾರಣ ವಿಮಾನ ಸಂಚಾರ ಸಹಜ ಸ್ಥಿತಿಗೆ ಮರುಕಳಿಸಿತು. ಮುಂಬೈನಿಂದ ಬೆಳಿಗ್ಗೆ ಬೆಂಗಳೂರಿಗೆ ತಲುಪಬೇಕಿದ್ದ ವಿಸ್ತಾರ ವಿಮಾನವನ್ನು ಕೊಯಮತ್ತೂರಿಗೆ ಕಳುಹಿಸಲಾಗಿತ್ತು. ವಾತಾವರಣ ತಿಳಿಗೊಂಡ ನಂತರ ಬೆಳಗ್ಗೆ 9.49ಕ್ಕೆ ಈ ವಿಮಾನ ದೇವನಹಳ್ಳಿ ವಿಮಾನ ನಿಲ್ದಾಣ ತಲುಪಿದೆ.

ಫೆ.12ರವರೆಗೂ ಬೆಂಗಳೂರು ಸುತ್ತಮುತ್ತ ದಟ್ಟ ಮಂಜು ಆವರಿಸುವ ಸಾಧ್ಯತೆ ಇದೆ ಎಂದು ಭಾರತೀಯ ಹವಮಾನ ಇಲಾಖೆ ಮುನ್ಸೂಚನೆ ನೀಡಿದೆ. ಹೀಗಾಗಿ ವಿಮಾನ ಸಂಚಾರದಲ್ಲಿ ವ್ಯತ್ಯಯವಾಗುವ ಸಾಧ್ಯತೆ ಇದೆ ಎಂದು ಪ್ರಾಧಿಕಾರದ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಈ ಕುರಿತು ವಿಮಾನ ಸಂಸ್ಥೆಗಳು ಪ್ರಯಾಣಿಕರಿಗೆ ಮಾಹಿತಿ ನೀಡಿವೆ. ವಿಮಾನ ಸಂಚಾರ ವೇಳೆಯನ್ನು ಖಚಿತ ಪಡಿಸಿಕೊಂಡು ವಿಮಾನ ನಿಲ್ದಾಣಕ್ಕೆ ಆಗಮಿಸುವಂತೆ ಪ್ರಯಾಣಿಕರಿಗೆ ಸೂಚಿಸಲಾಗಿದೆ.

ಘನತ್ಯಾಜ್ಯ ವಿಲೇವಾರಿ: ಹಿರಿಯ ಅಧಿಕಾರಿಗಳ ಸಭೆಗೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವ್ಯಾಪ್ತಿಯಲ್ಲಿನ ಘನತ್ಯಾಜ್ಯ ವಿಲೇವಾರಿಯ ಸಾಮರ್ಥ್ಯ ವೃದ್ಧಿ ಮತ್ತು ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವ ದಿಸೆಯಲ್ಲಿ ಸಂಬಂಧಿಸಿದ ಇಲಾಖೆಗಳ ಹಿರಿಯ ಅಧಿಕಾರಿಗಳ ಜತೆ ಸಭೆ ನಡೆಸಿ ಸೂಕ್ತ ನಿರ್ಣಯ ಕೈಗೊಳ್ಳಿ' ಎಂದು ಹೈಕೋರ್ಟ್, ರಾಜ್ಯ ಸರ್ಕಾರ ಮತ್ತು ಬಿಬಿಎಂಪಿಗೆ ಸೂಚಿಸಿದೆ.

ಬಿಬಿಎಂಪಿ ವ್ಯಾಪ್ತಿಯಲ್ಲಿನ ಘನತ್ಯಾಜ್ಯ ವಿಲೇವಾರಿಗೆ ಸಂಬಂಧಿಸಿದಂತೆ 2012ರಲ್ಲಿ ಸಲ್ಲಿಸಲಾಗಿರುವ ಹಲವು ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳನ್ನು ಮುಖ್ಯ ನ್ಯಾಯಮೂರ್ತಿ ಪಿ.ಎಸ್. ದಿನೇಶ್ ಕುಮಾರ್ ಹಾಗೂ ನ್ಯಾಯಮೂರ್ತಿ ಟಿ.ಜಿ. ಶಿವಶಂಕರೇಗೌಡ ಅವರಿದ್ದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲರು, 'ಮಹಾನಗರದ ವ್ಯಾಪ್ತಿಯಲ್ಲಿ ಘನತ್ಯಾಜ್ಯ ವಿಲೇವಾರಿ ಹಾಗೂ ಇದನ್ನು ನಿರ್ವಹಿಸುವ ಬಿಬಿಎಂಪಿಯ ಸಾಮರ್ಥ್ಯ ಸಮರ್ಪಕವಾಗಿಲ್ಲ ಎಂದು ಮಾಲಿನ್ಯ ನಿಯಂತ್ರಣ ಮಂಡಳಿಯೇ ವರದಿ ಕೊಟ್ಟಿದೆ. ಆದರೆ, ಎಲ್ಲವೂ ಸರಿ ಇದೆ ಎಂದು ಬಿಬಿಎಂಪಿ ಹೇಳುತ್ತಲೇ ಇದೆ' ಎಂದು ಆಕ್ಷೇಪಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, 'ನಿರ್ವಹಣಾ ಸಾಮರ್ಥ್ಯ ಸಮರ್ಪಕವಾಗಿಲ್ಲ ಎಂದು ಮಾಲಿನ್ಯ ನಿಯಂತ್ರಣ ಮಂಡಳಿಯ ವರದಿಯೇ ಹೇಳಿರುವಾಗ ಸುಧಾರಣೆ ಮಾಡಿಕೊಳ್ಳಬೇಕಲ್ಲವೇ' ಎಂದು ಬಿಬಿಎಂಪಿ ಪರ ವಕೀಲರನ್ನು ಪ್ರಶ್ನಿಸಿತು.

'ಘನತ್ಯಾಜ್ಯ ವಿಲೇವಾರಿ ಸೇರಿದಂತೆ ಆ ವ್ಯವಸ್ಥೆಯ ಸಾಮರ್ಥ್ಯ ವೃದ್ಧಿಸಲು ಸಂಬಂಧಿಸಿದ ಹಿರಿಯ ಅಧಿಕಾರಿಗಳ ಜತೆ ಸಭೆ ನಡೆಸಿ ಅಗತ್ಯ ನಿರ್ಣಯ ಕೈಗೊಳ್ಳಿ' ಎಂದು ರಾಜ್ಯ ಸರ್ಕಾರ ಹಾಗೂ ಬಿಬಿಎಂಪಿಗೆ ನಿರ್ದೇಶಿಸಿದ ನ್ಯಾಯಪೀಠ ವಿಚಾರಣೆ ಮುಂದೂಡಿ ಆದೇಶಿಸಿತು.

ನ್ಯಾಷನಲ್ ಕಾಲೇಜು ಎದುರು ದಲಿತ ಸಂಘಟನೆಗಳ ಪ್ರತಿಭಟನೆ

ಪ್ರಾಧ್ಯಾಪಕರ ವರ್ಗಾವಣೆಗೆ ಆಕ್ರೋಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಾಧ್ಯಾಪಕರಿಗೆ ನೀಡಿದ್ದ ಹಿಂಬಡ್ತಿ ಆದೇಶ ವಾಪಸ್ ಪಡೆಯುವಂತೆ ಆಗ್ರಹಿಸಿ, ದಲಿತ ಸಂಘಟನೆಗಳ ಮುಖಂಡರು ಮಂಗಳವಾರ ನ್ಯಾಷನಲ್ ಕಾಲೇಜು ಎದುರು ಪ್ರತಿಭಟನೆ ನಡೆಸಿದರು.

ಪ್ರತಿಭಟನೆ ಬೆನ್ನಲ್ಲೇ ಸಭೆ ನಡೆಸಿದ ಆಡಳಿತ ಮಂಡಳಿ, ಹಿಂಬಡ್ತಿ ಆದೇಶ ವಾಪಸ್ ಪಡೆಯಿತು. ನಂತರ ಹೋರಾಟಗಾರರು ಪ್ರತಿಭಟನೆ ಕೈಬಿಟ್ಟರು.

ಇದಕ್ಕೂ ಮುನ್ನ ಕಾಲೇಜು ಪ್ರವೇಶದ್ವಾರದ ಎದುರು ಜಮಾಯಿಸಿದ ಪ್ರತಿಭಟನಕಾರರು, ಕಾಲೇಜು ಆಡಳಿತ ಮಂಡಳಿ ವಿರುದ್ಧ ಘೋಷಣೆ ಕೂಗಿದರು. ಆಗ ಪೊಲೀಸರು ಹಾಗೂ ಪ್ರತಿಭಟನಕಾರರ ನಡುವೆ ಮಾತಿನ ಚಕಮಕಿ ನಡೆಯಿತು.

'ಜಾತಿ ಕಾರಣ ನೀಡಿ ಪ್ರಾಧ್ಯಾಪಕ ರವಿಕುಮಾರ್ ಬಾಗಿ ಅವರನ್ನು ಬಸವನಗುಡಿಯ ನ್ಯಾಷನಲ್ ಪದವಿ ಕಾಲೇಜಿನಿಂದ ಜಯನಗರ ನ್ಯಾಷನಲ್ ಪಿಯುಸಿ ಕಾಲೇಜಿಗೆ ಹಿಂಬಡ್ತಿ ನೀಡಿ ವರ್ಗಾವಣೆ ಮಾಡಲಾಗಿದೆ' ಎಂದು ಸಂಘಟನೆಗಳು ಆರೋಪಿಸಿದವು.



ಬಸವನಗುಡಿಯ ನ್ಯಾಷನಲ್ ಕಾಲೇಜು ಎದುರು ಪೊಲೀಸರು ಹಾಗೂ ಸಂಘಟನೆಗಳ ಮುಖಂಡರ ನಡುವೆ ಮಾತಿನ ಚಕಮಕಿ ನಡೆಯಿತು.

'ರವಿಕುಮಾರ್‌ಗೆ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಸಂಶೋಧನಾ ಮಾರ್ಗದರ್ಶಕರಾಗಲು ಸೇವಾ ದೃಢೀಕರಣ ಪತ್ರವನ್ನೂ ನೀಡುತ್ತಿಲ್ಲ' ಎಂದು ಪ್ರತಿಭಟನಕಾರರು ದೂರಿದರು.

ನಂತರ, ಕಾಲೇಜು ಆಡಳಿತ ಮಂಡಳಿ ಜೊತೆಗೆ ನಡೆದ ಸಭೆಯಲ್ಲಿ ಹಿಂಬಡ್ತಿ ಆದೇಶ ವಾಪಸ್ ಪಡೆಯುವುದು ಹಾಗೂ ಪದವಿ ಕಾಲೇಜಿನಲ್ಲಿಯೇ ಬೋಧನೆ ಮುಂದುವರಿಸಲು ಒಪ್ಪಿದ್ದರಿಂದ ಪ್ರತಿಭಟನೆ ವಾಪಸ್ ಪಡೆಯಲಾಯಿತು ಎಂದು ಪ್ರತಿಭಟನಕಾರರು ತಿಳಿಸಿದರು.

ಪ್ರತಿಭಟನೆಯಲ್ಲಿ ಲೇಖಕರಾದ ಅಗ್ರಹಾರ ಕೃಷ್ಣಮೂರ್ತಿ, ಬಂಜಗೆರೆ ಜಯಪ್ರಕಾಶ, ಸಾಮಾಜಿಕ ಕಾರ್ಯಕರ್ತರಾದ ಸಿ.ಎಸ್.ದ್ವಾರಕಾನಾಥ್, ಮಾವಳ್ಳಿ ಶಂಕರ್, ಜಿ.ಎನ್.ನಾಗರಾಜ, ರಾಜಶೇಖರ್ ಮೂರ್ತಿ ಮತ್ತಿತರರು ಪಾಲ್ಗೊಂಡಿದ್ದರು.

'ವರ್ಗಾವಣೆ ಒಂದು ಪ್ರಕ್ರಿಯೆ'

'ಈ ವಿಚಾರವಾಗಿ ಆಡಳಿತ ಮಂಡಳಿಯೊಂದಿಗೆ ಸಭೆ ನಡೆದಿದೆ. ಯಾವುದೇ ಸಂಸ್ಥೆ ಸುಗಮವಾಗಿ ನಡೆಯಬೇಕಿದ್ದರೆ ವರ್ಗಾವಣೆ ಮಾಡುವುದು ಒಂದು ಪ್ರಕ್ರಿಯೆ. ಅದರಂತೆ ಆಡಳಿತ ಮಂಡಳಿ ವರ್ಗಾವಣೆ ಮಾಡಿತ್ತು' ಎಂದು ನ್ಯಾಷನಲ್ ಕಾಲೇಜಿನ ಪ್ರಾಂಶುಪಾಲೆ ವೈ.ಸಿ. ಕಮಲಾ ತಿಳಿಸಿದ್ದಾರೆ.

'ನ್ಯಾಷನಲ್ ಕಾಲೇಜಿಗಿಂತ ಪ್ರಗತಿಪರವಾದ ಕಾಲೇಜು ಬೇರೊಂದು ಇದೆಯೇ? ಜಯನಗರ, ಗೌರಿಬಿದನೂರು, ಬಾಗೇಪಲ್ಲಿ, ಬಸವನಗುಡಿ ನ್ಯಾಷನಲ್ ಕಾಲೇಜಿನ ಕನ್ನಡ ವಿಭಾಗದಲ್ಲಿ ಹೆಚ್ಚಿನವರು ಹಿಂದುಳಿದ ವರ್ಗದ ಪ್ರಾಧ್ಯಾಪಕರೇ ಇದ್ದಾರೆ. ಜಾತಿ ವಿಚಾರಕ್ಕೆ ಮಾಡಿರುವ ಆರೋಪ ಸುಳ್ಳು' ಎಂದು ಸ್ಪಷ್ಟಪಡಿಸಿದ್ದಾರೆ.

ಚಿತ್ರಾವಳಿ



ಲಂಡನ್‌ನ ಬಸವ ಅಂತರರಾಷ್ಟ್ರೀಯ ಪ್ರತಿಷ್ಠಾನದ ವತಿಯಿಂದ ಧಾರವಾಡದಲ್ಲಿ ಮಂಗಳವಾರ ನಡೆದ ಸಮಾರಂಭದಲ್ಲಿ ಸಾಹಿತಿ ಗೊ.ರು.ಚನ್ನಬಸಪ್ಪ ಅವರು ಸಾಣೇಹಳ್ಳಿಯ ತರಳಬಾಳು ಮಠದ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಅವರಿಗೆ ಡಾ.ಎಂ.ಎಂ.ಕಲಬುರ್ಗಿ ಪ್ರಗತಿಪರ ಚಿಂತಕ ಪ್ರಶಸ್ತಿ ಪ್ರದಾನ ಮಾಡಿದರು ಪ್ರತಿಷ್ಠಾನದ ಪ್ರಧಾನ ಕಾರ್ಯದರ್ಶಿ ಕೆ.ವಿ.ನಾಗರಾಜಮೂರ್ತಿ, ತೋಂಟದ ಸಿದ್ಧರಾಮ ಸ್ವಾಮೀಜಿ, ಪ್ರತಿಷ್ಠಾನದ ಅಧ್ಯಕ್ಷ ಎಸ್‌ಮಹಾದೇವಯ್ಯ, ಡಾ.ಎಂ.ಎಂ.ಕಲಬುರ್ಗಿ ಟ್ರಸ್ಟ್ ಅಧ್ಯಕ್ಷ ವೀರಣ್ಣ ರಾಜೂರ, ಪ್ರೊ.ಮಹಾದೇವಪ್ಪ ಪಾಲ್ಗೊಂಡಿದ್ದರು



ವಾರ್ತಾ ಇಲಾಖೆಯು ಗಾಂಧಿ ಜಯಂತಿ ದಿನ ಆಯೋಜಿಸಿದ್ದ ಗಾಂಧೀಜಿ ಕುರಿತ ಪ್ರಬಂಧ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮಂಗಳವಾರ ಬಹುಮಾನ ವಿತರಿಸಿದರು. ಮುಖ್ಯಮಂತ್ರಿಯವರ ಕಾರ್ಯದರ್ಶಿ ಕೆ.ವಿ. ತ್ರಿಲೋಕಚಂದ್ರ, ವಾರ್ತಾ ಇಲಾಖೆ ಆಯುಕ್ತ ಹೇಮಂತ್ ನಿಂಬಾಳ್ಕರ್ ಉಪಸ್ಥಿತರಿದ್ದರು —ಪ್ರಜಾವಾಣಿ ಚಿತ್ರಗಳು

ವಿದೇಶದಿಂದ ಬಂದ ಪ್ರಯಾಣಿಕರ ಕಳ್ಳ ಸಾಗಣೆ

₹6 ಕೋಟಿ ಮೌಲ್ಯದ ಚಿನ್ನ ವಶ

ಪ್ರಜಾವಾಣಿ ವಾರ್ತೆ



ದೇವನಹಳ್ಳಿ: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಕಳೆದ ಒಂದು ವಾರದಲ್ಲಿ ವೈಮಾನಿಕ ಗುಪ್ತಚರ ನಿರ್ದೇಶನಾಲಯ (ಡಿಆರ್‌ಐ) ಹಾಗೂ ಬೆಂಗಳೂರು ಕಸ್ಟಮ್ಸ್ ಅಧಿಕಾರಿಗಳು ₹6.08 ಕೋಟಿ ಮೌಲ್ಯದ 9.3 ಕೆ.ಜಿ ಚಿನ್ನ ವಶಕ್ಕೆ ಪಡೆದಿದ್ದಾರೆ.

ಮೂರು ಪ್ರತ್ಯೇಕ ಪ್ರಕರಣಗಳಲ್ಲಿ ಆರು ಪ್ರಯಾಣಿಕರನ್ನು ಬಂಧಿಸಲಾಗಿದ್ದು, ಬಂಧಿತರ ಪೈಕಿ ಇಬ್ಬರು ತಮಿಳುನಾಡಿನವರಾಗಿದ್ದು, ನಾಲ್ವರು ಉತ್ತರ ಭಾರತದವರು.

ಇತ್ತೀಚಿನ ದಿನಗಳಲ್ಲಿ ನಡೆದ ಅತಿ ದೊಡ್ಡ ಕಾರ್ಯಾಚರಣೆ ಇದಾಗಿದ್ದು, ಮಲೇಷ್ಯಾ, ಶಾರ್ಜಾದಿಂದ ಚಿನ್ನ ಕಳ್ಳ ಸಾಗಣೆ ಮಾಡುತ್ತಿದ್ದ ಜಾಲವನ್ನು ಅಧಿಕಾರಿಗಳು ಪತ್ತೆ ಹಚ್ಚಿದ್ದಾರೆ.

ಮಲೇಷ್ಯಾದಿಂದ ಬಂದಿಳಿದ ನಾಲ್ವರು ಪ್ರಯಾಣಿಕರನ್ನು ತಪಾಸಣೆ ನಡೆಸಿದಾಗ ಒಳ ಉಡುಪಿನಲ್ಲಿ ಅಡಗಿಸಿ ಇಟ್ಟುಕೊಂಡಿದ್ದ ಪೇಸ್ಟ್ ರೂಪದ 2.632 ಕೆ.ಜಿ. ಚಿನ್ನವನ್ನು ಪತ್ತೆ ಹಚ್ಚಿದ್ದಾರೆ. ಅದರ ಮೌಲ್ಯ ₹1.42 ಕೋಟಿ ಎಂದು ಅಂದಾಜಿಸಲಾಗಿದೆ. ಇದರೊಂದಿಗೆ ಇದೇ ಪ್ರಯಾಣಿಕರಿಂದ ₹73.70 ಲಕ್ಷ ಮೌಲ್ಯದ 3,510 ಇ- ಸಿಗರೇಟ್ ವಶಕ್ಕೆ ಪಡೆಯಲಾಗಿದೆ.

ಮತ್ತೊಂದು ಪ್ರಕರಣದಲ್ಲಿ ಕ್ವಾಲಾಲಂ ಪುರದಿಂದ ಬಂದಿಳಿದ ಇಬ್ಬರು ಪ್ರಯಾಣಿಕರ ಸಾಕ್ಸ್‌ನಲ್ಲಿ ಅಡಗಿಸಿಟ್ಟುಕೊಂಡಿದ್ದ ₹1.55 ಕೋಟಿ ಮೌಲ್ಯದ ಪೇಸ್ಟ್ ರೂಪದ 2 .854 ಕೆ.ಜಿ. ಚಿನ್ನ ಪತ್ತೆ ವಶಕ್ಕೆ ಪಡೆಯಲಾಗಿದೆ.

ಮತ್ತೊಂದು ಪ್ರಕರಣದಲ್ಲಿ ಶಾರ್ಜಾದಿಂದ ಬಂದ ವಿಮಾನದ ಪ್ರಯಾಣಿಕರ ಲಗೇಜ್ ಸ್ಥಳದಲ್ಲಿ 3.75 ಕೆ.ಜಿ ಗಟ್ಟಿ ಚಿನ್ನ ಪತ್ತೆಯಾಗಿದೆ. ಇದು ಯಾರಿಗೆ ಸೇರಿದ್ದು ಎಂಬ ಕುರಿತು ತನಿಖೆ ಪ್ರಗತಿಯಲ್ಲಿದೆ ಎಂದು ಮೂಲಗಳು ತಿಳಿಸಿವೆ.

ಕ್ರೈಸ್ಟ್ ವಿ.ವಿಗೆ ಅತ್ಯುತ್ತಮ ಎನ್‌ಸಿಸಿ ಘಟಕ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕ್ರೈಸ್ಟ್ ವಿಶ್ವವಿದ್ಯಾಲಯದ ಎನ್‌ಸಿಸಿ ಘಟಕವು ಉತ್ತಮ ಸಾಧನೆ ಮಾಡಿದ್ದು, ಸತತ ಆರನೇ ಬಾರಿಗೆ ಕರ್ನಾಟಕ ಹಾಗೂ ಗೋವಾ ವಿಭಾಗದಲ್ಲಿ ಅತ್ಯುತ್ತಮ ಎನ್‌ಸಿಸಿ ಘಟಕ ಪ್ರಶಸ್ತಿ ಪಡೆದುಕೊಂಡಿದೆ.

1969ರಲ್ಲಿ ಸಂಸ್ಥೆ ಸ್ಥಾಪನೆಯಾಗಿದೆ. ಎನ್‌ಸಿಸಿ ಘಟಕ ಆರಂಭವಾದ ದಿನದಿಂದಲೂ ಉತ್ತಮವಾಗಿ ಕಾರ್ಯನಿರ್ವಹಣೆ ಮಾಡುತ್ತಿದೆ. ಅಲ್ಲದೇ ಇದೇ ಸಂಸ್ಥೆಯಲ್ಲಿ ವಿದ್ಯಾಭ್ಯಾಸ ಮಾಡಿದ್ದ 100ಕ್ಕೂ ಅಧಿಕ ಮಂದಿ ಭಾರತೀಯ ಸೇನೆಯಲ್ಲಿ ಕರ್ತವ್ಯ ಸೇವೆ ಸಲ್ಲಿಸುತ್ತಿದ್ದಾರೆ. 2022–2023ನೇ ಸಾಲಿನಲ್ಲಿ ಎನ್‌ಸಿಸಿಯ ಎಂಟು ಕೆಡೆಟ್‌ಗಳು ಸೇನೆಗೆ ಆಯ್ಕೆಗೊಂಡಿದ್ದರು.



ಅಧಿಕಾರಿಗಳಿಂದ ಕ್ರೈಸ್ಟ್ ವಿಶ್ವವಿದ್ಯಾಲಯದ ಎನ್‌ಸಿಸಿ ಕೆಡೆಟ್‌ಗಳು ಪ್ರಶಸ್ತಿ ಸ್ವೀಕರಿಸಿದರು

ಕ್ರೈಸ್ಟ್ ವಿಶ್ವವಿದ್ಯಾಲಯದ ಎನ್‌ಸಿಸಿ ಘಟಕವು ಅಗ್ರ ಸ್ಥಾನ ಉಳಿಸಿಕೊಳ್ಳಲು ಒಟ್ಟಾರೆ ಉತ್ತಮ ಪ್ರದರ್ಶನ ತೋರಿತ್ತು. ರಾಷ್ಟ್ರ ನಿರ್ಮಾಣ ಚಟುವಟಿಕೆ, ಸಾಮಾಜಿಕ ಸೇವೆ, ಸಾಹಸ ಚಟುಟಿಕೆ ಹಾಗೂ ಎನ್‌ಸಿಸಿ ಶಿಬಿರಗಳನ್ನು ಆಧರಿಸಿ ಈ ಪ್ರಶಸ್ತಿ ಕೊಡಲಾಗಿದೆ.


ಇತ್ತೀಚೆಗೆ ನವದೆಹಲಿಯಲ್ಲಿ ನಡೆದ ಗಣರಾಜ್ಯೋತ್ಸವ ಸಮಾರಂಭದ ಪಥಸಂಚಲನದಲ್ಲಿ ಭಾಗವಹಿಸಿದ್ದ ಎನ್‌ಸಿಸಿ ಕೆಡೆಟ್‌ಗಳು ಉತ್ತಮ ಪ್ರದರ್ಶನ ನೀಡಿ ಮೆಚ್ಚುಗೆ ಗಳಿಸಿದ್ದರು. ವಿವಿಯ ಪುಣ್ಯಾ ಪೊನ್ನಮ್ಮ ಅವರು ಪಥಸಂಚಲನದಲ್ಲಿ ಬಾಲಕಿಯರ ತಂಡ ಮುನ್ನಡೆಸಿದ್ದರು. ಅಲ್ಲದೇ ಇತರರು ಎನ್‌ಸಿಸಿಯಲ್ಲಿ ಉತ್ತಮ ಸಾಧನೆ ಮಾಡಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

'ಪ್ರಧಾನಿಗೆ ಅಭದ್ರತೆ ಕಾಡುತ್ತಿದೆ'

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರಿಗೆ ಅಭದ್ರತೆ ಮತ್ತು ಭಯ ಕಾಡುತ್ತಿರುವುದರಿಂದಲೇ ದೇಶದ ಮೊದಲ ಪ್ರಧಾನಿ ಜವಾಹರಲಾಲ್ ನೆಹರು ವಿರುದ್ಧ 'ಕೆಟ್ಟ ರೀತಿಯ' ಟೀಕೆಗಳನ್ನು ಮಾಡುತ್ತಿದ್ದಾರೆ ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಮಂಗಳವಾರ 'ಎಕ್ಸ್'ನಲ್ಲಿ ತಿರುಗೇಟು ನೀಡಿದ್ದಾರೆ.

'ಲೋಕಾ' ಬಲೆಗೆ ಕೆಎಸ್‌ಆರ್‌ಟಿಸಿ ಡಿ.ಸಿ

ಚಿಕ್ಕಮಗಳೂರು: ಬಸ್ ಚಾಲಕರೊಬ್ಬರ ವರ್ಗಾವಣೆಗೆ ₹10 ಸಾವಿರ ಲಂಚ ಪಡೆದ ಆರೋಪದಲ್ಲಿ ಕೆಎಸ್‌ಆರ್‌ಟಿಸಿ ವಿಭಾಗೀಯ ನಿಯಂತ್ರಣಾಧಿಕಾರಿ ಬಸವರಾಜ್ ಅವರನ್ನು ಲೋಕಾಯುಕ್ತ ಪೊಲೀಸರು ಮಂಗಳವಾರ ಸಂಜೆ ಬಂಧಿಸಿದ್ದಾರೆ.



ಬಸವರಾಜ್

ಚಿಕ್ಕಮಗಳೂರು ಘಟಕದಲ್ಲಿ ಕಾರ್ಯನಿರ್ವಹಿಸುತ್ತಿರುವ ಚಾಲಕರೊಬ್ಬರು ಕಡೂರು ಘಟಕಕ್ಕೆ ವರ್ಗಾವಣೆ ಮಾಡಲು ಮನವಿ ಸಲ್ಲಿಸಿದ್ದರು. ಈ ಮನವಿ ಪುರಸ್ಕರಿಸಿ ವರ್ಗಾವಣೆ ಮಾಡಲು ₹10 ಸಾವಿರ ಲಂಚಕ್ಕೆ ಬೇಡಿಕೆ ಇಟ್ಟಿದ್ದಾರೆ ಎಂದು ಚಾಲಕ ಲೋಕಾಯುಕ್ತ ಪೊಲೀಸರಿಗೆ ದೂರು ನೀಡಿದ್ದರು.

'ಬಸವರಾಜ್ ಅವರು ತಮ್ಮ ಕಾರು ಚಾಲಕ ನಾಗರಾಜ್ ಮೂಲಕ ಲಂಚ ಪಡೆಯುತ್ತಿದ್ದಾಗ ಇಬ್ಬರನ್ನೂ ಬಂಧಿಸಲಾಗಿದೆ. ತನಿಖೆ ಮುಂದುವರಿದಿದೆ' ಎಂದು ಲೋಕಾಯುಕ್ತ ಅಧಿಕಾರಿಗಳು ತಿಳಿಸಿದ್ದಾರೆ.

ಪಿಆರ್‌ಆರ್ ಯೋಜನೆ: ಕಾನೂನುಬಾಹಿರ ಟೆಂಡರ್ ಹಿಂಪಡೆಯಲು ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪೆರಿಫೆರಲ್ ವರ್ತುಲ ರಸ್ತೆಯ (ಪಿಆರ್‌ಆರ್) ಅಭಿವೃದ್ಧಿ ಕೈಗೊಳ್ಳಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು (ಬಿಡಿಎ) ಕಾನೂನು ಬಾಹಿರವಾಗಿ ಕರೆದಿರುವ ಟೆಂಡರ್ ಪ್ರಕ್ರಿಯೆಯನ್ನು ತಡೆಹಿಡಿಯಬೇಕು' ಎಂದು ಪಿಆರ್‌ಆರ್ ರೈತ ಹಾಗೂ ನಿವೇಶನದಾರರ ಸಂಘ ಆಗ್ರಹಿಸಿದೆ.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ಅಧ್ಯಕ್ಷ ಮಾವಳಿಪುರ ಶ್ರೀನಿವಾಸ್, 'ಬೆಂಗಳೂರಿನ ಉತ್ತರ ಭಾಗದಲ್ಲಿರುವ 65 ಕಿ.ಮೀ. ವರ್ತುಲ ರಸ್ತೆ ಅಭಿವೃದ್ಧಿಗೆ 2005ರಲ್ಲಿ ಬಿಡಿಎ ಯೋಜನೆ ರೂಪಿಸಿ, 1,810 ಎಕರೆ ಭೂಮಿ ಸ್ವಾಧೀನ ಪಡಿಸಿಕೊಳ್ಳಲು ಪ್ರಾಥಮಿಕ ಅಧಿಸೂಚನೆ ಹೊರಡಿಸಿತ್ತು. ಆದರೆ ಇದುವರೆಗೂ ಯಾವುದೇ ಅಭಿವೃದ್ಧಿ ಕಾರ್ಯಗಳು ನಡೆದಿಲ್ಲ. ಇದರಿಂದ ಈ ಭಾಗದ ರೈತ ಕುಟುಂಬಗಳು ಕಂಗಾಲಾಗಿವೆ. ಇದಕ್ಕೆ ಸಂಬಂಧಿಸಿದಂತೆ ಬಿಡಿಎ ಮತ್ತು ಸರ್ಕಾರಕ್ಕೆ ಅನೇಕ ಬಾರಿ ಮನವಿ ಸಲ್ಲಿಸಿದರೂ ರೈತರಿಗೆ ಪರಿಹಾರ ನೀಡುವ ಕುರಿತು ತೀರ್ಮಾನ ಕೈಗೊಂಡಿಲ್ಲ' ಎಂದು ಆರೋಪಿಸಿದರು.

'ರಾಜ್ಯದಲ್ಲಿರುವ ಕೆಐಎಡಿಬಿ, ಕೆಎಚ್‌ಬಿ, ಎನ್‌ಎಚ್‌ಎಐ ಸಂಸ್ಥೆಗಳು 2013ರ ಭೂಸ್ವಾಧೀನ ಕಾಯ್ದೆ ಅಡಿಯಲ್ಲಿ ಭೂಸ್ವಾಧೀನಪಡಿಸಿಕೊಂಡು, ರೈತರಿಗೆ ಪರಿಹಾರ ಹಾಗೂ ಪುನರ್ವಸತಿ ನೀಡುತ್ತಿವೆ. ಆದರೆ ಬಿಡಿಎ ಮಾತ್ರ ಬ್ರಿಟಿಷರ ಕಾಲದ 1894ರ ಭೂಸ್ವಾಧೀನ ಕಾಯ್ದೆ ಅಡಿಯಲ್ಲಿ ಯೋಜನೆ ರೂಪಿಸಿ ಪರಿಹಾರ ನೀಡುವುದಾಗಿ ಹೇಳುತ್ತಿರುವುದು ಖಂಡನೀಯ. ಪಿಆರ್‌ಆರ್ ಯೋಜನೆಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ಹಾಗೂ ಹೈಕೋರ್ಟ್‌ಗಳಲ್ಲಿ ಪ್ರಕರಣಗಳನ್ನು ದಾಖಲಿಸಲಾಗಿದ್ದು, ವಿಚಾರಣೆ ಹಂತದಲ್ಲಿವೆ' ಎಂದು ತಿಳಿಸಿದರು.

'ಹಾಗಿದ್ದೂ ಬಿಡಿಎ 2024ರ ಜನವರಿ 25ರಂದು ಸಾರ್ವಜನಿಕ ಸಹಭಾಗಿತ್ವದಲ್ಲಿ ಪಿಆರ್‌ಆರ್ ರಸ್ತೆಯ ಅಭಿವೃದ್ಧಿ ಕಾಮಗಾರಿ ನಡೆಸಲು 2,560 ಎಕರೆಗೆ ಟೆಂಡರ್ ಕರೆದಿದೆ. ಇದನ್ನು ವಿರೋಧಿಸಿ ಇದೇ 9ರಂದು ಬಿಡಿಎ ಕೇಂದ್ರ ಕಚೇರಿ ಮುಂಭಾಗದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು' ಎಂದು ಮಾಹಿತಿ ನೀಡಿದರು.

750ಕ್ಕೂ ಹೆಚ್ಚು ಕಡತ ಬಾಕಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ಹಾಗೂ ಬಿಡಿಎಗೆ ಸಂಬಂಧಿಸಿದ 750ಕ್ಕೂ ಕಡತಗಳು ನಗರಾಭಿವೃದ್ಧಿ ಇಲಾಖೆಯಲ್ಲಿ 30 ದಿನಗಳಿಗೂ ಹೆಚ್ಚು ಕಾಲದಿಂದ ಬಾಕಿ ಉಳಿದಿವೆ.

ಬಾಕಿ ಉಳಿದಿರುವ ಕಡತಗಳನ್ನು ನಿಯಮಿತವಾಗಿ ವಿಲೇವಾರಿ ಮಾಡಲು ಸೂಚನೆ ಇದ್ದರೂ 550ಕ್ಕೂ ಹೆಚ್ಚು ಕಡತಗಳು 2 ತಿಂಗಳಿಂದ ಬಾಕಿ ಉಳಿದಿವೆ.

ನಿಯಮದಂತೆ, ಕಡತ ಬಂದ 10 ದಿನಗಳಲ್ಲಿ ಅದನ್ನು ಮಂಜೂರು ಮಾಡಬೇಕು ಅಥವಾ ತಿರಸ್ಕರಿಸಬೇಕು. ಒಂದು ಕಡತ ಅಧಿಕಾರಿಗಳು ಸೇರಿದಂತೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅವರಿಗೆ ಒಂಬತ್ತು ದಿನಗಳಲ್ಲಿ ತಲುಪಬೇಕು. ಅದರ ನಂತರ ಸಚಿವರಿಗೆ ಅಂತಿಮ ನಿರ್ಧಾರಕ್ಕೆ ಕಡತ ರವಾನೆಯಾಗಬೇಕು. ಆದರೆ, 30 ದಿನಗಳಾದರೂ ಕಡತಗಳು ವಿಲೇವಾರಿಯಾಗಿಲ್ಲ.

ಬಿಬಿಎಂಪಿ ಮತ್ತು ಬಿಡಿಎ ವತಿಯಿಂದ ಒಟ್ಟಾರೆ 1,138 ಕಡತಗಳು ನಗರಾಭಿವೃದ್ಧಿ ಇಲಾಖೆಗೆ ಹೋಗಿವೆ. ಭೂ ಬಳಕೆ ಬದಲಾವಣೆ, ಗುತ್ತಿಗೆಗಳು ಮತ್ತು ಹೊಸ ಅನುದಾನಕ್ಕೆ ಸಂಬಂಧಿಸಿದ ಕಡತಗಳೇ ಇದರಲ್ಲಿ ಹೆಚ್ಚಾಗಿವೆ.

'ಸಚಿವಾಲಯ ಕೈಪಿಡಿ ಪ್ರಕಾರ, ಒಂದು ದಿನದಲ್ಲಿ ಕಡತವನ್ನು ವಿಲೇವಾರಿ ಮಾಡಬೇಕು. ಇಲ್ಲದಿದ್ದರೆ ಹಿರಿಯ ಅಧಿಕಾರಿಗೆ ವಿವರಣೆ ನೀಡಬೇಕು. ಸಚಿವಾಲಯದ ಸಿಬ್ಬಂದಿ ಕಡತಗಳನ್ನು ಉಳಿಸಿಕೊಳ್ಳುವುದಿಲ್ಲ. ಐಎಎಸ್ ಅಧಿಕಾರಿಗಳು ಹಾಗೂ ಸಚಿವರ ಕಚೇರಿಯಲ್ಲೇ ಕಡತಗಳು ಹೆಚ್ಚು ದಿನ ಬಾಕಿ ಉಳಿದುಕೊಳ್ಳುತ್ತವೆ' ಎಂದು ನಗರಾಭಿವೃದ್ಧಿ ಇಲಾಖೆ ಸಿಬ್ಬಂದಿ ತಿಳಿಸಿದರು.

ಅಪಾಯದ ಅಂಚಿನಲ್ಲಿರುವ ಆಮೆಗಳ ಕಾಳಜಿ ವಹಿಸುವಂತೆ ಅಧಿಕಾರಿಗಳಿಗೆ ಅರಣ್ಯ ಸಚಿವ ಸೂಚನೆ

ಕಡಲಾಮೆ ಸಂತಾನೋತ್ಪತ್ತಿ ತಾಣ 12 ಕಡೆ ಪತ್ತೆ

ಪ್ರಜಾವಾಣಿ ವಾರ್ತೆ

ಮಂಗಳೂರು: ವನ್ಯಜೀವಿ ಸಂರಕ್ಷಣಾ ಕಾಯ್ದೆಯ ಅನುಸೂಚಿ 1ರಡಿ ರಕ್ಷಣೆ ಪಡೆದಿರುವ ಕಡಲಾಮೆಗಳ ಸಂತಾನೋತ್ಪತ್ತಿ ಚಟುವಟಿಕೆ ದಕ್ಷಿಣ ಕನ್ನಡ ಜಿಲ್ಲೆಯ ಕಡಲ ಕಿನಾರೆಯಲ್ಲಿ 1985ರ ಬಳಿಕ ಇದೇ ಮೊದಲ ಸಲ ಕಂಡುಬಂದಿದೆ. ಜಿಲ್ಲೆಯ 12 ಕಡೆ ಈ ಆಮೆಗಳು ಮೊಟ್ಟೆ ಇಡುವ ಜಾಗಗಳನ್ನು ಅರಣ್ಯ ಇಲಾಖೆ ಪತ್ತೆಹಚ್ಚಿದೆ ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ತಿಳಿಸಿದರು.

ತಣ್ಣೀರುಬಾವಿ ಬಳಿ ಕಡಲಾಮೆ (ಆಲಿವ್ ರಿಡ್ಲೆ) ಆಮೆಗಳ ಸಂತಾನೋತ್ಪತ್ತಿ ತಾಣಕ್ಕೆ ಭೇಟಿ ನೀಡಿ ಅವರು ಪರಿಶೀಲಿಸಿದರು.

'ಕಡಲಾಮೆಗಳ ಸಂರಕ್ಷಣೆಗೆ ಕ್ರಮವಹಿಸಬೇಕು. ಮೊಟ್ಟೆಯೊಡೆದು ಹೊರ ಬರುವ ಆಮೆ ಮರಿಗಳು ಸುರಕ್ಷಿತವಾಗಿ ಕಡಲ ಒಡಲನ್ನು ಸೇರುವಾಗ ಅಡ್ಡಿ ಆತಂಕ ಎದುರಾಗದಂತೆ ವ್ಯವಸ್ಥೆ ಮಾಡಬೇಕು' ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಕಡಲಾಮೆಗಳ ಸಂತಾನೋತ್ಪತ್ತಿ ತಾಣಗಳ ಪತ್ತೆ ಹಾಗೂ ಸಂರಕ್ಷಣಾ ಕಾರ್ಯಕ್ಕೆ ನೆರವಾದ ಮೀನುಗಾರರಾದ ಆನಂದ ಕೋಟ್ಯಾನ್ ಮತ್ತು ವಾಸು ಕೊಟ್ಯಾನ್ ಅವರಿಗೆ ಸಚಿವರು ತಲಾ ₹ 5 ಸಾವಿರ ಬಹುಮಾನ ವಿತರಿಸಿದರು.

'ಅರಣ್ಯ ಇಲಾಖೆಯು ಸಸಿಹಿತ್ಲು, ಇಡ್ಯಾ, ಬೆಂಗರೆ, ತಣ್ಣೀರುಬಾವಿ ಹಾಗೂ ಸೋಮೇಶ್ವರದಲ್ಲಿ ಕಡಲಾಮೆಗಳ ಪತ್ತೆ ಹಾಗೂ ಅವುಗಳ ಚಟುವಟಿಕೆ ದಾಖಲೀಕರಣಕ್ಕೆ ಕಿನಾರೆಗಳಲ್ಲಿ ಶಿಬಿರಗಳನ್ನು ಆರಂಭಿಸಿದೆ. ಉಪ ವಲಯ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಅರಣ್ಯ ರಕ್ಷಕರ ಮಾರ್ಗದರ್ಶನದಲ್ಲಿ ಮೂರು ಅಥವಾ ನಾಲ್ವರು ವೀಕ್ಷಕರು ಕಡಲಾಮೆಗಳು ಕಿನಾರೆಗೆ ಬಂದು ಗೂಡು ಕಟ್ಟಿ ಸಂತಾನೋತ್ಪಾದನೆ ಮಾಡುವ ಪ್ರಕ್ರಿಯೆಯನ್ನು ಮುಸ್ಸಂಜೆಯಿಂದ ಮುಂಜಾನೆವರೆಗೆ ಪರಿವೀಕ್ಷಿಸಿ ದಾಖಲೀಕರಿಸುತ್ತಿದ್ದಾರೆ'.



ಮಂಗಳೂರಿನ ತಣ್ಣೀರುಬಾವಿ ಕಿನಾರೆಯಲ್ಲಿ ಕಡಲಾಮೆಗಳ ಸಂತಾನೋತ್ಪತ್ತಿ ತಾಣವನ್ನು ಸಚಿವ ಈಶ್ವರ ಬಿ.ಖಂಡ್ರೆ ಸೋಮವಾರ ರಾತ್ರಿ ವೀಕ್ಷಿಸಿದರು

'ಕಡಲಾಮೆಗಳು ಮೊಟ್ಟೆ ಇಟ್ಟ ಜಾಗದಲ್ಲೇ ಅವುಗಳಿಗೆ ರಕ್ಷಣೆ ಒದಗಿಸಲು ಹಾಗೂ ಬೇಟೆಯಾಡುವ ಪ್ರಾಣಿ ಅಥವಾ ಪಕ್ಷಿಗಳಿಗೆ ಅವು ಬಲಿಯಾಗುವುದನ್ನು ತಡೆಗಟ್ಟಲು ಕ್ರಮಕೈಗೊಂಡಿದ್ದೇವೆ. ಸೋಮೇಶ್ವರದಿಂದ ಸಸಿಹಿತ್ಲುವಿನ ವರೆಗಿನ ಕಿನಾರೆಯಲ್ಲಿ ಕಡಲಾಮೆಗಳ ರಕ್ಷಣೆಯ ಅಗತ್ಯದ ಕುರಿತು ಮೀನುಗಾರ ಸಮುದಾಯಗಳಲ್ಲೂ ಜಾಗೃತಿ ಮೂಡಿಸಲಾಗುತ್ತಿದೆ' ಎಂದು ಅರಣ್ಯ ಇಲಾಖೆಯ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

₹1 ಕೋಟಿ ಲಂಚ- ಆರೋಪ : ಎಫ್‌ಐಆರ್

ಮುಂಬೈ (ಪಿಟಿಐ): ಬಾಕಿ ತೆರಿಗೆ ವಿಷಯ ಇತ್ಯರ್ಥಕ್ಕೆ ಕಂಪನಿಯ ನಿರ್ದೇಶಕರಿಂದ ₹1 ಕೋಟಿ ಲಂಚಕ್ಕೆ ಬೇಡಿಕೆ ಇಟ್ಟ ಆರೋಪದ ಮೇಲೆ ರಾಜ್ಯ ತೆರಿಗೆ ಸಹಾಯಕ ಆಯುಕ್ತ ಮತ್ತು ಮಹಾರಾಷ್ಟ್ರ ಜಿಎಸ್‌ಟಿ ಇಲಾಖೆಯ ಇತರ ಕೆಲವು ಅಧಿಕಾರಿಗಳ ವಿರುದ್ಧ ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ಪ್ರಕರಣ ದಾಖಲಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಫೆಬ್ರುವರಿ 2ರಂದು ರಾಜ್ಯ ತೆರಿಗೆ (ತನಿಖಾ ಶಾಖೆ) ಸಹಾಯಕ ಆಯುಕ್ತ ಅರ್ಜುನ್ ಸೂರ್ಯವಂಶಿ ಮತ್ತು ಇತರ ಅಧಿಕಾರಿಗಳ ವಿರುದ್ಧ ಭ್ರಷ್ಟಾಚಾರ ತಡೆ ಕಾಯ್ದೆಯ ಸೆಕ್ಷನ್ 7ರ ಅಡಿಯಲ್ಲಿ ಎಸಿಬಿ ಪ್ರಕರಣ ದಾಖಲಿಸಿದೆ. ರಾಜ್ಯ ತೆರಿಗೆಯ ವಿಶೇಷ ಆಯುಕ್ತರು ಮತ್ತು ಮುಖ್ಯ ವಿಚಕ್ಷಣಾ ಅಧಿಕಾರಿಯು ಮಹಾರಾಷ್ಟ್ರದ ಪೊಲೀಸ್ ಮಹಾನಿರ್ದೇಶಕರಿಗೆ (ಎಸಿಬಿ) ರಾಜ್ಯ ತೆರಿಗೆಯ ತನಿಖಾ ಶಾಖೆಯ ಅಧಿಕಾರಿಗಳ ಮೇಲಿನ ಭ್ರಷ್ಟಾಚಾರದ ಬಗ್ಗೆ ತನಿಖೆ ನಡೆಸುವಂತೆ ಪತ್ರ ಬರೆದ ನಂತರ ಎಫ್‌ಐಆರ್ ದಾಖಲಿಸಲಾಗಿದೆ.

ಬುಧವಾರ, ಫೆಬ್ರುವರಿ 7, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 38 | ಪುಟ 16
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
72,186 ▲	21,929 ▲	₹64,360 (ಬೆಂಗಳೂರು) ▼	₹72,200 (ಬೆಂಗಳೂರು) ▼	83.05 ▼

ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ದೆಹಲಿಯ ಜಂತರ್–ಮಂತರ್‌ನಲ್ಲಿ ಕಾಂಗ್ರೆಸ್ ಪ್ರತಿಭಟನೆ • ವಿಧಾನಸೌಧದ ಗಾಂಧಿ ಪ್ರತಿಮೆ ಬಳಿ ಬಿಜೆಪಿ ಧರಣಿ

ಅನುದಾನ ಹಂಚಿಕೆ: ಜಟಾಪಟಿ ತಾರಕಕ್ಕೆ

ಕೇಂದ್ರ ಸರ್ಕಾರವು ಅನುದಾನ ಮತ್ತು ಬರ ಪರಿಹಾರದಂತಹ ನೆರವು ನೀಡಿಕೆಯಲ್ಲಿ ತಾರತಮ್ಯ ಧೋರಣೆ ಅನುಸರಿಸುತ್ತಿದೆ ಎಂದು ಬಿಜೆಪಿಯೇತರ ಪಕ್ಷಗಳ ರಾಜ್ಯ ಸರ್ಕಾರಗಳು ಆರೋಪಿಸುತ್ತಿವೆ. ಕರ್ನಾಟಕವು ಇದರ ಮುಂಚೂಣಿಯಲ್ಲಿದ್ದು, ಕೇಂದ್ರದ ಜೊತೆಗಿನ ಸಂಘರ್ಷಕ್ಕೆ ಬಿರುಸು ತುಂಬಿದೆ. ಈ ಮಧ್ಯೆ, ಕೇಂದ್ರದ ಹಲವು ಇಲಾಖೆಗಳಿಗೆ ನೀಡಲಾಗಿರುವ ಅನುದಾನದಲ್ಲಿ ದೊಡ್ಡ ಮೊತ್ತ ವೆಚ್ಚವಾಗಿಲ್ಲ ಎಂಬ ಮಾಹಿತಿಯನ್ನು ಸರ್ಕಾರವು ರಾಜ್ಯಸಭೆಯಲ್ಲಿ ನೀಡಿದೆ. ಬರ ಪರಿಸ್ಥಿತಿಯನ್ನು ರಾಜ್ಯ ಸರ್ಕಾರವು ಸರಿಯಾಗಿ ನಿರ್ವಹಿಸುತ್ತಿಲ್ಲ ಎಂದು ಆರೋಪಿಸಿ ಬಿಜೆಪಿ ಬೆಂಗಳೂರಿನಲ್ಲಿ ಇಂದು ಪ್ರತಿಭಟನೆ ನಡೆಸುತ್ತಿದೆ

ಕಲ್ಯಾಣ ಹಣ ಬಳಕೆ 'ಅಲ್ಪ'

• ಮಂಜುನಾಥ ಹೆಬ್ಬಾರ್

ನವದೆಹಲಿ: ಕೇಂದ್ರ ಸರ್ಕಾರದ ಹಲವು ಸಚಿವಾಲಯಗಳು ಮತ್ತು ಇಲಾಖೆಗಳಿಗೆ 2023–24ನೇ ಸಾಲಿನ ಬಜೆಟ್‌ನಲ್ಲಿ ಹಂಚಿಕೆ ಮಾಡಿದ್ದ ಅನುದಾನದಲ್ಲಿ ಗಣನೀಯ ಮೊತ್ತವನ್ನು ವೆಚ್ಚ ಮಾಡದೆ ಉಳಿಸಲಾಗಿದೆ.


ಹಣಕಾಸು ಸಚಿವಾಲಯಕ್ಕೆ ₹16.27 ಲಕ್ಷ ಕೋಟಿ ಅನುದಾನ ಹಂಚಿಕೆ ಮಾಡಲಾಗಿತ್ತು. ಸಚಿವಾಲಯವು ಡಿಸೆಂಬರ್ ಅಂತ್ಯದ ವರೆಗೆ ಖರ್ಚು ಮಾಡಿರುವುದು ₹10.76 ಲಕ್ಷ ಕೋಟಿ ಮಾತ್ರ. ಅಲ್ಪಸಂಖ್ಯಾತ ಸಚಿವಾಲಯಕ್ಕೆ ಕೊಟ್ಟಿದ್ದು ₹2,609 ಕೋಟಿ. ಖರ್ಚು ಆಗಿರುವುದು ಬರೇ ₹343 ಕೋಟಿ. ಶಿಕ್ಷಣ ಸಚಿವಾಲಯಕ್ಕೆ ₹1.29 ಲಕ್ಷ ಕೋಟಿ ಹಂಚಿಕೆ ಮಾಡಲಾಗಿದ್ದರೆ, ವಿನಿಯೋಗವಾಗಿರುವುದು ₹59,247 ಕೋಟಿಯಷ್ಟೇ.

ಕೇಂದ್ರ ಸರ್ಕಾರದ ಕಳೆದ ವರ್ಷದ ಬಜೆಟ್ ಗಾತ್ರ ₹44.90 ಲಕ್ಷ ಕೋಟಿ. ಡಿಸೆಂಬರ್ ಅಂತ್ಯದ ವರೆಗೆ ಬಳಕೆಯಾಗಿರುವುದು ₹30.40 ಲಕ್ಷ ಕೋಟಿ. ರಾಜ್ಯ ಸರ್ಕಾರಗಳಿಗೆ ಅನುದಾನ ಹಂಚಿಕೆ ಮಾಡುವ, ಕಲ್ಯಾಣ ಯೋಜನೆಗಳನ್ನು ಜಾರಿಗೊಳಿಸುವ ಹೆಚ್ಚಿನ ಇಲಾಖೆಗಳು ಅನುದಾನ ಬಳಕೆಯಲ್ಲಿ ಹಿಂದುಳಿದಿವೆ. ಇವುಗಳು ಶೇ 50ರಿಂದ ಶೇ 60ರಷ್ಟು ಮಾತ್ರ ಹಣ ಖರ್ಚು ಮಾಡಿವೆ. ಅನುದಾನ ಹಾಗೂ ತೆರಿಗೆ ಹಣ ಹಂಚಿಕೆಯಲ್ಲಿ ಬಿಜೆಪಿಯೇತರ ಸರ್ಕಾರಗಳು ಇರುವ ರಾಜ್ಯಗಳಿಗೆ ಕೇಂದ್ರ ಸರ್ಕಾರ ಅನ್ಯಾಯ ಮಾಡುತ್ತಿದೆ ಎಂದು ಕರ್ನಾಟಕ, ಕೇರಳ ಹಾಗೂ ಪಶ್ಚಿಮ ಬಂಗಾಳ ಸರ್ಕಾರಗಳು ಸಿಡಿದೆದ್ದಿವೆ.

6ನೇ ಪುಟ ನೋಡಿ

₹44,90,485 ಕೋಟಿ
2023–24ರ ಬಜೆಟ್ ಗಾತ್ರ


₹30,40,531 ಕೋಟಿ
ಡಿಸೆಂಬರ್ ಅಂತ್ಯದ ವರೆಗೆ ಖರ್ಚಾಗಿರುವ ಮೊತ್ತ



₹14,49,954 ಕೋಟಿ
ಖರ್ಚಾಗದೇ ಉಳಿದ ಮೊತ್ತ

ಸಾಮಾಜಿಕ ವಲಯದ ವಿವಿಧ ಕಾರ್ಯಕ್ರಮಗಳಿಗೆ ಹಣ ಬಳಕೆ

ವೆಚ್ಚ (₹ಕೋಟಿಗಳಲ್ಲಿ)





2023–24ರ ಬಜೆಟ್ ಹಣ ಬಳಕೆ (ಡಿಸೆಂಬರ್ ಅಂತ್ಯದ ವರೆಗೆ)

ಸಚಿವಾಲಯ	ಅನುದಾನ ಹಂಚಿಕೆ	ಬಳಕೆ (₹ ಕೋಟಿಗಳಲ್ಲಿ)
ಕೃಷಿ	1,26,666	77,898
ರಸಗೊಬ್ಬರ	1,92,218	1,41,410
ಸಂಪರ್ಕ	1,22,749	89,212
ಗ್ರಾಹಕ ವ್ಯವಹಾರ, ಆಹಾರ	2,22,234	1,39,251
ಶಿಕ್ಷಣ	1,29,718	59,247
ಹಣಕಾಸು	16,27,173	10,76,876
ಆರೋಗ್ಯ	80,518	55,701
ಗೃಹ	2,00,035	1,45,996
ವಸತಿ	69,271	43,443
ಜಲಶಕ್ತಿ	96,550	64,383
ಅಲ್ಪಸಂಖ್ಯಾತ	2,609	343
ರೈಲ್ವೆ	2,43,272	2,07,646
ಹೆದ್ದಾರಿ	2,76,349	2,28,122
ಗ್ರಾಮೀಣಾಭಿವೃದ್ಧಿ	1,72,967	1,08,919
ಸಾಮಾಜಿಕ ನ್ಯಾಯ	11,078	4,638
ಮಹಿಳಾ ಮತ್ತು ಮಕ್ಕಳ ಕಲ್ಯಾಣ	25,449	16,372
ಪೆಟ್ರೋಲಿಯಂ	14,757	2,918

*ಮಾಹಿತಿ: ರಾಜ್ಯಸಭೆಯಲ್ಲಿ ಹಣಕಾಸು ಸಚಿವರ ಉತ್ತರ

ಪ್ರತಿಭಟನೆಗೆ ಬನ್ನಿ: ಸಂಸದರಿಗೆ ಸಿ.ಎಂ ಪತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೇಂದ್ರ ಸರ್ಕಾರದಿಂದ ಕನ್ನಡಿಗರ ಸ್ವಾಭಿಮಾನಕ್ಕೆ ನಿರಂತರವಾಗಿ ಆಗುತ್ತಿರುವ ಅನ್ಯಾಯ ಮತ್ತು ಕನ್ನಡಿಗರ ತೆರಿಗೆ ಹಣಕ್ಕೆ ಆಗುತ್ತಿರುವ ವಂಚನೆ ವಿರೋಧಿಸಿ ದೆಹಲಿಯಲ್ಲಿ ಬುಧವಾರ (ಫೆ. 7) ಹಮ್ಮಿಕೊಂಡಿರುವ ಪ್ರತಿಭಟನೆಯಲ್ಲಿ ಭಾಗವಹಿಸುವಂತೆ ರಾಜ್ಯದ ಎಲ್ಲ ಸಂಸದರಿಗೆ ಮತ್ತು ರಾಜ್ಯವನ್ನು ಪ್ರತಿನಿಧಿಸುವ ಕೇಂದ್ರ ಸಚಿವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪತ್ರ ಬರೆದಿದ್ದಾರೆ.

ದೆಹಲಿಯ ಜಂತರ್ ಮಂತರ್‌ನಲ್ಲಿ ಕನ್ನಡಿಗರ ಸ್ವಾಭಿಮಾನಿ ಹೋರಾಟ ನಡೆಯಲಿದೆ.

6ನೇ ಪುಟ ನೋಡಿ

ಜಾಲತಾಣಗಳಲ್ಲೂ ಅಭಿಯಾನ

ತೆರಿಗೆ ಆದಾಯದ ಪಾಲು ಹಂಚಿಕೆಯಲ್ಲಿ ಕೇಂದ್ರ ಸರ್ಕಾರ ಕರ್ನಾಟಕಕ್ಕೆ ಅನ್ಯಾಯ ಮಾಡುತ್ತಿದೆ ಎಂದು ಆರೋಪಿಸಿ ರಾಜ್ಯ ಸರ್ಕಾರ ಹಮ್ಮಿಕೊಂಡಿರುವ 'ಚಲೋ ದಿಲ್ಲಿ' ಪ್ರತಿಭಟನೆ ಬೆಂಬಲಿಸಿ ಸಾಮಾಜಿಕ ಮಾಧ್ಯಮಗಳಲ್ಲಿ ಅಭಿಯಾನ ಬಿರುಸಾಗಿದೆ. ಪ್ರತಿಭಟನೆ ಕುರಿತು ರಾಜ್ಯ ಸರ್ಕಾರ ಮಾಧ್ಯಮ ಗಳಲ್ಲಿ ಪ್ರಕಟಿಸಿರುವ ಜಾಹೀರಾತಿನ ತುಣುಕನ್ನು ಎಕ್ಸ್', ಫೇಸ್‌ಬುಕ್, ವಾಟ್ಸ್ ಆ್ಯಪ್ ಸೇರಿದಂತೆ ವಿವಿಧ ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಂಡಿರುವ ಸಚಿವರು, ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು, ಬೆಂಬಲಿಗರು ಹೋರಾಟವನ್ನು ಬೆಂಬಲಿಸಿದ್ದಾರೆ.

ರಾಜ್ಯ ಸರ್ಕಾರದ ವಿರುದ್ಧ ಬಿಜೆಪಿ ಪ್ರತಿಭಟನೆ

ಬರ ಪರಿಸ್ಥಿತಿ ಸರಿಯಾಗಿ ನಿರ್ವಹಿಸದೇ, ರೈತರಿಗೆ ಪರಿಹಾರವನ್ನೂ ಬಿಡುಗಡೆ ಮಾಡದೇ ರಾಜ್ಯ ಸರ್ಕಾರ ಕಾಲಹರಣ ಮಾಡುತ್ತಿದೆ ಎಂದು ಆರೋಪಿಸಿ ಬಿಜೆಪಿ ಶಾಸಕರು ಮತ್ತು ವಿಧಾನ ಪರಿಷತ್ ಸದಸ್ಯರು ಬುಧವಾರ ಬೆಳಿಗ್ಗೆ 11ಕ್ಕೆ ವಿಧಾನಸೌಧದ ಗಾಂಧಿ ಪ್ರತಿಮೆ ಬಳಿ ಪ್ರತಿಭಟನೆ ನಡೆಸಲಿದ್ದಾರೆ.

ರಾಜ್ಯದಲ್ಲಿ 223 ತಾಲ್ಲೂಕುಗಳನ್ನು ಬರಪೀಡಿತ ಪ್ರದೇಶ ಎಂದು ಘೋಷಿಸಲಾಗಿದೆ. ಕುಡಿಯುವ ನೀರಿನ ಅಭಾವ ಇರುವ ಕಡೆಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಮಾಡಿಲ್ಲ, ರೈತರಿಗೆ ಪರಿಹಾರ ನೀಡಿಲ್ಲ, ಜಾನುವಾರುಗಳಿಗೆ ಮೇವಿನ ವ್ಯವಸ್ಥೆ ಮಾಡಿಲ್ಲ. ಸರ್ಕಾರದ ರೈತ ವಿರೋಧಿ ನೀತಿಯನ್ನು ಖಂಡಿಸಿ ಪ್ರತಿಭಟನೆ ನಡೆಸುತ್ತಿರುವುದಾಗಿ ಎಂದು ಬಿಜೆಪಿ ಹೇಳಿದೆ.

ರಾಜ್ಯದಲ್ಲಿ ಆರ್ಥಿಕ ಸ್ಥಿತಿ ತೀರಾ ಹದಗೆಟ್ಟಿದೆ. ಗ್ಯಾರಂಟಿ ಯೋಜನೆಗಳನ್ನು ಜಾರಿ ಮಾಡುವ ಭರಾಟೆಯಲ್ಲಿ ಸರ್ಕಾರ ಬೊಕ್ಕಸವನ್ನು ಬರಿದು ಮಾಡಿದೆ. ಹೀಗಾಗಿ ಬರ ನಿರ್ವಹಣೆ ಮಾಡಲು ಸರ್ಕಾರದ ಬಳಿ ಹಣವಿಲ್ಲದೇ ರೈತರನ್ನು ನಡುನೀರಿನಲ್ಲಿ ಕೈಬಿಟ್ಟಿದೆ ಎಂದು ಬಿಜೆಪಿ ದೂರಿದೆ.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ, ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್.ಅಶೋಕ, ವಿಧಾನಪರಿಷತ್ ವಿರೋಧಪಕ್ಷದ ನಾಯಕ ಕೋಟ ಶ್ರೀನಿವಾಸ ಪೂಜಾರಿ, ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮತ್ತಿತರರು ಭಾಗವಹಿಸಲಿದ್ದಾರೆ.

> ಕೇಂದ್ರ ಸರ್ಕಾರದಿಂದ ಕರ್ನಾಟಕದ ಮೇಲೆ ನಡೆಯುತ್ತಿರುವ ಆರ್ಥಿಕ ದೌರ್ಜನ್ಯದ ವಿರುದ್ಧ ಧ್ವನಿ ಎತ್ತೋಣ. ದೆಹಲಿಯ ಜಂತರ್ ಮಂತರ್‌ನಲ್ಲಿ ಬುಧವಾರ ನಡೆಯುವ ಸತ್ಯಾಗ್ರಹದಲ್ಲಿ ಭಾಗವಹಿಸುವ ಮೂಲಕ ನಮ್ಮ ಹಕ್ಕಿಗಾಗಿ ಹೋರಾಡೋಣ
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

> ಸಮಗ್ರ ಶಿಕ್ಷಣ ಕರ್ನಾಟಕ (ಹಿಂದಿನ ಸರ್ವ ಶಿಕ್ಷಣ ಅಭಿಯಾನ) ಯೋಜನೆ ಅನುದಾನ ಹಂಚಿಕೆಯಲ್ಲೂ ಕೇಂದ್ರ ಸರ್ಕಾರ ರಾಜ್ಯಕ್ಕೆ ತಾರತಮ್ಯ ಮಾಡುತ್ತಿದೆ. ಪತ್ರ ಬರೆದರೂ ಪ್ರತಿಕ್ರಿಯಿಸುತ್ತಿಲ್ಲ
> **ಮಧು ಬಂಗಾರಪ್ಪ,** ರಾಜ್ಯದ ಶಿಕ್ಷಣ ಸಚಿವ

> 'ಗ್ಯಾರಂಟಿ' ಯೋಜನೆಗಳಿಂದ ಬೊಕ್ಕಸ ಬರಿದು ಮಾಡಿಕೊಂಡಿರುವ ಕಾಂಗ್ರೆಸ್ ಸರ್ಕಾರ ಆರ್ಥಿಕ ನಿರ್ವಹಣೆಯಲ್ಲಿನ ತನ್ನ ವೈಫಲ್ಯ ಮುಚ್ಚಿಕೊಳ್ಳಲು ಕೇಂದ್ರದ ವಿರುದ್ಧ ಪ್ರತಿಭಟನೆಗೆ ಮುಂದಾಗಿದೆ
> **ಬಿ.ವೈ.ವಿಜಯೇಂದ್ರ,** ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

> 15ನೇ ಹಣಕಾಸು ಆಯೋಗವು ಯಾವುದೇ ರಾಜ್ಯಕ್ಕೆ ವಿಶೇಷ ಅನುದಾನವನ್ನು ಶಿಫಾರಸು ಮಾಡಿಲ್ಲ. ಹಾಗಾಗಿ, ವಿಶೇಷ ಅನುದಾನದ ಪ್ರಶ್ನೆಯೇ ಉದ್ಭವಿಸುವುದಿಲ್ಲ
> **ಪ್ರಲ್ಹಾದ ಜೋಶಿ,** ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ

> ತೆರಿಗೆ ಪಾಲು ಮತ್ತು ಅನುದಾನದ ಹಂಚಿಕೆಯಲ್ಲಿ ಕೇಂದ್ರ ಸರ್ಕಾರದಿಂದ ಅನ್ಯಾಯವಾಗುತ್ತಿದೆ ಎಂದು ಪ್ರತಿಭಟನೆ ನಡೆಸಲು ಹೊರಟಿರುವ ಕಾಂಗ್ರೆಸ್ ಪಕ್ಷವು ಎರಡು ತಲೆಯ ರಾಜಕಾರಣ ಮಾಡುತ್ತಿದೆ
> **ಎಚ್.ಡಿ. ಕುಮಾರಸ್ವಾಮಿ,** ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

ಚಿನಕುರಳಿ

ಪ್ರಕಾಶ್ ಶೆಟ್ಟಿ



ಸಿದ್ದರಾಮಯ್ಯಗೆ ₹10 ಸಾವಿರ ದಂಡ

ಪ್ರಜಾವಾಣಿ ವಾರ್ತೆ



ಸಿದ್ದರಾಮಯ್ಯ

ಬೆಂಗಳೂರು: ಈ ಹಿಂದಿನ ಬಿಜೆಪಿ ಸರ್ಕಾರದಲ್ಲಿ ಸಚಿವರಾಗಿದ್ದ ಕೆ.ಎಸ್. ಈಶ್ವರಪ್ಪ ರಾಜೀನಾಮೆಗೆ ಆಗ್ರಹಿಸಿ ನಡೆಸಲಾಗಿದ್ದ ಪ್ರತಿಭಟನೆಗೆ ಸಂಬಂಧಿಸಿದಂತೆ ಈಗಿನ ಮುಖ್ಯಮಂತ್ರಿ ಸಿದ್ದರಾಮಯ್ಯ, ಸಚಿವರಾದ ಎಂ.ಬಿ.ಪಾಟೀಲ, ರಾಮಲಿಂಗಾರೆಡ್ಡಿ ಹಾಗೂ ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ ವಿರುದ್ಧದ ಕ್ರಿಮಿನಲ್ ಪ್ರಕರಣ ವಜಾ ಗೊಳಿಸಲು ಹೈಕೋರ್ಟ್ ನಿರಾಕರಿಸಿದೆ.

ಪ್ರಕರಣ ರದ್ದು ಕೋರಿ ಸಿದ್ದರಾಮಯ್ಯ ಮತ್ತಿತರರು ಸಲ್ಲಿಸಿದ್ದ ಅರ್ಜಿಗಳ ವಿಚಾರಣೆ ನಡೆಸಿ ಕಾಯ್ದಿರಿಸಿದ್ದ ತೀರ್ಪನ್ನು ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರಿದ್ದ 'ಶಾಸಕರು-ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ಹೈಕೋರ್ಟ್‌ನ ವಿಶೇಷ ನ್ಯಾಯಪೀಠ ಮಂಗಳವಾರ ಪ್ರಕಟಿಸಿದೆ.

'ಆರೋಪಿತ ಎಲ್ಲ ಅರ್ಜಿದಾರರೂ ಜನಪ್ರತಿನಿಧಿಗಳ ನ್ಯಾಯಾಲಯದಲ್ಲಿ ವಿಚಾರಣೆಗೆ ಹಾಜರಾಗಬೇಕು' ಎಂದು ನ್ಯಾಯಪೀಠ ಆದೇಶಿಸಿದೆ. 'ಪೊಲೀಸ್ ಅಧಿಕಾರಿಯನ್ನು ಯಾವುದೇ ಸಮರ್ಥನೆ ನೀಡದೆ ಪ್ರಕರಣದಲ್ಲಿ ಪ್ರತಿವಾದಿಯನ್ನಾಗಿ ಹೆಸರಿಸಲಾಗಿದೆ' ಎಂಬ ಕಾರಣಕ್ಕೆ ಎಲ್ಲ ಅರ್ಜಿದಾರರಿಗೂ ತಲಾ ₹10 ಸಾವಿರ ದಂಡ ವಿಧಿಸಿದೆ. 'ದಂಡದ ಮೊತ್ತವನ್ನು ಮುಖ್ಯಮಂತ್ರಿ ಪರಿಹಾರ ನಿಧಿಗೆ ಪಾವತಿಸಬೇಕು' ಎಂದೂ ನಿರ್ದೇಶಿಸಲಾಗಿದೆ.

'ಅರ್ಜಿದಾರರು ವಿಚಾರಣಾ ನ್ಯಾಯಾಲಯಕ್ಕೆ ಒಂದೇ ದಿನ ಹೋದರೆ ಗದ್ದಲವಾಗುತ್ತದೆ ಎಂಬ ಕಾರಣಕ್ಕೆ ವಿಭಿನ್ನ ದಿನಾಂಕಗಳನ್ನು ನಿಗದಿಪಡಿಸಿದ್ದೇನೆ. ನಿಗದಿಪಡಿಸಿರುವ ಆಯಾ ದಿನದಂದು ಅರ್ಜಿದಾರರು ವಿಚಾರಣಾ ನ್ಯಾಯಾಲಯದ ಮುಂದೆ ಹಾಜರಾಗಿ ನ್ಯಾಯಿಕ ಪ್ರಕ್ರಿಯೆಗೆ ಒಳಪಡಬೇಕು' ಎಂದು ನ್ಯಾಯಮೂರ್ತಿ ಕೃಷ್ಣ ದೀಕ್ಷಿತ್ ತಮ್ಮ ಆದೇಶದಲ್ಲಿ ವಿವರಿಸಿದ್ದಾರೆ.

ಸಿದ್ದರಾಮಯ್ಯ ಮಾರ್ಚ್ 6ರಂದು, ರಣದೀಪ್ ಸಿಂಗ್ ಸುರ್ಜೇವಾಲಾ ಮಾರ್ಚ್ 7ರಂದು, ಎಂ.ಬಿ.ಪಾಟೀಲ, ರಾಮಲಿಂಗಾ ರೆಡ್ಡಿ ಮಾರ್ಚ್ 15ರಂದು ವಿಚಾರಣಾ ನ್ಯಾಯಾಲಯಕ್ಕೆ ಹಾಜರಾಗುವಂತೆ ನಿರ್ದೇಶಿಸಲಾಗಿದೆ.

'ಬೆಂಗಳೂರಿನಲ್ಲಿ ಬೆಳಗಿನ ವೇಳೆ ಸಂಚಾರ ದಟ್ಟಣೆ ಹೆಚ್ಚಿರುತ್ತದೆ. ಇಂತಹ ಸಮಯದಲ್ಲಿ ಪ್ರತಿಭಟನೆಗಾಗಿ ರಸ್ತೆಗಿಳಿಯುವುದು ಸಾರ್ವಜನಿಕರಿಗೆ ಭಾರಿ ಸಮಸ್ಯೆ ಉಂಟು ಮಾಡುತ್ತದೆ. ನಗರದ ಬದುಕು ಈಗಾಗಲೇ ಹೆಚ್ಚೆಚ್ಚು ಅಸಹನೀಯ ಎನಿಸಿರುವಾಗ ಜನಪ್ರತಿನಿಧಿಗಳು ಈ ರೀತಿ ಸಾರ್ವಜನಿಕರಿಗೆ ತೊಂದರೆ ಉಂಟುಮಾಡಬಾರದು. ಎಲ್ಲರಂತೆ ಅವರೂ ಕಾನೂನು ಪಾಲಿಸಬೇಕು. ಹಾಗಾದರೆ, ಮತದಾರರೂ ಕಾನೂನು ಪಾಲಿಸುತ್ತಾರೆ' ಎಂದು ನ್ಯಾಯಮೂರ್ತಿಗಳು ತಮ್ಮ ಆದೇಶದಲ್ಲಿ ವಿವರಿಸಿದ್ದಾರೆ.

5ನೇ ಪುಟ ನೋಡಿ

ಮೇ 12ಕ್ಕೆ ಕಾಮೆಡ್–ಕೆ ಪರೀಕ್ಷೆ: ಅರ್ಜಿ ಸಲ್ಲಿಕೆ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ವೈದ್ಯಕೀಯ, ಎಂಜಿನಿಯರಿಂಗ್ ಮತ್ತು ದಂತ ವೈದ್ಯಕೀಯ ಕಾಲೇಜುಗಳ ಒಕ್ಕೂಟ (ಕಾಮೆಡ್-ಕೆ) ಎಂಜಿನಿಯರಿಂಗ್ ಕೋರ್ಸ್‌ಗಳ ಪ್ರವೇಶಕ್ಕೆ ಮೇ 12ರಂದು ಪರೀಕ್ಷೆ ನಡೆಸಲಿದೆ.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಕಾಮೆಡ್-ಕೆ ಕಾರ್ಯನಿರ್ವಾಹಕ ಕಾರ್ಯದರ್ಶಿ ಕುಮಾರ್, ಭಾರತದ 200ಕ್ಕೂ ಅಧಿಕ ನಗರಗಳ 400ಕ್ಕೂ ಹೆಚ್ಚು ಕೇಂದ್ರಗಳಲ್ಲಿ ಕಾಮೆಡ್–ಕೆ ಹಾಗೂ ಯುಜಿಇಟಿ, ಯುನಿ-ಗೇಜ್ ಸಂಯೋಜಿತ ಪರೀಕ್ಷೆಗಳನ್ನು ಆನ್‌ಲೈನ್ ಮೂಲಕ ನಡೆಸಲಾಗುತ್ತದೆ. ಪರೀಕ್ಷೆ ಎದುರಿಸುವ ವಿದ್ಯಾರ್ಥಿಗಳು ಕರ್ನಾಟಕದ 150 ಎಂಜಿನಿಯರಿಂಗ್ ಕಾಲೇಜುಗಳು ಹಾಗೂ ಭಾರತದ 50ಕ್ಕೂ ಹೆಚ್ಚು ಖಾಸಗಿ ಹಾಗೂ ಡೀಮ್ಡ್ ವಿಶ್ವವಿದ್ಯಾಲಯಗಳಲ್ಲಿ ಪ್ರವೇಶ ಪಡೆಯಬಹುದು ಎಂದು ಮಾಹಿತಿ ನೀಡಿದರು.

ಆಸಕ್ತರು www.comedk.org ಅಥವಾ www.unigauge.com ಮೂಲಕ ಹೆಸರು ನೋಂದಾಯಿಸಿಕೊಳ್ಳಬಹುದು. ಅರ್ಜಿ ಸಲ್ಲಿಸಲು ಏ. 5 ಕೊನೆಯ ದಿನ ಎಂದು ತಿಳಿಸಿದರು.



ಧರಣಿ

'ಅಂಗನವಾಡಿ ಕಾರ್ಯಕರ್ತೆಯರು ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಮಂಗಳವಾರ ನಡೆಸಿದ್ದ ಪ್ರತಿಭಟನೆಯಲ್ಲಿ ಅಮ್ಮನೊಂದಿಗೆ ಪಾಲ್ಗೊಂಡಿದ್ದ ಮಗುವೊಂದು ಜೈಕಾರ ಕೂಗಿತು – ಪ್ರಜಾವಾಣಿ ಚಿತ್ರ / ಕೃಷ್ಣಕುಮಾರ್ ಪಿ.ಎಸ್.

ಪಂಚಾಯಿತಿಗಳ ಅನುದಾನ ಬಳಕೆಗೆ ವಿರೋಧ

ಗ್ರಾ.ಪಂ.ಗಳಿಗೆ ಭಾರವಾದ 'ಕೂಸಿನ ಮನೆ'

• ವಿ.ಎಸ್. ಸುಬ್ರಹ್ಮಣ್ಯ

ಬೆಂಗಳೂರು: ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ (ಮನರೇಗಾ) ಕೂಲಿಗೆ ಬರುವ ತಾಯಂದಿರ ಎಳೆಯ ಮಕ್ಕಳ ಆರೈಕೆಗಾಗಿ ಜಾರಿಗೊಳಿಸಿರುವ 'ಕೂಸಿನ ಮನೆ' ಯೋಜನೆಯ ಆಡಳಿತಾತ್ಮಕ ಮತ್ತು ಆರ್ಥಿಕ ಭಾರ ಹೊರಲು ಗ್ರಾಮ ಪಂಚಾಯಿತಿಗಳು ಹಿಂದೇಟು ಹಾಕುತ್ತಿವೆ.

ಕೂಸಿನ ಮನೆಗಳ ನಿರ್ವಹಣೆಯ ಭಾರ ಹೊರಲು ಹಲವೆಡೆ ಗ್ರಾಮ ಪಂಚಾಯಿತಿಗಳ ಚುನಾಯಿತ ಸದಸ್ಯರೇ ವಿರೋಧ ವ್ಯಕ್ತಪಡಿಸುತ್ತಿದ್ದಾರೆ. ಇದರಿಂದಾಗಿ ಉದ್ದೇಶಿತ 4,000 ಕೂಸಿನ ಮನೆಗಳ ಪೈಕಿ 2,209ಕ್ಕೆ ಮಾತ್ರ ಚಾಲನೆ ನೀಡಲು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಸಾಧ್ಯವಾಗಿದೆ.

ನರೇಗಾ ಕೂಲಿಗೆ ಹೆಚ್ಚಿನ ಸಂಖ್ಯೆಯ ತಾಯಂದಿರು ಬರುವ ಸ್ಥಳಗಳಲ್ಲಿ ಮೂರು ವರ್ಷಕ್ಕಿಂತ ಕಡಿಮೆ ವಯಸ್ಸಿನ ಮೂರು ಅಥವಾ ಅದಕ್ಕಿಂತ ಹೆಚ್ಚಿನ ಎಳೆಯ ಮಕ್ಕಳಿದ್ದರೆ ಸ್ಥಳದಲ್ಲೇ ಒಬ್ಬರನ್ನು ಆರೈಕೆಗಾಗಿ ನಿಯೋಜಿಸುವ ವ್ಯವಸ್ಥೆ ಯೋಜನೆಯ ನಿಯಮಗಳಲ್ಲಿದೆ. ಅದನ್ನು ಬಳಸಿಕೊಂಡ ಪಂಚಾಯತ್ ರಾಜ್ ಇಲಾಖೆ, 'ಕೂಸಿನ ಮನೆ' ಹೆಸರಿನಲ್ಲಿ ಗ್ರಾಮ ಪಂಚಾಯಿತಿಗೆ ಒಂದು ಶಿಶುಪಾಲನಾ ಕೇಂದ್ರವನ್ನು ತೆರೆಯುತ್ತಿದೆ. ಯೋಜನೆಯ ಆರಂಭದಲ್ಲೇ ಶಿಶುಪಾಲನಾ ಕೇಂದ್ರಗಳ ನಿರ್ವಹಣೆ ಮತ್ತು ಮೇಲುಸ್ತುವಾರಿಯಲ್ಲಿ ಗೊಂದಲ ಹೆಚ್ಚಾಗಿದೆ.

5ನೇ ಪುಟ ನೋಡಿ

ಪೌಷ್ಟಿಕ ಆಹಾರಕ್ಕೆ ₹12

ಕೂಸಿನ ಮನೆಗೆ ಬರುವ ಮಕ್ಕಳಿಗೆ ಪೌಷ್ಟಿಕ ಆಹಾರ ಒದಗಿಸಲು ದಿನವೊಂದಕ್ಕೆ ₹ 12 ಅನುದಾನ ನಿಗದಿಪಡಿಸಲಾಗಿದೆ.

ತಾಯಂದಿರಿಂದ ದೂರ ಇರುವ ಮಕ್ಕಳಿಗೆ ಈ ಮೊತ್ತದಲ್ಲಿ ಗುಣಮಟ್ಟದ ಪೌಷ್ಟಿಕ ಆಹಾರ ಒದಗಿಸಲು ಅಸಾಧ್ಯ ಎಂಬ ಚರ್ಚೆಯೂ ಪಂಚಾಯತ್ ರಾಜ್ ಇಲಾಖೆ ಅಧಿಕಾರಿಗಳ ವಲಯದಲ್ಲಿ ನಡೆಯುತ್ತಿದೆ.

> 'ಕೂಸಿನ ಮನೆ ಯೋಜನೆ ಯನ್ನು ದುಡಿಯುವ ಮಹಿಳೆಯರು ಮತ್ತು ಮಕ್ಕಳ ಅನುಕೂಲಕ್ಕಾಗಿ ಆರಂಭಿಸಲಾಗಿದೆ. ಈ ಯೋಜನೆಯನ್ನು ಗ್ರಾಮ ಪಂಚಾಯಿತಿಗಳ ಎಲ್ಲ ಸದಸ್ಯರೂ ವಿರೋಧಿಸುತ್ತಿಲ್ಲ
> **ಉಮಾ ಮಹದೇವನ್,** ಪಂಚಾಯತ್ ರಾಜ್ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ

> ಕೆಲವು ಅಧಿಕಾರಿಗಳ ಮೂಗಿನ ನೇರಕ್ಕೆ ತಕ್ಕಂತೆ ಕೂಸಿನ ಮನೆ ಯೋಜನೆ ಯನ್ನು ರೂಪಿಸಲಾಗಿದೆ. ಈಗ ಕೂಸಿನ ಮನೆಯಿಂದ ಅನುಕೂಲಕ್ಕಿಂತ ಸಮಸ್ಯೆಯೇ ಹೆಚ್ಚು ಎಂಬ ಪರಿಸ್ಥಿತಿ ಸೃಷ್ಟಿಯಾಗಿದೆ
> **ಯದುನಾಡು ನಾಗರಾಜ್,**
> ಗ್ರಾಮ ಪಂಚಾಯಿತಿ ಸದಸ್ಯರ ಮಹಾ ಒಕ್ಕೂಟದ ಮೈಸೂರು ಜಿಲ್ಲಾ ಘಟಕದ ಅಧ್ಯಕ್ಷ

ಅಂಕಿ ಅಂಶಗಳು

4,000
ಒಟ್ಟು ತೆರೆಯಲು ಉದ್ದೇಶಿಸಿರುವ ಕೂಸಿನ ಮನೆಗಳು

2,209
ಈವರೆಗೆ ಆರಂಭವಾಗಿರುವ ಕೂಸಿನ ಮನೆಗಳು

20,712
ಕೂಸಿನ ಮನೆಗಳಲ್ಲಿ ನೋಂದಣಿಯಾಗಿರುವ ಮಕ್ಕಳು

ಉತ್ತರಾಖಂಡದಲ್ಲಿ ಯುಸಿಸಿ ಮಸೂದೆ ಮಂಡನೆ

ಸಹ–ಜೀವನ: ನೋಂದಣಿ ಕಡ್ಡಾಯ

ಡೆಹ್ರಾಡೂನ್ (ಪಿಟಿಐ): ಬಹು ಚರ್ಚಿತ ಏಕರೂಪ ನಾಗರಿಕ ಸಂಹಿತೆ (ಯುಸಿಸಿ) ಮಸೂದೆಯನ್ನು ಉತ್ತರಾಖಂಡ ವಿಧಾನಸಭೆಯಲ್ಲಿ ಮಂಗಳವಾರ ಮಂಡಿಸಲಾಯಿತು.

ಸಹ-ಜೀವನ (ಲಿವ್ ಇನ್) ಸಂಬಂಧದ ನೋಂದಣಿಯನ್ನು ಕಡ್ಡಾಯಗೊಳಿಸುವ ಪ್ರಸ್ತಾವವನ್ನೂ ಹೊಂದಿರುವ ಈ ಕಾಯ್ದೆ ವ್ಯಾಪ್ತಿಯಿಂದ ಬುಡಕಟ್ಟು ಸಮುದಾಯಗಳನ್ನು ಹೊರಗಿಡಲಾಗಿದೆ. ವಿಶೇಷ ಅಧಿವೇಶನದ 2ನೇ ದಿನವಾದ ಮಂಗಳವಾರ, ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಅವರು ಸಂವಿಧಾನದ ಮೂಲಪ್ರತಿ ಯನ್ನು ಹಿಡಿದುಕೊಂಡು ಸದನ ಪ್ರವೇಶಿಸಿದರು.

ಕಲಾಪ ಆರಂಭಗೊಂಡ ನಂತರ, ಧಾಮಿ ಅವರು ಮಸೂದೆಯನ್ನು ಮಂಡಿಸುತ್ತಿದ್ದಂತೆಯೇ ಆಡಳಿತ ಪಕ್ಷದ ಶಾಸಕರು ಮೇಜುಗಳನ್ನು ಕುಟ್ಟಿ ಸ್ವಾಗತಿಸಿದರಲ್ಲದೇ, 'ಭಾರತ್ ಮಾತಾ ಕಿ ಜೈ', 'ವಂದೇ ಮಾತರಂ' ಹಾಗೂ 'ಜೈ ಶ್ರೀರಾಮ್' ಘೋಷಣೆಗಳನ್ನು ಕೂಗಿದರು. ಮಸೂದೆ ಕುರಿತು ಅಧ್ಯಯನ ನಡೆಸಿ, ತಮ್ಮ ಅಭಿಪ್ರಾಯಗಳನ್ನು ತಿಳಿಸಲು ಸಮಯ ನೀಡುವಂತೆ ಬೇಡಿಕೆ ಮುಂದಿಟ್ಟು ವಿರೋಧ ಪಕ್ಷಗಳ ಸದಸ್ಯರು ಪ್ರತಿಭಟನೆ ನಡೆಸಿದರು.

'172 ಪುಟಗಳಷ್ಟಿರುವ ಮಸೂದೆಯು 392 ಸೆಕ್ಷನ್‌ಗಳನ್ನು ಒಳಗೊಂಡಿದೆ. ಇವುಗಳ ಅಧ್ಯಯನಕ್ಕೆ ವಿಪಕ್ಷಗಳ ಶಾಸಕರಿಗೆ ಸಮಯಾವಕಾಶ ನೀಡಬೇಕಿತ್ತು' ಎಂದು ವಿರೋಧ ಪಕ್ಷದ ನಾಯಕ ಯಶಪಾಲ್ ಆರ್ಯ ಹೇಳಿದರು.

11ನೇ ಪುಟ ನೋಡಿ

₹ 15 ಸಾವಿರ ಗೌರವಧನಕ್ಕೆ ಆಗ್ರಹ • ಹಸುಗಳ ಸಮೇತ ಬಿಜೆಪಿ ಹೋರಾಟ

ಅಂಗನವಾಡಿ ನೌಕರರು, ರೈತರ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಮ್ಮ ಬೇಡಿಕೆಗಳ ಈಡೇರಿಕೆಗಾಗಿ ವಿವಿಧ ಸಂಘಟನೆಗಳು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಮಂಗಳವಾರ ಪ್ರತ್ಯೇಕವಾಗಿ ಪ್ರತಿಭಟನೆ ನಡೆಸಿದವು.

₹ 15 ಸಾವಿರ ಗೌರವಧನಕ್ಕೆ ಆಗ್ರಹ: 'ಅಂಗನವಾಡಿ ಕಾರ್ಯಕರ್ತೆಯರ ಗೌರವ ಧನವನ್ನು ₹ 15 ಸಾವಿರಕ್ಕೆ ಹೆಚ್ಚಿಸಬೇಕು' ಎಂದು ಆಗ್ರಹಿಸಿ ರಾಜ್ಯ ಸಂಯುಕ್ತ ಅಂಗನವಾಡಿ ನೌಕರರ ಸಂಘದ ಪದಾಧಿಕಾರಿಗಳು ಬೃಹತ್ ಪ್ರತಿಭಟನೆ ನಡೆಸಿದರು.

ರಾಜ್ಯದ ವಿವಿಧ ಜಿಲ್ಲೆಗಳ ಅಂಗನವಾಡಿ ನೌಕರರು ಪ್ರತಿಭಟನೆಯಲ್ಲಿ ಪಾಲ್ಗೊಂಡು ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಕೆಲವರು, ತಮ್ಮ ಮಕ್ಕಳನ್ನೂ ಪ್ರತಿಭಟನೆಗೆ ಕರೆತಂದಿದ್ದರು.

'ಅಂಗನವಾಡಿ ಕಾರ್ಯಕರ್ತೆಯರು, ಸಹಾಯಕಿಯರು ಹಾಗೂ ಆಶಾ ಕಾರ್ಯಕರ್ತೆಯರ ಮೇಲೆ ಹೆಚ್ಚು ಜವಾಬ್ದಾರಿಗಳಿವೆ. ಆದರೆ, ಸಂಬಳ ಮಾತ್ರ ತೀರಾ ಕಡಿಮೆ. ಅಂಗನವಾಡಿ ಕಾರ್ಯಕರ್ತೆಯರಿಗೆ ನ್ಯಾಯಯುತವಾಗಿ ₹ 35 ಸಾವಿರ ವೇತನ ನೀಡಬೇಕು. ಇದೀಗ, ತಿಂಗಳಿಗೆ ಕನಿಷ್ಠ ₹15 ಸಾವಿರ ಗೌರವಧನವನ್ನಾದರೂ ಸರ್ಕಾರ ನೀಡಬೇಕು' ಎಂದು ಆಗ್ರಹಿಸಿದರು 'ವೈದ್ಯಕೀಯ ಸಹಾಯಧನ ಹೆಚ್ಚಿಸಬೇಕು. ಸೇವಾ ಹಿರಿತನ ಆಧರಿಸಿ ಬಡ್ತಿ ನೀಡಬೇಕು. ಪ್ರತಿ ತಿಂಗಳ 5ನೇ ತಾರೀಖಿನೊಳಗೆ ಗೌರವಧನ ಪಾವತಿಸಬೇಕು. ವರ್ಷಕ್ಕೆ 2 ಜೊತೆ ಸಮವಸ್ತ್ರ ನೀಡಬೇಕು. ಮೊಬೈಲ್‌ಗಳಿಗೆ ರೀಚಾರ್ಜ್ ಮಾಡಿಸಬೇಕು. ಮಾತೃಪೂರ್ಣ ಯೋಜನೆ ಫಲಾನುಭವಿಗಳಿಗೆ ಆಹಾರ ಪದಾರ್ಥಗಳನ್ನು ಮನೆಗೆ ನೀಡಲು ಆದೇಶ ಹೊರಡಿಸಬೇಕು. ಖಾಲಿ ಇರುವ ಸಹಾಯಕಿಯರ ಹುದ್ದೆಗಳನ್ನು ಭರ್ತಿ ಮಾಡಬೇಕು. ಮಿನಿ ಅಂಗನವಾಡಿಗಳನ್ನು ವಿಸ್ತರಣೆ ಮಾಡಬೇಕು' ಎಂದೂ ಪ್ರತಿಭಟನಕಾರರು ಆಗ್ರಹಿಸಿದರು.





ಹಸುಗಳ ಸಮೇತ ಪ್ರತಿಭಟನೆ ನಡೆಸಿದ ಬಿಜೆಪಿ ಮುಖಂಡರು ಹಾಗೂ ಕಾರ್ಯಕರ್ತರು (ಎಡಚಿತ್ರ). ರಾಜ್ಯ ರೈತ ಸಂಘಟನೆಗಳ ಒಕ್ಕೂಟ ಹಾಗೂ ರಾಜ್ಯ ಕಬ್ಬು ಬೆಳೆಗಾರರ ಸಂಘದಿಂದ ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದ ರೈತರು – ಪ್ರಜಾವಾಣಿ ಚಿತ್ರಗಳು

ಹಸುಗಳ ಸಮೇತ ಪ್ರತಿಭಟನೆ

'ಬಾಕಿ ಉಳಿಸಿಕೊಂಡಿರುವ ಹಾಲಿನ ಪ್ರೋತ್ಸಾಹಧನ ನೀಡಬೇಕು' ಎಂದು ಆಗ್ರಹಿಸಿ ಬಿಜೆಪಿ ಬೆಂಗಳೂರು ಮಹಾನಗರ ಘಟಕದ ವತಿಯಿಂದ ಪ್ರತಿಭಟನೆ ನಡೆಯಿತು.

ಹಸುಗಳ ಸಮೇತ ಬಂದಿದ್ದ ಪ್ರತಿಭಟನಕಾರರು, ವಿಧಾನಸೌಧದತ್ತ ಹೊರಡಲು ಮುಂದಾಗಿದ್ದರು. ಸ್ಥಳದಲ್ಲಿದ್ದ ಪೊಲೀಸರು ತಡೆದರು. ಹಸುಗಳನ್ನು ಬೇರೆಡೆ ಸ್ಥಳಾಂತರಿಸುವಂತೆ ಪ್ರತಿಭಟನಕಾರರಿಗೆ ಹೇಳಿದರು. ಪ್ರತಿಭಟನಕಾರರು ಒಪ್ಪದಿದ್ದಾಗ, ಪೊಲೀಸರೇ ಹಸುಗಳನ್ನು ಬೇರೆಡೆ ಸಾಗಿಸಿದರು. ಈ ಸಂದರ್ಭದಲ್ಲಿ ಪರಸ್ಪರ ಮಾತಿನ ಚಕಮಕಿ ನಡೆಯಿತು.

ಕರ್ನಾಟಕ ವಿದ್ಯುತ್ ಬಳಕೆದಾರರ ಸಂಘ: 'ವಿದ್ಯುತ್ ಮಸೂದೆ–2022 ರದ್ದುಗೊಳಿಸಬೇಕು' ಎಂದು ಆಗ್ರಹಿಸಿ ಕರ್ನಾಟಕ ವಿದ್ಯುತ್ ಬಳಕೆದಾರರ ಸಂಘದ ಪದಾಧಿಕಾರಿಗಳು ಪ್ರತಿಭಟಿಸಿದರು. ರಾಜ್ಯದ ವಿವಿಧ ಜಿಲ್ಲೆಗಳಿಂದ ಬಂದಿದ್ದ ಪ್ರತಿನಿಧಿಗಳು, ಬೇಡಿಕೆ ಈಡೇರಿಕೆಗಾಗಿ ಘೋಷಣಾ ಫಲಕಗಳನ್ನು ಪ್ರದರ್ಶಿಸಿದರು.

'ವಿದ್ಯುತ್ ಮಸೂದೆಯಿಂದ ಜನ ಸಾಮಾನ್ಯರಿಗೆ ಆರ್ಥಿಕವಾಗಿ ಹೊಡೆತ ಬೀಳಲಿದೆ. ಹೀಗಾಗಿ, ಮಸೂದೆಯನ್ನು ರದ್ದುಗೊಳಿಸಬೇಕು. ವಿದ್ಯುತ್ ವಲಯವನ್ನು ಖಾಸಗೀಕರಣ ಮಾಡಬಾರದು' ಎಂದು ಆಗ್ರಹಿಸಿದರು.

ರೈತರ ಸಾಲ ಮನ್ನಾಗೆ ಆಗ್ರಹ: 'ರಾಜ್ಯದಲ್ಲಿ ಬರಗಾಲದಿಂದ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಎಲ್ಲ ರೈತರ ಸಾಲ ಮನ್ನಾ ಮಾಡಬೇಕು' ಎಂದು ರಾಜ್ಯ ರೈತ ಸಂಘಟನೆಗಳ ಒಕ್ಕೂಟ ಹಾಗೂ ರಾಜ್ಯ ಕಬ್ಬು ಬೆಳೆಗಾರರ ಸಂಘದ ಪದಾಧಿಕಾರಿಗಳು 'ಬೆಂಗಳೂರು ಚಲೊ' ಹೆಸರಿನಲ್ಲಿ ಪ್ರತಿಭಟನೆ ನಡೆಸಿದರು.

'ಮಳೆ ಇಲ್ಲದಿದ್ದರಿಂದ ಬೆಳೆ ಕೈಗೆ ಬಂದಿಲ್ಲ. ಸಾಲಕ್ಕೆ ಬೇಸತ್ತು ರೈತರು ಆತ್ಮಹತ್ಯೆ ಹಾದಿ ಹಿಡಿಯುತ್ತಿದ್ದಾರೆ. ಹೀಗಾಗಿ, ಸರ್ಕಾರ ರೈತರ ಸಾಲಗಳನ್ನು ಮನ್ನಾ ಮಾಡಬೇಕು' ಎಂದು ಪ್ರತಿಭಟನಕಾರರು ಒತ್ತಾಯಿಸಿದರು.

ಸುದ್ದಿ 2 ನಿಮಿಷ

ಪಾರ್ಟ್‌ಟೈಮ್ ಕೆಲಸದ ಆಮಿಷ: ಮಹಿಳೆಗೆ ₹28.11 ಲಕ್ಷ ವಂಚನೆ

ತುಮಕೂರು: ಸೈಬರ್ ವಂಚಕರು ಒಡ್ಡಿದ ಪಾರ್ಟ್‌ಟೈಮ್ ಕೆಲಸದ ಆಮಿಷಕ್ಕೆ ಒಳಗಾದ ನಗರದ ಮಹಿಳೆಯೊಬ್ಬರು ₹28.11 ಲಕ್ಷ ಕಳೆದುಕೊಂಡಿದ್ದಾರೆ.

ಜ.29ರಂದು ವಾಟ್ಸ್ ಆ್ಯಪ್‌ನಲ್ಲಿ ಆನ್‌ಲೈನ್ ವಂಚಕರು ಕಳಿಸಿದ 'ಪಾರ್ಟ್ ಟೈಮ್ ಕೆಲಸ ಮಾಡುತ್ತಾ, ಹೆಚ್ಚು ಹಣ ಗಳಿಸಬಹುದು' ಎಂಬ ಮೆಸೇಜ್ ನಂಬಿ ಶಾಂತಿ ನಗರದ ಮಹಿಳೆಯು ಹಣ ಕಳೆದುಕೊಂಡಿದ್ದಾರೆ.

ಪಾರ್ಟ್ ಟೈಮ್ ಕೆಲಸದ ಭಾಗವಾಗಿ ವಂಚಕರು ಕೆಲವು ಹೋಟೆಲ್ ಲಿಂಕ್ ಕಳಿಸಿ ರೇಟಿಂಗ್ಸ್ ನೀಡುವಂತೆ ತಿಳಿಸಿದ್ದಾರೆ. ರೇಟಿಂಗ್ಸ್ ಟಾಸ್ಕ್ ಪೂರ್ಣಗೊಳಿಸಿದ ಮಹಿಳೆಯ ಖಾತೆಗೆ ಹಂತ ಹಂತವಾಗಿ ₹203, ₹150, ₹150 ವರ್ಗಾವಣೆ ಮಾಡಿದ್ದಾರೆ.



ಹೆಚ್ಚಿನ ಲಾಭ ಗಳಿಸಲು ಮತ್ತಷ್ಟು ಹಣ ಹೂಡಿಕೆ ಮಾಡುವಂತೆ ತಿಳಿಸಿ ಕೆಲವೊಂದು ಲಿಂಕ್ ಕಳುಹಿಸಿದ್ದಾರೆ. ನಂತರ ಬ್ಯಾಂಕ್ ಖಾತೆಗಳನ್ನು ನೀಡಿ ಹಣ ಹೂಡಿಕೆ ಮಾಡಿ, ಟಾಸ್ಕ್ ಪಡೆಯುವಂತೆ ತಿಳಿಸಿದ್ದಾರೆ.

ಇದನ್ನು ನಂಬಿದ ಮಹಿಳೆ ವಿವಿಧ ಬ್ಯಾಂಕ್ ಖಾತೆ ಮತ್ತು ಯುಪಿಐ ಐ.ಡಿಗಳಿಗೆ ಒಟ್ಟು ₹28.18 ಲಕ್ಷ ವರ್ಗಾವಣೆ ಮಾಡಿದ್ದಾರೆ. ಇದರಲ್ಲಿ ಕೇವಲ ₹6,443 ಮಹಿಳೆಯ ಖಾತೆಗೆ ವರ್ಗಾವಣೆಯಾಗಿದೆ. ಬಾಕಿ ಹಣ ವಾಪಸ್ ಕೊಡಿಸುವಂತೆ ಕೋರಿ ಸೈಬರ್ ಠಾಣೆಗೆ ದೂರು ನೀಡಿದ್ದು ಪ್ರಕರಣ ದಾಖಲಾಗಿದೆ.

ಜಲ ಕಾಯ್ದೆಗೆ ತಿದ್ದುಪಡಿ: ರಾಜ್ಯಸಭೆ ಒಪ್ಪಿಗೆ

ನವದೆಹಲಿ: ಜಲ ಕಾಯ್ದೆ 1974ರ ಅಡಿಯ ಕೆಲವು ಸಣ್ಣ ಲೋಪಗಳನ್ನು ಕ್ರಿಮಿನಲ್ ಅಪರಾಧಗಳ ವ್ಯಾಪ್ತಿಯಿಂದ ಹೊರತರುವ ಪ್ರಸ್ತಾವ ಇರುವ ಮಸೂದೆಗೆ ರಾಜ್ಯಸಭೆಯು ಮಂಗಳವಾರ ಅಂಗೀಕಾರ ನೀಡಿದೆ.

ಜಲ ತಿದ್ದುಪಡಿ ಮಸೂದೆಯು ವಾಣಿಜ್ಯ ವಹಿವಾಟು ನಡೆಸುವುದನ್ನು ಸುಲಲಿತ ಆಗಿಸುವ ಉದ್ದೇಶಕ್ಕೆ ಪೂರಕವಾಗಿದೆ ಎಂದು ಕೇಂದ್ರ ಪರಿಸರ ಸಚಿವ ಭೂಪೇಂದರ್ ಯಾದವ್ ಅವರು ಸದನಕ್ಕೆ ತಿಳಿಸಿದರು. ಈ ತಿದ್ದುಪಡಿಯ ಪ್ರಕಾರ ದಂಡದ ಮೊತ್ತವು ₹10 ಸಾವಿರದಿಂದ ₹15 ಲಕ್ಷದವರೆಗೆ ಇರಲಿದೆ.

ದಂಡದ ರೂಪದಲ್ಲಿ ಸಂಗ್ರಹಿಸಿದ ಮೊತ್ತವನ್ನು ಪರಿಸರ ಸಂರಕ್ಷಣಾ ನಿಧಿಯಲ್ಲಿ ಇರಿಸಲಾಗುತ್ತದೆ. ಈ ನಿಧಿಯಲ್ಲಿನ ಶೇಕಡ 75ರಷ್ಟು ಮೊತ್ತವನ್ನು ರಾಜ್ಯಗಳ ಜೊತೆ ಹಂಚಿಕೊಳ್ಳಲಾಗುವುದು ಎಂದು ಯಾದವ್ ಅವರು ತಿಳಿಸಿದರು.

ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗಳಿಗೆ ಅಧ್ಯಕ್ಷರನ್ನು ಹೇಗೆ ನಾಮನಿರ್ದೇಶನ ಮಾಡಬೇಕು ಎಂಬ ಬಗ್ಗೆ ಕೇಂದ್ರ ಸರ್ಕಾರವು ನಿಯಮ ರೂಪಿಸಲಿದೆ ಎಂದು ಮಸೂದೆಯಲ್ಲಿ ಹೇಳಲಾಗಿದೆ.

'ಈಡಿಗ ಜನಾಂಗದ..' ಕೃತಿ ಬಿಡುಗಡೆ 10ಕ್ಕೆ

ಪ್ರಜಾವಾಣಿ ವಾರ್ತೆ

ಮೈಸೂರು: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ಸ್ಪಂದನ ಸಾಂಸ್ಕೃತಿಕ ಪರಿಷತ್, ಕದಂಬ ಕಲಾಪೀಠ ಹಾಗೂ ಉದಯಗಿರಿ ಕನ್ನಡ ಸಂಘದ ವತಿಯಿಂದ ಫೆ.10ರಂದು ಸಂಜೆ 5ಕ್ಕೆ ನಗರದ ಎಂಜಿನಿಯರ್‌ಗಳ ಸಂಸ್ಥೆಯಲ್ಲಿ ಸುಜಯ್ ಸುರೇಶ್ ಸಂಪಾದಿತ 'ಈಡಿಗ ಜನಾಂಗದ ಮರೆಯಲಾಗದ ಮಹನೀಯರು' ಕೃತಿ ಬಿಡುಗಡೆ ನಡೆಯಲಿದೆ.

ಸಾಹಿತಿ ಸಿ.ಪಿ.ಕೃಷ್ಣಕುಮಾರ್ ಪುಸ್ತಕ ಬಿಡುಗಡೆ ಮಾಡುವರು. ಸಾಹಿತ್ಯ ಪರಿಷತ್ತಿನ ಜಿಲ್ಲಾ ಘಟಕದ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ.ಪದ್ಮಾ ಶೇಖರ್ ಪುಸ್ತಕ ಕುರಿತು ಮಾತನಾಡುವರು' ಎಂದು ಸ್ಪಂದನ ಸಾಂಸ್ಕೃತಿಕ ಪರಿಷತ್ ಅಧ್ಯಕ್ಷ ಟಿ.ಸತೀಶ್ ಜವರೇಗೌಡ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸೀಟು ಹಂಚಿಕೆ ವರಿಷ್ಠರ ತೀರ್ಮಾನ

ಪ್ರಜಾವಾಣಿ ವಾರ್ತೆ

ಹಾಸನ: 'ಲೋಕಸಭೆ ಚುನಾವಣೆ ಟಿಕೆಟ್ ಕುರಿತು ಯಾರು ಏನು ಬೇಕಾದರೂ ಹೇಳಬಹುದು. ಆದರೆ ಸಂಸತ್ ಅಧಿವೇಶನ ಮುಗಿದ ಬಳಿಕ, ಆ ಬಗ್ಗೆ ಬಿಜೆಪಿ–ಜೆಡಿಎಸ್ ವರಿಷ್ಠರು ತೀರ್ಮಾನ ಪ್ರಕಟಿಸಲಿದ್ದಾರೆ' ಎಂದು ಎಂದು ಸಂಸದ ಪ್ರಜ್ವಲ್ ರೇವಣ್ಣ ಹೇಳಿದರು.

'ಹಾಸನ, ಮಂಡ್ಯ ಕ್ಷೇತ್ರ ಬಿಜೆಪಿಗೆ ಸಿಗುವ ವಿಶ್ವಾಸವಿದೆ' ಎಂದು ಬಿಜೆಪಿ ರಾಜ್ಯ ಬಿಜೆಪಿ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಪ್ರೀತಂ ಗೌಡರು ಇತ್ತೀಚೆಗೆ ನೀಡಿದ್ದ ಹೇಳಿಕೆಗೆ ಅವರು ಮೇಲಿನಂತೆ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದರು.

'ಮೈತ್ರಿ ಸ್ಥಾನ ಹಂಚಿಕೆ ಬಗ್ಗೆ ಎಚ್.ಡಿ. ದೇವೇಗೌಡರು, ಎಚ್.ಡಿ.ಕುಮಾರ ಸ್ವಾಮಿ, ಬಿಜೆಪಿ ವರಿಷ್ಠರು ಚರ್ಚಿಸಿ ತೀರ್ಮಾನಿಸುತ್ತಾರೆ. ಖಂಡಿತಾ ಸಿಹಿ ಸುದ್ದಿ ಸಿಗಲಿದೆ' ಎಂದರು.

ನಗರದಲ್ಲಿ ಇಂದು

ದೊಡ್ಡರಂಗೇಗೌಡ ಅವರ 'ಸಾಹಿತ್ಯ ಸಮೀರ' ಪುಸ್ತಕ ಬಿಡುಗಡೆ: ಅತಿಥಿಗಳು: ಸುಚೇಂದ್ರ ಪ್ರಸಾದ್, ಬೈರಮಂಗಲ ರಾಮೇಗೌಡ, ಎಂ.ಆರ್. ಉಪೇಂದ್ರ ಕುಮಾರ್, ಸಂಚಾಲಕ: ಪರಮ್ ಗುಬ್ಬಿ, ಆಯೋಜನೆ: ದೊ.ರಂ.ಗೌ ಅಭಿಮಾನಿಗಳ ಬಳಗ, ಸ್ಥಳ: ಮಲ್ಲೇಶ್ವರ ಕ್ಲಬ್ ಅಸೋಸಿಯೇಷನ್, ಮಲ್ಲೇಶ್ವರ, ಬೆಳಿಗ್ಗೆ 10.30

'ಡಾ.ಜಿ.ಎಸ್. ಶಿವರುದ್ರಪ್ಪ ಪ್ರಶಸ್ತಿ' ಪ್ರದಾನ: ಬಸವರಾಜ ಕಲ್ಗುಡಿ, ಕೆ. ಮರುಳಸಿದ್ಧಪ್ಪ, ಪ್ರಶಸ್ತಿ ಪುರಸ್ಕೃತರು: ಎಚ್.ಎಸ್. ವೆಂಕಟೇಶಮೂರ್ತಿ, ಟಿ.ಎಸ್. ಸತ್ಯನಾಥ್, ಪ್ರಾಸ್ತಾವಿಕ ಮಾತು: ನಟರಾಜ ಬೂದಾಳು, ಅಭಿನಂದನಾ ಭಾಷಣ: ಎಂ.ಎಸ್. ಆಶಾದೇವಿ, ಆಯೋಜನೆ: ಡಾ.ಜಿಎಸ್ಸೆಸ್ ವಿಶ್ವಸ್ತ ಮಂಡಲಿ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 4

ಶರಣ ಸಂಗಮ 'ಬಸವಣ್ಣ ಕಂಡ ಅಂಬಿಗರ ಚೌಡಯ್ಯ': ಸಾನ್ನಿಧ್ಯ: ಶಿವಬಸವ ಸ್ವಾಮೀಜಿ, ಅತಿಥಿಗಳು: ಕೆ.ವಿ. ಶಿವಕುಮಾರ್, ಆರತಿ ವಿ.ಬಿ., ಅರುಣಕುಮಾರ್ ಡಿ.ಟಿ., ಸನ್ಮಾನಿತರು: ಎಂ. ಜಗದೀಶ್, ಆಯೋಜನೆ: ರಾಷ್ಟ್ರೀಯ ಬಸವತತ್ವ ಪರಿಷತ್ತು, ಸ್ಥಳ: ಎಂ. ಚಿದಾನಂದಮೂರ್ತಿ ಸಭಾಂಗಣ, ಪಾಲಿಕೆ ಸೌಧ, ವಿಜಯನಗರ, ಸಂಜೆ 4.30

ಪುರಂದರದಾಸರ ಪುಣ್ಯದಿನ ಮಹೋತ್ಸವ: ಹರಿದಾಸ ಗಾಯನ: ಶಂಕರ್ ಶಾನ್‌ಬಾಗ್ ಮತ್ತು ತಂಡ, ಆಯೋಜನೆ ಮತ್ತು ಸ್ಥಳ: ರಾಘವೇಂದ್ರ ಸೇವಾ ಸಮಿತಿ, ಸುಧೀಂದ್ರನಗರ, ಮಲ್ಲೇಶ್ವರ, ಸಂಜೆ 6.30

ಪ್ರವಚನ ವಾಹಿನಿ: 'ಪ್ರಹ್ಲಾದ ರಾಜರ ನರಸಿಂಹ ಸ್ತೋತ್ರ' ಕುರಿತು ಉಪನ್ಯಾಸ: ಖೇಡಾ ವೇದವ್ಯಾಸಾಚಾರ್, ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಜಯನಗರ, ಸಂಜೆ 6.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

ತಿಂಗಳಾಂತ್ಯಕ್ಕೆ ಕ್ಷಯ ರೋಗಿಗಳಿಗೆ ಹಣ ಬಿಡುಗಡೆ

ಪ್ರಜಾವಾಣಿ ವಾರ್ತೆ

ಮೈಸೂರು: 'ನಿಕ್ಷಯ್ ಪೋಷಣ್' ಯೋಜನೆಯ ಅಡಿ ರಾಜ್ಯದ ಕ್ಷಯ ರೋಗಿಗಳಿಗೆ ಪ್ರತಿ ತಿಂಗಳು ₹500 ಹಣ ಬಿಡುಗಡೆಗೆ ಕ್ರಮ ಕೈಗೊಂಡಿದ್ದು, ಈ ತಿಂಗಳ ಅಂತ್ಯಕ್ಕೆ ಎಲ್ಲರ ಬ್ಯಾಂಕ್ ಖಾತೆಗೆ ನೇರವಾಗಿ ಹಣ ವರ್ಗಾವಣೆಯಾಗಲಿದೆ ಎಂದು ಆರೋಗ್ಯ ಇಲಾಖೆಯ ಜಂಟಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ಸದ್ಯ ಜಾರಿಯಲ್ಲಿರುವ ಖಜಾನೆ–2 ತಂತ್ರಾಂಶಕ್ಕೆ ಆಧಾರ್ ಲಿಂಕ್ ಹೊಂದಿರುವ ಬ್ಯಾಂಕ್ ಖಾತೆ ಕಡ್ಡಾಯ. ರೋಗಿಯ ಬ್ಯಾಂಕ್ ಖಾತೆ ಸಂಖ್ಯೆಯಲ್ಲಿ ವ್ಯತ್ಯಾಸ, ಆಧಾರ್ ಲಿಂಕ್ ಆಗದ ಖಾತೆಗಳಿಗೆ ಹಣ ವರ್ಗಾವಣೆಯಾಗಿಲ್ಲ. ಆಧಾರ್ ಸೇವಾ ಸಿಂಧು ಪೋರ್ಟಲ್ ಮೂಲಕ ರಾಜ್ಯದ 30 ಸಾವಿರಕ್ಕೂ ಅಧಿಕ ರೋಗಿಗಳಿಗೆ ₹30 ಕೋಟಿಗೂ ಅಧಿಕ ಹಣ ವರ್ಗಾಯಿಸಲಾಗಿದೆ. ಉಳಿದವರ ಖಾತೆಗಳಿಗೂ ಹಣ ವರ್ಗಾವಣೆಗೆ ಕ್ರಮ ಕೈಗೊಳ್ಳಲಾಗಿದೆ' ಎಂದು ಮಾಹಿತಿ ನೀಡಿದ್ದಾರೆ.

ಪರ ಪುರುಷನ ಜೊತೆ ಪತ್ನಿ: ಸಹಾಯ ಮಾಡಿದ್ದವನ ಹತ್ಯೆ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಬಾಗಲಗುಂಟೆ ಠಾಣೆ ವ್ಯಾಪ್ತಿಯಲ್ಲಿ ಹೇಮಂತ್ ಅವರನ್ನು ಕೊಲೆ ಮಾಡಲಾಗಿದ್ದು, ಕೃತ್ಯ ಎಸಗಿದ್ದ ಇಬ್ಬರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

'ಸ್ಥಳೀಯನಿವಾಸಿಕಿರಣ್(32)ಮತ್ತು ಸ್ನೇಹಿತ ಅಕ್ಷಯ್ (31) ಬಂಧಿತರು. ಇವರಿಬ್ಬರೂ ಸೇರಿ ಫೆ.4ರಂದು ರಾತ್ರಿ ಹೇಮಂತ್ ಅವರನ್ನು ಕೊಲೆ ಮಾಡಿದ್ದರು' ಎಂದು ಪೊಲೀಸರು ಹೇಳಿದರು.

'ಆರೋಪಿ ಕಿರಣ್ ವಿವಾಹಿತನಾಗಿದ್ದು, ಸೆಕೆಂಡ್ ಹ್ಯಾಂಡ್ ಬೈಕ್ ಮಾರಾಟ ಮಾಡುತ್ತಾನೆ. ಕೆಲ ವರ್ಷಗಳ ಹಿಂದೆ ಈತನಿಗೆ ಕೆಂಗೇರಿ ನಿವಾಸಿ ಹೇಮಂತ್ ಪರಿಚಯವಾಗಿತ್ತು. ಬಳಿಕ, ಇಬ್ಬರೂ ಸ್ನೇಹಿತರಾಗಿದ್ದರು. ಆಗಾಗ ಭೇಟಿಯಾಗುತ್ತಿದ್ದರು' ಎಂದು ಪೊಲೀಸರು ತಿಳಿಸಿದರು.

ಪತ್ನಿ ಹೋಗಿದ್ದರಿಂದ ಸಿಟ್ಟು: 'ಹೇಮಂತ್ ಅವರ ಸ್ನೇಹಿತ ಮರಿಸ್ವಾಮಿಯು ಆರೋಪಿ ಕಿರಣ್‌ನ ಪತ್ನಿ ಜೊತೆ ಸ್ನೇಹ ಬೆಳೆಸಿದ್ದ. ನಂತರ, ಇಬ್ಬರ ನಡುವೆ ಸಲುಗೆ ಬೆಳೆದಿತ್ತೆಂದು ಗೊತ್ತಾಗಿದೆ' ಎಂದು ಪೊಲೀಸರು ಹೇಳಿದರು.

'ಕಿರಣ್‌ನ ಪತ್ನಿಯು ಮನೆ ಬಿಟ್ಟು ಮರಿಸ್ವಾಮಿ ಜೊತೆ ಹೋಗಿದ್ದಾರೆ. ಇದಕ್ಕೆ ಹೇಮಂತ್ ಸಹಾಯ ಮಾಡಿದ್ದ. ಈ ವಿಷಯ ಗೊತ್ತಾಗಿ ಕಿರಣ್ ಸಿಟ್ಟಾಗಿದ್ದ. ಪತ್ನಿಗಾಗಿ ಹಲವೆಡೆ ಹುಡುಕಾಡಿದರೂ ಸುಳಿವು ಸಿಕ್ಕಿರಲಿಲ್ಲ.'

'ಫೆ. 4ರಂದು ರಾತ್ರಿ ಹೇಮಂತ್‌ಗೆ ಕರೆ ಮಾಡಿದ್ದ ಕಿರಣ್, ಬಾಗಲಗುಂಟೆ ಬಳಿ ಕರೆಸಿಕೊಂಡಿದ್ದ. ಕಿರಣ್, ಅಕ್ಷಯ್ ಹಾಗೂ ಹೇಮಂತ್ ಒಟ್ಟಿಗೆ ಬಾರ್‌ಗೆ ಹೋಗಿ ಮದ್ಯ ಕುಡಿದಿದ್ದರು. ಬಾರ್‌ನಿಂದ ಹೊರಬಂದು, ಪಾಪಣ್ಣ ಬಡಾವಣೆಗೆ ಬಂದಿದ್ದರು. 'ಪತ್ನಿ ಬಿಟ್ಟು ಹೋಗಲು ನೀನೇ ಕಾರಣ' ಎಂದಿದ್ದ ಕಿರಣ್, ಅಕ್ಷಯ್ ಜೊತೆ ಸೇರಿ ಹೇಮಂತ್ ಮೇಲೆ ಹಲ್ಲೆ ಮಾಡಿ ಪರಾರಿಯಾಗಿದ್ದ' ಎಂದು ಪೊಲೀಸರು ತಿಳಿಸಿದರು.

'ಗಾಯಗೊಂಡಿದ್ದ ಹೇಮಂತ್ ಅವರನ್ನು ಸ್ಥಳೀಯರು ಆಸ್ಪತ್ರೆಗೆ ಕರೆದೊಯ್ದಿದ್ದರು. ಫೆ. 5ರ ರಾತ್ರಿ ಆಸ್ಪತ್ರೆಯಲ್ಲಿ ಅವರು ಮೃತಪಟ್ಟಿದ್ದಾರೆ. ಕೊಲೆ ಪ್ರಕರಣ ದಾಖಲಿಸಿಕೊಂಡು ಆರೋಪಿಗಳನ್ನು ಬಂಧಿಸಲಾಗಿದೆ. ತನ್ನ ಪತ್ನಿ ಬೇರೆಯವರ ಜೊತೆ ಹೋಗಲು ಸಹಾಯ ಮಾಡಿದ್ದಕ್ಕಾಗಿ ಹೇಮಂತ್‌ನನ್ನು ಕೊಲೆ ಮಾಡಿದ್ದಾಗಿ ಕಿರಣ್ ಹೇಳಿಕೆ ನೀಡಿದ್ದಾನೆ' ಎಂದಿದ್ದಾರೆ.

ಕೆ.ಆರ್. ಪುರದಲ್ಲಿ ನಡೆದಿದ್ದ ನೇತ್ರಾವತಿ ಕೊಲೆ ಪ್ರಕರಣ • ಬೆರಳಚ್ಚು ಸುಳಿವು

ಕೊಂದದ್ದು ತಂದೆ; ಮಗನಲ್ಲ

ಪ್ರಜಾವಾಣಿ ವಾರ್ತೆ


ಚಂದ್ರಪ್ಪ


ನೇತ್ರಾವತಿ

ಬೆಂಗಳೂರು: ಕೆ.ಆರ್. ಪುರ ಠಾಣೆ ವ್ಯಾಪ್ತಿಯ ಮನೆಯೊಂದರಲ್ಲಿ ಇತ್ತೀಚೆಗೆ ನಡೆದಿದ್ದ ನೇತ್ರಾವತಿ (40) ಕೊಲೆ ಪ್ರಕರಣದ ತನಿಖೆ ಕೈಗೊಂಡು 17 ವರ್ಷದ ಮಗನನ್ನು ಬಂಧಿಸಿದ್ದ ಪೊಲೀಸರು, ಇದೀಗ ಮೃತರ ಪತಿ ಚಂದ್ರಪ್ಪ (48) ಅವರನ್ನೂ ಸೆರೆ ಹಿಡಿದಿದ್ದಾರೆ.

'ಜಸ್ಟಿಸ್ ಭೀಮಯ್ಯ ಬಡಾವಣೆ ನಿವಾಸಿ ನೇತ್ರಾವತಿ ಅವರನ್ನು ರಾಡ್‌ನಿಂದ ಹೊಡೆದು ಕೊಲೆ ಮಾಡಲಾಗಿತ್ತು. ತಿಂಡಿ ಮಾಡಲಿಲ್ಲವೆಂಬ ಕಾರಣಕ್ಕೆ ಜಗಳ ತೆಗೆದು ಕೊಲೆ ಮಾಡಿದ್ದಾಗಿ ಮಗ ತಪ್ಪೊಪ್ಪಿಕೊಂಡಿದ್ದ. ಸ್ಥಳದಲ್ಲಿದ್ದ ರಾಡ್ ಮೇಲೆ ಇಬ್ಬರ ಬೆರಳಚ್ಚು ಇರುವುದು ಪರಿಶೀಲನೆಯಿಂದ ಗೊತ್ತಾಗಿತ್ತು. ಮಗನನ್ನು ಪುನಃ ವಿಚಾರಣೆ ನಡೆಸಿದಾಗ, ತಂದೆಯೂ ಕೃತ್ಯದಲ್ಲಿ ಭಾಗಿಯಾಗಿದ್ದು ತಿಳಿಯಿತು' ಎಂದು ಪೊಲೀಸ್ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

'ಮಗನ ಹೇಳಿಕೆ ಆಧರಿಸಿ ತಂದೆ ಚಂದ್ರಪ್ಪನನ್ನು ವಶಕ್ಕೆ ಪಡೆದು ವಿಚಾರಿಸಿದಾಗ ತಪ್ಪೊಪ್ಪಿಕೊಂಡ. ಚಂದ್ರಪ್ಪನನ್ನು ಬಂಧಿಸಲಾಗಿದ್ದು, ಈತನನ್ನು ಹೆಚ್ಚಿನ ವಿಚಾರಣೆಗಾಗಿ ಕಸ್ಟಡಿಗೆ ಪಡೆಯಬೇಕಿದೆ' ಎಂದರು.

ನಾಲ್ವರ ಕುಟುಂಬ: 'ಮುಳಬಾಗಿಲಿನ ಕೃಷಿಕ ಚಂದ್ರಪ್ಪ ಹಾಗೂ ನೇತ್ರಾವತಿ ದಂಪತಿಗೆ ಇಬ್ಬರು ಮಕ್ಕಳಿದ್ದಾರೆ. ಮಗಳು ಬೇರೆ ಊರಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಮಗ ಡಿಪ್ಲೊಮಾ ಓದುತ್ತಿದ್ದು, ತಂದೆ-ತಾಯಿ ಜೊತೆಗಿದ್ದ' ಎಂದು ಪೊಲೀಸರು ತಿಳಿಸಿದರು.

'ಕೃಷಿ ಮಾಡುವುದು ಬೇಡವೆಂದಿದ್ದ ನೇತ್ರಾವತಿ, ಬೆಂಗಳೂರಿಗೆ ಸ್ಥಳಾಂತರವಾಗೋಣವೆಂದು ಪಟ್ಟು ಹಿಡಿದಿದ್ದರು. ಪತ್ನಿ ಹಠಕ್ಕೆ ಸೋತಿದ್ದ ಚಂದ್ರಪ್ಪ, ಕೆ.ಆರ್. ಪುರಕ್ಕೆ ಬಂದು ಜಸ್ಟಿಸ್ ಭೀಮಯ್ಯ ಬಡಾವಣೆಯಲ್ಲಿ ಮನೆ ಮಾಡಿದ್ದ. ಸಾಫ್ಟ್‌ವೇರ್ ಕಂಪನಿಯೊಂದರ ಸ್ವಚ್ಛತೆ ಮೇಲ್ವಿಚಾರಕರಾಗಿ ನೇತ್ರಾವತಿ ಕೆಲಸಕ್ಕೆ ಸೇರಿದ್ದರು. ಚಂದ್ರಪ್ಪ, ಕೃಷಿ ಮುಂದುವರಿಸಿ ಆಗಾಗ ಊರಿಗೆ ಹೋಗಿ ಬರುತ್ತಿದ್ದರು' ಎಂದು ಹೇಳಿದರು.


ಬದಲಾಗಿದ್ದ ಜೀವನ ಶೈಲಿ: 'ನೇತ್ರಾವತಿ ಅವರ ಜೀವನ ಶೈಲಿ ಬದಲಾಗಿತ್ತು. ಪತಿ ಹಾಗೂ ಮಕ್ಕಳ ಬಗ್ಗೆ ಕಾಳಜಿ ವಹಿಸುತ್ತಿರಲಿಲ್ಲ. ಸಹೋದ್ಯೋಗಿಗಳ ಜೊತೆ ಆಗಾಗ ಪ್ರವಾಸಕ್ಕೆ ಹೋಗಿ ಬರುತ್ತಿದ್ದರು. ಹಣವನ್ನೂ ಹೆಚ್ಚು ಖರ್ಚು ಮಾಡುತ್ತಿದ್ದರು. ಇದರಿಂದ ಚಂದ್ರಪ್ಪ ಹಾಗೂ ಮಕ್ಕಳು ಕೋಪಗೊಂಡಿದ್ದರು. ಇದೇ ವಿಚಾರಕ್ಕೆ ಮನೆಯಲ್ಲೂ ಆಗಾಗ ಜಗಳವಾಗುತ್ತಿತ್ತು' ಎಂದು ಪೊಲೀಸರು ತಿಳಿಸಿದರು.

ರಾಡ್‌ನಿಂದ ಹೊಡೆದಿದ್ದ ತಂದೆ, ಕಥೆ ಕಟ್ಟಿದ ಮಗ: 'ಪ್ರವಾಸಕ್ಕೆ ಹೋಗಿದ್ದ ನೇತ್ರಾವತಿ, ಗುರುವಾರ (ಫೆ. 1) ಸಂಜೆ ಮನೆಗೆ ವಾಪಸು ಬಂದಿದ್ದರು. ಚಂದ್ರಪ್ಪ ಹಾಗೂ ಮಗ, ತಾಯಿಯನ್ನು ಪ್ರಶ್ನಿಸಿದ್ದರು. ಇದೇ ವೇಳೆ ಜಗಳ ಶುರುವಾಗಿತ್ತು. ಸಿಟ್ಟಾದ ಚಂದ್ರಪ್ಪ, ರಾಡ್‌ನಿಂದ ನೇತ್ರಾವತಿ ತಲೆಗೆ ಹೊಡೆದಿದ್ದ' ಎಂದು ಪೊಲೀಸರು ಹೇಳಿದರು.

'ನೇತ್ರಾವತಿ ಕುಸಿದು ಬಿದ್ದಿದ್ದರು. ರಾಡ್ ಕಸಿದುಕೊಂಡಿದ್ದ ಮಗ, 'ಕೊಲೆ ಮಾಡಿದ್ದು ಒಳ್ಳೆಯದಾಯಿತು. ನೀನು ಇಲ್ಲಿ ಇರಬೇಡ. ಹೊರಟು ಹೋಗು. ನಾನು ಅಪ್ರಾಪ್ತ. ಈ ಕೊಲೆಯನ್ನು ನಾನೇ ಮಾಡಿರುವುದಾಗಿ ಪೊಲೀಸರಿಗೆ ಹೇಳುತ್ತೇನೆ. ನನಗೆ ಬಹಳ ವರ್ಷ ಶಿಕ್ಷೆ ಆಗುವುದಿಲ್ಲ. ಜೊತೆಗೆ, ಜೈಲಿನಲ್ಲಿ ಶಿಕ್ಷಣವೂ ದೊರೆಯುತ್ತದೆ' ಎಂದು ಹೇಳಿದ್ದ. ಮಗನ ಮಾತು ಕೇಳಿ ತಂದೆ ಸ್ಥಳದಿಂದ ಹೊರಟು ಹೋಗಿದ್ದ. ನಂತರ, ಮಗನೂ ಮತ್ತೊಮ್ಮೆ ತಾಯಿ ತಲೆಗೆ ರಾಡ್‌ನಿಂದ ಹೊಡೆದಿದ್ದ. ನೇತ್ರಾವತಿ ಸ್ಥಳದಲ್ಲೇ ಮೃತಪಟ್ಟಿದ್ದರು.'

'ಫೆ. 2ರಂದು ಬೆಳಿಗ್ಗೆ ಠಾಣೆಗೆ ಕರೆ ಮಾಡಿದ್ದ ಮಗ, ತಿಂಡಿ ಮಾಡಲಿಲ್ಲವೆಂಬ ಕಾರಣಕ್ಕೆ ತಾಯಿಯನ್ನು ಕೊಂದಿರುವುದಾಗಿ ಹೇಳಿದ್ದ. ಆತನೇ ಕೊಲೆ ಮಾಡಿರಬಹುದೆಂದು ತಿಳಿದು ಬಾಲಕನನ್ನು ವಶಕ್ಕೆ ಪಡೆಯಲಾಗಿತ್ತು. ರಾಡ್ ಬೆರಳಚ್ಚು ಸುಳಿವಿನಿಂದ ತಂದೆಯನ್ನು ಬಂಧಿಸಲಾಯಿತು' ಎಂದು ಪೊಲೀಸರು ತಿಳಿಸಿದರು.

ಮುಳಬಾಗಿಲು ಎಂದಿದ್ದ ತಂದೆ: 'ಮಗನನ್ನು ವಶಕ್ಕೆ ಪಡೆದಿದ್ದ ದಿನವೇ ತಂದೆಯನ್ನೂ ವಿಚಾರಣೆ ನಡೆಸಲಾಗಿತ್ತು. ಆತ ಮುಳಬಾಗಿಲಿನಲ್ಲಿರುವುದಾಗಿ ಹೇಳಿದ್ದ. ಮೊಬೈಲ್ ನೆಟ್‌ವರ್ಕ್ ಪರಿಶೀಲಿಸಿದಾಗ ಅನುಮಾನ ಬಂದಿತ್ತು. ಆದರೆ, ಖಚಿತ ಪುರಾವೆ ಸಿಕ್ಕಿರಲಿಲ್ಲ. ಬೆರಳಚ್ಚು ಗೊತ್ತಾಗುತ್ತಿದ್ದಂತೆ ಆತನೂ ಆರೋಪಿ ಎಂಬುದು ತಿಳಿಯಿತು' ಎಂದು ಪೊಲೀಸರು ಹೇಳಿದರು.



ಲೆಜೆಂಡರಿ ಫ್ಯೂಷನ್ ಬ್ಯಾಂಡ್ ಶಕ್ತಿ, ಗ್ರ್ಯಾಮಿಸ್ 2024 ರಲ್ಲಿ ಅತ್ಯುತ್ತಮ ಜಾಗತಿಕ ಸಂಗೀತ ಆಲ್ಬಮ್‌ಗಾಗಿ ಗ್ರ್ಯಾಮಿ ಗೆದ್ದಿದೆ!

ಗಾಳಿಯಲ್ಲಿ ಗುಂಡು: ಮಾಜಿ ಸೈನಿಕ ಬಂಧನ

ಬೆಂಗಳೂರು: ಗಂಗಮ್ಮನಗುಡಿ ಠಾಣೆ ವ್ಯಾಪ್ತಿಯಲ್ಲಿರುವ ಮನೆಯೊಂದರ ಬಳಿ ಪಿಸ್ತೂಲ್‌ನಿಂದ ಒಂದು ಬಾರಿ ಗಾಳಿಯಲ್ಲಿ ಗುಂಡು ಹಾರಿಸಿ ಜನರನ್ನು ಬೆದರಿಸಿದ್ದ ಆರೋಪದಡಿ ಪರಶುರಾಮ್ (58) ಅವರನ್ನು ಪೊಲೀಸರು ಬಂಧಿಸಿದ್ದಾರೆ.

'ಅಬ್ಬಿಗೆರೆ ನಿವಾಸಿ ಪರಶುರಾಮ್ ಮಾಜಿ ಸೈನಿಕ. ಇವರ ಕೃತ್ಯದ ಬಗ್ಗೆ ಪ್ರಕರಣ ದಾಖಲಿಸಿಕೊಂಡು ಸೆರೆ ಹಿಡಿಯಲಾಗಿದೆ' ಎಂದು ಪೊಲೀಸರು ಹೇಳಿದರು.

'ಆರೋಪಿ ಪರಶುರಾಮ್ ಅವರು ಲಕ್ಷ್ಮಮ್ಮ ಬಡಾವಣೆಯಲ್ಲಿರುವ ಮಹಿಳೆಯೊಬ್ಬರ ಮನೆಗೆ ಸೋಮವಾರ (ಫೆ. 5) ತಡರಾತ್ರಿ ಹೋಗಿದ್ದರು. ಆರೋಪಿಯನ್ನು ಗಮನಿಸಿದ್ದ ಮಹಿಳೆಯ ಮಗ, 'ರಾತ್ರಿ ಸಮಯದಲ್ಲಿ ನಮ್ಮ ಮನೆಗೆ ಏಕೆ ಬಂದಿದ್ದೀರಿ' ಎಂದು ಪ್ರಶ್ನಿಸಿದ್ದರು. ಇಬ್ಬರ ನಡುವೆ ಮಾತಿನ ಚಕಮಕಿ ನಡೆದು ಜಗಳ ಶುರುವಾಗಿತ್ತು.'

'ಸಿಟ್ಟಾದ ಪರುಶುರಾಮ್, ಪರವಾನಿಗೆ ಇದ್ದ ಪಿಸ್ತೂಲ್‌ನಿಂದ ಒಂದು ಸುತ್ತು ಗಾಳಿಯಲ್ಲಿ ಗುಂಡು ಹಾರಿಸಿದ್ದರು. ಮಹಿಳೆಯ ಮಗ ಭಯಗೊಂಡಿದ್ದ. ಗುಂಡಿನ ಶಬ್ದ ಕೇಳಿ ಅಕ್ಕ-ಪಕ್ಕದ ಮನೆಯವರು ಹೊರಗೆ ಬಂದಿದ್ದರು. ಅಷ್ಟರಲ್ಲೇ ಆರೋಪಿ ಸ್ಥಳದಿಂದ ಹೊರಟು ಹೋಗಿದ್ದರು. ದೂರು ದಾಖಲಾಗುತ್ತಿದ್ದಂತೆ ತನಿಖೆ ನಡೆಸಿದಾಗ, ಆರೋಪಿ ಸಿಕ್ಕಿಬಿದ್ದರು' ಎಂದು ಪೊಲೀಸರು ತಿಳಿಸಿದರು.



ಸಿದ್ಧತೆ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದಲ್ಲಿ ಗುರುವಾರ ನಡೆಯಲಿರುವ ಜನಸ್ಪಂದನ ಕಾರ್ಯಕ್ರಮಕ್ಕಾಗಿ ವಿಧಾನಸೌಧದ ಆವರಣದಲ್ಲಿ ಕಾರ್ಮಿಕರು ಪೆಂಡಾಲ್ ಹಾಕಿದರು -ಪ್ರಜಾವಾಣಿ ಚಿತ್ರ/ಪ್ರಶಾಂತ್ ಎಚ್.ಜಿ.

ಪುಸ್ತಕ ಬಿಡುಗಡೆ, ಉಪನ್ಯಾಸ, ನಾಟಕ ಪ್ರದರ್ಶನ

13ಕ್ಕೆ ಎಂಡಿಎನ್ ಜನ್ಮದಿನಾಚರಣೆ

ಪ್ರಜಾವಾಣಿ ವಾರ್ತೆ


ಚುಕ್ಕಿ

ಚಾಮರಾಜನಗರ: ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆಯು ಇದೇ 13ರಂದು ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ರೈತ ನಾಯಕ ಪ್ರೊ.ಎಂ.ಡಿ. ನಂಜುಂಡಸ್ವಾಮಿಯವರ 88ನೇ ಜನ್ಮದಿನಾಚರಣೆ ಹಮ್ಮಿಕೊಂಡಿದೆ.

ಸುದ್ದಿಗೋಷ್ಠಿಯಲ್ಲಿಮಾತನಾಡಿದ ರೈತ ಸಂಘದ ರಾಜ್ಯ ಅಧ್ಯಕ್ಷೀಯ ಮಂಡಳಿ ಸದಸ್ಯೆ, ಪ್ರೊ.ಎಂಡಿಎನ್ ಪುತ್ರಿ ಚುಕ್ಕಿ ನಂಜುಂಡಸ್ವಾಮಿ, 'ಫೆ.3ಕ್ಕೆ ಪ್ರೊಫೆಸರ್ ಅವರು ನಮ್ಮನ್ನು ಅಗಲಿ 20 ವರ್ಷಗಳಾಗಿವೆ. 13ರಂದು ಅವರ ಹುಟ್ಟುಹಬ್ಬ ಇದೆ. ಎರಡನ್ನೂ ಒಟ್ಟು ಸೇರಿಸಿಕೊಂಡು ಈ ಬೆಂಗಳೂರಿನಲ್ಲಿ ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಅವರು ಬರೆದಿರುವ ಬಾರುಕೋಲು, ಹಸಿರು ಶಾಲು ಕೃತಿಗಳ ಬಿಡುಗಡೆ, ಎಂಡಿಎನ್ ನೆನಪಿನ ಉಪನ್ಯಾಸ, ಒಡನಾಡಿಗಳ ಜೊತೆ ಸಂವಾದ, ಡೈರೆಕ್ಟ್ ಆಕ್ಷನ್ ನಾಟಕ ಪ್ರದರ್ಶನ, ನಾಟಿ ಬಿತ್ತನೆ ಬೀಜಗಳ ಪ್ರದರ್ಶನ, ನಮ್ದು ರೈತರ ಸಂತೆ, ಹೋರಾಟದ ಹಾಡುಗಳು, ನಂಜುಂಡಸ್ವಾಮಿಯವರ ಜೀವನ ಮತ್ತು ಹೋರಾಟ ಛಾಯಾಚಿತ್ರ ಪ್ರದರ್ಶನಗಳನ್ನು ಹಮ್ಮಿಕೊಳ್ಳಲಾಗಿದೆ' ಎಂದರು.

'13ರ ಬೆಳಿಗ್ಗೆ 10ಗಂಟೆಗೆ ರಾಷ್ಟ್ರೀಯ ರೈತ ನಾಯಕ ರಾಕೇಶ್ ಟಿಕಾಯತ್ ಸಮಾರಂಭ ಉದ್ಘಾಟಿಸಲಿದ್ದಾರೆ. ಬಳಿಕ, ಪ್ರೊ.ಎಂ.ಡಿ.ಎನ್ ನಾ ಕಂಡಂತೆ ಒಂದು ಸಂವಾದ ನಡೆಯಲಿದ್ದು ಮುಖ್ಯಮಂತ್ರಿ ಸಿದ್ದರಾಮಯ್ಯ, ಸಾಮಾಜಿಕ ಕಾರ್ಯಕರ್ತೆ ಮೇಧಾ ಪಾಟ್ಕರ್, ಪ್ರೊ. ಹಿ.ಶಿ.ರಾಮಚಂದ್ರೇಗೌಡ, ಅಗ್ರಹಾರ ಕೃಷ್ಣಮೂರ್ತಿ, ಭಾರತೀಯ ಕಿಸಾನ್ ಯೂನಿಯನ್, ಕೆನಡಾದ ರೈತ ಸಂಘಟನೆಯ ನೇತಾರ ಪ್ರೊ.ನೆಟ್ಟಿ ವೀಬ್ ಇತರರು ಭಾಗವಹಿಸಲಿದ್ದಾರೆ' ಎಂದರು.

'ಮಧ್ಯಾಹ್ನದ ಬಳಿಕ ಪ್ರೊ.ಎಂಡಿಎನ್ ಸ್ಮಾರಕ ಉಪನ್ಯಾಸ ನಡೆಯಲಿದ್ದು, ಕೃಷಿ ತಜ್ಞ ಡಾ.ದೇವೇಂದ್ರ ಶರ್ಮಾ ಅವರು 'ಭಾರತದ ರೈತರಿಗೆ ಆಗುತ್ತಿರುವ ಮೋಸಗಳು, ಅದರ ಹಿಂದಿನ ಬಂಡವಾಳ ಶಕ್ತಿಗಳ ಕುತಂತ್ರಗಳು, ಸ್ವಮರ್ಯಾದೆಯ ಕೃಷಿಯೆಡೆಗೆ ನಮ್ಮ ದಾರಿ' ಎಂಬ ವಿಷಯದ ಬಗ್ಗೆ ಮಾತನಾಡಲಿದ್ದಾರೆ' ಎಂದು ಚುಕ್ಕಿ ಹೇಳಿದರು.

ಸಂಘದ ಮುಖಂಡ ಹೊನ್ನೂರು ಪ್ರಕಾಶ್ ಮಾತನಾಡಿದರು. ಮುಖಂಡರಾದ ಮಹೇಶ್, ವೀರನಪುರ ನಾಗೇಂದ್ರ, ಬಂದೀಗೌಡನಹಳ್ಳಿ ನಟರಾಜ್, ಜಗದೀಶ್, ಮಂಜು ಕಿರಣ್, ವಸಂತ ವೀರನಪುರ ಇದ್ದರು.

'ರೈತ ಚಳವಳಿ ಬಲಪಡಿಸಲು ಯತ್ನ'

'ನಂಜುಂಡಸ್ವಾಮಿಯವರ ವಿಚಾರಗಳನ್ನು ಮರೆ ಮಾಚಲಾಗುತ್ತಿದೆ. ಅವುಗಳು ಪುನಃ ಕಾರ್ಯರೂಪಕ್ಕೆ ಬರಬೇಕು ಎಂಬ ಉದ್ದೇಶದಿಂದ ನಮ್ಮ ಸಂಘವು ರೈತ ಚಳವಳಿಯನ್ನು ಇನ್ನಷ್ಟು ಬಲಗೊಳಿಸಲು ಯತ್ನಿಸುತ್ತಿದೆ' ಎಂದು ಚುಕ್ಕಿ ನಂಜುಂಡಸ್ವಾಮಿ ಹೇಳಿದರು. 40 ವರ್ಷಗಳ ಸಂಘಟನೆ, ಹೋರಾಟದಲ್ಲಿ ತಪ್ಪುಗಳು ಇರಬಹುದು. ಅದನ್ನು ಅವಲೋಕಿಸಬೇಕು. ಸಾಮೂಹಿಕ ನಾಯಕತ್ವದಲ್ಲಿ ಆ ಕೆಲಸ ಮಾಡಲು ಹೊರಟಿದ್ದೇವೆ. ಎಲ್ಲರಲ್ಲೂ ನಾಯಕತ್ವ ಗುಣಗಳು ಬರಬೇಕು ಎಂಬುದು ನಮ್ಮ ಉದ್ದೇಶ' ಎಂದು ಅವರು ಹೇಳಿದರು.



ನೆಲಮಂಗಲ ತಾಲ್ಲೂಕು ಕಚೇರಿ ಎದುರು ಕನ್ನಡ ಸಾಂಸ್ಕೃತಿಕ ರಂಗದ ವತಿಯಿಂದ ಗ್ರೇಡ್ 2 ತಹಶೀಲ್ದಾರ್ ಭಾಗ್ಯ (ಬಿಳಿ ಬಣ್ಣದ ಚೂಡಿದಾರ್ ಧರಿಸಿರುವವರು) ಅವರಿಗೆ ಮನವಿ ಪತ್ರ ಸಲ್ಲಿಸಿದರು. ಚಿತ್ರದಲ್ಲಿ ನಗರಸಭೆ ನಾಮನಿರ್ದೇಶಿತ ಸದಸ್ಯ ರಾಮಮೂರ್ತಿ, ಸಾಹಿತಿ ನಾಗರಾಜು, ಎನ್.ಎಸ್.ಮೂರ್ತಿ, ರಂಗದ ಅಧ್ಯಕ್ಷ ಡಿ.ಸಿದ್ದರಾಜು, ಶೋಭಾ, ಸುಮಿತ್ರ, ಹನುಮಂತರಾಜು, ಪಿ.ಗಿರಿಧರ್, ದೇವರಾಜ್, ಶರಣಬಸಪ್ಪ ಗೌಡರ್, ಬಾಲಾಜಿ, ವೆಂಕಟೇಶ್ ಚೌತಾಯಿ ಇದ್ದಾರೆ.

ಶಿಷ್ಟಾಚಾರ ಪಾಲನೆಗೆ ಮನವಿ

ಪ್ರಜಾವಾಣಿ ವಾರ್ತೆ

ನೆಲಮಂಗಲ: ರಾಷ್ಟ್ರೀಯ ಹಬ್ಬಗಳ ಆಚರಣೆಯ ವೇಳೆ ಶಿಷ್ಟಾಚಾರ ಪಾಲನೆ ಆಗುತ್ತಿಲ್ಲ. ಆಹ್ವಾನ ಪತ್ರಿಕೆಯಲ್ಲಿ ಹೆಸರಿಲ್ಲದವರು ಹಾಗೂ ರಾಜಕೀಯ ಮುಖಂಡರು ವೇದಿಕೆ ಮೇಲೆ ಇರುತ್ತಾರೆ. ಇದಕ್ಕೆ ಅವಕಾಶ ನೀಡಬಾರದು ಎಂದು ಕನ್ನಡ ಸಾಂಸ್ಕೃತಿಕ ರಂಗದ ಡಿ.ಸಿದ್ದರಾಜು ಆಗ್ರಹಿಸಿದರು.

ಗ್ರೇಡ್-2 ತಹಶೀಲ್ದಾರ್ ಭಾಗ್ಯ ಅವರಿಗೆ ಮನವಿ ಸಲ್ಲಿಸಿ ಮಾತನಾಡಿದ ಅವರು, ನಾಡು, ನುಡಿ ಹಾಗೂ ಜಲಸಂರಕ್ಷಣೆಗೆ ನಿರಂತರ ಹೋರಾಟ ಮಾಡಿಕೊಂಡು ಬರುತ್ತಿರುವ ಕನ್ನಡಪರ ಹೋರಾಟಗಾರಿಗೂ ಆದ್ಯತೆ ಕೊಡಬೇಕು' ಎಂದು ಕೋರಿದರು.

ಪದಾಧಿಕಾರಿಗಳಾದ ಪಿ.ಗಿರಿಧರ್, ಶರಣಬಸಪ್ಪ ಗೌಡರ್, ಬಿ.ಎಸ್. ವಿಜಯಕುಮಾರ್, ಹನುಮಂತರಾಜು, ಎನ್.ಎಸ್.ಮೂರ್ತಿ, ದೇವರಾಜ್, ಸೌಮ್ಯಾ, ಶೋಭಾ, ಸುಮಿತ್ರ, ರಾಜೇಶ್ವರಿ ಪಾಲ್ಗೊಂಡಿದ್ದರು.

ಪ್ರತಿಭಟನೆಗೆ ಸ್ಪಂದನೆ: ಕಲುಷಿತ ನೀರು ತೆರವು

ಪ್ರಜಾವಾಣಿ ವಾರ್ತೆ

ದೊಡ್ಡಬಳ್ಳಾಪುರ: ದಾಬಸ್‌ಪೇಟೆ-ಹೊಸಕೋಟೆ ರಾಷ್ಟ್ರೀಯ ಹೆದ್ದಾರಿಯ ಕೊಡಿಗೇಹಳ್ಳಿ ಸಮೀಪದ ಮೇಸ್ತ್ರು ಮನೆ ಕ್ರಾಸ್‌ನ ಅರಳುಮಲ್ಲಿಗೆ ಕೆರೆಯ ಪ್ರಮುಖ ರಾಜಕಾಲುವೆ ಬಳಿ ಸುರಿದಿದ್ದ ಕಲುಷಿತ ತ್ಯಾಜ್ಯ ನೀರನ್ನು ಮಂಗಳವಾರ ಟ್ಯಾಂಕರ್‌ಗಳ ಮೂಲಕ ಹೊರಗೆ ಸಾಗಿಸಲಾಯಿತು.

ಕೈಗಾರಿಕೆಗಳ ರಾಸಾಯನಿಕ ಯುಕ್ತ ಕಲುಷಿತ ತ್ಯಾಜ್ಯ ನೀರನ್ನು ಟ್ಯಾಂಕರ್‌ಗಳ ಮೂಲಕ ತಂದು ರಾತ್ರಿ ವೇಳೆ ದಾಬಸ್‌ಪೇಟೆ-ಹೊಸಕೋಟೆ ರಾಷ್ಟ್ರೀಯ ಹೆದ್ದಾರಿಯ ಕೊಡಿಗೇಹಳ್ಳಿ ಸಮೀಪದ ಮೇಸ್ತ್ರು ಮನೆ ಕ್ರಾಸ್‌ನ ಅರಳುಮಲ್ಲಿಗೆ ಕೆರೆಯ ಪ್ರಮುಖ ರಾಜಕಾಲುವೆ ಬಳಿ ಸುರಿದು ಹೋಗಿದ್ದನ್ನು ತೆರವುಗೊಳಿಸುವಂತೆ ಸೋಮವಾರ ಯುವ ಸಂಚಲನ ಕಾರ್ಯಕರ್ತರು ಮೌನ ಪ್ರತಿಭಟನೆ ನಡೆಸಿದ್ದರು.

ಪ್ರತಿಭಟನೆಯಿಂದ ಎಚ್ಚೆತ್ತುಕೊಂಡಿರುವ ಜಿಲ್ಲಾಡಳಿತ ಮಂಗಳವಾರ 40 ಟ್ಯಾಂಕರ್‌ಗಳಷ್ಟು ಕಲುಚಿತ ತ್ಯಾಜ್ಯ ನೀರನ್ನು ಹೊರಸಾಗಿಸಿದ್ದಾರೆ.

ತಾಲ್ಲೂಕಿನಲ್ಲಿ ಕುಡಿಯಲು ನೀರಿಲ್ಲ, ಕೃಷಿಗಾಗಿ ಕೊಳವೆಬಾವಿ ನೀರೂ ಸಿಗುತ್ತಿಲ್ಲ

ನೆಲಮಂಗಲ: ಕುಡಿಯುವ ನೀರಿಗೆ ತತ್ವಾರ

• ಮಹಾಂತೇಶ್ ನೆಗಳೂರ

ನೆಲಮಂಗಲ: ತಾಲ್ಲೂಕಿನಾದ್ಯಂತ ಕುಡಿಯುವ ನೀರಿಗೆ ಸಮಸ್ಯೆಯಾಗಿದ್ದು, ಕೊಳವೆಬಾವಿ ಮತ್ತು ಟ್ಯಾಂಕರ್ ನೀರಿನ ಮೇಲೆ ಜನರು ಅವಲಂಬಿತರಾಗಿದ್ದಾರೆ. ಕೃಷಿಗೂ ನೀರಿನ ಕೊರತೆ ಎದುರಾಗಿ, ಹಲವು ರೈತರು ಅನಿವಾರ್ಯವಾಗಿ ಫ್ಯಾಕ್ಟರಿಯ ಕೆಲಸಕ್ಕಾಗಿ ಅಲೆದಾಡುತ್ತಿದ್ದಾರೆ.

ನೆಲಮಂಗಲ ಪಟ್ಟಣಕ್ಕೆ ಮಂಚನಬೆಲೆ, ತಿಪ್ಪಗೊಂಡನಹಳ್ಳಿ, ಎತ್ತಿನಹೊಳೆಯಿಂದ ಶಾಶ್ವತ ಕುಡಿಯುವ ನೀರಿನ ಯೋಜನೆ, ವಿಧಾನಸಭಾ ಕ್ಷೇತ್ರಕ್ಕೆ ಹೇಮಾವತಿಯಿಂದ ಕೆರೆ ತುಂಬಿಸುವ ಆಲೋಚನೆಗಳೆಲ್ಲ ಇನ್ನೂ ಕನಸಿನ ಮಾತಾಗಿದೆ. ಚುನಾವಣೆ ಸಂದರ್ಭದಲ್ಲಿ ಈ ಎಲ್ಲ ಯೋಜನೆಗಳು ಭಾಷಣಗಳಲ್ಲಿ ಹರಿದಾಡಿ ತಣ್ಣಗಾಗುತ್ತಿವೆ.

ನೆಲಮಂಗಲ ಪಟ್ಟಣದಲ್ಲಿ 5,700 ಮನೆಗಳಿದ್ದು, 25 ಸಾವಿರ ಜನಸಂಖ್ಯೆ ಹೊಂದಿದೆ. 31 ವಾರ್ಡ್‌ಗಳಲ್ಲಿ ಒಟ್ಟು 319 ಕೊಳವೆಬಾವಿಗಳಿವೆ. ಅವುಗಳಲ್ಲಿ 34 ದುರಸ್ತಿಯಲ್ಲಿವೆ. ಪ್ರತಿನಿತ್ಯ 14 ವಾರ್ಡ್‌ಗಳಿಗೆ ನೀರು ಹರಿಸಲಾಗುತ್ತಿದೆ. 8 ವಾರ್ಡ್‌ಗಳಿಗೆ ಎರಡು ದಿನಕ್ಕೆ, 9 ವಾರ್ಡ್‌ಗಳಿಗೆ 3 ದಿನಕ್ಕೆ ಒಮ್ಮೆ ನೀರು ಬಿಡಲಾಗುತ್ತಿದೆ. ಕೆಲ ಬಡಾವಣೆಗಳಲ್ಲಿ ಟ್ಯಾಂಕರ್ ಮೂಲಕ ಆಯಾ ವಾರ್ಡ್‌ನ ಸದಸ್ಯರ ಕೋರಿಕೆಯ ಮೇರೆಗೆ ಕಳುಹಿಸಲಾಗುತ್ತಿದೆ. ತುರ್ತು ಸೇವೆಗಾಗಿಯೇ 3 ಟ್ಯಾಂಕರ್‌ಗಳಿವೆ.

ಪಟ್ಟಣದ ಜನರು ಶಾಶ್ವತ ಕುಡಿಯುವ ನೀರು ಮತ್ತು ಒಳಚರಂಡಿ ವ್ಯವಸ್ಥೆ ಬಗ್ಗೆ ಭ್ರಮನಿರಸನಗೊಂಡಿದ್ದಾರೆ. 'ಶಾಸಕರು ಚುನಾವಣೆಯ ಭರವಸೆಯನ್ನು ಈಡೇರಿಸುತ್ತಾರೋ ಇಲ್ಲವೋ ಎಂಬ ಪ್ರಶ್ನೆ ಎದುರಾಗಿದೆ. ಬಹುದಿನಗಳಿಂದ ಕೊಳವೆಬಾವಿಯ ಫ್ಲೋರೈಡ್ ನೀರನ್ನೇ ಕುಡಿಯುತ್ತಿದ್ದು, ರೋಗದಿಂದ ಮುಕ್ತರಾಗುವ ಕಾಲ ಬರುತ್ತದೆಯೆ? ನಮ್ಮ ಕಾಲ ಮುಗಿಯಿತು' ಎನ್ನುವ ಹಿರಿಯರು, 'ನಮ್ಮ ಮಕ್ಕಳು ಮೊಮ್ಮಕ್ಕಳಿಗೆ ಭವಿಷ್ಯವೇ ಇಲ್ಲ' ಎಂದು ಬೇಸರ ವ್ಯಕ್ತಪಡಿಸುತ್ತಿದ್ದಾರೆ.

ಕೊಳವೆಬಾವಿ ನೀರು ಕಲುಷಿತ: 'ನೆಲಮಂಗಲ ಕೆರೆಯು ಸಂಪೂರ್ಣ ಕಲುಷಿತಗೊಂಡಿದ್ದು, ನಗರದ ಹೊಲಸನ್ನು ಕೆರೆಗೆ ಬಿಡಲಾಗುತ್ತಿದೆ. ಕೆರೆಯ ತುಂಬ ಜೊಂಡು ತುಂಬಿ ನೀರಿನ ಶೇಖರಣಾ ಸಾಮರ್ಥ್ಯ ಕಡಿಮೆಯಾಗಿದೆ. ಪಟ್ಟಣದಾದ್ಯಂತ ರಸ್ತೆಗಳಲ್ಲೇ ಪಿಟ್‌ಗಳಿದ್ದು, ಕೆರೆಗೆ ಬಿಡುತ್ತಿರುವ ಹೊಲಸು ಹಾಗೂ ಪಿಟ್‌ಗಳಿಂದ ಕೊಳವೆಬಾವಿ ನೀರು ಕಲುಷಿತವಾಗಿದೆ. ನಮ್ಮ ಹೊಲಸನ್ನು ನಾವೇ ಕುಡಿಯುವಂತಾಗಿದೆ' ಎಂದು ರಾಷ್ಟ್ರೀಯ ಕಿಸಾನ್ ಸಂಘಟನೆ ರಾಜ್ಯ ಉಪಾಧ್ಯಕ್ಷ ಕೆ.ಭೀಮಯ್ಯ ದೂರಿದರು.

'ನೆಲಮಂಗಲ ಕೆರೆ ಅಭಿವೃದ್ಧಿ ಹೆಸರಿನಲ್ಲಿ ಅಕ್ರಮ ನಡೆಯುತ್ತಿದೆ. ಕೆರೆ ಅಭಿವೃದ್ಧಿಗೆ ಬಿಡುಗಡೆಯಾದ ಹಣ ಎಲ್ಲಿ ಹೋಗುತ್ತಿದೆ? ಕೆರೆ ಅಭಿವೃದ್ಧಿಯಾದರೆ ನೀರು ಶೇಖರಣಾ ಸಾಮರ್ಥ್ಯ ಹೆಚ್ಚಿ ಕೊಳವೆಬಾವಿಗಳಲ್ಲಿ ನೀರು ಭರ್ತಿಯಾಗಿತ್ತದೆ. ಶುದ್ಧ ನೀರು ಸಿಗುತ್ತದೆ. ಸಮರ್ಪಕವಾಗಿ ಒಳಚರಂಡಿ ವ್ಯವಸ್ಥೆ ಮಾಡಿದರೆ ಅಂತರ್ಜಲ ಮಲಿನವಾಗುವುದು ತಪ್ಪುತ್ತದೆ' ಎಂದು ಕನ್ನಡ ಸಾಂಸ್ಕೃತಿಕ ರಂಗದ ಸಿದ್ದರಾಜು ತಿಳಿಸಿದರು. 'ತಾಲ್ಲೂಕಿನ ಅರೆಬೊಮ್ಮನಹಳ್ಳಿ ಪಂಚಾಯಿತಿಯ ಸೂಲಕುಂಟೆ ಗ್ರಾಮದಲ್ಲಿ ನಾಲ್ಕಾರು ಮನೆಗಳಿಗೆ ಐದಾರು ತಿಂಗಳಿಂದ ನೀರು ಪೂರೈಸುತ್ತಿಲ್ಲ' ಎಂದು ಗ್ರಾಮದ ಪೂಜವೆಂಕಟಯ್ಯ ದೂರಿದರು.



ನೆಲಮಂಗಲ ಪಟ್ಟಣದಲ್ಲಿ ನಗರಸಭೆ ವತಿಯಿಂದ ಹೊಸ ಕೊಳವೆಬಾವಿ ಕೊರೆಸಲಾಯಿತು



ಮನೆಗಳಿಗೆ ಟ್ಯಾಂಕರ್ ನೀರು ಹಾಕಿಸುತ್ತಿರುವುದು

'ಖಾಸಗಿ ಟ್ಯಾಂಕರ್‌ಗಳಿಂದ ನೀರು ಖರೀದಿ'



ಲಾವಣ್ಯ

'ತಿಂಗಳಿಗೆ ಮೂರ್ನಾಲ್ಕು ಬಾರಿಯಾದರೂ ಖಾಸಗಿ ಟ್ಯಾಂಕರ್ ನೀರು ಖರೀದಿಸುತ್ತಿದ್ದೇವೆ. ನಗರಸಭೆಯ ಟ್ಯಾಂಕರ್ ನೀರು ಪ್ರಭಾವಿಗಳಿಗಷ್ಟೆ ಸೀಮಿತವಾಗಿದೆ. ನಮ್ಮದು ಎರಡು ಮನೆ ಇದೆ. ನಾಲ್ಕು ಜನರಿದ್ದೇವೆ. ಆದರೂ ನೀರಿನ ಕೊರತೆ ಉಂಟಾಗುತ್ತಿದೆ' ಎಂದು ಪಟ್ಟಣದ ಗಜಾರಿಯಾ ಬಡಾವಣೆ ನಿವಾಸಿ ಲಾವಣ್ಯ ಸಂಕಷ್ಟ ಹೇಳಿಕೊಂಡರು.

'ನೀರು ಸಣ್ಣಗೆ ಬರುತ್ತೆ'



ಸಾವಿತ್ರಿ

'ಎರಡು ದಿನಕ್ಕೆ ಮೂರು ದಿನಕ್ಕೆ ಮನಸ್ಸಿಗೆ ಬಂದಹಾಗೆ ನೀರು ಬಿಡುತ್ತಾರೆ. ನೀರು ಬಿಟ್ಟರೂ ಸಣ್ಣಗೆ ಬರುತ್ತದೆ. ಇದರಿಂದ ಬಹಳ ಸಮಸ್ಯೆಯಾಗಿದೆ. ಟ್ಯಾಂಕರ್ ನೀರಿನ ಮೊರೆಹೋಗಬೇಕಾಗುತ್ತಿದೆ. ಈಗಾಗಲೆ ಹಲವು ಬಾರಿ ಟ್ಯಾಂಕರ್ ನೀರು ಖರೀದಿಸಿದ್ದೇವೆ. ಈಗಲೇ ಹೀಗಾದರೆ ಬೇಸಿಗೆಯಲ್ಲಿ ಯಾವ ಪರಿಸ್ಥಿತಿ ಎದುರಾಗಬಹುದು?' ಎಂದು ಪಟ್ಟಣದ ಎಂ.ಜಿ.ರಸ್ತೆ ನಿವಾಸಿ ಸಾವಿತ್ರಿ ಆತಂಕ ವ್ಯಕ್ತಪಡಿಸಿದರು.

'ಬೇಡಿಕೆ ಮೇರೆಗೆ ಟ್ಯಾಂಕರ್ ನೀರು'

'ನಿವಾಸಿಗಳ ಬೇಡಿಕೆಯ ಮೇರೆಗೆ ಟ್ಯಾಂಕರ್‌ಗಳನ್ನು ಕಳುಹಿಸಲಾಗುತ್ತಿದೆ. ಒಟ್ಟಾರೆಯಾಗಿ ನೀರಿನ ಕೊರತೆಯಾಗದಂತೆ ವ್ಯವಸ್ಥೆ ಮಾಡಿದ್ದೇವೆ' ಎನ್ನುತ್ತಾರೆ ನಗರಸಭೆ ಆಯುಕ್ತ ಮನುಕುಮಾರ್.

ನಗರ ವ್ಯಾಪ್ತಿಯಲ್ಲಿ ಹೊಸದಾಗಿ 18 ಕೊಳವೆಬಾವಿಗಳನ್ನು ಕೊರೆಸಲಾಗುತ್ತಿದೆ. ಪ್ರತಿ ಶನಿವಾರ ನಗರದ ನೀರಿನ ಪ್ರಗತಿ ಪರಿಶೀಲನಾ ಸಭೆ ನಡೆಸಲಾಗುತ್ತಿದ್ದು, ತುರ್ತುಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ನಗರಸಭೆ ವ್ಯಾಪ್ತಿಯಲ್ಲಿ 28 ಶುದ್ಧ ಕುಡಿಯುವ ನೀರಿನ ಘಟಕಗಳಿವೆ. ಪ್ರತಿ ವ್ಯಕ್ತಿಗೂ 55 ಲೀಟರ್ ಪೂರೈಸುವ ಗುರಿ ಹೊಂದಿದ್ದು ಅನಿವಾರ್ಯ ಕಾರಣಗಳಿಂದ ತೊಂದರೆಯಾದಲ್ಲಿ ತಕ್ಷಣವೇ ಪರ್ಯಾಯ ವ್ಯವಸ್ಥೆ ಮಾಡಲಾಗುತ್ತಿದೆ ಎಂದು ಮನುಕುಮಾರ್ ಹೇಳಿದರು.

ಅಂತರ್ಜಲ ಮಟ್ಟದ ಕುಸಿತ

ನೆಲಮಂಗಲ ತಾಲ್ಲೂಕಿನಲ್ಲಿ ರೈತರೂ ಹೆಚ್ಚಾಗಿದ್ದು, ಕೃಷಿಗೆ ಕೊಳವೆಬಾವಿಗಳೇ ಆಸರೆ. ಆದರೆ, ಸಾವಿರಾರು ಅಡಿ ಕೊರೆದರೂ ನೀರು ಸಿಗುತ್ತಿಲ್ಲ. ಇರುವ ಕೊಳವೆಬಾವಿಗಳಲ್ಲಿ ನೀರು ಬತ್ತುವ ಸ್ಥಿತಿಗೆ ತಲುಪಿವೆ.

'ತಾಲ್ಲೂಕಿನಲ್ಲಿ 360 ಜನವಸತಿ ಗ್ರಾಮಗಳು, 208 ಕಂದಾಯ ಗ್ರಾಮಗಳಿವೆ, 21 ಗ್ರಾಮ ಪಂಚಾಯಿತಿಗಳಿದ್ದು, ಜಲ ಜೀವನ ಯೋಜನೆ ಅಡಿಯಲ್ಲಿ ಮನೆಮನೆಗೆ ಗಂಗೆ ಅನುಷ್ಠಾನದ ವ್ಯವಸ್ಥೆಗಾಗಿ ಮನೆಗಳಿಗೆ ಪೈಪ್ ಹಾಕಲಾಗುತ್ತಿದೆ, ಮೋಟರ್ ಪಂಪ್ ಅಳವಡಿಸಿದೆ, ಶೇ 80 ರಷ್ಟು ಕಾಮಗಾರಿ ಪೂರ್ಣವಾಗಿದ್ದು, ಓವರ್‌ಹೆಡ್ ಟ್ಯಾಂಕ್ ನಿರ್ಮಾಣ ಕೊನೆಯ ಹಂತದಲ್ಲಿದೆ. ಬೇಸಿಗೆಯಲ್ಲಿ ನೀರಿನ ಸಮಸ್ಯೆ ಭುಗಿಲೇಳುವಷ್ಟರಲ್ಲಿಯೇ ಕೊರತೆಗಳನ್ನು ನೀಗಲು ಸಕಲ ಸಿದ್ಧತೆಗಳನ್ನು ಮಾಡಿಕೊಂಡಿದ್ದೇವೆ. ತಾಲ್ಲೂಕಿನಲ್ಲಿ ಸಮಸ್ಯೆಗಳಿರುವ 21 ಗ್ರಾಮಗಳನ್ನು ಗುರುತಿಸಲಾಗಿದೆ. ಬರ ಪರಿಹಾರಕ್ಕೆ ತಾಲ್ಲೂಕು ಆಡಳಿತ ಸಜ್ಜಾಗಿದೆ' ಎಂದು ತಾಲ್ಲೂಕು ಪಂಚಾಯತಿ ಕಾರ್ಯನಿರ್ವಹಣಾಧಿಕಾರಿ ಎಲ್.ಮಧು ತಿಳಿಸಿದರು.

ಬಿಬಿಎಂಪಿ ಕೆಲಸ: 60 ಮಂದಿಗೆ ₹ 15 ಲಕ್ಷ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ಕೇಂದ್ರ ಕಚೇರಿಯಲ್ಲಿ ಕೆಲಸ ಹಾಗೂ ವಿವಿಧ ಯೋಜನೆಗಳಲ್ಲಿ ಹಣ ಕೊಡಿಸುವ ಆಮಿಷವೊಡ್ಡಿ ಜನರನ್ನು ವಂಚಿಸುತ್ತಿದ್ದ ಇಬ್ಬರು ಆರೋಪಿಗಳನ್ನು ಉತ್ತರ ವಿಭಾಗದ ಸೈಬರ್ ಕ್ರೈಂ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಶ್ರೀನಗರ ನಿವಾಸಿ ದೀಪಕ್ (22) ಮತ್ತು ವಿದ್ಯಾರಣ್ಯಪುರ ನಿವಾಸಿ ಹರೀಶ್(21) ಬಂಧಿತರು. ಮಹಿಳೆಯೊಬ್ಬರು ನೀಡಿದ್ದ ವಂಚನೆ ದೂರು ಆಧರಿಸಿ ಆರೋಪಿಗಳನ್ನು ಸೆರೆ ಹಿಡಿಯಲಾಗಿದೆ' ಎಂದು ಪೊಲೀಸರು ಹೇಳಿದರು.

'ಎಸ್ಸೆಸ್ಸೆಲ್ಸಿವರೆಗೂ ಓದಿದ್ದ ಆರೋಪಿಗಳು, ಜನರನ್ನು ವಂಚಿಸುವುದನ್ನೇ ವೃತ್ತಿ ಮಾಡಿಕೊಂಡಿದ್ದರು. ಸರ್ಕಾರಿ ಕೆಲಸ, ವಿಧವಾ ವೇತನ, ಹಿರಿಯ ನಾಗರಿಕರ ವೇತನ, ಸಬ್ಸಿಡಿ ಸಾಲ, ಸರ್ಕಾರದ ಯೋಜನೆಗಳಡಿ ಕಾರು, ನಿವೇಶನ ಕೊಡಿಸುವ ಆಮಿಷವೊಡ್ಡುತ್ತಿದ್ದರು. ಶುಲ್ಕ ಹಾಗೂ ಇತರೆ ಖರ್ಚಿನ ಹೆಸರಿನಲ್ಲಿ ಜನರಿಂದ ಹಣ ಪಡೆದು ಆರೋಪಿಗಳು ಪರಾರಿಯಾಗುತ್ತಿದ್ದರು' ಎಂದರು.

'ಆರೋಪಿಗಳು ಇದುವರೆಗೂ 60 ಮಂದಿಯಿಂದ ₹15 ಲಕ್ಷ ಪಡೆದು ವಂಚಿಸಿರುವುದು ಮೇಲ್ನೋಟಕ್ಕೆ ಗೊತ್ತಾಗಿದೆ. ಸದ್ಯ ಮಹಿಳೆ ಮಾತ್ರ ದೂರು ನೀಡಿದ್ದಾರೆ. ಯಾರಾದರೂ ವಂಚನೆಗೀಡಾಗಿದ್ದರೆ, ದೂರು ನೀಡಬಹುದು' ಎಂದು ಪೊಲೀಸರು ಹೇಳಿದರು.

ಖಾತೆಗೆ ಹಣ ವರ್ಗಾವಣೆ: 'ಕೆಲಸ ಪಡೆಯಲು ಹಾಗೂ ಯೋಜನೆಗಳ ಫಲಾನುಭವಿಗಳಾಗಲು ಜನರು ಆರೋಪಿಗಳಿಗೆ ಕರೆ ಮಾಡುತ್ತಿದ್ದರು. ಅವರಿಗೆ ಪರಿಚಯಸ್ಥರ ಬ್ಯಾಂಕ್ ಖಾತೆ ಸಂಖ್ಯೆ ನೀಡುತ್ತಿದ್ದ ಆರೋಪಿಗಳು, ಶುಲ್ಕವೆಂದು ಹೇಳಿ ₹2 ಸಾವಿರದಿಂದ ₹10 ಸಾವಿರ ಪಡೆಯುತ್ತಿದ್ದರು' ಎಂದು ಪೊಲೀಸರು ತಿಳಿಸಿದರು. 'ಆರೋಪಿಗಳು ಪರಿಚಯಸ್ಥರ ಖಾತೆ ಮೂಲಕ ಹಣ ಪಡೆದು, ನಂತರ ತಮ್ಮ ಖಾತೆಗೆ ವರ್ಗಾಯಿಸಿಕೊಳ್ಳುತ್ತಿದ್ದರು. ಈ ಕುರಿತು ತನಿಖೆ ಮುಂದುವರಿಸಲಾಗಿದೆ' ಎಂದರು.

ಕಂಪ್ಯೂಟರ್ ಆಪರೇಟರ್ ಕೆಲಸ: 'ದೂರುದಾರ ಮಹಿಳೆಗೆ ಕರೆ ಮಾಡಿದ್ದ ಆರೋಪಿಗಳು, ಬಿಬಿಎಂಪಿ ಕೇಂದ್ರ ಕಚೇರಿಯಲ್ಲಿ ಕಂಪ್ಯೂಟರ್ ಆಪರೇಟರ್ ಕೆಲಸ ಕೊಡಿಸುವುದಾಗಿ ಆಮಿಷವೊಡ್ಡಿದ್ದರು. ಅದನ್ನು ನಂಬಿದ್ದ ಮಹಿಳೆ, ₹8 ಸಾವಿರ ನೀಡಿದ್ದರು. ಕೆಲಸ ಕೊಡಿಸದೇ ಆರೋಪಿಗಳು ಪರಾರಿಯಾಗಿದ್ದರು. ಅದೇ ಮಹಿಳೆ ಠಾಣೆಗೆ ದೂರು ನೀಡಿದ್ದರು' ಎಂದರು.

ಮೂಲೆ ಸೇರಿದ ರಾಗಿ ಗುಂಡು

• ಸಿ. ಜಿ. ಮೋಹನ್ ಕುಮಾರ್

ದಾಬಸ್ ಪೇಟೆ: ಕೃಷಿ ಯಾಂತ್ರೀಕರಣಕ್ಕೆ ಒಳಗಾಗುತ್ತಿದ್ದಂತೆ ಪೂರ್ವಜರು ಬಳಸುತ್ತಿದ್ದ ಗ್ರಾಮೀಣ ಸೊಗಡಿನ ಕೃಷಿ ಪರಿಕರಗಳು ಕಣ್ಮರೆಯಾಗುತ್ತಾ, ಮೂಲೆ ಸೇರುತ್ತಿವೆ.

ರಾಗಿ ಬೆಳೆಯುವ ಬಯಲು ಸೀಮೆ ಜಿಲ್ಲೆಗಳಾದ ಬೆಂಗಳೂರು ನಗರ ಮತ್ತು ಗ್ರಾಮಾಂತರ, ಕೋಲಾರ, ಚಿಕ್ಕಬಳ್ಳಾಪುರ, ರಾಮನಗರ, ತುಮಕೂರು, ಮಂಡ್ಯ, ಚಿತ್ರದುರ್ಗ ಜಿಲ್ಲೆಗಳ ಕಣಗಳಲ್ಲಿ ಹುಲ್ಲಿನಿಂದ ರಾಗಿ ಬೇರ್ಪಡಿಸಲು ಗುಂಡು ಅಂದರೆ ರೋಣ ಕಲ್ಲು ಬಳಸುತ್ತಿದ್ದರು. ಮರದಲ್ಲಿ ಮಾಡಿದ ಉಪಕರಣಗಳಿಗೆ ಗುಂಡನ್ನು ಜೋಡಿಸಿ, ಕಣದಲ್ಲಿ ಹದವಾಗಿ ಹುಲ್ಲು ಹರಡಿ ಅದರ ಮೇಲೆ ಎತ್ತು, ಎಮ್ಮೆಗಳಿಗೆ ಕಟ್ಟಿದ ಗುಂಡನ್ನು ಓಡಾಡಿಸುತ್ತಿದ್ದರು. ಹೀಗೆ ಕಣಗಳಲ್ಲಿ ಕೆಲಸಕ್ಕೆ ಬಂದ ಮಹಿಳೆಯರು ಜನಪದ ಗೀತೆಗಳನ್ನು ಹಾಡುತ್ತಿದ್ದರೆ, ಪುರುಷರು ರೋಣು ಹೊಡೆಯುತ್ತಿದ್ದರು. ಗುಂಡಿಗೆ ಅಳವಡಿಸಿದ್ದ ಮರದಿಂದ ಹೊಮ್ಮುತ್ತಿದ್ದ ಶಬ್ದವು ವಿಶೇಷವಾಗಿತ್ತು.

ಗುಂಡು ಕಣಕ್ಕೆ ಇಳಿಸುವ ಹಾಗೂ ಹೊರಗೆ ಬಿಡುವ ಸಮಯದಲ್ಲಿ ಹುಲ್ಲು ಹಿಡಿದುಕೊಂಡು ಕಣದ ಸುತ್ತಲೂ ಒಂದು ಕಾಲು ಗಟ್ಟುವ ಸಂಪ್ರದಾಯ ಇತ್ತು. ರಾಗಿ ಅಷ್ಟೇ ಅಲ್ಲದೆ ಭತ್ತ, ತೊಗರಿ, ಹುರುಳಿ, ಜೋಳಗಳಿಂದ ಕಾಳು ಬೇರ್ಪಡಿಸಲು ರೈತರು ಗುಂಡು ಹೊಡೆಯುತ್ತಿದ್ದರು.

1990ರ ದಶಕದ ನಂತರ ಕೃಷಿಗೆ ಟ್ರ್ಯಾಕ್ಟರ್ ಲಗ್ಗೆಯಿಟ್ಟಿತ್ತು. ರೈತರು ನಿಧಾನವಾಗಿ ಗುಂಡುಗಳನ್ನು ಕಣಕ್ಕೆ ಹೂಡುವುದು ಕಡಿಮೆ ಮಾಡುತ್ತಾ ಬಂದರು. ನಾಲ್ಕೈದು ವರ್ಷಗಳಿಂದ ಈಚೆಗೆ ನೇರವಾಗಿ ಹೊಲದಲ್ಲಿಯೇ ಹುಲ್ಲು ಮತ್ತು ರಾಗಿಯನ್ನು ಬೇರ್ಪಡಿಸುವ ಬೇಲರ್ ಯಂತ್ರಗಳು ಬಂದ ಮೇಲೆ, ಒಂದು ಕಾಲದಲ್ಲಿ ರೈತನಿಗೆ ಅತಿ ಅವಶ್ಯವಾಗಿದ್ದ ಗುಂಡುಗಳು ಅನಾಥವಾಗಿ ರೈತರ ಬದು ಅಥವಾ ಹೊಲದ ಮೂಲೆ ಸೇರಿ ಪಳೆಯುಳಿಕೆಗಳಾಗುತ್ತಿವೆ.



ರಾಗಿ ಗುಂಡು

ಸುದ್ದಿ 2 ನಿಮಿಷ

ಡಿ.ಕೆ. ಸುರೇಶ್ ಹೇಳಿಕೆ ತಿರುಚುವ ಯತ್ನ: ಕಾಂಗ್ರೆಸ್ ಆರೋಪ

ಯಲಹಂಕ: 'ಕೇಂದ್ರ ಸರ್ಕಾರಕ್ಕೆ ಅತಿ ಹೆಚ್ಚು ತೆರಿಗೆ ಪಾವತಿಸುತ್ತಿರುವ ರಾಜ್ಯಕ್ಕೆ ಆಗುತ್ತಿರುವ ಅನುದಾನದ ತಾರತಮ್ಯದ ಕುರಿತು ಸಂಸದ ಡಿ.ಕೆ.ಸುರೇಶ್ ಅವರು ಧ್ವನಿ ಎತ್ತಿದ್ದಾರೆಯೇ ಹೊರತು ಪ್ರತ್ಯೇಕ ರಾಷ್ಟ್ರಕ್ಕಾಗಿ ಅಲ್ಲ. ಅವರ ಹೇಳಿಕೆ ತಿರುಚುವ ಪ್ರಯತ್ನವನ್ನು ಬಿಜೆಪಿ ಮಾಡುತ್ತಿದೆ' ಎಂದು ಎಐಸಿಸಿ ಎಸ್‌ಸಿ ಘಟಕದ ಸದಸ್ಯ ಎಸ್.ರಾಬರ್ಟ್ ಕ್ರಿಸ್ಟೋಫರ್ ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಷ್ಟ್ರದಲ್ಲಿಯೇ ಅತಿಹೆಚ್ಚು ತೆರಿಗೆ ಪಾವತಿಸುವ ರಾಜ್ಯಗಳ ಪೈಕಿ ಕರ್ನಾಟಕ ಎರಡನೇ ಸ್ಥಾನದಲ್ಲಿದೆ. ಕೇಂದ್ರದಿಂದ ರಾಜ್ಯಕ್ಕೆ ಪದೇ ಪದೇ ಅನ್ಯಾಯವಾಗುತ್ತಿದ್ದು, ತೆರಿಗೆ ಪಾಲಿನಲ್ಲಿಯೂ ಸರಿಯಾಗಿ ಹಂಚಿಕೆಯಾಗುತ್ತಿಲ್ಲ. ದಕ್ಷಿಣ ಭಾರತದ ರಾಜ್ಯಗಳಿಂದ ಸಂಗ್ರಹಿಸಿದ ಸಂಪನ್ಮೂಲಗಳನ್ನು ಉತ್ತರ ಭಾರತದ ಹಾಗೂ ಅವರಿಗೆ ಬೇಕಾದ ರಾಜ್ಯಗಳಿಗೆ ಹೆಚ್ಚಿನ ಹಣ ಹಂಚಿಕೆ ಮಾಡುತ್ತಿರುವುದರಿಂದ ರಾಜ್ಯದಲ್ಲಿ ಕೋಟ್ಯಂತರ ರೂಪಾಯಿ ತೆರಿಗೆ ಪಾವತಿಸುತ್ತಿರುವವರಿಗೆ ಭಾರಿ ನಷ್ಟವಾಗುತ್ತಿದೆ' ಎಂದರು.

'ಕೇಂದ್ರ ಸರ್ಕಾರ ರಾಜ್ಯದಿಂದ ಸಂಗ್ರಹಿಸಿರುವ ಸಂಪನ್ಮೂಲವನ್ನು ನ್ಯಾಯಯುತವಾಗಿ ಮರು ಹಂಚಿಕೆ ಮಾಡಬೇಕಾಗಿತ್ತು. ಅದರ ಬಗ್ಗೆ ಬಿಜೆಪಿ ನಾಯಕರು ಮಾತನಾಡುತ್ತಿಲ್ಲ. ದಕ್ಷಿಣ ರಾಜ್ಯಗಳಿಗೆ ಆಗಿರುವ ಅನ್ಯಾಯದ ವಿರುದ್ಧ ಸುರೇಶ್ ಅವರು ಧ್ವನಿಯೆತ್ತುವ ಮೂಲಕ ತಮ್ಮ ಹಕ್ಕನ್ನು ಕೇಳಿದ್ದಾರೆ. ಬಿಜೆಪಿ ಸರ್ಕಾರದ ನಡೆಯನ್ನು ಗಟ್ಟಿಧ್ವನಿಯಲ್ಲಿ ಟೀಕಿಸುವವರಿಗೆ ದೇಶದ್ರೋಹದ ಪಟ್ಟಕಟ್ಟುವುದು ಹೊಸದೇನಲ್ಲ. ಬಿಜೆಪಿಯವರು ವಿವಾದ ಸೃಷ್ಟಿಸಲು ಹೇಳಿಕೆ ತಿರುಚುವ ಮೂಲಕ ದೇಶದ ಜನರ ದಿಕ್ಕುತಪ್ಪಿಸುವ ಪ್ರಯತ್ನ ಮಾಡುತ್ತಿದ್ದಾರೆ' ಎಂದು ದೂರಿದರು.

ಕಾರ್ಮಿಕರ ಮಕ್ಕಳಿಗೆ ಲ್ಯಾಪ್‌ಟಾಪ್ ವಿತರಣೆ



ರಾಜರಾಜೇಶ್ವರಿನಗರ: 'ಕೂಲಿ ಕಾರ್ಮಿಕರು, ಕಟ್ಟಡ ಕಾರ್ಮಿಕರು, ಗಾರ್ಮೆಂಟ್ಸ್‌ನಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಮತ್ತು ಅವರ ಮಕ್ಕಳಿಗೆ ಸರ್ಕಾರ ವಿವಿಧ ಸವಲತ್ತು, ಸಾಲ ಸೌಲಭ್ಯ, ಶಿಕ್ಷಣಕ್ಕೆ ಆದ್ಯತೆ ನೀಡಲಾಗಿದೆ' ಎಂದು ಶಾಸಕ ಎಸ್.ಟಿ. ಸೋಮಶೇಖರ್ ಹೇಳಿದರು.

ಮಾಗಡಿ ರಸ್ತೆಯ ಬಿಇಎಲ್ ಬಡಾವಣೆಯ ಶಾಸಕರ ಕಚೇರಿಯಲ್ಲಿ ಕಟ್ಟಡ ಕಾರ್ಮಿಕರ 60 ಮಕ್ಕಳಿಗೆ ಲ್ಯಾಪ್‌ಟಾಪ್ ವಿತರಿಸಿ ಅವರು ಮಾತನಾಡಿದರು.

'ಬಡವರ ಮಕ್ಕಳು ಉನ್ನತ ಶಿಕ್ಷಣ ಪಡೆಯಬೇಕು. ಸರ್ಕಾರದ ಸವಲತ್ತು ನಿಜವಾದ ಜನರಿಗೆ ಸಿಗಬೇಕು. ಅಂತಹವರನ್ನು ಗುರುತಿಸಿ ಸೌಲಭ್ಯ ವಿತರಿಸಿ' ಎಂದು ಅಧಿಕಾರಿಗಳಿಗೆ ಹೇಳಿದರು.

ಕಾರ್ಮಿಕ ಅಧಿಕಾರಿ ಸುಜಾತ, ಹಿರಿಯ ಕಾರ್ಮಿಕ ನಿರೀಕ್ಷಕರಾದ ಅನುಪಮ, ಸುಧೀಂದ್ರ, ಯುವ ಮುಖಂಡ ಮಹೇಂದ್ರ ಕುಮಾರ್ ಇದ್ದರು.

ಕಬ್ಬನ್ ಉದ್ಯಾನದ ಆವರಣದಲ್ಲಿರುವ 'ನಮ್ಮ ಅಕ್ವೇರಿಯಂ' ಫೆಬ್ರುವರಿ ಅಂತ್ಯಕ್ಕೆ ಉದ್ಘಾಟನೆ

ಮತ್ಸ್ಯಾಲಯಕ್ಕೆ ಹೊಸ ರೂಪ

ಖಲೀಲಅಹ್ಮದ ಶೇಖ





ಮತ್ಸ್ಯಾಲಯದ ಆವರಣದಲ್ಲಿ ನಿರ್ಮಿಸುತ್ತಿರುವ ಕೊಳ (ಎಡಚಿತ್ರ), ನವೀಕೃತ ಮತ್ಸ್ಯಾಲಯದ ಹೊರನೋಟ –ಪ್ರಜಾವಾಣಿ ಚಿತ್ರಗಳು/ಪ್ರಶಾಂತ್ ಎಚ್‌.ಜಿ.

ಬೆಂಗಳೂರು: ಅಂತರರಾಷ್ಟ್ರೀಯ ಮಟ್ಟದ ಸುರಂಗ (ಟನೆಲ್) ಅಕ್ವೇರಿಯಂ, ಜಪಾನಿನ ಕೋಯಿ ಫಿಶ್‌ಗಳ ಕೊಳ, ಸಮುದ್ರದಲ್ಲಿ ಕಂಡು ಬರುವ ತರಹೇವಾರಿ ಅಲಂಕಾರಿಕ ಮತ್ಸ್ಯಲೋಕವನ್ನು ಒಂದೇ ಸ್ಥಳದಲ್ಲಿ ನೋಡುವ ಅವಕಾಶ 'ನಮ್ಮ ಬೆಂಗಳೂರು ಅಕ್ವೇರಿಯಂ' ಒದಗಿಸಲಿದೆ...

ಇದು ಕಸ್ತೂರಬಾ ರಸ್ತೆಯ ಕಬ್ಬನ್ ಉದ್ಯಾನದ ಆವರಣದಲ್ಲಿ ಹೊಸ ರೂಪದೊಂದಿಗೆ ಕಂಗೊಳಿಸುತ್ತಿರುವ 'ಸರ್ಕಾರಿ ಮತ್ಸ್ಯಾಲಯ'. ಸಾರ್ವಜನಿಕ ಮತ್ತು ಖಾಸಗಿ ಸಹಭಾಗಿತ್ವದಲ್ಲಿ (ಪಿಪಿಪಿ) 'ನಮ್ಮ ಬೆಂಗಳೂರು' ಅಕ್ವೇರಿಯಂ ಎಂಬ ಖಾಸಗಿ ಸಂಸ್ಥೆ ಹಳೆಯ ಮತ್ಸ್ಯಾಲಯಕ್ಕೆ ಆಧುನಿಕ ಸ್ಪರ್ಶ ನೀಡಿದೆ. ಶೇ 95ರಷ್ಟು ಕಾಮಗಾರಿ ಮುಗಿದಿದ್ದು, ಮಾಸಾಂತ್ಯಕ್ಕೆ ಉದ್ಘಾಟನೆಗೊಳ್ಳಲಿದೆ. ನಂತರ ಸಾರ್ವಜನಿಕರು ಈ ಮತ್ಸ್ಯಲೋಕ ಕಣ್ತುಂಬಿಕೊಳ್ಳಬಹುದು.

1983ರಲ್ಲಿ ಈ ಮತ್ಸ್ಯಾಲಯವನ್ನು 17,500 ಚದರಡಿಯಲ್ಲಿ ನಿರ್ಮಿಸಿದೆ. ಸದ್ಯ ಇದನ್ನು ಪಿಪಿಪಿ ಯೋಜನೆಯ ಅಡಿಯಲ್ಲಿ ಸುಮಾರು ₹15 ಕೋಟಿ ವೆಚ್ಚದಲ್ಲಿ ನವೀಕರಣ ಮಾಡಲಾಗುತ್ತಿದೆ. ಎರಡು ಅಂತಸ್ತಿನ ಮತ್ಸ್ಯಾಲಯದ ಹಳೆಯ ಕಟ್ಟದ ವಿನ್ಯಾಸವನ್ನು ಹಾಗೆಯೇ ಉಳಿಸಿಕೊಂಡು ಅಭಿವೃದ್ಧಿ ಮಾಡಲಾಗಿದೆ. 'ನಮ್ಮ ಬೆಂಗಳೂರು ಅಕ್ವೇರಿಯಂ' ಸಂಸ್ಥೆಯು ಈ ಮತ್ಸ್ಯಾಲಯವನ್ನು 30 ವರ್ಷ ನಿರ್ವಹಣೆ ಮಾಡಲಿದೆ' ಎಂದು ಮೀನುಗಾರಿಕೆ ಇಲಾಖೆ ಅಧಿಕಾರಿಯೊಬ್ಬರು ತಿಳಿಸಿದರು.


ಮೊದಲನೇ ಟನಲ್ ಅಕ್ವೇರಿಯಂ: 'ಕಟ್ಟಡದ ಆವರಣದಲ್ಲಿ 75 ಸಾವಿರ ಲೀಟರ್ ಸಾಮರ್ಥ್ಯದ ಉಪ್ಪುನೀರಿನ ಅಂತರರಾಷ್ಟ್ರೀಯ ಮಟ್ಟದ ಟನೆಲ್ ನಿರ್ಮಿಸಲಾಗಿದೆ. ಮತ್ಸ್ಯಾಲಯ ಒಳಹೊಕ್ಕುವವರಿಗೆ ಸಮುದ್ರದ ಆಳದಲ್ಲಿದ್ದಂತೆ ಅನುಭವವಾಗುತ್ತದೆ. ಇದು ಕರ್ನಾಟಕದಲ್ಲೇ ಮೊದಲನೇ ಶಾಶ್ವತ ಟನೆಲ್ ಅಕ್ವೇರಿಯಂ' ಎನ್ನುತ್ತಾರೆ ನಮ್ಮ ಬೆಂಗಳೂರು ಅಕ್ವೇರಿಯಂ ಸಂಸ್ಥೆಯ ನಿರ್ದೇಶಕ ನಂದಕುಮಾರ್.

'90 ಸಾವಿರ ಲೀಟರ್ ಸಾಮರ್ಥ್ಯದ ಜಪಾನಿನ ಕೋಯಿ ಫಿಶ್‌ಗಳ ಕೊಳ ನಿರ್ಮಿಸಲಾಗುತ್ತಿದೆ. ಕೋಯಿ ಮೀನಿಗೆ ವೀಕ್ಷಕರು ಆಹಾರವನ್ನು ನೀಡುವ ವ್ಯವಸ್ಥೆಯೂ ಇದೆ. ಆದರೆ, ಅಲ್ಲೇ ಮೀನುಗಳಿಗೆ ಆಹಾರ ಖರೀದಿಸಬೇಕು. ಅಲ್ಲಲ್ಲಿ ಟಚ್‌ಪಾಂಡ್‌ಗಳನ್ನು ನಿರ್ಮಿಸಲಾಗಿದ್ದು, ಅದರಲ್ಲಿ ಅಲಂಕಾರಿಕ ಸ್ಟಾರ್ ಫಿಶ್‌ಗಳನ್ನು ಬಿಡಲಾಗುತ್ತದೆ. ಸಾರ್ವಜನಿಕರು ಅವುಗಳನ್ನು ಸ್ಪರ್ಶಿಸಲು ಅವಕಾಶವಿದೆ' ಎಂದು ಅವರು ಮಾಹಿತಿ ನೀಡಿದರು.

ಕ್ಯೂ ಆರ್ ಕೋಡ್: 'ಕರ್ನಾಟಕದ ಸೊಗಡನ್ನು ಕಟ್ಟಿಕೊಡುವ ಉದ್ದೇಶದಿಂದ ಮತ್ಸ್ಯಾಲಯದ ಒಂದನೇ ಅಂತಸ್ತಿನಲ್ಲಿರುವ ನೇಚರ್ ಮತ್ತು ಮರೀನ್ ಅಕ್ವೇರಿಯಂಗಳಲ್ಲಿ ಸಹ್ಯಾದ್ರಿಯ ನೇತ್ರಾಣಿ ದ್ವೀಪಗಳಲ್ಲಿರುವ ಮೀನಿನ ಪ್ರಭೇದಗಳನ್ನು ಪ್ರದರ್ಶಿಸಲಾಗುವುದು. ಇಲ್ಲಿ ಅಲಂಕಾರಿಕ ಮೀನುಗಳಿಗೆ ಬೇಕಾಗುವ ನೈಸರ್ಗಿಕ ಪರಿಸರವನ್ನು ನಿರ್ಮಿಸಲಾಗಿದೆ. ಪ್ರತಿ ಅಕ್ವೇರಿಯಂ ಮೇಲ್ಭಾಗದಲ್ಲಿ ಕ್ಯೂಆರ್ ಕೋಡ್ ಹಾಕಲಾಗಿದೆ. ಪ್ರೇಕ್ಷಕರು ಅದನ್ನು ಸ್ಕ್ಯಾನ್ ಮಾಡಿ ಮೀನುಗಳು ಹಾಗೂ ಅದರಲ್ಲಿರುವ ಸಸ್ಯಗಳ ಬಗ್ಗೆ ಮಾಹಿತಿ ಪಡೆದುಕೊಳ್ಳಬಹುದು' ಎಂದು ಅವರು ವಿವರಿಸಿದರು.

ಎರಡನೇ ಅಂತಸ್ತಿನಲ್ಲಿ 60ಕ್ಕೂ ಹೆಚ್ಚು ವೈವಿಧ್ಯಮಯ ಅಕ್ವೇರಿಯಂಗಳಲ್ಲಿ ವಿದೇಶೀಯ ಅಲಂಕಾರಿಕ ಮೀನುಗಳಿರಲಿವೆ. ಮತ್ಸ್ಯಾಲಯದ ಆವರಣದಲ್ಲಿ ಚಿಕ್ಕದಾದ ಕೃತಕ ಜಲಪಾತ ನಿರ್ಮಿಸಲಾಗಿದೆ. ಭಾರತೀಯರು ಇನ್ನು ವಿಶಿಷ್ಟ ಅಕ್ವೇರಿಯಂ ನೋಡಲು ದುಬೈ, ಸಿಂಗಾಪುರ, ತೈವಾನ್, ಮಲೇಷ್ಯಾಕ್ಕೆ ಹೋಗಬೇಕಿಲ್ಲ. ಈ ಮತ್ಸ್ಯಾಲಯಕ್ಕೆ ಭೇಟಿ ನೀಡಿದರೆ ಸಾಕು.

'ಆಲಂಕಾರಿಕ ಮೀನು ಸಾಕಣೆ ತರಬೇತಿ'



ನಂದಕುಮಾರ್

'ಆಲಂಕಾರಿಕ ಮೀನುಗಳನ್ನು ಸಾಕುವ ಹವ್ಯಾಸ ಇರುವವರಿಗೆ ಹಾಗೂ ಇದನ್ನೇ ವೃತ್ತಿ ಮಾಡಿಕೊಳ್ಳುವ ಆಸಕ್ತರಿಗೆ ಮೂರು ಹಂತಗಳಲ್ಲಿ ಅಂತರರಾಷ್ಟ್ರೀಯ ಮಟ್ಟದ ತಜ್ಞರಿಂದ ತರಬೇತಿಯನ್ನು ನೀಡಲಾಗುವುದು. ಒಂದು ವಾರ, ಮೂರು ಹಾಗೂ 15 ದಿನಗಳವರೆಗೆ ತರಬೇತಿ ನೀಡಿ ಪ್ರಮಾಣ ಪತ್ರವನ್ನು ನೀಡಲಾಗುತ್ತದೆ' ಎಂದು ನಂದಕುಮಾರ್ ತಿಳಿಸಿದರು.

'ಸಮುದ್ರದಾಳದ ಅನುಭವ ಸಿಗಲಿದೆ'

'ಸರ್ಕಾರ ನಿಗದಿ ಮಾಡುವ ಪ್ರವೇಶ ಶುಲ್ಕವನ್ನು ನಿಗದಿಪಡಿಸಲಾಗುವುದು. ಮತ್ಸ್ಯಾಲಯಕ್ಕೆ ಒಂದು ಬಾರಿಗೆ 300 ಜನರಿಗೆ ಪ್ರವೇಶ ನೀಡುವ ಉದ್ದೇಶವಿದೆ. ಕನಿಷ್ಠ 1 ಗಂಟೆಯವರೆಗೂ ಸಮುದ್ರದ ಆಳದಲ್ಲಿ ಸಿಗುವ ಅನುಭವ ಈ ಮತ್ಸ್ಯಾಲಯದಲ್ಲಿ ಸಿಗಲಿದೆ' ಎಂದು ಸಂಸ್ಥೆಯ ಪ್ರಣವ್ ಮಾಹಿತಿ ನೀಡಿದರು.



ಪ್ರಣವ್

₹500 ಕೋಟಿ ವೆಚ್ಚದಲ್ಲಿ ಯುವಿಸಿಇ ಅಭಿವೃದ್ಧಿ: ಸಚಿವ ಸುಧಾಕರ್

ಪ್ರಜಾವಾಣಿ ವಾರ್ತೆ



ಬೆಂಗಳೂರಿನ ನೃಪತುಂಗಾ ವಿಶ್ವವಿದ್ಯಾಲಯಕ್ಕೆ ಮಂಗಳವಾರ ಭೇಟಿ ನೀಡಿದ್ದ ಉನ್ನತ ಶಿಕ್ಷಣ ಸಚಿವ ಎಂ.ಸಿ.ಸುಧಾಕರ್, ಕಟ್ಟಡ ಕಾಮಗಾರಿ ನೀಲನಕ್ಷೆ ವೀಕ್ಷಿಸಿದರು

ಬೆಂಗಳೂರು: ಸ್ವಾಯತ್ತ ವಿಶ್ವವಿದ್ಯಾಲಯವಾಗಿರುವ ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ಕಾಲೇಜನ್ನು (ಯುವಿಸಿಇ) ₹500 ಕೋಟಿ ವೆಚ್ಚದಲ್ಲಿ ಐಐಟಿ ಮಾದರಿಯಲ್ಲಿ ಹಂತ ಹಂತವಾಗಿ ಅಭಿವೃದ್ಧಿಪಡಿಸಲಾಗುವುದು ಎಂದು ಉನ್ನತ ಶಿಕ್ಷಣ ಸಚಿವ ಎಂ.ಸಿ.ಸುಧಾಕರ್ ಹೇಳಿದರು.

ಯುವಿಸಿಇ ಮತ್ತು ನೃಪತುಂಗ ವಿಶ್ವವಿದ್ಯಾಲಯಕ್ಕೆ ಮಂಗಳವಾರ ಭೇಟಿ ನೀಡಿದ್ದ ಅವರು ಸುದ್ದಿಗಾರರ ಜತೆ ಮಾತನಾಡಿದರು.

ಈಗಾಗಲೇ ಮೊದಲ ಹಂತದಲ್ಲಿ ₹87 ಕೋಟಿ ವೆಚ್ಚದಲ್ಲಿ ಕೈಗೆತ್ತಿಕೊಂಡಿರುವ ನೂತನ ಕಟ್ಟಡಗಳ ಕಾಮಗಾರಿ ವರ್ಷವಾದರೂ ಬುನಾದಿ ಹಂತದಿಂದ ಮೇಲೆದ್ದಿಲ್ಲ. ಕೊಟ್ಟಿರುವ ಗಡುವು 24 ತಿಂಗಳಲ್ಲಿ ಪೂರ್ಣಗೊಳಿಸಲು ಸಾಧ್ಯವೇ ಎಂದು ಪ್ರಶ್ನಿಸಿದ ಅವರು, ನಿಗದಿತ ಸಮಯದಲ್ಲಿ ಪೂರ್ಣಗೊಳಿಸದಿದ್ದರೆ ದಂಡ ವಿಧಿಸುವುದಾಗಿ ಗುತ್ತಿಗೆದಾರರಿಗೆ ಎಚ್ಚರಿಕೆ ನೀಡಿದರು.

ಕಾಲೇಜಿಗೆ ಆಧುನಿಕ ಪ್ರಯೋಗಾಲಯ ಉಪಕರಣಗಳ ಅಗತ್ಯವಿದೆ. ಬೇರೆ ಸಂಸ್ಥೆಗಳಿಗೂ ಯುವಿಸಿಇಗೂ ಹೋಲಿಸಿದರೆ ತುಂಬಾ ಹಳೆಯ ಯಂತ್ರಗಳಿವೆ. ಮೆಕ್ಯಾನಿಕಲ್ ವಿಭಾಗಕ್ಕೆ ವೋಲ್ವೊ, ಟೊಯೊಟಾ ಸೇರಿದಂತೆ ಹಲವು ಸಂಸ್ಥೆಗಳು ಎಂಜಿನ್ ಹಾಗೂ ಇತರೆ ಬಿಡಿಭಾಗಗಳನ್ನು ನೀಡಿವೆ. ಇವತ್ತಿನ ಕಾಲಕ್ಕೆ ಅವು ಸಾಲದಾಗಿವೆ ಎಂದರು.


ಏಳು ಅಂತಸ್ತಿನ ಕಟ್ಟಡ: ನೃಪತುಂಗ ವಿಶ್ವವಿದ್ಯಾಲಯದಲ್ಲಿ ₹57 ಕೋಟಿ ವೆಚ್ಚದಲ್ಲಿ 7 ಅಂತಸ್ತಿನ ಕಟ್ಟಡ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದೆ. ಇದರ ಜತೆಗೆ ಅಂದಾಜು ₹30 ಕೋಟಿ ವೆಚ್ಚದಲ್ಲಿ ಆಡಳಿತ ಮಂಡಳಿ ನಿರ್ಮಾಣಕ್ಕೆ ನೀಲನಕ್ಷೆ ರಚಿಸಲಾಗಿದೆ. ವಿಶ್ವ ಬ್ಯಾಂಕ್‌ನಿಂದ ವಿವಿಧ ಉದ್ದೇಶಗಳಿಗಾಗಿ ಇಲಾಖೆಗೆ ಪಡೆಯುವ ಸಾಲದಲ್ಲಿ ಇನ್ನಷ್ಟು ನೆರವು ನೀಡಲಾಗುವುದು ಎಂದು ಭರವಸೆ ನೀಡಿದರು.

ನೃಪತುಂಗ ವಿಶ್ವವಿದ್ಯಾಲಯದ ಆವರಣದ ತುಂಬೆಲ್ಲ ಕಟ್ಟಡವೇ ಆಗಿದೆ. ಹಳೆಯ ಕಟ್ಟಡ ಮುಂಭಾಗದ ಜಾಗದಲ್ಲಿ ಹೊಸ ಕಟ್ಟಡ ನಿರ್ಮಾಣವಾಗುತ್ತಿದೆ. ಹಳೆಯ ಕಟ್ಟಡಕ್ಕೆ ಹೊಂದಿಕೊಂಡಂತೆ ನಿರ್ಮಿಸಿದ್ದರೆ ಸ್ವಲ್ಪವಾದರೂ ಮೈದಾನ ಸಿಗುತ್ತಿತ್ತು ಎಂದರು.

7ನೇ ವೇತನ ಆಯೋಗದ ಶಿಫಾರಸಿನಂತೆ ವೇತನ ನೀಡಲು ಇರುವ ತಾಂತ್ರಿಕ ಸಮಸ್ಯೆ ಬಗೆಹರಿಸುವಂತೆ ಯುವಿಸಿಇ ಸಿಬ್ಬಂದಿ ಸಚಿವರಿಗೆ ಮನವಿ ಮಾಡಿದರು.

'ಖಜಾನೆ ಖಾಲಿ: ವೈಫಲ್ಯ ಮರೆಮಾಚಲು ಪ್ರತಿಭಟನೆ'

ಪ್ರಜಾವಾಣಿ ವಾರ್ತೆ



ಬಿ.ವೈ. ವಿಜಯೇಂದ್ರ,

ಬೆಂಗಳೂರು: 'ಗ್ಯಾರಂಟಿ' ಯೋಜನೆಗಳಿಂದ ಬೊಕ್ಕಸ ಬರಿದು ಮಾಡಿಕೊಂಡಿರುವ ಕಾಂಗ್ರೆಸ್ ಸರ್ಕಾರ ಆರ್ಥಿಕ ನಿರ್ವಹಣೆಯಲ್ಲಿನ ತನ್ನ ವೈಫಲ್ಯ ಮುಚ್ಚಿಕೊಳ್ಳಲು ಕೇಂದ್ರದ ವಿರುದ್ಧ ಪ್ರತಿಭಟನೆಗೆ ಮುಂದಾಗಿದೆ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ದೂರಿದ್ದಾರೆ.

ಈ ಕುರಿತು 'ಎಕ್ಸ್'ನಲ್ಲಿ ಬರೆದುಕೊಂಡಿರುವ ಅವರು, 'ಕಾಂಗ್ರೆಸ್ ಕೇಂದ್ರದಲ್ಲಿ ಆಡಳಿತ ನಡೆಸಿದ 60 ವರ್ಷಗಳಲ್ಲಿ ಕರ್ನಾಟಕಕ್ಕೆ ಮಾಡಿರುವ ಅನ್ಯಾಯ, ತಾರತಮ್ಯಗಳನ್ನು ಸಾಕ್ಷ್ಯ ಸಮೇತ ರಾಜ್ಯದ ಜನತೆಯ ಮುಂದೆ ಇರಿಸುತ್ತೇವೆ' ಎಂದೂ ಹೇಳಿದ್ದಾರೆ.

'ಆರ್ಥಿಕ ತಾರತಮ್ಯದ ಸುಳ್ಳುಕಂತೆ ಹೊತ್ತು 'ಚಲೋ ದಿಲ್ಲಿ' ಬದಲು ಬರಗಾಲದಿಂದ ತತ್ತರಿಸಿರುವ ರೈತರ ಕಣ್ಣೀರೊರೆಸಿ ಪರಿಹಾರ ನೀಡಲು 'ಚಲೋಹಳ್ಳಿ' ಕಾರ್ಯಕ್ರಮ ಆರಂಭಿಸಿ; ನಾವು ನಿಮ್ಮ ಜತೆ ಬರುತ್ತೇವೆ' ಎಂದು ವಿಜಯೇಂದ್ರ ಅವರು ಸವಾಲು ಹಾಕಿದ್ದಾರೆ.

'ವಿತ್ತೀಯ ಸಮತೋಲನ ಕಾಯ್ದುಕೊಳ್ಳದೇ ಖಜಾನೆ ಖಾಲಿ ಮಾಡಿರುವ ಸಿದ್ದರಾಮಯ್ಯ ನೇತೃತ್ವದ ಸರ್ಕಾರ, ಸುಳ್ಳು ಮಾಹಿತಿ ನೀಡಿ ಜನರ ದಿಕ್ಕು ತಪ್ಪಿಸಲು ಮುಂದಾಗಿದೆ. ಇದು ಕೂಡ ವಂಚನೆಯ ಇನ್ನೊಂದು ಮುಖ' ಎಂದಿದ್ದಾರೆ.

'ಕೇಂದ್ರದಲ್ಲಿ ಕಾಂಗ್ರೆಸ್ ಇದ್ದಾಗ ಒಂದು ಕಣ್ಣಿಗೆ ಸುಣ್ಣ, ಮತ್ತೊಂದು ಕಣ್ಣಿಗೆ ಬೆಣ್ಣೆ ಎನ್ನುವಂತೆ ನಿರಂತರವಾಗಿ ಕರ್ನಾಟಕಕ್ಕೇ ತಾರತಮ್ಯ ಧೋರಣೆ ಅನುಸರಿಸಿ ರಾಜ್ಯಕ್ಕೆ ದೊಡ್ಡ ಮಟ್ಟದ ಅನ್ಯಾಯ ಮಾಡಿರುವ ಇತಿಹಾಸವೇ ಇದೆ. ಇವೆಲ್ಲವನ್ನೂ ನಾವು ಬಿಚ್ಚಿಟ್ಟು ಕಾಂಗ್ರೆಸ್‌ನ ಅಸಲಿ ಮುಖವಾಡವನ್ನು ಕನ್ನಡಿಗರ ಮುಂದೆ ಕಳಚಿಡುತ್ತೇವೆ' ಎಂದೂ ಹೇಳಿದ್ದಾರೆ.

ಲೋಕಸಭೆಗೆ ಸ್ಪರ್ಧಿಸುವುದಿಲ್ಲ ಸಚಿವ ಖಂಡ್ರೆ

ಪ್ರಜಾವಾಣಿ ವಾರ್ತೆ

ಮಂಗಳೂರು: 'ನಾನು ಸಚಿವನಾಗಿದ್ದೀನಿ. ಬೀದರ್ ಲೋಕಸಭಾ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಯಾರನ್ನೇ ಹೈಕಮಾಂಡ್ ಕಣಕ್ಕಿಳಿಸಿದರೂ ಗೆಲ್ಲಿಸಿಕೊಂಡು ಬರುತ್ತೇವೆ' ಎಂದು ಅರಣ್ಯ ಮತ್ತು ಪರಿಸರ ಸಚಿವ ಸಚಿವ ಈಶ್ವರ ಖಂಡ್ರೆ ಹೇಳಿದರು.

ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ 'ಬೀದರ್ ಕ್ಷೇತ್ರದಿಂದ ಹೈಕಮಾಂಡ್ ಸೂಚಿಸಿದರೆ ಸ್ಪರ್ಧಿಸುವಿರಾ' ಎಂಬ ಪ್ರಶ್ನೆಗೆ ಹೀಗೆ ಉತ್ತರಿಸಿದರು. ಈ ಮೂಲಕ ತಾವು ಸ್ಪರ್ಧಿಸುವುದಿಲ್ಲ ಎಂದು ಪರೋಕ್ಷವಾಗಿ ತಿಳಿಸಿದರು.

'ಲೋಕಸಭೆ ಚುನಾವಣೆ ಸಿದ್ಧತೆಗೆ ಇದೇ 17ರಂದು ಮಂಗಳೂರಲ್ಲಿ ಕಾಂಗ್ರೆಸ್ ಕಾರ್ಯಕರ್ತರ ರಾಜ್ಯಮಟ್ಟದ ಸಮಾವೇಶ ನಡೆಯಲಿದೆ. ಚುನಾವಣೆಗೆ ಪಕ್ಷ ಸಿದ್ಧವಾಗಿದೆ. 28ರಲ್ಲಿ 20 ಕ್ಷೇತ್ರಗಳಲ್ಲಿ ಕಾಂಗ್ರೆಸ್ ಗೆಲ್ಲಲಿದೆ' ಎಂದು ಹೇಳಿದರು.

ಗ್ಯಾರಂಟಿ ಯೋಜನೆ: ಎಚ್‌ಡಿಡಿ ಕಿಡಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕ ಕಾಂಗ್ರೆಸ್ ಸರ್ಕಾರದ ಗ್ಯಾರಂಟಿ ಯೋಜನೆಗಳ ಕುರಿತು ಜೆಡಿಎಸ್‌ನ ರಾಜ್ಯಸಭಾ ಸದಸ್ಯ ಎಚ್‌.ಡಿ. ದೇವೇಗೌಡ ಟೀಕಾಪ್ರಹಾರ ನಡೆಸಿದರು.

ರಾಜ್ಯಸಭೆಯಲ್ಲಿ ಮಂಗಳವಾರ ಮಾತನಾಡಿದ ಅವರು, 'ಗ್ಯಾರಂಟಿ ಯೋಜನೆ ಅನುತ್ಪಾದಕ. ಇದು ತಾತ್ಕಾಲಿಕ ಅನುಕೂಲವಾಗಲಿದೆ' ಎಂದರು.


'ಮೇಕೆದಾಟು ಯೋಜನೆಗೆ ಕೇಂದ್ರ ಸರ್ಕಾರ ಶೀಘ್ರ ಅನುಮೋದನೆ ನೀಡಬೇಕು. 30 ಟಿಎಂಸಿ ಅಡಿ ನೀರು ಸಂಗ್ರಹಿಸುವ ಸಣ್ಣ ಯೋಜನೆ ಇದಾಗಿದೆ. ಇದರಿಂದ ತಮಿಳುನಾಡಿಗೆ ಯಾವುದೇ ತೊಂದರೆ ಆಗುವುದಿಲ್ಲ' ಎಂದರು.

ತಂದೆಗೆ ಕಣ್ಣೀರು ಹಾಕಿಸಿದ್ದು ಮರೆತಿರಾ?

'ಎಕ್ಸ್' ಮೂಲಕ ಬಿ.ವೈ.ವಿಜಯೇಂದ್ರ, ಕಾಂಗ್ರೆಸ್ ಶಾಸಕ ಬಾಲಕೃಷ್ಣ ಫೋಟೊ 'ಸಮರ'

ಪ್ರಜಾವಾಣಿ ವಾರ್ತೆ





ಮಾಗಡಿ ಶಾಸಕ ಎಚ್‌.ಸಿ. ಬಾಲಕೃಷ್ಣ ಅವರು ತಮ್ಮ ಎಕ್ಸ್ ಖಾತೆಯಲ್ಲಿ ಮಾಡಿರುವ ಪೋಸ್ಟ್ (ಎಡಚಿತ್ರ) ಬಿ.ವೈ. ವಿಜಯೇಂದ್ರ ಹಂಚಿಕೊಂಡಿರುವ ಫೋಟೊ

ರಾಮನಗರ: 'ಗುಜರಾತಿಗಳು ನಿಮ್ಮ ಪೂಜ್ಯ ತಂದೆಯವರನ್ನು ಹೀನಾಯವಾಗಿ ಮುಖ್ಯಮಂತ್ರಿ ಕುರ್ಚಿಯಿಂದ ಇಳಿಸಿ ಕಣ್ಣೀರು ಹಾಕಿಸಿದ್ದು ಮರೆತು ಹೋಯಿತೇ ವಿಜಯೇಂದ್ರ ಅವರೇ..?' ಎಂದು ಮಾಗಡಿ ಶಾಸಕ ಎಚ್‌.ಸಿ. ಬಾಲಕೃಷ್ಣ ಅವರು ರಾಜ್ಯ ಬಿಜೆಪಿ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಅವರಿಗೆ ತಿರುಗೇಟು ನೀಡಿದ್ದಾರೆ.

'ಬಿಜೆಪಿಯಲ್ಲಿ ಗಂಡಸರಿದ್ದರೆ ರಾಜ್ಯದ ಪಾಲಿನ ಅನುದಾನಕ್ಕಾಗಿ ಕಾಂಗ್ರೆಸ್ ನಡೆಸುತ್ತಿರುವ ಹೋರಾಟಕ್ಕೆ ದನಿಗೂಡಿಸಲಿ' ಎಂದು ಬಾಲಕೃಷ್ಣ ಸವಾಲು ಹಾಕಿದ್ದರು. ಅದಕ್ಕೆ ಬಿ.ವೈ. ವಿಜಯೇಂದ್ರ ಅವರು ಎಕ್ಸ್ ಖಾತೆಯಲ್ಲಿ ಖಾರವಾಗಿ ಉತ್ತರಿಸಿದ್ದಾರೆ.

'ಬ್ರಿಟಿಷರು ದೇಶ ಬಿಟ್ಟು ತೊಲಗಿದರೂ ನೆಹರೂ ಕುಟುಂಬದ ಗುಲಾಮಗಿರಿ ನೆರಳಲ್ಲೇ ಇರುವ ಶಾಸಕ ಬಾಲಕೃಷ್ಣರಂತಹ ಕಾಂಗ್ರೆಸ್ಸಿಗರು, ಇಂದು ಪಕ್ಷದ ಸಂಸದರನ್ನು ಕುರಿತು ನೀಡಿರುವ ಕೀಳುಮಟ್ಟದ ಹೇಳಿಕೆಗೆ ಈ ಚಿತ್ರವೇ ಉತ್ತರ ಹೇಳುತ್ತದೆ' ಎಂದು ಮಾಜಿ ಪ್ರಧಾನಿ ಇಂದಿರಾ ಗಾಂಧಿ ಅವರ ಎದುರು ಪಕ್ಷದ ಸಚಿವರು ಹಾಗೂ ನಾಯಕರು ನಿಂತಿರುವ ಚಿತ್ರ ಪೋಸ್ಟ್ ಮಾಡಿದ್ದಾರೆ.

ಆ ಪೋಸ್ಟ್‌ಗೆ ಮಂಗಳವಾರ ಎಕ್ಸ್ ಖಾತೆಯಲ್ಲಿ ಪ್ರತಿಕ್ರಿಯಿಸಿರುವ ಬಾಲಕೃಷ್ಣ, 'ನಿಮ್ಮ ಸಂಸದರಿಗೆ ದೆಹಲಿಗೆ ಹೋಗಿ ಪ್ರಧಾನಿ ನರೇಂದ್ರ ಮೋದಿ ಅವರ ಮುಂದೆ ನಿಂತು ಈ ರೀತಿ ಮಾತನಾಡುವ ತಾಕತ್ತು ಇದೆಯಾ..' ಎಂದು ಸವಾಲು ಹಾಕಿದ್ದಾರೆ.

ವಿಜಯೇಂದ್ರ ಹಾಕಿರುವ ಫೋಟೊಗೆ ಪ್ರತಿಯಾಗಿ ವಿಧಾನಸಭಾ ಚುನಾವಣೆ ಸಂದರ್ಭದಲ್ಲಿ ಬೆಂಗಳೂರಿನಲ್ಲಿ ರೋಡ್ ಷೊ ನಡೆಸಿದ ಮೋದಿ ಅವರಿಗೆ ರಸ್ತೆಬದಿಯ ಬ್ಯಾರಿಕೇಡ್ ಹಿಂದೆ ಜನರ ಜೊತೆ ನಿಂತು ಕೈ ಬೀಸುತ್ತಿರುವ ಹಿಂದಿನ ರಾಜ್ಯ ಬಿಜೆಪಿ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್, ಸಚಿವರು ಹಾಗೂ ಶಾಸಕರ ಫೋಟೊ ಪೋಸ್ಟ್ ಮಾಡಿದ್ದಾರೆ.

ಶಾಲಾಭಿವೃದ್ಧಿಗೆ 'ಹಳೇ ವಿದ್ಯಾರ್ಥಿಗಳ ಸಂಘ'

ಬೆಂಗಳೂರು: ಸರ್ಕಾರಿ ಶಾಲೆಗಳ ಅಭಿವೃದ್ಧಿಗೆ ಹಳೇ ವಿದ್ಯಾರ್ಥಿಗಳಿಂದ ನೆರವು ಪಡೆಯಲು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ನಿರ್ಧರಿಸಿದ್ದು, ಅದಕ್ಕಾಗಿ ಪ್ರತಿ ಶಾಲೆಯಲ್ಲೂ ಹಳೇ ವಿದ್ಯಾರ್ಥಿಗಳ ಸಂಘ ರಚಿಸುವಂತೆ ಸುತ್ತೋಲೆ ಹೊರಡಿಸಿದೆ.

ಸರ್ಕಾರಿ ಶಾಲೆಗಳ ಅಭಿವೃದ್ಧಿ, ಬಲವರ್ಧನೆಗೆ ಸಮುದಾಯದ ನೆರವು ಪಡೆಯುವ 'ನಮ್ಮ ಶಾಲೆ–ನಮ್ಮ ಜವಾಬ್ದಾರಿ' ಯೋಜನೆಯ ಸಮರ್ಪಕ ಬಳಕೆಗೆ ಆಯಾ ಶಾಲೆಗಳಲ್ಲಿ ಓದಿದ ಹಳೇ ವಿದ್ಯಾರ್ಥಿಗಳ ಪಟ್ಟಿ ರಚಿಸಿ ಮಾರ್ಚ್ 31ರ ಒಳಗೆ ಸಂಘ ರಚಿಸಲು ಆಯುಕ್ತೆ ಬಿ.ಬಿ.ಕಾವೇರಿ ಸೂಚಿಸಿದ್ದಾರೆ.

ಹಳೇ ವಿದ್ಯಾರ್ಥಿಗಳ ಪೈಕಿ ಸಾಧಕರನ್ನು ಸಾಮಾಜಿಕ ಜಾಲತಾಣಗಳ ನೆರವಿನಿಂದ ಸಂಪರ್ಕಿಸಬೇಕು. ಅವರ ಸೇವೆ ಬಳಸಿಕೊಂಡು ಅಗತ್ಯ ಪ್ರಯೋಗಾಲಯ, ಗ್ರಂಥಾಲಯ, ಪೀಠೋಪಕರಣ, ಸ್ಮಾರ್ಟ್ ತರಗತಿಗಳು, ಇ–ಕಲಿಕಾ ಕೇಂದ್ರ ಸ್ಥಾಪಿಸಬೇಕು. ಅಲ್ಲದೇ, ಹಳೇ ವಿದ್ಯಾರ್ಥಿಗಳ ಸಾಧನೆ ಬಿಂಬಿಸುವ ಕಾರ್ಯಕ್ರಮ ಆಯೋಜಿಸಲು ತಿಳಿಸಿದ್ದಾರೆ.

ಸಮುದ್ರ ಸೇರಿದ 47 ಕಡಲಾಮೆ ಮರಿಗಳು

ಪ್ರಜಾವಾಣಿ ವಾರ್ತೆ

ಕಾರವಾರ: ತಾಲ್ಲೂಕಿನ ದೇವಬಾಗದ ಕಡಲತೀರದಲ್ಲಿ ಮಂಗಳವಾರ 47 ಕಡಲಾಮೆ ಮರಿಗಳನ್ನು ಸಮುದ್ರಕ್ಕೆ ಬಿಡಲಾಯಿತು.


ಕಡಲತೀರದಲ್ಲಿ ಸಂರಕ್ಷಿಸಲಾದ ಕಡಲಾಮೆ ಮೊಟ್ಟೆಗಳಿಂದ ಹೊರಗಡೆ ಬಂದ ಈ ವರ್ಷದ ಮೊದಲ ಕಡಲಾಮೆ ಮರಿಗಳಾಗಿದ್ದವು. ಪುಟ್ಟ ಪುಟ್ಟ ಮರಿಗಳು ಸಮುದ್ರ ಸೇರುವ ಕ್ಷಣಗಳನ್ನು ಕಣ್ತುಂಬಿಕೊಳ್ಳಲು ಹಲವರು ಸಾಕ್ಷಿಯಾದರು.

ಮೊಟ್ಟೆ ಸಂರಕ್ಷಣೆಯ ಗೂಡುಗಳಿಂದ ಸುರಕ್ಷಿತವಾಗಿ ಮರಿಗಳನ್ನು ಹೊರಕ್ಕೆ ತೆಗೆಯುತ್ತಿದ್ದಂತೆ ಅವುಗಳ ಚಿನ್ನಾಟ ವೀಕ್ಷಿಸಲು ಮಕ್ಕಳು, ವಿದ್ಯಾರ್ಥಿಗಳು ಕುತೂಹಲ ಭರಿತರಾಗಿ ಗಮನಿಸಿದರು. ಒಂದೊಂದೇ ಮರಿಗಳನ್ನು ಸುರಕ್ಷಿತವಾಗಿ ಬುಟ್ಟಿಯಿಂದ ಹೊರಕ್ಕೆ ತೆಗೆದು ಮರಳಿನ ಮೇಲೆ ಇಡುತ್ತಿದ್ದಂತೆ ಅವು ಸಮುದ್ರದತ್ತ ಓಡುತ್ತ ಸಾಗಿದವು.

'ಈವರೆಗೆ ಒಟ್ಟು 26 ಕಡಲಾಮೆ ಗೂಡುಗಳನ್ನು ಪತ್ತೆ ಮಾಡಲಾಗಿದ್ದು, 95 ಮೊಟ್ಟೆಗಳನ್ನು ಸಂರಕ್ಷಣೆ ಮಾಡಿಡಲಾಗಿದೆ. ಮೊಟ್ಟೆ ಇಟ್ಟ 53 ದಿನಕ್ಕೆ ಮರಿಗಳು ಹೊರಬಂದಿವೆ' ಎಂದು ಎಸಿಎಫ್ ಜಯೇಶ್ ಕೆ.ಸಿ ಮಾಹಿತಿ ನೀಡಿದರು.

ಚಿತ್ತಾಕುಲ ಗ್ರಾಮ ಪಂಚಾಯಿತಿ ಅಧ್ಯಕ್ಷ ರಾಜು ತಾಂಡೇಲ, ಡಿಸಿಎಫ್ ಸಿ. ರವಿಶಂಕರ, ಆರ್‌ಎಫ್‌ಒ ಗಜಾನನ ನಾಯ್ಕ, ಭವ್ಯಾ ನಾಯ್ಕ, ಜಂಗಲ್ ಲಾಡ್ಜಸ್ ವ್ಯವಸ್ಥಾಪಕ ಪಿ.ಆರ್. ನಾಯ್ಕ, ಕಡಲಜೀವಶಾಸ್ತ್ರಜ್ಞ ಶಿವಕುಮಾರ ಹರಗಿ ಇದ್ದರು.

ಮ್ಯಾನ್ಮಾರ್ ಗಡಿಗೆ ತಡೆ ಬೇಲಿ: ಶಾ



ಅಮಿತ್ ಶಾ

ನವದೆಹಲಿ (ಪಿಟಿಐ): ಮ್ಯಾನ್ಮಾರ್ ಜೊತೆಗೆ ಭಾರತ ಹಂಚಿಕೊಂಡಿರುವ 1,643 ಕಿ.ಮೀ ವ್ಯಾಪ್ತಿಯ ಗಡಿಯಲ್ಲಿ ತಡೆ ಬೇಲಿ ಹಾಕಲು ನಿರ್ಧರಿಸಲಾಗಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಮಂಗಳವಾರ ಘೋಷಿಸಿದ್ದಾರೆ.

'ಭಾರತ–ಮ್ಯಾನ್ಮಾರ್ ಗಡಿಯ 1643 ಕಿ.ಮೀ ವಿಸ್ತೀರ್ಣದಲ್ಲಿ ತಡೆ ಬೇಲಿ ನಿರ್ಮಿಸಲು ನಿರ್ಧರಿಸಲಾಗಿದೆ. ಮಣಿಪುರದ ಮೊರೆಹ್ ಗಡಿಯ 10 ಕಿ.ಮೀ ವ್ಯಾಪ್ತಿಯಲ್ಲಿ ತಡೆಬೇಲಿ ಕಾಮಗಾರಿ ಆರಂಭವಾಗಿದೆ. ಗಡಿಯಾದ್ಯಂತ ಉತ್ತಮ ಕಣ್ಗಾವಲು ವ್ಯವಸ್ಥೆಯನ್ನು ಕಲ್ಪಿಸಲಾಗುವುದು' ಎಂದು ಅಮಿತ್ ಶಾ ಅವರು 'ಎಕ್ಸ್' ವೇದಿಕೆಯಲ್ಲಿ ತಿಳಿಸಿದ್ದಾರೆ.

ಈ ಕ್ರಮದಿಂದ ಭಾರತ–ಮ್ಯಾನ್ಮಾರ್ ಗಡಿಗಳ 16 ಕಿಲೊ ಮೀಟರ್ ವ್ಯಾಪ್ತಿಯಲ್ಲಿ ನೆಲೆಸಿರುವ ಜನರು ಪರಸ್ಪರರ ಭೂಪ್ರದೇಶದೊಳಗೆ ವೀಸಾ ಸೇರಿದಂತೆ ಯಾವುದೇ ದಾಖಲೆಗಳಿಲ್ಲದೆ ಸಂಚಾರಕ್ಕೆ ಅವಕಾಶ ಕಲ್ಪಿಸುವ ಮುಕ್ತ ಸಂಚಾರ (ಎಫ್‌ಎಂಆರ್) ಅಂತ್ಯಗೊಳಿಸುವ ಸಾಧ್ಯತೆಯಿದೆ. ಮ್ಯಾನ್ಮಾರ್‌ನ ರಖಾಯಿನ್ ರಾಜ್ಯಕ್ಕೆ ಯಾವುದೇ ಭಾರತೀಯರು ಪ್ರಯಾಣಿಸಕೂಡದು. ಅಲ್ಲಿ ಇರುವವರು ಭಾರತಕ್ಕೆ ಮರಳಬೇಕು ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯವು ಮಂಗಳವಾರ ಸೂಚನೆ ನೀಡಿದೆ.

ಬುಡಕಟ್ಟು ಬಂಡುಕೋರರು ಗಡಿಯ ಮೂಲಕ ಭಾರತದೊಳಕ್ಕೆ ಪ್ರವೇಶಿಸುತ್ತಾರೆ. ಜೊತೆಗೆ ಇದೇ ಮಾರ್ಗದಲ್ಲಿ ಮಾದಕ ವಸ್ತುಗಳನ್ನು ಕಳ್ಳಸಾಗಣೆ ಮಾಡಲಾಗುತ್ತಿದೆ ಎಂದು ಆರೋಪಿಸುವ ಇಂಫಾಲ್ ಕಣಿವೆಯ ಮೈತೇಯಿ ಸಮುದಾಯವು, 'ಭಾರತ–ಮ್ಯಾನ್ಮಾರ್ ಗಡಿಯಾದ್ಯಂತ ತಡೆ ಬೇಲಿ ನಿರ್ಮಿಸಬೇಕು' ಎಂದು ಹಿಂದಿನಿಂದಲೂ ಒತ್ತಾಯಿಸುತ್ತಾ ಬಂದಿದೆ.

ಹಣಕಾಸು: ಕೇರಳ ಸಿ.ಎಂ ಹೋರಾಟಕ್ಕೆ ಬೆಂಬಲ



ಎಂ.ಕೆ.ಸ್ಟಾಲಿನ್

ಚೆನ್ನೈ (ಪಿಟಿಐ): ಹಣಕಾಸು ವಿಷಯದಲ್ಲಿ ರಾಜ್ಯಗಳು ಹೊಂದಿರುವ ಅಧಿಕಾರವನ್ನು ಸಂರಕ್ಷಣೆ ಮಾಡುವ ವಿಚಾರವಾಗಿ ಧ್ವನಿ ಎತ್ತಿರುವ ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರಿಗೆ ತಮಿಳುನಾಡು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಮಂಗಳವಾರ ಬೆಂಬಲ ವ್ಯಕ್ತಪಡಿಸಿದ್ದಾರೆ.

'ಸಾಲ ಪಡೆಯುವ ವಿಚಾರವಾಗಿ ರಾಜ್ಯಗಳು ಅಧಿಕಾರ ಹೊಂದಿವೆ. ಆದರೆ, ರಾಜ್ಯಗಳ ಅಧಿಕಾರದ ಮೇಲೆ ನಿರ್ಬಂಧ ಹೇರುವ ಮೂಲಕ ಸಂವಿಧಾನದ 293ನೇ ವಿಧಿ ಅನ್ವಯ ತನಗಿರುವ ಅಧಿಕಾರವನ್ನು ಕೇಂದ್ರ ದುರುಪಯೋಗ ಪಡಿಸಿಕೊಳ್ಳುತ್ತಿದೆ' ಎಂದು ಸ್ಟಾಲಿನ್ ಆರೋಪಿಸಿದ್ದಾರೆ.

'ರಾಜ್ಯಗಳ ವಿತ್ತೀಯ ಹೊಣೆಗಾರಿಕೆ ಮತ್ತು ಬಜೆಟ್ ನಿರ್ವಹಣೆ ಕಾಯ್ದೆ' ಪ್ರಕಾರ, ಸಾಲ ಪಡೆಯುವುದಕ್ಕೂ ಮುನ್ನ ರಾಜ್ಯಗಳು ಕೇಂದ್ರದ ಅನುಮತಿ ಪಡೆಯಬೇಕಿತ್ತು. ಈಗ, ಕಾಯ್ದೆಯಲ್ಲಿನ ಈ ಅವಕಾಶಗಳನ್ನು ಬದಲಾಯಿಸಲಾಗಿದ್ದು, ಈ ಅವಕಾಶವನ್ನು ರಾಜ್ಯಗಳಅಧಿಕಾರದ ಮೇಲೆ ನಿರ್ಬಂಧ ಹೇರುವ ಸಾಧನವನ್ನಾಗಿ ಮಾಡಲಾಗಿದೆ' ಎಂದು ಸ್ಟಾಲಿನ್ ಅವರು ಪಿಣರಾಯಿ ವಿಜಯನ್ ಅವರಿಗೆ ಬರೆದ ಪತ್ರದಲ್ಲಿ ಹೇಳಿದ್ದಾರೆ.

'ಕೇಂದ್ರದ ನಡೆಯಿಂದ ವಿತ್ತೀಯ ಒಕ್ಕೂಟ ವ್ಯವಸ್ಥೆ ತತ್ವಕ್ಕೆ ಅಪಾಯ ಎದುರಾದಂತಾಗಿದೆ. 'ರಾಜ್ಯಗಳ ಪಾಲಿನ ಹಣವನ್ನು ಕೊಡದೇ ತಾರತಮ್ಯ ನೀತಿ ಅನುಸರಿಸುತ್ತಿರುವ ಕೇಂದ್ರದ ನಡೆಯನ್ನು ಸುಪ್ರೀಂ ಕೋರ್ಟ್ ಗಮನಕ್ಕೆ ತರುವ ನಿಮ್ಮ ಪ್ರಯತ್ನ ಶ್ಲಾಘನೀಯ' ಎಂದೂ ಸ್ಟಾಲಿನ್ ಅವರು ಹೇಳಿದ್ದಾರೆ.

ದೇಶಕ್ಕಾಗಿ ದುಡಿಯುವ ಎತ್ತು ಕರ್ನಾಟಕ– ಸಚಿವ

ಪ್ರಜಾವಾಣಿ ವಾರ್ತೆ

ಶ್ರೀರಂಗಪಟ್ಟಣ (ಮಂಡ್ಯ ಜಿಲ್ಲೆ): 'ಇಡೀ ದೇಶಕ್ಕಾಗಿ ದುಡಿಯುವ ಎತ್ತು ಎಂದರೆ ಅದು ಕರ್ನಾಟಕ, ಕೇಂದ್ರ ಸರ್ಕಾರ ನಮ್ಮ ರಾಜ್ಯವನ್ನು ತುಳಿಯುತ್ತಿದ್ದರೂ ಕಾಂಗ್ರೆಸ್ ಸರ್ಕಾರವು ಜನರ ಸಂಕಷ್ಟಗಳಿಗೆ ಸ್ಪಂದಿಸುತ್ತಿದೆ' ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಪ್ರತಿಪಾದಿಸಿದರು.

ಪಟ್ಟಣದಲ್ಲಿ ಮಂಗಳವಾರ ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆ ಫಲಾನುಭವಿಗಳ ಸಮಾವೇಶದಲ್ಲಿ ಅವರು ಮಾತನಾಡಿ, 'ಪ್ರಪಂಚದಲ್ಲಿಲ್ಲೂ ಸಾಧ್ಯವಿಲ್ಲದ ಗ್ಯಾರಂಟಿ ಯೋಜನೆಗಳನ್ನು ರಾಜ್ಯ ಸರ್ಕಾರ ಪರಿಣಾಮಕಾರಿಯಾಗಿ ಜಾರಿಗೊಳಿಸಿದೆ. ಒಂದು ರೂಪಾಯಿ ಭ್ರಷ್ಟಾಚಾರವಿಲ್ಲದೇ, ಮಧ್ಯವರ್ತಿಗಳಿಲ್ಲದೇ ಫಲಾನುಭವಿಗಳ ಖಾತೆಗೆ ಹಣ ಜಮೆಯಾಗುತ್ತಿದೆ. ಬರ ಪರಿಸ್ಥಿತಿಯಲ್ಲಿ ಕೇಂದ್ರ ಸರ್ಕಾರ ಪರಿಹಾರ ನೀಡದಿದ್ದರೂ 31 ಲಕ್ಷ ರೈತರ ಬ್ಯಾಂಕ್ ಖಾತೆಗೆ ತಲಾ ₹ 2 ಸಾವಿರ ಹಾಕಿದ್ದೇವೆ' ಎಂದು ಹೇಳಿದರು

'ಪಿಎಂ-ಕಿಸಾನ್ ಮೊತ್ತ ಏರಿಕೆ ಪ್ರಸ್ತಾವವಿಲ್ಲ'

ನವದೆಹಲಿ (ಪಿಟಿಐ): ಪಿಎಂ ಕಿಸಾನ್ ಯೋಜನೆಯಡಿಯಲ್ಲಿ ರೈತರಿಗೆ ಪ್ರಸ್ತುತ ವಾರ್ಷಿಕ ₹6000 ಆರ್ಥಿಕ ನೆರವನ್ನು ನೀಡುತ್ತಿದ್ದು, ಅದನ್ನು ಹೆಚ್ಚಿಸುವ ಯಾವುದೇ ಪ್ರಸ್ತಾವ ಸರ್ಕಾರದ ಮುಂದೆ ಇಲ್ಲ ಎಂದು ಕೇಂದ್ರ ಕೃಷಿ ಸಚಿವ ಅರ್ಜುನ್ ಮುಂಡಾ ಲೋಕಸಭೆಯಲ್ಲಿ ತಿಳಿಸಿದ್ದಾರೆ.

ಪಿಎಂ ಕಿಸಾನ್ ಯೋಜನೆಯ ಆರ್ಥಿಕ ನೆರವನ್ನು ವಾರ್ಷಿಕ ₹6000ದಿಂದ ₹8000–12,000ಕ್ಕೆ ಹೆಚ್ಚಿಸುವ ಪ್ರಸ್ತಾವ ಇದೆಯೇ ಎನ್ನುವ ಪ್ರಶ್ನೆಗೆ ಲಿಖಿತ ಉತ್ತರ ನೀಡಿದ ಅರ್ಜುನ್ ಮುಂಡಾ, 'ಅಂತಹ ಯಾವುದೇ ಪ್ರಸ್ತಾವ ಪರಿಗಣನೆಯಲ್ಲಿ ಇಲ್ಲ. ಮಹಿಳಾ ರೈತರಿಗೆ ಕೂಡ ಆರ್ಥಿಕ ನೆರವನ್ನು ಹೆಚ್ಚಿಸುವ ಚಿಂತನೆ ಇಲ್ಲ' ಎಂದು ತಿಳಿಸಿದ್ದಾರೆ.

2019ರಲ್ಲಿ ಆರಂಭವಾದ ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ನಿಧಿ (ಪಿಎಂ ಕಿಸಾನ್) ಯೋಜನೆಯಡಿ ಅರ್ಹ ರೈತರಿಗೆ ಮೂರು ಸಮಾನ ಕಂತುಗಳಲ್ಲಿ ವಾರ್ಷಿಕವಾಗಿ ₹6000 ಅನ್ನು ಫಲಾನುಭವಿಗಳ ಬ್ಯಾಂಕ್ ಖಾತೆಗಳಿಗೆ ನೇರ ವರ್ಗಾವಣೆಯ ಮೂಲಕ ತಲುಪಿಸಲಾಗುತ್ತದೆ.

ಯೋಜನೆಯ ಪ್ರಗತಿಯ ಬಗ್ಗೆ ವಿವರಿಸಿದ ಸಚಿವರು, 'ಸರ್ಕಾರವು ಇದುವರೆಗೆ 15 ಕಂತುಗಳಲ್ಲಿ 11 ಕೋಟಿ ರೈತರಿಗೆ ₹2.81 ಲಕ್ಷ ಕೋಟಿಯನ್ನು ವಿತರಿಸಿದೆ. ಇದು ಜಗತ್ತಿನ ಅತಿ ದೊಡ್ಡ ನೇರ ವರ್ಗಾವಣೆಯ ಯೋಜನೆಯಾಗಿದೆ' ಎಂದು ತಿಳಿಸಿದರು.

ಡಿಎಚ್‌ಒಗೆ ವೇದಿಕೆಯಲ್ಲೇ ಸಚಿವ ದಿನೇಶ್ ಗುಂಡೂರಾವ್ ತರಾಟೆ

ಸಿಎಂ ಜಿಲ್ಲೆಯಲ್ಲಿ ನಿರಾಶಾದಾಯಕ 'ಕಾಯಕಲ್ಪ'

ಪ್ರಜಾವಾಣಿ ವಾರ್ತೆ

ಮೈಸೂರು: 'ಜಿಲ್ಲೆಯಲ್ಲಿ ಶೇ 10ರಷ್ಟು ಆರೋಗ್ಯ ಕೇಂದ್ರಗಳು ಮಾತ್ರವೇ 'ಕಾಯಕಲ್ಪ' ಗುಣಮಟ್ಟದಲ್ಲಿವೆ. ಮುಖ್ಯಮಂತ್ರಿ ಅವರ ತವರು ಜಿಲ್ಲೆಯಲ್ಲಿಯೇ ಹೀಗಾಗಿರುವುದು ವಿಷಾದನೀಯ' ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ಮಂಗಳವಾರ ಇಲ್ಲಿ ರಾಜ್ಯಮಟ್ಟದ 'ಕಾಯಕಲ್ಪ' ಪ್ರಶಸ್ತಿಗಳನ್ನು ವಿತರಿಸಿ ಮಾತನಾಡುತ್ತಿದ್ದ ಅವರು, 'ಮೈಸೂರು ಜಿಲ್ಲೆಯಲ್ಲಿ ಅಧಿಕಾರಿಗಳು ಕನಿಷ್ಠ ಜವಾಬ್ದಾರಿ ನಿರ್ವಹಿಸಿಲ್ಲ ಎಂಬುದನ್ನು ಈ ಅಂಕಿ– ಅಂಶ ಎತ್ತಿ ಹಿಡಿದಿದೆ' ಎಂದು ಸಚಿವರು ಹೇಳಿದರು.

ಮುಖ್ಯಮಂತ್ರಿಯವರ ತವರು ಜಿಲ್ಲೆಯಲ್ಲಿ ಏಕೆ ಈ ಪರಿಸ್ಥಿತಿ' ಎಂದು ಅವರು, ಜಿಲ್ಲಾ ಆರೋಗ್ಯಾಧಿಕಾರಿ ಡಾ.ಕುಮಾರಸ್ವಾಮಿ ಅವರನ್ನು ವೇದಿಕೆಯಲ್ಲೇ ತರಾಟೆಗೆ ತೆಗೆದುಕೊಂಡರು.

ವಿಭಾಗ	ಪ್ರಥಮ	ಪ್ರಶಸ್ತಿ ಮೊತ್ತ	ದ್ವಿತೀಯ	ಪ್ರಶಸ್ತಿ ಮೊತ್ತ
2021–22ರ ಸಾಲಿನ 'ಕಾಯಕಲ್ಪ' ಪ್ರಶಸ್ತಿ ಪುರಸ್ಕೃತ ಸಂಸ್ಥೆಗಳು				
ಜಿಲ್ಲಾ ಆಸ್ಪತ್ರೆ	ಶ್ರೀ ಚಾಮರಾಜೇಂದ್ರ ಬೋಧನಾ ಆಸ್ಪತ್ರೆ ಹಾಸನ	₹50 ಲಕ್ಷ	ವಿಕ್ಟೋರಿಯಾ ಆಸ್ಪತ್ರೆ, ಬೆಂಗಳೂರು ನಗರ	₹20 ಲಕ್ಷ
ತಾಲ್ಲೂಕು ಆಸ್ಪತ್ರೆ	ಗಂಗಾವತಿ ಆಸ್ಪತ್ರೆ, ಕೊಪ್ಪಳ	₹15 ಲಕ್ಷ	ಬಸವನ ಬಾಗೇವಾಡಿ ಆಸ್ಪತ್ರೆ, ವಿಜಯಪುರ	₹10 ಲಕ್ಷ
ನಗರ ಸಮುದಾಯ ಆರೋಗ್ಯ ಕೇಂದ್ರ	ಉಳ್ಳಾಲ, ದಕ್ಷಿಣ ಕನ್ನಡ	₹15 ಲಕ್ಷ		
2022–23ರ ಸಾಲಿನ 'ಕಾಯಕಲ್ಪ' ಪ್ರಶಸ್ತಿ ಪುರಸ್ಕೃತ ಸಂಸ್ಥೆಗಳು				
ಜಿಲ್ಲಾ ಆಸ್ಪತ್ರೆ	ಟ್ರಾಮಾ ಮತ್ತು ಎಮರ್ಜೆನ್ಸಿ ಕೇರ್ ಸೆಂಟರ್, ಬೆಂಗಳೂರು	₹50 ಲಕ್ಷ	ಲೇಡಿ ಗೋಶನ್ ಆಸ್ಪತ್ರೆ, ದಕ್ಷಿಣ ಕನ್ನಡ	₹20 ಲಕ್ಷ
ತಾಲ್ಲೂಕು ಆಸ್ಪತ್ರೆ	ಬಸವನ ಬಾಗೇವಾಡಿ, ವಿಜಯಪುರ	₹15 ಲಕ್ಷ	ಹೊಸದುರ್ಗ, ಚಿತ್ರದುರ್ಗ	₹10 ಲಕ್ಷ
ನಗರ ಸಮುದಾಯ ಆರೋಗ್ಯ ಕೇಂದ್ರ	ಉಳ್ಳಾಲ, ದಕ್ಷಿಣ ಕನ್ನಡ	₹15 ಲಕ್ಷ		
ಪರಿಸರ ಸ್ನೇಹಿ ಕೇಂದ್ರ	ತುಮಕೂರು ಜಿಲ್ಲಾ ಆಸ್ಪತ್ರೆ	₹10 ಲಕ್ಷ	ಹಾಸನ ಜಿಲ್ಲೆ ಪಡುವಲಹಿಪ್ಪೆ ಸಮುದಾಯ ಆರೋಗ್ಯ ಕೇಂದ್ರ	₹5 ಲಕ್ಷ

'ಯಾವುದೇ ಕಾರಣ ನೀಡದೆ ಮುಂದಿನ ಸಾಲಿನಲ್ಲಿ ಜಿಲ್ಲೆಯ ಶೇ 70ರಷ್ಟು ಕೇಂದ್ರಗಳು 'ಕಾಯಕಲ್ಪ' ಮಾನ್ಯತೆ ಪಡೆಯುವಲ್ಲಿ ಕ್ರಮ ವಹಿಸಬೇಕು' ಎಂದು ಸೂಚಿಸಿದರು.

ಮೂಲಸೌಕರ್ಯ ಕಲ್ಪಿಸಲು ಕ್ರಮ: 'ಜಿಲ್ಲಾ ಹಾಗೂ ತಾಲ್ಲೂಕು ಆಸ್ಪತ್ರೆಗಳಿಗೆ ₹ 500 ಕೋಟಿ ವೆಚ್ಚದಲ್ಲಿ ಮೂಲ ಸೌಕರ್ಯ ಒದಗಿಸುವ ಪ್ರಯತ್ನ ಆರಂಭವಾಗಿದ್ದು, ಕೆಲವೆಡೆ ಟೆಂಡರ್ ಕರೆಯಲಾಗಿದೆ' ಎಂದು ತಿಳಿಸಿದರು.

ರ್‍ಯಾಗಿಂಗ್: ಐವರು ವಿದ್ಯಾರ್ಥಿಗಳು ಮನೆಗೆ

ಗಂಗಾವತಿ: ತಾಲ್ಲೂಕಿನ ಹೇಮಗುಡ್ಡ ಗ್ರಾಮದ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ 6, 7, 8, 9ನೇ ತರಗತಿ ವಿದ್ಯಾರ್ಥಿಗಳಿಗೆ ರ್‍ಯಾಗಿಂಗ್ ಮಾಡಿದ ಹತ್ತನೇ ತರಗತಿಯ ಐವರು ವಿದ್ಯಾರ್ಥಿಗಳನ್ನು ಮನೆಗೆ ಕಳುಹಿಸಲು ವಸತಿ ನಿಲಯದ ಪ್ರಾಂಶುಪಾಲರು ಮಂಗಳವಾರ ತೀರ್ಮಾನಿಸಿದ್ದಾರೆ.

ಹೇಮಗುಡ್ಡ ಗ್ರಾಮದ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ 1-10ನೇ ತರಗತಿವರೆಗೆ 246 ವಿದ್ಯಾರ್ಥಿಗಳಿದ್ದಾರೆ. ಹತ್ತನೇ ತರಗತಿ ವಿದ್ಯಾರ್ಥಿಗಳು ತಮ್ಮ ಕಿರಿಯ ವಿದ್ಯಾರ್ಥಿಗಳಿಗೆ ಬಟ್ಟೆ ಒಗೆಸುವುದು, ನಿಲಯ ಕೊಠಡಿ ಸ್ವಚ್ಛತೆ ಮಾಡಿಸುವುದು, ತರಗತಿಯಲ್ಲಿ ಶಿಕ್ಷಕರು ನೀಡಿದ ಹೋಂ ವರ್ಕ್ ಮಾಡಲು ಹೇಳುತ್ತಿದ್ದರು ಎನ್ನಲಾಗಿದೆ. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಅಧಿಕಾರಿಗಳು ಸಹ ವಸತಿ ನಿಲಯಕ್ಕೆ ಭೇಟಿ ನೀಡಿ ಪರಿಶೀಲಿಸಿದಾಗ ರ್‍ಯಾಗಿಂಗ್ ನಡೆದಿರುವುದು ಖಚಿತವಾಗಿದೆ.

ದೆಹಲಿಯಲ್ಲಿ ಎಲ್‌ಇಟಿ ಸದಸ್ಯನ ಬಂಧನ

ನವದೆಹಲಿ (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ಕುಪ್ವಾರದಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಲಷ್ಕರ್–ಎ–ತಯಬಾ (ಎಲ್‌ಇಟಿ) ಸಂಘಟನೆಯ ಸದಸ್ಯನನ್ನು ದೆಹಲಿ ಪೊಲೀಸರು ಬಂಧಿಸಿದ್ದಾರೆ.


ಆರೋಪಿಯನ್ನು ಕುಪ್ವಾರ ಜಿಲ್ಲೆಯ ನಿವಾಸಿ ರಿಯಾಜ್ ಅಹ್ಮದ್ ರಾಥರ್ ಎಂದು ಗುರುತಿಸಲಾಗಿದೆ. ನಿವೃತ್ತ ಸೇನಾ ಸಿಬ್ಬಂದಿ ಆಗಿರುವ ಆರೋಪಿಯನ್ನು ಪೊಲೀಸರು ಭಾನುವಾರ ದೆಹಲಿ ರೈಲು ನಿಲ್ದಾಣದಲ್ಲಿ ಬಂಧಿಸಿದರು. ಆತನ ಬಳಿಯಿದ್ದ ಒಂದು ಮೊಬೈಲ್ ಮತ್ತು ಒಂದು ಸಿಮ್ ಅನ್ನು ವಶಕ್ಕೆ ಪಡೆಯಲಾಗಿದೆ ಎಂದು ಅಧಿಕಾರಿಗಳು ಮಂಗಳವಾರ ತಿಳಿಸಿದ್ದಾರೆ.

ಆರೋಪಿಯು ಗಡಿ ನಿಯಂತ್ರಣ ರೇಖೆಯಿಂದ (ಎಲ್‌ಒಸಿ) ಶಸ್ತ್ರಾಸ್ತ್ರ ಮತ್ತು ಮದ್ದುಗುಂಡುಗಳನ್ನು ಪಡೆಯುವಲ್ಲಿ ಪ್ರಮುಖ ಪಾತ್ರವಹಿಸುತ್ತಿದ್ದ ಎಂದು ಅವರು ಮಾಹಿತಿ ನೀಡಿದ್ದಾರೆ.

ಭಯೋತ್ಪಾದಕ ಕೃತ್ಯಗಳನ್ನು ನಿರ್ವಹಿಸುವವರಿಂದ ಎಲ್‌ಒಸಿಯಾದ್ಯಂತ ಶಸ್ತ್ರಾಸ್ತ್ರ ಮತ್ತು ಮದ್ದುಗುಂಡುಗಳನ್ನು ಪಡೆಯುವಲ್ಲಿ ಆರೋಪಿಯು ಖುರ್ಷಿದ್ ಅಹ್ಮದ್ ರಾಥರ್ ಮತ್ತು ಗುಲಾಮ್ ಸರ್ವರ್ ರಾಥರ್ ಎಂಬುವವರ ಜತೆ ಸಂಚು ರೂಪಿಸುತ್ತಿದ್ದ. ಖುರ್ಷಿದ್ ಮತ್ತು ಗುಲಾಮ್ ಅವರನ್ನು ಜಮ್ಮು ಮತ್ತು ಕಾಶ್ಮೀರ ಪೊಲೀಸರು ಈಗಾಗಲೇ ಬಂಧಿಸಿದ್ದಾರೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ವಿವರಿಸಿದ್ದಾರೆ.

ಜಮ್ಮು ಮತ್ತು ಕಾಶ್ಮೀರದಲ್ಲಿ ಇತ್ತೀಚೆಗೆ ಭಯೋತ್ಪಾದಕರ ತಾಣದ ಮೇಲೆ ದಾಳಿ ನಡೆಸಿದ್ದ ತನಿಖಾ ಸಂಸ್ಥೆಗಳು ಐವರನ್ನು ಬಂಧಿಸಿತ್ತು.


ತಂತ್ರಜ್ಞಾನ



ರೋಬಾಟುಗಳು ಮಾತನಾಡಿದಾಗ!

ಅಮೃತೇಶ್ವರಿ ಬಿ.

ರೋಬಾಟುಗಳು ಆಧುನಿಕ ಜೀವನಶೈಲಿಯ ಅವಿಭಾಜ್ಯ ಅಂಗವಾಗಿವೆ. ಈ ಹಿಂದೆ ದೊಡ್ಡ ದೊಡ್ಡ ಕಾರ್ಖಾನೆಗಳಲ್ಲಿ ಯಾವುದೇ ಅಪಾಯವಿಲ್ಲದೆಯೇ ಸುಲಭವಾಗಿ ಯಾಂತ್ರಿಕ ಕೆಲಸಗಳನ್ನು ನಿರ್ವಹಿಸಲು ಈ ರೊಬಾಟುಗಳನ್ನು ನಿಯೋಜಿಸಿಕೊಳ್ಳಲಾಗುತ್ತಿತ್ತು. ಉದಾಹರಣೆಗೆ, ಭಾರೀ ವಾಹನಗಳ ತಯಾರಿಕಾ ಕಂಪೆನಿಗಳು. ಈಗ ಮುಂದುವರೆದು ಆಸ್ಪತ್ರೆ, ಶಿಕ್ಷಣ, ಲಾಜಿಸ್ಟಿಕ್ಸ್, ದೂರಸಂಪರ್ಕ, ಇತ್ಯಾದಿ ಕ್ಷೇತ್ರಗಳಲ್ಲಿ ರೋಬಾಟುಗಳ ಪ್ರವೇಶವಾಗಿರುವುದು ನಮ್ಮೆಲ್ಲರಿಗೂ ತಿಳಿದಿದೆ. ಇನ್ನೂ ಕೆಲವೆಡೆ ಸಿರಿವಂತರಂತೂ ರೋಬಾಟುಗಳನ್ನೇ ತಮ್ಮ ಮನೆಯ ಸದಸ್ಯರೆಂದು ಭಾವಿಸಿಕೊಂಡು ಜೀವಿಸುವುದುಂಟು. ಅರ್ಥಾತ್, ರೋಬಾಟುಗಳು ಅಷ್ಟು ಅಚ್ಚುಕಟ್ಟಾಗಿ ನಮ್ಮೆಲ್ಲಾ ಅವಶ್ಯಕತೆಗಳನ್ನು ಪೂರೈಸಬಲ್ಲವು ಎನ್ನುವುದು ಸೋಜಿಗದ ಸಂಗತಿ.



ರೋಬಾಟುಗಳಲ್ಲಿ ಅವಶ್ಯಕತೆಗಳಿಗೆ ತಕ್ಕಂತೆ ನಾನಾ ವಿಧಗಳಿವೆ. ಆಟೋಮೇಟೆಡ್ ಮೊಬೈಲ್ ರೋಬೋಟ್, ಆರ್ಟಿಕ್ಯುಲೇಟೆಡ್ ರೋಬೋಟ್, ಹ್ಯೂಮನಾಯ್ಡ್ಸ್, ಕೋಬೋಟ್ಸ್, ಇತ್ಯಾದಿ. ಇವುಗಳಲ್ಲಿ ಕೆಲವು ಕೇವಲ ನಿರ್ದೇಶಿಸಿದ ಕೆಲಸಗಳನ್ನು ಯಾವುದೇ ರೀತಿಯ ತೊಡಕಿಲ್ಲದೇ ಮಾಡುವಂಥವು. ಇವು ಮಾತನಾಡುವುದಿಲ್ಲ, ಭಾವನೆಗಳಂತೂ ಇಲ್ಲವೇ ಇಲ್ಲ. ಇತ್ತೀಚೆಗೆ ಸುದ್ದಿಯಲ್ಲಿರುವ ವಿಷಯವೇನೆಂದರೆ, 'ರೋಬಾಟುಗಳೂ ನಮ್ಮಂತೆಯೇ ಭಾವಿಸಬಲ್ಲವೇ' – ಎನ್ನುವುದು. ಇದಕ್ಕೆ ಸಂಬಂಧಿಸಿದಂತೆ ಅದರ ಅನುಕೂಲ, ಅನನುಕೂಲಗಳು ಮತ್ತೊಂದು ದೊಡ್ಡ ಚರ್ಚೆಯ ವಿಷಯ. ಇದು ರೋಬೋಟಿಕ್ಸ್‌ನಲ್ಲಿ ಆಗುತ್ತಿರುವ ಕ್ಷಿಪ್ರವೇಗದ ಬೆಳವಣಿಗೆಯ ಸೂಚನೆಯೂ ಹೌದು. ಪ್ರಸ್ತುತ, ರೋಬಾಟುಗಳಲ್ಲಿ 'ಸೋಷಿಯಲ್ ರೋಬೋಟ್', ಎಂದರೆ 'ಸಾಮಾಜಿಕ ರೋಬಾಟು'ಗಳು ಟ್ರೆಂಡ್‌ನಲ್ಲಿವೆ. ಇವು ನಮ್ಮೊಡನೆ ಮಾತನಾಡಬಲ್ಲವಂತೆ. ಅದುವೂ ನಮ್ಮದೇ ಆದ ಉಪಭಾಷೆಯಲ್ಲಿ! ಹೀಗೆಂದು ನಿನ್ನೆ 'ಫ್ರಂಟಿಯರ್ಸ್ ಇನ್ ರೋಬೋಟಿಕ್ಸ್ ಅ್ಯಂಡ್ ಎಐ' ಪತ್ರಿಕೆಯಲ್ಲಿ, ಜರ್ಮನಿಯ ಪೋಟ್ಸ್‌ಡ್ಯಾಮ್ ವಿಶ್ವವಿದ್ಯಾನಿಲಯದ ಕ್ಯಾಥರೀನಾ ಕುನೆ ಅವರು ವರದಿ ಮಾಡಿದ್ದಾರೆ.

ಈ ಸಾಮಾಜಿಕ ರೋಬಾಟುಗಳು ನಮಗೆ ಕಲಿಯಲು, ಬೋಧಿಸಲು, ಶುಶ್ರೂಷೆ ಮಾಡಲು – ಹೀಗೆ ಸಾಕಷ್ಟು ಕೆಲಸಗಳಲ್ಲಿ ನೆರವಾಗಬಲ್ಲವು. ಅವು ವಿನ್ಯಾಸವಾಗಿರುವುದೇ ನಮಗೆ ಸಹಾಯವಾಗಲೆಂದು, ನಮ್ಮ ಜೀವನವನ್ನು ಆರಾಮವಾಗಿಸಲು; ಇದರಲ್ಲಿ ಅವು ನಮ್ಮೊಡನೆ ಹೇಗೆ ಸಂವಹಿಸುತ್ತವೆ ಎನ್ನುವುದೂ ಸೇರಿದೆಯೆನ್ನಿ! ನಮ್ಮೆಲ್ಲರಿಗೂ ಅವು ನಮ್ಮೊಂದಿಗೆ ಹೇಗೆ ಮಾತನಾಡಬೇಕು ಎಂದಾಗ ವಿಭಿನ್ನ ಅಭಿಪ್ರಾಯಗಳಿವೆ. ಕೆಲವರಿಗೆ ಅವು ನಮ್ಮದೇ ಉಪಭಾಷೆ ಮಾತನಾಡಿದರೆ ಇಷ್ಟವಾಗುತ್ತದೆ. ಉದಾಹರಣೆಗೆ, ಮೈಸೂರು-ಬೆಂಗಳೂರಿನ ಕನ್ನಡಿಗರಿಗೆ ಗ್ರಾಂಥಿಕ ಭಾಷೆಯಾದ ಮೈಸೂರು ಕನ್ನಡ ಇಷ್ಟವಾದರೆ, ಮಂಗಳೂರಿಗರಿಗೆ ಅವರ ಕನ್ನಡವೇ ಚಂದವೆನ್ನಿಸುತ್ತದೆ. ಆಯಾ ಭಾಷಿಕರಿಗೆ ಅವರವರ ಭಾಷೆಯತ್ತ ಅಭಿಮಾನವಿರುವುದು ಸಹಜ. ಸಮೀಕ್ಷೆಯ ಪ್ರಕಾರ, ಕೆಲವರು ರೋಬಾಟುಗಳು ಆಪ್ತವೆನ್ನಿಸುವ ತಮ್ಮದೇ ರೀತಿಯ ಉಚ್ಚಾರಣೆಯಲ್ಲಿ ಉಪಭಾಷೆಗಳಲ್ಲಿ ಮಾತನಾಡಬೇಕು ಎಂದು ಬಯಸಿದರೆ, ಇನ್ನೂ ಕೆಲವರು 'ಸ್ಟ್ಯಾಂಡರ್ಡ್' ಎನ್ನಿಸುವ ಭಾಷೆಗಳಲ್ಲಿ ಮಾತನಾಡುವುದನ್ನು ಬಯಸುತ್ತಾರಂತೆ.

ಈ ಸಾಮಾಜಿಕ ರೋಬಾಟುಗಳು, ಜನರ ಆರಾಮವನ್ನೇ ಆಧರಿಸಿವೆಯಾದರೂ ಇವು ನಮಗೆ ವಿಶ್ವಾಸಾರ್ಹ ಮತ್ತು ಯೋಗ್ಯವೆನಿಸಿದಾಗಲೇ ನಾವು ಅವನ್ನು ಹೆಚ್ಚೆಚ್ಚು ಬಳಸಿಕೊಳ್ಳಲು ಸಾಧ್ಯ. ಅವುಗಳ ಭಾಷೆಯ ಉಚ್ಚಾರಣೆ ಮನುಷ್ಯನಂತೆಯೇ ಇದ್ದಾಗ ನಮಗೆ ಅವುಗಳ ಸಾಮರ್ಥ್ಯ ಅರ್ಥವಾಗುತ್ತದೆ. ಅರ್ಥಾತ್, ಅವುಗಳು 'ಸ್ಟ್ಯಾಂಡರ್ಡ್' ಎನ್ನಿಸುವ ಗ್ರಾಂಥಿಕ ಭಾಷೆಯನ್ನಾಡಿದಾಗ ನಮಗೆ ಅವು ಬಹಳ ಬುದ್ಧಿಶಕ್ತಿಯುಳ್ಳವು ಎಂದೆನಿಸಿದರೆ, ಉಪಭಾಷೆಯನ್ನಾಡಿದಾಗ ನಮಗವು ಮತ್ತಷ್ಟು ಅಪ್ತವೆನಿಸುತ್ತವೆ. ನಮ್ಮ ಮನೆಯ ಸದಸ್ಯರೊಂದಿಗೆ ಹರಟೆ ಹೊಡೆಯುವಂತೆ ಸಾಮೀಪ್ಯದ ಭಾವನಾತ್ಮಕ ಅನುಭವ ಬೇಕೆಂದಾಗ ಉಪಭಾಷೆಯನ್ನೂ, ಕಲಿಕೆ–ಬೋಧನೆಯ ಕೆಲಸಗಳಿಗೆ ಸಂಬಂಧಿಸಿದ ಸೇವೆಗಳಿಗಾಗಿ ಸ್ಟ್ಯಾಂಡರ್ಡ್ ಭಾಷೆಯನ್ನೂ ಬಳಸಿಕೊಳ್ಳಬಹುದು. ಎರಡೂ ಭಾಷೆಗಳನ್ನು ಮಾತನಾಡಬಲ್ಲವಾದರೆ ನಮಗೆ ಬೇಕೆಂದ ಭಾಷೆಯಲ್ಲಿ ನಮ್ಮ ಕಾರ್ಯ ಸಾಧಿಸಿಕೊಳ್ಳಬಹುದಲ್ಲವೆ?

ರೋಬಾಟುಗಳು ಉಪಭಾಷೆಯಲ್ಲಿ ಸಂವಹಿಸುತ್ತವೆಯಾದರೂ ಅದು ಜನರಿಗೆ ಎಷ್ಟು ಒಪ್ಪಿತವಾಗಿವೆ ಎಂದು ಪರೀಕ್ಷಿಸಬೇಕಲ್ಲವೆ? ಇದಕ್ಕಾಗಿ ವಿಜ್ಞಾನಿಗಳು ಬರ್ಲಿನ್‌ನ 120 ಜನರನ್ನು ಆರಿಸಿಕೊಂಡು ಸಮೀಕ್ಷೆ ನಡೆಸಿದ್ದಾರೆ. ಇವರಿಗೆ ರೋಬಾಟುಗಳು ಸ್ಟ್ಯಾಂಡರ್ಡ್ ಜರ್ಮನ್ ಭಾಷೆ ಹಾಗೂ ಸ್ನೇಹಶೀಲವೆನ್ನಿಸುವ ಬರ್ಲಿನ್‌ನ ಉಪಭಾಷೆಗಳೆರಡನ್ನೂ ಮಾತನಾಡುವ ವಿಡಿಯೊಗಳನ್ನು ಪ್ರದರ್ಶಿಸಿದ್ದಾರೆ. ಹೆಚ್ಚಿನವರಿಗೆ, ಜರ್ಮನ್ನರಲ್ಲದೇ ಅಲ್ಲಿ ವಾಸಿಸುತ್ತಿದ್ದ ಇತರರಿಗೂ ಬರ್ಲಿನ್ ಉಪಭಾಷೆ ಸುಲಭವಾಗಿ ಅರ್ಥವಾಗಿತ್ತಂತೆ. ಭಾಗವಹಿಸಿದವರು ಎಷ್ಟು ಜನ ಸ್ಥಳೀಯರು ಹಾಗೂ ಇತರರಲ್ಲಿ ಯಾರ್ಯಾರು ಎಷ್ಟು ವರ್ಷಗಳಿಂದ ಬರ್ಲಿನ್ ಉಪಭಾಷೆಯನ್ನು ಮಾತನಾಡುತ್ತಿದ್ದಾರೆ, ಅವರಿಗೆ ಭಾಷೆಯ ಮೇಲಿದ್ದ ಹಿಡಿತವೆಲ್ಲವನ್ನೂ ಮೊದಲಿಗೆ ಸಮೀಕ್ಷೆ ಮಾಡಿ ನಂತರ, ರೋಬಾಟುಗಳ ಸಾಮರ್ಥ್ಯದ ಬಗೆಗಿನ ಅವರ ಅಭಿಪ್ರಾಯಗಳನ್ನು ಕ್ರೋಡೀಕರಿಸಿದ್ದಾರೆ.

ಸಾಮಾನ್ಯವಾಗಿಯೇ ಬಹುತೇಕರು ರೋಬಾಟುಗಳು ಸ್ಟ್ಯಾಂಡರ್ಡ್ ಜರ್ಮನ್ ಭಾಷೆ ಮಾಡನಾಡುವುದನ್ನೇ ಆರಿಸಿಕೊಂಡರಾದರೂ, ಬರ್ಲಿನ್ ಉಪಭಾಷೆ ಮಾತನಾಡುತ್ತಿದ್ದವರೆಲ್ಲರೂ ರೋಬಾಟುಗಳ ಉಪಭಾಷೆಯ ಕಡೆಗೇ ಒಲವು ತೋರಿದರಂತೆ. ಹಾಗಾಗಿ ನಮ್ಮ ಹಾಗೂ ರೋಬಾಟುಗಳ ನಡುವೆ ಹೆಚ್ಚಿನ ಸಾಮ್ಯತೆಯಿದ್ದಲ್ಲಿ ನಮಗೆ ಅವು ವಿಶ್ವಾಸಾರ್ಹವೆನಿಸುವುದು ಸಹಜ ಎಂದಾಯಿತು. ಭಾಗವಹಿಸಿದವರಲ್ಲಿ ಫೋನು ಹಾಗೂ ಟ್ಯಾಬ್ಲೆಟ್‌ಗಳನ್ನು ಬಳಸುತ್ತಿದ್ದವರೆಲ್ಲರೂ ಉಪಭಾಷೆಯಲ್ಲಿ ಮಾತನಾಡುವುದನ್ನು ಆರಿಸಿಕೊಂಡರೆ, ಲ್ಯಾಪ್‌ಟಾಪುಗಳ ಬಳಕೆದಾರರು ಸ್ಟ್ಯಾಂಡರ್ಡ್ ಜರ್ಮನ್ ಭಾಷೆಯನ್ನು ಇಷ್ಟಪಟ್ಟರಂತೆ. ವಿಜ್ಞಾನಿಗಳು ತೋರಿಸಿದ ವಿಡಿಯೊಗಳನ್ನು ಫೋನು ಹಾಗೂ ಟ್ಯಾಬ್ಲೆಟ್‌ಗಳಲ್ಲಿ ನೋಡುವಾಗ ಅವರ ಗಮನ ಬೇರೆಡೆಗೆ ಹೊರಳುವುದು ಸಾಮಾನ್ಯವಾದ್ದರಿಂದ ಈ ಅಭಿಪ್ರಾಯವಿರಬಹುದು ಎಂಬುದು ವಿಜ್ಞಾನಿಗಳ ಅಂದಾಜು.

ಕೇವಲ ಇಷ್ಟು ಮಾಹಿತಿಗಳಿಂದ ರೋಬಾಟುಗಳು ಉಪಭಾಷೆಯಲ್ಲಿ ಸಂವಹಿಸುವುದರ ಬಗ್ಗೆ ಜನರ ಪರ–ವಿರೋಧಗಳನ್ನು ತೀರ್ಮಾನಿಸಲಾಗದು. ಆದರೂ ಸ್ಟ್ಯಾಂಡರ್ಡ್ ಭಾಷೆಯನ್ನು ಬಳಸಿದಾಗ ರೋಬಾಟುಗಳ ಸಾಮರ್ಥ್ಯವೂ ದಕ್ಷವೆನಿಸುತ್ತದೆ; ವಿಷಯಗಳ ರಾಶಿಯನ್ನು ಕಡಿಮೆ ಮಾಡಿ ಅವುಗಳಲ್ಲಿ ನಿಖರತೆಯನ್ನು ಸಾಧಿಸಲು ಸಹಾಯವಾಗುತ್ತದೆ ಎನ್ನುತ್ತಾರೆ, ಕ್ಯಾಥರೀನಾ. ಸಂಭಾಷಣೆಯಲ್ಲಿ ರೋಬಾಟುಗಳ ಅರಿವಿನ ಮಟ್ಟ ಹಾಗೂ ಪ್ರಮಾಣವನ್ನು ಪರೀಕ್ಷಿಸುವ ಯೋಜನೆಗಳೂ ಇವೆಯಂತೆ.

ಸಾಮಾಜಿಕ ರೋಬಾಟುಗಳು ನಮಗೆ ಸಾಕಷ್ಟು ಕೆಲಸಗಳಲ್ಲಿ ನೆರವಾಗಬಲ್ಲವು

ಹೀಗಿದ್ದರೂ, ರೋಬಾಟುಗಳು ಉಪಭಾಷೆಯಲ್ಲಿ ಸಂವಹನ ನಡೆಸಿದಾಗ ಅದನ್ನು ಕೇಳಿಸಿಕೊಂಡವರು ಹೇಗೆ ಗ್ರಹಿಸಿಕೊಳ್ಳುತ್ತಾರೆ ಎಂಬುದು ಅವುಗಳ ವರ್ಚಸ್ಸನ್ನು ಅಳೆಯಲಿದೆ. ಸಂಭಾಷಣೆಯಲ್ಲಿ ಸಂದರ್ಭಗಳು ಬಹಳ ಪ್ರಧಾನವಾಗಿರುತ್ತವೆ. ಹಾಗಾಗಿ ನೈಜ ಸಂದರ್ಭಗಳಲ್ಲಿ ಮಾತನಾಡುವ ಸಾಮಾಜಿಕ ರೋಬಾಟುಗಳ ಬಳಕೆಯ ಬಗ್ಗೆ ಹೆಚ್ಚೆಚ್ಚು ಅಧ್ಯಯನದ ಅಗತ್ಯವಿದೆ ಎನ್ನುತ್ತಾರೆ, ಕ್ಯಾಥರೀನಾ ❖



ಅಂಗೈಯಲ್ಲಿ ಷೇರು ಮಾರುಕಟ್ಟೆ

ಅವಿನಾಶ್ ಬಿ.

ಸ್ಟಾಕ್ ಮಾರುಕಟ್ಟೆ ಅಥವಾ ಷೇರು ಮಾರುಕಟ್ಟೆಯಲ್ಲಿ ಹಣ ತೊಡಗಿಸುವುದೆಂದರೆ ಅತ್ಯಂತ ಅಪಾಯದ ಕೆಲಸ ಎಂಬ ಒಂದು ಕಾಲವಿತ್ತು. ಸ್ವಲ್ಪ ಎಚ್ಚರ ತಪ್ಪಿದರೂ ನಷ್ಟವಾಗಬಹುದು. ಸಮಯವೆಲ್ಲವನ್ನೂ ಷೇರುಗಳ ಮೌಲ್ಯದ ಮೇಲೆಯೇ ಇರಿಸಬೇಕಾಗುತ್ತಿತ್ತು. ಆದರೀಗ, ಮೊಬೈಲ್ ಫೋನ್ - ಇಂಟರ್ನೆಟ್ ಸಂಪರ್ಕ ಬೆರಳತುದಿಯಲ್ಲೇ ಇರುವಾಗ, ಷೇರು ಮಾರುಕಟ್ಟೆ ವ್ಯವಹಾರ ತೀರಾ ಸರಳವಾಗಿಬಿಟ್ಟಿದೆ. ಷೇರುಗಳಲ್ಲಿ ಹಣ ತೊಡಗಿಸುವುದು, ಅದರ ಮೌಲ್ಯ ಹೆಚ್ಚಾದಾಗ ಮಾರುವುದು, ಕಡಿಮೆಯಾದಾಗ ಖರೀದಿಸುವುದನ್ನೆಲ್ಲ ಕ್ಷಣ ಮಾತ್ರದಲ್ಲಿ ನಿಭಾಯಿಸಿಬಿಡಬಹುದು. 'ಮೊಬೈಲ್ ಫೋನ್' ಎಂಬ ಅಂಗೈಯ ಅರಮನೆಯಲ್ಲಿ ಇದಕ್ಕೆ ಪೂರಕವಾದ ಆ್ಯಪ್‌ಗಳು ನಮ್ಮ ಕೆಲಸವನ್ನು ಸುಲಭವಾಗಿಸಿವೆ.

ಹಣಕಾಸು ಕ್ಷೇತ್ರವು ಆಧುನಿಕ ತಂತ್ರಜ್ಞಾನವನ್ನು ಮಿಳಿತವಾಗಿಸಿಕೊಂಡು ಬೃಹತ್ತಾಗಿ ಬೆಳೆದಿದೆ. ಜನಸಾಮಾನ್ಯರಲ್ಲಿ ಕೂಡ 'ಮಾರುಕಟ್ಟೆ ಬಿತ್ತು' ಎಂಬ ಬೇಸರವೂ 'ಮಾರ್ಕೆಟ್ ಮೇಲೇರಿತು' ಎಂಬ ಖುಷಿಯ ಮಾತುಗಳೂ ಕೇಳಿಬರತೊಡಗಿವೆ. ಜನಸಾಮಾನ್ಯರು ಕೂಡ ತಮ್ಮಲ್ಲಿ ಉಳಿತಾಯವಾಗಿರುವ ಹಣವನ್ನು ಬೆಳೆಸಲು ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡುವತ್ತ ಮನಸ್ಸು ಮಾಡಿದ್ದಾರೆ. ತಂತ್ರಜ್ಞಾನವನ್ನು ಬಳಸಿಯೇ ಮೋಸ ಮಾಡುವವರ ಸಂಖ್ಯೆಯೂ ಅಧಿಕವಾಗಿದೆ. ನಮ್ಮನ್ನು ಆಮಿಷಕ್ಕೆ ನೂಕಿ, ನಮ್ಮ ಖಾಸಗಿ ಮಾಹಿತಿಯನ್ನು, ಬ್ಯಾಂಕಿಂಗ್ ಪಾಸ್‌ವರ್ಡ್ ಮುಂತಾದ ಸೂಕ್ಷ್ಮ ವಿಷಯಗಳನ್ನು ಕದಿಯುವ ಆ್ಯಪ್‌ಗಳೇ ಜಾಸ್ತಿ ಇರುವ ಈ ಕಾಲದಲ್ಲಿ, ಯಾವ ಆ್ಯಪ್ ಅನ್ನು ನಂಬಬೇಕು?

ಷೇರು ವಹಿವಾಟಿನಲ್ಲಿ ಗಮನಿಸಲೇಬೇಕಾದ ಮೂರು ವಿಚಾರಗಳಿವೆ:

1. ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡುವುದರಲ್ಲಿ 'ರಿಸ್ಕ್' ಇದೆ. ಯೋಚನೆ ಮಾಡಿ ಹೂಡಿಕೆ ಮಾಡಬೇಕು.
2. ಒಂದೇ ಕಂಪನಿಯ ಷೇರಿನಲ್ಲಿ ಹೂಡಿಕೆ ಮಾಡಬಾರದು (ಎಂದರೆ ಷೇರುಗಳನ್ನು ಖರೀದಿಸಬಾರದು). ವಿಭಿನ್ನ ಕಂಪನಿಗಳ ಷೇರುಗಳನ್ನು ಖರೀದಿಸಿದರೆ, ಒಂದರಲ್ಲಿ ನಷ್ಟವಾದರೂ, ಮತ್ತೊಂದರಲ್ಲಿ ಲಾಭ ದೊರೆಯಬಹುದು.
3. ದಿಢೀರ್ ಲಾಭ ನಿರೀಕ್ಷಿಸದೆ, ತಾಳ್ಮೆಯಿಂದ ಕಾಯಬೇಕಾಗುತ್ತದೆ. ವ್ಯವಸ್ಥಿತವಾಗಿ ಹಂತಹಂತವಾಗಿ ಹೂಡಿಕೆ ಹೆಚ್ಚಿಸುತ್ತಾ ಜಾಣ್ಮೆಯಿಂದ ಆದಾಯ ಹೆಚ್ಚಿಸಿಕೊಳ್ಳಬಹುದು.

ಮ್ಯೂಚುವಲ್ ಫಂಡ್‌ಗಳಲ್ಲಿ ಅಥವಾ ನೇರವಾಗಿ ಷೇರು ಮಾರುಕಟ್ಟೆಯಲ್ಲಿ ಹಣ ಹೂಡಿಕೆ ಮಾಡುವುದಕ್ಕೆ ಆ್ಯಪ್‌ಗಳು ಗೂಗಲ್ ಪ್ಲೇ ಸ್ಟೋರ್ ಮತ್ತು ಆ್ಯಪಲ್‌ನ ಆ್ಯಪ್ ಸ್ಟೋರ್‌ಗಳಲ್ಲಿ ಸಾಕಷ್ಟಿವೆ. ಅವುಗಳ ನಡುವೆ ನಕಲಿ ಅಥವಾ ಆ್ಯಪ್‌ಗಳೂ ಸೇರಿಕೊಂಡಿರಬಹುದು. ಈ ಕಾರಣಕ್ಕಾಗಿ, ಈಗಾಗಲೇ ಹಣಕಾಸು ಹೂಡಿಕೆಯಲ್ಲಿ ನಿರತರಾಗಿರುವವರೊಂದಿಗೆ ಸಮಾಲೋಚಿಸಿ, ಇಲ್ಲಿ ಕೆಲವು ಆ್ಯಪ್‌ಗಳನ್ನು ಪಟ್ಟಿ ಮಾಡಲಾಗಿದೆ.

ಪ್ರಮುಖವಾಗಿ ಕೇಳಿಬರುತ್ತಿರುವ ಆ್ಯಪ್ ಹೆಸರುಗಳೆಂದರೆ ಮೋತಿಲಾಲ್ ಓಸ್ವಾಲ್ (Motilal Oswal), ಜೆರೋಧಾ ಅವರ ಕೈಟ್ (Kite by Zerodha), ಅಪ್‌ಸ್ಟಾಕ್ಸ್ (Upstox), 5 ಪೈಸಾ (5paisa), ಏಂಜೆಲ್ ಒನ್ (Angel One), ಕೊಟಕ್ ಸೆಕ್ಯುರಿಟೀಸ್ (Kotak Securities), ಐಸಿಐಸಿಐ ಡೈರೆಕ್ಟ್ ಮಾರ್ಕೆಟ್ಸ್ ಆ್ಯಪ್ (ICICI Direct Markets App), ಟ್ರೇಡಿಂಗ್ ವ್ಯೂ (TradingView), ಐಐಎಫ್‌ಎಲ್ (IIFL), ಶೇರ್ ಖಾನ್ (ShareKhan), ಈಡೆಲ್ವೀಸ್ (Edelweiss), ಫೈಯರ್ಸ್ (FYERS), ಗ್ರೋ (Groww), ಅಲೀಸ್‌ಬ್ಲೂ (AliceBlue) ಮುಂತಾದವು. ಅಲ್ಲದೆ, ಬಹುತೇಕ ಎಲ್ಲ ಬ್ಯಾಂಕ್‌ಗಳು ಕೂಡ ತಮ್ಮದೇ ಆದ ಟ್ರೇಡಿಂಗ್ ಆ್ಯಪ್ ಅನ್ನು ಹೊಂದಿರುತ್ತವೆ.

ಆ್ಯಪ್‌ಗಳು ಉಚಿತವಾಗಿ ಲಭ್ಯವಿದ್ದರೂ, ಅದರ ಬಳಕೆ ಸಂಪೂರ್ಣ ಉಚಿತವಾಗಿರಲಾರದು. ವಹಿವಾಟಿಗೆ ತಕ್ಕಂತೆ, ಕನಿಷ್ಠ ಬ್ರೋಕರೇಜ್ ಅಥವಾ ಕಮಿಷನ್ ಅನ್ನು ಈ ಆ್ಯಪ್‌ಗಳಿಗೂ ನೀಡಬೇಕಾಗುತ್ತದೆ. ಜೊತೆಗೆ, ಪ್ರತಿಯೊಂದು ಆ್ಯಪ್‌ಗೂ ತನ್ನದೇ ಆದ ವೈಶಿಷ್ಟ್ಯಗಳಿವೆ. ಅನುಭವ, ಹೂಡಿಕೆಯ ಗುರಿ, ವಹಿವಾಟಿನ ಅಗತ್ಯಗಳಿಗೆ ಅನುಗುಣವಾಗಿ ಈ ಆ್ಯಪ್‌ಗಳನ್ನು ರೂಪಿಸಲಾಗಿದೆ. ಕೆಲವು ಆ್ಯಪ್‌ಗಳು ವಾರ್ಷಿಕ ಶುಲ್ಕವನ್ನು ಅಥವಾ ವಹಿವಾಟಿಗೆ ತಕ್ಕಂತೆ ಸೇವಾಶುಲ್ಕವನ್ನೂ ಯಾಚಿಸುತ್ತವೆ.

ದಿನದ ವೇಳೆ ಕುಳಿತಲ್ಲೇ ವಹಿವಾಟು (ಷೇರುಗಳ ಮಾರಾಟ, ಖರೀದಿ) ನಡೆಸಲು (ಇಂಟ್ರಾ ಡೇ) ನಿರ್ದಿಷ್ಟ ಶುಲ್ಕ (ಹೆಚ್ಚಿನವು ₹20, ಕೆಲವು ಆ್ಯಪ್‌ಗಳಲ್ಲಿ ಉಚಿತ) ವಿಧಿಸುತ್ತವೆ. ಅದೇ ರೀತಿ, ದೀರ್ಘಕಾಲಿಕ ಹೂಡಿಕೆಗೆ ಕೂಡ ಇಂತಿಷ್ಟು ಎಂದು ಕಮಿಷನ್ ಇರುತ್ತದೆ. ಈ ಆ್ಯಪ್‌ಗಳಲ್ಲಿ ಸೈನ್ ಇನ್ ಆಗಿ, ಡಿಮ್ಯಾಟ್ ಖಾತೆ ತೆರೆಯಲು ಸುಮಾರು ₹200ರಿಂದ ₹400ರವರೆಗೆ ಆರಂಭಿಕ ಶುಲ್ಕವನ್ನೂ ಕೆಲವು ಆ್ಯಪ್‌ಗಳು ವಿಧಿಸಬಹುದು (ಷೇರು ವಹಿವಾಟಿಗೆ ಡಿಮ್ಯಾಟ್ ಖಾತೆ ಇರುವುದು ಕಡ್ಡಾಯ; ಕೆಲವು ಬ್ಯಾಂಕುಗಳು ಉಚಿತವಾಗಿ ಮಾಡಿಕೊಡುತ್ತವೆ). ಕೆಲವು ಆ್ಯಪ್‌ಗಳಲ್ಲಿ ಮ್ಯೂಚುವಲ್ ಫಂಡ್ ಹೂಡಿಕೆಗೆ ಶುಲ್ಕ ಇರುವುದಿಲ್ಲ. ಮತ್ತೆ ಕೆಲವು ಆ್ಯಪ್‌ಗಳು, ಹೂಡಿಕೆದಾರರ ವಾರ್ಷಿಕ ಲಾಭಾಂಶ ಶೇ.10 ದಾಟಿದರಷ್ಟೇ ಶೇ.0.5ರಿಂದ ಶೇ.1ರಷ್ಟು ಕಮಿಷನ್ ಪಡೆಯುತ್ತವೆ. ಆದರೆ, ಷೇರು ಮಾರುಕಟ್ಟೆಯಲ್ಲಿ ಹಣ ತೊಡಗಿಸಿ ಲಾಭ ಮಾಡುವುದನ್ನು ನಿಧಾನವಾಗಿ ಕಲಿತುಕೊಂಡ ಬಳಿಕ, ಈ ಶುಲ್ಕಗಳೆಲ್ಲ ನಗಣ್ಯ ಎನ್ನಿಸಬಹುದು.

ಈ ಸ್ಟಾಕ್ ಟ್ರೇಡಿಂಗ್ ಆ್ಯಪ್‌ಗಳ ಮತ್ತೊಂದು ದೊಡ್ಡ ಅನುಕೂಲವೆಂದರೆ, ಯಾವ ಷೇರಿನ ಮೌಲ್ಯ ಇಳಿಕೆಯಾಯಿತು, ಯಾವುದರ ಮೌಲ್ಯ ಏರಿಕೆಯಾಯಿತು ಎಂದು ಆ ಕ್ಷಣದಲ್ಲೇ ತೋರಿಸುತ್ತವೆ. ಇಷ್ಟೇ ಅಲ್ಲ, ನಾವು ಯಾವುದರಲ್ಲಿ ಹೂಡಿಕೆ ಮಾಡಬಹುದು, ಯಾವಾಗ ಷೇರು ಮಾರಾಟ ಮಾಡಬಹುದು, ಯಾವಾಗ ಯಾವುದನ್ನು ಖರೀದಿಸಬಹುದು ಮುಂತಾಗಿ ತಜ್ಞಸಲಹೆಯನ್ನೂ ನೀಡುತ್ತವೆ. ಹೀಗೆ, ಷೇರು ಮಾರುಕಟ್ಟೆಗೆ ಹೊಸದಾಗಿ ಕಾಲಿಟ್ಟವರನ್ನೂ ಮುನ್ನಡೆಸಿ, ತಾವೂ ಬೆಳೆಯುವ ಕೆಲಸವನ್ನು ಈ ಆ್ಯಪ್‌ಗಳು ಮಾಡುತ್ತವೆ. ❖

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ವಿಜ್ಞಾನ

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೋತ್ತರ

32) ಒಂದು ಆಟೋಮೊಬೈಲ್ ವಾಹನದಲ್ಲಿ ಹಿನ್ನೋಟವನ್ನು ಪಡೆಯಲು ಉಪಯೋಗಿಸಿದ ಪೀನ ದರ್ಪಣದ ವಕ್ರತಾ ತ್ರಿಜ್ಯವು 3.00 m ಇದೆ. ಒಂದು ವೇಳೆ ಬಸ್ಸು ದರ್ಪಣದಿಂದ 5.00 m ದೂರದಲ್ಲಿ ಇದ್ದರೆ ಪ್ರತಿಬಿಂಬದ ಸ್ಥಾನ, ಸ್ವಭಾವ ಮತ್ತು ಗಾತ್ರವನ್ನು ಕಂಡುಹಿಡಿಯಿರಿ

ಪರಿಹಾರ :

ವಕ್ರತಾ ತ್ರಿಜ್ಯ $R = +3.00$ m

ವಸ್ತು ದೂರ $u = -5.00$ m

ಪ್ರತಿಬಿಂಬ ದೂರ $v = ?$

ಪ್ರತಿಬಿಂಬದ ಎತ್ತರ $h' = ?$

ಸಂಗಮ ದೂರ

$$f = \frac{R}{2} = \frac{3.00}{2} = +1.50\text{m}$$

$\frac{1}{v} + \frac{1}{u} = \frac{1}{f}$ ಆಗಿರುವುದರಿಂದ

ಅಥವಾ,

$$\frac{1}{v} = \frac{1}{f} - \frac{1}{u} = \frac{1}{1.50} - \frac{1}{(-5.00)} = \frac{1}{1.50} + \frac{1}{5.00}$$

$$= \frac{5.00+1.50}{7.50}$$

$$v = \frac{+7.50}{6.50} + 1.15\text{m}$$

ಪ್ರತಿಬಿಂಬವು ದರ್ಪಣದ ಹಿಂದೆ 1.15 m ದೂರದಲ್ಲಿದೆ.

ವರ್ಧನೆ,

$$m = \frac{h'}{h} = \frac{v}{u} = -\frac{1.15m}{-5.00m} = +0.23$$

ಪ್ರತಿಬಿಂಬವು ಮಿಥ್ಯ, ನೇರ ಮತ್ತು ಗಾತ್ರದಲ್ಲಿ 0.23 ಅಂಶದಷ್ಟು ಚಿಕ್ಕದಾಗಿದೆ.

33) ಕ್ಸೈಲಂ ಮತ್ತು ಫ್ಲೋಯಂಗಳಲ್ಲಿನ ವಸ್ತು ಸಾಗಾಣಿಕೆಯ ನಡುವಿನ ವ್ಯತ್ಯಾಸಗಳು ಯಾವುವು?

ಉತ್ತರ

ಕ್ಸೈಲಂ	ಫ್ಲೋಯಂ
* ಬೇರಿನಿಂದ ಸಸ್ಯದ ವಿವಿಧ ಭಾಗಗಳಿಗೆ ನೀರು ಮತ್ತು ಖನಿಜಗಳನ್ನು ಸಾಗಿಸುತ್ತದೆ.	* ದ್ಯುತಿ ಸಂಶ್ಲೇಷಣೆಯ ಉತ್ಪನ್ನವನ್ನು ಎಲೆಗಳಿಂದ ಸಸ್ಯದ ವಿವಿಧ ಭಾಗಗಳಿಗೆ ಸಾಗಿಸುತ್ತದೆ.
* ಸಾಗಾಣಿಕೆಯು ಏಕ.ಮುಖಿಯಾಗಿರುತ್ತದೆ.	ಬಹುಮುಖಿ ಸಾಗಾಣಿಕೆ ಕಂಡು ಬರುತ್ತದೆ

34) ನೀರಿನ ಕೊಯ್ಲು ವಿಧಾನದ ಬಗ್ಗೆ ಬರೆಯಿರಿ


ಉತ್ತರ:– ಒಂದು ಆದರ್ಶಪ್ರಾಯವಾದ ಖಾದಿನ್ ವ್ಯವಸ್ಥೆ ಹೆಚ್ಚು ಸಮತಟ್ಟಾಗಿರುವ ಭೂಭಾಗಗಳಲ್ಲಿನ ಜಲ ಕೊಯ್ಲು ರಚನೆಗಳು ಮುಖ್ಯವಾಗಿ ಅರ್ಧ ಚಂದ್ರಾಕಾರದ ರೂಪದಲ್ಲಿದ್ದು ಮಣ್ಣಿನಿಂದ ನಿರ್ಮಿತವಾದ ಒಡ್ಡುಗಳು ಕೆಳಮಟ್ಟದಲ್ಲಿರುತ್ತವೆ. ಮಳೆಗಾಲದಲ್ಲಿ ಉಕ್ಕಿ ಹರಿಯುವ ಸಣ್ಣ ತೊರೆಗೆ ಅಡ್ಡಲಾಗಿ ಕಾಂಕ್ರೀಟ್ ಮತ್ತು ಕಟ್ಟಡಗಳ ಅವಶೇಷಗಳಿಂದ ನೇರವಾದ ತಡೆಗೋಡೆಗಳನ್ನು ಕಟ್ಟಲಾಗುತ್ತದೆ. ಈ ರಚನೆಗಳ ಹಿಂದಿರುವ ಹೊಂಡಗಳನ್ನು ಮಾನ್ಸೂನ್ ಮಳೆಗಳು ತುಂಬುತ್ತವೆ. ಕೇವಲ ದೊಡ್ಡ ರಚನೆಗಳು ಮಾತ್ರ ವರ್ಷಪೂರ್ತಿ ನೀರನ್ನು ಹಿಡಿದಿಡುತ್ತವೆ; ಉಳಿದವುಗಳು ಬಹುತೇಕ ಮಳೆಗಾಲ ಮುಗಿದ ಆರು ತಿಂಗಳು ಅಥವಾ ಅದಕ್ಕಿಂತ ಕಡಿಮೆ ಅವಧಿಯೊಳಗೆ ಒಣಗಿ ಹೋಗುತ್ತವೆ. ಏನೇ ಆದರೂ ಅವುಗಳ ಮುಖ್ಯ ಉದ್ದೇಶ ಮೇಲ್ಮೈ ನೀರನ್ನು ಹಿಡಿದಿಡುವುದಲ್ಲ ಬದಲಾಗಿ ಕೆಳಗಿನ ಅಂತರ್ಜಲವನ್ನು ಮರುಭರ್ತಿ ಮಾಡುವುದಾಗಿದೆ.

ನೆಲದೊಳಗೆ ನೀರನ್ನು ಸಂಗ್ರಹಿಸುವುದರಿಂದ ಹಲವಾರು ಪ್ರಯೋಜನಗಳಿವೆ. ಇದು ಆವಿಯಾಗುವುದಿಲ್ಲ ಆದರೆ ವಿಸರಣೆಗೊಂಡು ಬಾವಿಗಳನ್ನು ಮರುಪೂರಣಗೊಳಿಸುತ್ತವೆ ಮತ್ತು ವಿಶಾಲವಾದ ಪ್ರದೇಶಗಳಲ್ಲಿರುವ ಸಸ್ಯವರ್ಗಗಳಿಗೆ ತೇವಾಂಶವನ್ನು ಒದಗಿಸುತ್ತದೆ. ಇದರ ಜೊತೆಗೆ ಹೊಂಡಗಳಲ್ಲಿ ನಿಂತ ನೀರು ಅಥವಾ ಕೃತಕ ಕೆರೆಗಳಲ್ಲಾಗುವಂತೆ ಸೊಳ್ಳೆಗಳಿಗೆ ಮೊಟ್ಟೆಗಳನ್ನಿಟ್ಟು ಮರಿ ಮಾಡಲು ಬ್ರೀಡಿಂಗ್ ಪ್ರದೇಶಗಳನ್ನು ಒದಗಿಸುವುದಿಲ್ಲ. ಮನುಷ್ಯರು ಮತ್ತು ಪ್ರಾಣಿಗಳ ತ್ಯಾಜ್ಯಗಳಿಂದ ಉಂಟಾಗುವ ಮಾಲಿನ್ಯದಿಂದಲೂ ಅಂತರ್ಜಲವು ರಕ್ಷಿಸಲ್ಪಡುತ್ತದೆ.

35) ಮಾನವನ ಮಿದುಳಿನ ಚಿತ್ರ ಬರೆದು ವಿವಿಧ ಭಾಗಗಳನ್ನು ಗುರುತಿಸಿ

ಉತ್ತರ:– (ಜೂನ್–2020)

ಉತ್ತರ:–



36) ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ

1) ಯಾವುದಕ್ಕೆ ಶಾಬ್ದನ (sonorous) ಎನ್ನುವರು?

ಉತ್ತರ:– ಒಂದು ಗಟ್ಟಿಯಾದ ಮೇಲ್ಮೈಗೆ ಬಡಿದಾಗ ಶಬ್ದ ಉಂಟುಮಾಡುವ ಲೋಹಗಳ ಗುಣವನ್ನು ಶಾಬ್ದನ(sonorous) ಎನ್ನುವರು

2) ಒಂದು ದ್ರವರೂಪದ ಅಲೋಹವನ್ನು ಹೆಸರಿಸಿ

ಉತ್ತರ:– ಬ್ರೋಮಿನ್

3) ಒಂದು ದ್ರವರೂಪದ ಲೋಹವನ್ನು ಹೆಸರಿಸಿ

ಉತ್ತರ:– ಪಾದರಸ

4) ಹೊಳೆಯುವ ಅಲೋಹವನ್ನು ಬರೆಯಿರಿ

ಉತ್ತರ:– ಅಯೋಡಿನ್

5) ವಿಭಿನ್ನ ರೂಪದಲ್ಲಿ ದೊರೆಯುವ ಅಲೋಹ ಯಾವುದು?

ಉತ್ತರ:– ಕಾರ್ಬನ್

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ


II PUC PHYSICS

REVISION : MODEL QUESTIONS

I. Answer the following:

1. Draw the electric field lines for a system of two positive point charges.

Ans:-



2. Write the SI unit of charge.

Ans:- Coulomb (or) C


3. Name the scientist who confirmed the existences of electromagnetic wave.

Ans:- Maxwell

4. What is the nature of force between two parallel conductors carrying currents in the same direction?

Ans:- Attractive force.

5. Draw the pattern of magnetic field lines for a bar magnet.



6. Name the charge carriers in metallic conductors.

Ans:- Free electrons

7. Give the expression foe energy stored in an inductance coil carrying current.

Ans:- $U = \frac{1}{2}LI^2$

8. North Pole of a bar magnet is moved towards a metal ring. What is the direction of induced current in the ring when viewed from magnet side?

Ans:- Anticlockwise.

9. How is r.m.s voltage of a.c related to peak value of a.c voltage?

Ans:-

$$V_{rms} = \frac{V_0}{\sqrt{2}} \text{ (or) } V_{rms} = \frac{V_m}{\sqrt{2}}$$

10. What is wavefront of light waves?

Ans:- Wavefront is the locus of points which oscillate in phase. It is the surface of constant phase.

II. Answer any five of the following questions:-

11. State and explain Coulomb's law in electrostatics.

Ans:- ***Statement:*** The electrostatic force between two point charges is directly proportional to the product of magnitude of charges and inversely proportional to the square of the distance between them. The direction of this force is along the line joining the two charges.

Explanation: Let q_1 and q_2 be the magnitude of two charges separated by a distance 'r'. Let F be the force between them,

From Coulomb's law, $F \propto \frac{q_1 q_2}{r^2}$

$$F = \frac{1}{4\pi\varepsilon_0}\frac{q_1 q_2}{r^2}$$

where ε_0 is the absolute permittivity of free space.

12. Write an expression for refractive index of the material of prism in terms of its angle and minimum deviation. Does it hold good for all positions?

Ans:- An expression for refractive index of the material of prism in terms of its angle and minimum deviation is –

$$n = \frac{\sin\frac{(A+\delta_m)}{2}}{\sin\frac{A}{2}}$$

where, n is the refractive index of the material of prism,

δ_m is the minimum deviation position

"A" is angle of the prism


It does not hold good for all positions.

13. Draw the Wheatstone's bridge circuit and write the condition for its balance.

Ans:- Wheatstone's bridge is said to be balanced when

$$I_g = 0 \text{ (or) } \frac{R_1}{R_2} = \frac{R_3}{R_4} \text{ (or) } \frac{P}{Q} = \frac{R}{S}$$

(or) Voltage across the galvanometer = 0



14. What is interference of light? Give an example.

Ans:- Interference of light is the phenomenon of redistribution of light energy due to the superposition of light waves from two coherent sources. Eg:- The Soap bubbles appear coloured in sunlight due to the interference of light reflected from the soap bubble.

15. Give two differences between Fresnel diffraction and Fraunhofer diffraction.

Ans:- Two differences between Fresnel diffraction and Fraunhofer diffraction are -

Fresnel's diffraction: (1) The source of light and screen are at finite distance from the obstacle. (2) In this case no lenses are used for making rays parallel. The wavefront is either spherical or cylindrical.

Fraunhofer diffraction: (1) the source of light and screen are placed at infinite distance from obstacle. (2) In this case parallel rays and plane wavefronts are produced using lens.

(Contd)

ಸುತ್ತೂರು ಶಿವರಾತ್ರೀಶ್ವರ ಶಿವಯೋಗಿಗಳ ಜಾತ್ರೆಗೆ ಅದ್ದೂರಿ ಆರಂಭ

ಅರಿವಿನ ಜಾತ್ರೆಗೆ ಹರಿದುಬಂದ ಭಕ್ತರು

ಪ್ರಜಾವಾಣಿ ವಾರ್ತೆ



ಮೈಸೂರು ಜಿಲ್ಲೆ, ನಂಜನಗೂಡು ತಾಲ್ಲೂಕಿನ ಸುತ್ತೂರಿನಲ್ಲಿ ಮಂಗಳವಾರ ಆರಂಭವಾದ ಜಾತ್ರಾ ಮಹೋತ್ಸವದ ಪ್ರಯುಕ್ತ ಶಿವರಾತ್ರೀಶ್ವರ ಶಿವಯೋಗಿಗಳ ಉತ್ಸವಮೂರ್ತಿಯನ್ನು ಮಠದಿಂದ ಕರ್ತೃ ಗದ್ದುಗೆಗೆ ಮೆರವಣಿಗೆಯಲ್ಲಿ ಕರೆತರಲಾಗಿದೆ

ಮೈಸೂರು: ಸುತ್ತೂರು ಶಿವರಾತ್ರೀಶ್ವರ ಶಿವಯೋಗಿಗಳ ಜಾತ್ರಾ ಮಹೋತ್ಸವಕ್ಕೆ ಮಂಗಳವಾರ ಅದ್ದೂರಿ ಚಾಲನೆ ದೊರೆಯಿತು. ತಳಿರು– ತೋರಣ, ದೀಪಾಲಂಕೃತಗೊಂಡಿದ್ದ ಸುತ್ತೂರು ಗ್ರಾಮವು ಉತ್ಸವದ ಸಂಭ್ರಮದಲ್ಲಿ ಮಿಂದಿತು.

ಎಲ್ಲರ ಮನೆ ಮುಂದೆಯೂ ರಂಗೋಲಿ ಚಿತ್ತಾರ ಆಕರ್ಷಿಸಿತು. ಜಾತ್ರೆಗೆ ರಾಜ್ಯದ ವಿವಿಧೆಡೆಯಿಂದ ಹರಿದು ಬಂದ ಭಕ್ತರು, ಕೃಷಿ ಮೇಳ, ವಸ್ತುಪ್ರದರ್ಶನದ ಅರಿವಿನ ಹೂರಣ ಸವಿದರು. ದಿನವಿಡೀ ಧಾರ್ಮಿಕ ಕಾರ್ಯಗಳು ನಡೆದವು.

ಗ್ರಾಮದ ಮಠದ ಆವರಣದಿಂದ ಶಿವರಾತ್ರೀಶ್ವರ ಶಿವಯೋಗಿಗಳ ಉತ್ಸವ-ಮೂರ್ತಿಯನ್ನು ಜಾನಪದ ಕಲಾತಂಡಗಳೊಂದಿಗೆ ಕತೃಗದ್ದುಗೆಗೆ ಕರೆತರುವ ಮೂಲಕ ಸಂಜೆ ಜಾತ್ರಾ ಮಹೋತ್ಸವ ಆರಂಭವಾಯಿತು. ವೀರಭದ್ರೇಶ್ವರ ಕೊಂಡೋತ್ಸವವನ್ನು ಗ್ರಾಮಸ್ಥರಲ್ಲದೇ ಸುತ್ತಮುತ್ತಲ ಹತ್ತೂರುಗಳ ಭಕ್ತರು ಆಗಮಿಸಿ ಕಣ್ತುಂಬಿಕೊಂಡರು.

ಕೃಷಿಮೇಳ, ವಸ್ತುಪ್ರದರ್ಶನ, ಕೃಷಿ ಬ್ರಹ್ಮಾಂಡ, ಆರೋಗ್ಯ ತಪಾಸಣಾ ಶಿಬಿರಕ್ಕೆ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಚಾಲನೆ ನೀಡಿದರೆ, ಸಾಂಸ್ಕೃತಿಕ ಮೇಳವನ್ನು ಶಿಕ್ಷಣ ಸಚಿವ ಮಧು ಬಂಗಾರಪ್ಪ ಉದ್ಘಾಟಿಸಿದರು.

ಬರದಲ್ಲೂ ಭರ್ಜರಿ ಫಸಲು ತೆಗೆಯುವ 'ಸುಸ್ಥಿರ ಕೃಷಿ' ಮಾರ್ಗವನ್ನು ಕೃಷಿಮೇಳ ತೆರೆದಿಟ್ಟರೆ, ಒಂದು ಎಕರೆಯಲ್ಲಿ ಸೃಷ್ಟಿಸಿದ 'ಕೃಷಿ ಬ್ರಹ್ಮಾಂಡ'ದಲ್ಲಿ ತಾಕುಗಳು, ಬೆಳೆಗಳು ರೈತರಿಗೆ ಆರ್ಥಿಕ ಸ್ವಾವಲಂಬನೆಯ ದಾರಿ ತೋರಿದವು.

ನಿತ್ಯ ಸುಮಾರು ಮೂರು ಲಕ್ಷ ಮಂದಿಗೆ ದಾಸೋಹ ವ್ಯವಸ್ಥೆ ಮಾಡಲಾಗಿದೆ. ಸ್ವಯಂಸೇವಕರು, ಮಠ ಮತ್ತು ಜೆಎಸ್‌ಎಸ್ ಶಿಕ್ಷಣ ಸಂಸ್ಥೆಯ ಸಿಬ್ಬಂದಿ ಹಾಗೂ ಭಕ್ತರು ವಿವಿಧ ಕೆಲಸಗಳಲ್ಲಿ ನಿರತರಾಗಿದ್ದರು.

ಕರ್ತೃ ಗದ್ದುಗೆ ಸಮೀಪ ನಡೆದ ಸಭಾ ಕಾರ್ಯಕ್ರಮದಲ್ಲಿ ಸಂಸ್ಕೃತ ವಿದ್ವಾಂಸ ಪೆರ್ರಿ ಸೆಲ್ವಿನ್ ಫಿಲಿಯೊಜಾ ಮಾತನಾಡಿ, 'ಸಂಸ್ಕೃತ, ಶೈವಾಗಮನ ಕಲಿಯಲು 1955ರಲ್ಲಿ ಫ್ರಾನ್ಸ್‌ನ ಪ್ಯಾರಿಸ್‌ನಿಂದ ಭಾರತಕ್ಕೆ ಬಂದೆ. ದೇಶದ ಶ್ರೇಷ್ಠ ಸಂಸ್ಕೃತಿಯ ಪರಿಚಯವಾಯಿತು. ಮೀಮಾಂಸೆ, ವ್ಯಾಕರಣ, ಶಾಸ್ತ್ರ, ವೇದಾಂತ, ನ್ಯಾಯ ಕಲಿಕೆ ವಿಶಿಷ್ಟ ಅನುಭೂತಿ ನೀಡಿವೆ' ಎಂದರು.

ಇತಿಹಾಸ ತಜ್ಞೆ ವಸುಂಧರಾ ಫಿಲಿಯೋಜಾ, 'ಕನ್ನಡ ನಾಡಿನ ಸಂಸ್ಕೃತಿ ಉಳಿಸಿಕೊಳ್ಳಬೇಕು. ನಮ್ಮ ಭಾಷೆ ಪ್ರಭಾವ ತೆಲುಗು, ತಮಿಳು ಸೇರಿದಂತೆ ದ್ರಾವಿಡ ಭಾಷೆಗಳಲ್ಲದೇ ಕಾಂಬೋಡಿಯಾ ಲಿಪಿ ಮೇಲೂ ಇದೆ' ಎಂದು ಹೇಳಿದರು.

ಸಾಮೂಹಿಕ ವಿವಾಹ ಇಂದು

ಬುಧವಾರ ಬೆಳಿಗ್ಗೆ ಉಚಿತ ಸಾಮೂಹಿಕ ವಿವಾಹ ನಡೆಯಲಿದೆ. ಹೊರ ರಾಜ್ಯದವರು ಸೇರಿದಂತೆ ಒಟ್ಟಾರೆ 1,500 ಜೋಡಿಗಳು ದಾಂಪತ್ಯಕ್ಕೆ ಕಾಲಿಡಲಿದ್ದಾರೆ. ಅಂತರ್ಜಾತಿ ವಿವಾಹಗಳು ಇದರಲ್ಲಿ ಸೇರಿವೆ. ವಧುವಿಗೆ ಸೀರೆ, ಕುಪ್ಪಸ, ಮಾಂಗಲ್ಯ ಹಾಗೂ ಕಾಲುಂಗುರ, ವರನಿಗೆ ಪಂಚೆ, ವಲ್ಲಿ, ಅಂಗಿ ನೀಡಲಾಗುತ್ತದೆ.

ಪುಟ್ಟ ಮಕ್ಕಳ ದಾಹ ತಣಿಸಲು ಒಬ್ಬಳೆ ನಿಂತಳು ಬಾವಿ ತೋಡಲು



ಶಿರಸಿಯ ಗಣೇಶನಗರದಲ್ಲಿ ಬಾವಿ ತೋಡುತ್ತಿರುವ ಗೌರಿ ನಾಯ್ಕ

ಪ್ರಜಾವಾಣಿ ವಾರ್ತೆ

ಶಿರಸಿ (ಉತ್ತರ ಕನ್ನಡ ಜಿಲ್ಲೆ): ಅಂಗನವಾಡಿಯ ಮಕ್ಕಳ ದಾಹ ತಣಿಸಲು ಶಿರಸಿಯ ಗಣೇಶನಗರದ 55 ವರ್ಷ ವಯಸ್ಸಿನ ಗೌರಿ ನಾಯ್ಕ ಅವರು ಬಾವಿ ತೋಡುವ ಕಾರ್ಯದಲ್ಲಿ ನಿರತ-ರಾಗಿದ್ದಾರೆ.

ಇಲ್ಲಿನ ಅಂಗನವಾಡಿ ಕೇಂದ್ರ 6ರ ಆವರಣದಲ್ಲಿ ನಾಲ್ಕು ಅಡಿ ವ್ಯಾಸದಲ್ಲಿ ಬಾವಿ ತೋಡುತ್ತಿದ್ದಾರೆ. ನಿತ್ಯ ಒಂದೂವರೆ ಅಡಿ ಆಳ ಅಗೆಯುತ್ತಾರೆ. ಹತ್ತಾರು ಬುಟ್ಟಿ ಮಣ್ಣು ಒಬ್ಬರೇ ಹೊರಹಾಕುತ್ತಾರೆ. ಗುದ್ದಲಿ, ಪಿಕಾಸಿ, ಹಾರೆ, ಬುಟ್ಟಿ, ಹಗ್ಗದ ನೆರವಿನಿಂದ ಅವರು ಒಂದು ತಿಂಗಳಲ್ಲಿ ಬಾವಿ ತೋಡುವ ಕಾರ್ಯ ಪೂರ್ಣಗೊಳಿಸುವ ಗುರಿ ಹೊಂದಿದ್ದಾರೆ.

'ಗಣೇಶನಗರದಲ್ಲಿ ನೀರಿನ ಸಮಸ್ಯೆಯಿದೆ. ಅಂಗನವಾಡಿಯ ಮಕ್ಕಳು ಕುಡಿಯುವ ನೀರಿಗಾಗಿ ಪರಿತಪಿಸುವುದು ಕಂಡು ಈ ಕಾರ್ಯಕ್ಕೆ ಮುಂದಾಗಿದ್ದೇನೆ. ಹಿಂದೆ ಎರಡು ಕಡೆ 65 ಅಡಿ ಆಳದ ಬಾವಿ ತೋಡಿದ್ದೇನೆ' ಎಂದೂ ಗೌರಿ ನಾಯ್ಕ 'ಪ್ರಜಾವಾಣಿ'ಗೆ ತಿಳಿಸಿದರು.

'ಅಂಗನವಾಡಿ ಕೇಂದ್ರದಲ್ಲಿ 15 ಮಕ್ಕಳಿದ್ದಾರೆ. ಹುತ್ಗಾರ ಗ್ರಾಮ ಪಂಚಾಯಿತಿ ಎರಡು ದಿನಕ್ಕೊಮ್ಮೆ ನೀರು ಪೂರೈಸಲಿದೆ. ಆದರೆ, ಕುಡಿಯಲು ನಿತ್ಯ ಹೊರಗಿನ ಬಾವಿಯಿಂದಲೇ ನೀರು ತರಬೇಕು' ಎಂದು ಶಿಕ್ಷಕಿ ಜ್ಯೋತಿ ನಾಯ್ಕ ಅವರು ತಿಳಿಸಿದರು.

ದಾವಣಗೆರೆ ಜೈಲಿನಲ್ಲಿ ಗಾಂಜಾ, ಮೊಬೈಲ್ ಡಾಟಾ ಕೇಬಲ್ ಪತ್ತೆ

ದಾವಣಗೆರೆ: ಇಲ್ಲಿನ ಜಿಲ್ಲಾ ಕಾರಾಗೃಹದ ಗ್ರಂಥಾಲಯದಲ್ಲಿ ಫೆಬ್ರುವರಿ 4ರಂದು ನಿಷೇಧಿತ ಗಾಂಜಾ ಸೊಪ್ಪು ಹಾಗೂ ಮೊಬೈಲ್ ಡಾಟಾ ಕೇಬಲ್‌ಗಳು ಪತ್ತೆ ಆಗಿವೆ. ಜ.28ರಂದು ಕಾರಾಗೃಹದಲ್ಲಿ ಕೈದಿಗಳ ನಡುವೆ ಗಲಾಟೆ ನಡೆದಿತ್ತು.

ಗಲಾಟೆ ಹಿನ್ನೆಲೆಯಲ್ಲಿ ಪ್ರಧಾನ ಜಿಲ್ಲಾ ಸೆಷನ್ಸ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಯವರು ಜೈಲಿಗೆ ಭೇಟಿ ನೀಡಿ ಹಲ್ಲೆಗೊಳಗಾದ ಕೈದಿಗಳ ವಿಚಾರಣೆ ನಡೆಸಿದ್ದರು. ಆಗ ಈ ಮಾಹಿತಿ ಬಹಿರಂಗವಾಗಿದೆ.

ವಿಚಾರಣಾಧೀನ ಕೈದಿಗಳಾದ ಸುನಿಲ್, ಪವನ್‌ಕುಮಾರ್, ಇಮ್ರಾನ್ ಖಾನ್, ಸಲ್ಮಾನ್, ಮಾದಕ ದ್ರವ್ಯ ಸೇವಿಸಿ ಸಹ ಕೈದಿಗಳ ಮೇಲೆ ಹಲ್ಲೆ ನಡೆಸಿದ್ದರು. ಇವರ ರಕ್ತ, ಮೂತ್ರದ ಮಾದರಿಯನ್ನು ಪರೀಕ್ಷೆಗೆ ಒಳಪಡಿಸಿದಾಗ ಮಾದಕ ದ್ರವ್ಯದ ಅಂಶ ಪತ್ತೆಯಾಗಿದೆ.

ಅಲ್ಲದೆ, ಗಾಂಜಾ ಸೊಪ್ಪು, ಮೊಬೈಲ್ ಚಾರ್ಜರ್ ಪೆನ್‌ಡ್ರೈವ್ ಕೂಡ ಪತ್ತೆಯಾಗಿತ್ತು. ಈ ಬಗ್ಗೆ ಕಾರಾಗೃಹದ ಪ್ರಭಾರ ಅಧೀಕ್ಷಕಿ ಭಾಗೀರಥಿ ಎಲ್. ಹಾಗೂ ಜೈಲರ್ ಕೆ.ಎಸ್.ಮಾನ್ವಿ ವಿರುದ್ಧ ಶಿವಮೊಗ್ಗ ಕೇಂದ್ರ ಕಾರಾಗೃಹದ ಅಧೀಕಕ್ಷಿ ಅನಿತಾ ಆರ್. ಅವರು ಇಲ್ಲಿನ ಬಸವನಗರ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಿದ್ದಾರೆ.

'ಕೆಲ ಶಕ್ತಿಗಳಿಂದ ಶಾಂತಿ ಕದಡುವ ಸಾಧ್ಯತೆ'

ಕೆರಗೋಡು ಬಗ್ಗೆ ಶಾಸಕರ ಹೇಳಿಕೆ: ಸಮಸ್ಯೆ ಬಗೆಹರಿಸಲು ಗ್ರಾಮಕ್ಕೆ ಭೇಟಿ ಭರವಸೆ

ಪ್ರಜಾವಾಣಿ ವಾರ್ತೆ

ಮಂಡ್ಯ: 'ಕೆರಗೋಡಿಗೆ ಹೋಗಲು ಭಯವಿಲ್ಲ. ಕೆಲವರು ಪ್ರಚೋದನೆ ನೀಡಿ, ಶಾಂತಿ ಕದಡುವ ಸಾಧ್ಯತೆ ಇರುವುದರಿಂದ ಹೋಗುತ್ತಿಲ್ಲ. ಶೀಘ್ರ ಭೇಟಿ ನೀಡಿ ಸಮಸ್ಯೆ ಬಗೆಹರಿಸುವೆ' ಎಂದು ಶಾಸಕ ಗಣಿಗ ರವಿಕುಮಾರ್ ಅವರು ತಿಳಿಸಿದರು.

ಮಂಗಳವಾರ ಇಲ್ಲಿನ ಕುರುಬರ ಸಂಘದ ವಿದ್ಯಾರ್ಥಿನಿಲಯಕ್ಕೆ ಭೇಟಿ ನೀಡಿದ್ದ ಅವರು, 'ಬಿಜೆಪಿಯು ಧ್ವಜ ವಿವಾದದಿಂದ ಲಾಭ ಪಡೆಯಲು ಯತ್ನಿಸುತ್ತಿದೆ. ಆದರೆ ಜಿಲ್ಲೆಯ ಜನ ಇಂತಹ ವಿಚಾರಗಳಿಗೆ ತಲೆಕೆಡಿಸಿಕೊಳ್ಳುವುದಿಲ್ಲ' ಎಂದರು.

'ಮನೆಗಳಲ್ಲಿ ಕೇಸರಿಧ್ವಜವನ್ನು ಹಾರಿಸಲು ನನ್ನ ಅಡ್ಡಿ ಇಲ್ಲ, ನಮ್ಮ ಮನೆಗೆ ಕೊಟ್ಟರೆ ನಾನೂ ಹಾರಿಸುತ್ತೇನೆ. ಈ ಬಗ್ಗೆ ಎಚ್.ಡಿ.ಕುಮಾರಸ್ವಾಮಿ ಅವರ ದಾರಿ ತಪ್ಪಿಸಲಾಗಿದೆ. ಅವರಿಗೂ ಇವು ಇಷ್ಟವಿಲ್ಲ. ಅವಕಾಶ ಸಿಕ್ಕರೆ ದಾಖಲೆಗಳ ಸಮೇತ ವಾಸ್ತವ ಸ್ಥಿತಿಯನ್ನು ಅವರಿಗೆ ಮನವರಿಕೆ ಮಾಡಿಕೊಡುವೆ' ಎಂದರು.

'ಪ್ರಗತಿಪರ ಸಂಘಟನೆಗಳು ಬಂದ್ ವಾಪಸ್ ಪಡೆದಿದ್ದು ಸ್ವಾಗತಾರ್ಹ. ಫೆ.9ರಂದು ಬಿಜೆಪಿ, ಜೆಡಿಎಸ್, ಸಂಘ ಪರಿವಾರ ಕರೆನೀಡಿದ ಬಂದ್ ಕೂಡ ಬೇಡ ಎಂದು ಕೋರುತ್ತೇನೆ. ಎಲ್ಲರೂ ಶಾಂತಿಯಿಂದ ಇದ್ದು ತಾಲ್ಲೂಕಿನ ಅಭಿವೃದ್ಧಿಗೆ ಗಮನಹರಿಸೋಣ' ಎಂದರು.

ಕನಕದಾಸರ ಪ್ರತಿಮೆ: 'ಪಾದಯಾತ್ರೆ ನೆಪದಲ್ಲಿ ಕುರುಬರ ಸಂಘದ ವಿದ್ಯಾರ್ಥಿನಿಲಯಕ್ಕೆ ಕಲ್ಲು ಎಸೆದ ಘಟನೆ ಖಂಡನೀಯ. ಎಸೆದ ಕಲ್ಲುಗಳಿಂದಲೇ ವಿದ್ಯಾರ್ಥಿ ನಿಲಯದ ಆವರಣದಲ್ಲಿಯೇ ಕನಕದಾಸರ ಪ್ರತಿಮೆ ನಿರ್ಮಿಸಿ, ಅದನ್ನು ಮುಖ್ಯಮಂತ್ರಿ ಅವರಿಂದಲೇ ಅನಾವರಣಗೊಳಿಸಲಾಗುವುದು' ಎಂದು ಅವರು ಹೇಳಿದರು.

'ಈ ವಿದ್ಯಾರ್ಥಿನಿಲಯದಲ್ಲಿ ಎಲ್ಲ ಜಾತಿ, ಧರ್ಮಗಳ ವಿದ್ಯಾರ್ಥಿಗಳಿ-ದ್ದಾರೆ. ಕಲ್ಲು ಎಸೆದಿದ್ದರಿಂದ ಕಿಟಕಿ ಗಾಜು ಒಡೆದಿವೆ. ಕನಕದಾಸರ ಫ್ಲೆಕ್ಸ್ ಹರಿಯಲಾಗಿದೆ. ಪರೀಕ್ಷೆಯ ಅವಧಿಯಲ್ಲಿ ವಿದ್ಯಾರ್ಥಿಗಳು ಭಯಭೀತರಾಗಿದ್ದಾರೆ' ಎಂದರು.

ಬಂದ್ ವಾಪಸ್‌ಗೆ ಸಂಘಟನೆಗಳ ನಕಾರ

ಫೆ.9ರ ಮಂಡ್ಯ ನಗರ ಬಂದ್ ಕರೆ ವಾಪಸ್ ಕುರಿತು ಜಿಲ್ಲಾಧಿಕಾರಿ ಕುಮಾರ ಅವರ ಪ್ರಯತ್ನ ವಿಫಲವಾಗಿದೆ. ಮನವಿಯನ್ನು ವಿಎಚ್‌ಪಿ, ಆರ್‌ಎಸ್‌ಎಸ್ ಹಾಗೂ ಆರ್‌ಎಸ್‌ಎಸ್ ಮುಖಂಡರು ತಿರಸ್ಕರಿಸಿದ್ದಾರೆ.

'ಹನುಮ ಧ್ವಜ ತೆರವು ಖಂಡಿಸಿ ಫೆ.9ರಂದು ನೀಡಿರುವ ಬಂದ್ ಕರೆಗೆ ಸಾರ್ವಜನಿಕರು, ವಿವಿಧ ಸಂಘಟನೆಗಳು ಬೆಂಬಲ ನೀಡಬೇಕು' ಎಂದು ಮಂಗಳವಾರ ಈ ಮುಖಂಡರು ಮನವಿ ಮಾಡಿದ್ದಾರೆ.

ಬಿ.ಎಲ್. ವೇಣು, ಕಟ್ಟಿಮನಿಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ



ತೇಜಸ್ವಿ ಕಟ್ಟಿಮನಿ



ಬಿ.ಎಲ್‌.ವೇಣು

ಹರಿಹರ (ದಾವಣಗೆರೆ): ಇಲ್ಲಿನ ರಾಜನಹಳ್ಳಿ ವಾಲ್ಮೀಕಿ ಗುರು ಪೀಠ ನೀಡುವ ವಾಲ್ಮೀಕಿ ರತ್ನ ಹಾಗೂ ಮದಕರಿ ನಾಯಕ ಪ್ರಶಸ್ತಿಗಳಿಗೆ ಕ್ರಮವಾಗಿ ಆಂಧ್ರಪ್ರದೇಶದ ಕೇಂದ್ರೀಯ ಬುಡಕಟ್ಟು ವಿಶ್ವವಿದ್ಯಾಲಯದ ಕುಲಪತಿ ತೇಜಸ್ವಿ ಕಟ್ಟಿಮನಿ, ಚಿತ್ರದುರ್ಗದ ಸಾಹಿತಿ ಬಿ.ಎಲ್.ವೇಣು ಅವರನ್ನು ಆಯ್ಕೆ ಮಾಡಲಾಗಿದೆ.

ಈ ಪ್ರಶಸ್ತಿಗಳು ತಲಾ ₹ 1 ಲಕ್ಷ ನಗದು ಹಾಗೂ ಫಲಕ ಒಳಗೊಂಡಿವೆ.

'ಫೆ.9 ರಂದು ಮಧ್ಯಾಹ್ನ 12.30ಕ್ಕೆ ರಾಜನಹಳ್ಳಿ ವಾಲ್ಮೀಕಿ ಗುರುಪೀಠದಲ್ಲಿ ನಡೆಯುವ ಜನ ಜಾಗೃತಿ ಜಾತ್ರಾ ಮಹೋತ್ಸವ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು' ಎಂದು ಗುರುಪೀಠದ ಪೀಠಾಧಿಪತಿ ಪ್ರಸನ್ನಾನಂದ ಶ್ರೀ ತಿಳಿಸಿದ್ದಾರೆ.

ಗ್ರಾ.ಪಂ.ಗಳಿಗೆ ಭಾರವಾದ 'ಕೂಸಿನ ಮನೆ'

ಒಂದನೇ ಪುಟದಿಂದ...

ಆಡಳಿತ ನಿರ್ವಹಣೆಯನ್ನು ಗ್ರಾಮ ಪಂಚಾಯಿತಿಗಳಿಗೆ ಒಪ್ಪಿಸಿದ್ದು, ಮೇಲುಸ್ತುವಾರಿಯನ್ನು ತಾಲ್ಲೂಕು ಶಿಶು ಅಭಿವೃದ್ಧಿ ಅಧಿಕಾರಿಗಳಿಗೆ ವಹಿಸಿ ಹೊಸ ಸುತ್ತೋಲೆ ಹೊರಡಿಸಲಾಗಿದೆ.

ಅನುದಾನ ಬಳಕೆಗೆ ವಿರೋಧ: 4,000 ಕೂಸಿನ ಮನೆಗಳ ನಿರ್ವಹಣೆಗೆ ವರ್ಷಕ್ಕೆ ₹160 ಕೋಟಿ ವ್ಯಯಿಸಲಾಗುತ್ತಿದೆ. ಅದರಲ್ಲಿ ತರಬೇತುದಾರರ ಗೌರವ ಧನಕ್ಕಾಗಿ ಮಾತ್ರ ನರೇಗ ಅನುದಾನದಿಂದ ₹65.72 ಕೋಟಿ ಭರಿಸಲಾಗುತ್ತಿದೆ.

ಉಳಿದ ಅನುದಾನವನ್ನು ಪಂಚಾಯಿತಿಗಳ ಅನುದಾನದಲ್ಲೇ ಭರಿಸುವಂತೆ ಇಲಾಖೆ ಆದೇಶ ಹೊರಡಿಸಿದೆ. ಗ್ರಾಮ ಪಂಚಾಯಿತಿ ನಿಧಿಯಿಂದ ₹65.72 ಕೋಟಿ, ಇಲಾಖೆಯಿಂದ ಗ್ರಾಮ ಪಂಚಾಯಿತಿಗಳಿಗೆ ದೊರಕುವ ಅನುದಾನದಲ್ಲಿ ₹40 ಕೋಟಿ ಮತ್ತು ತಾಲ್ಲೂಕು ಪಂಚಾಯಿತಿಗಳ ನಿಧಿಯಿಂದ ₹3.20 ಕೋಟಿ ಭರಿಸುವಂತೆ ಇಲಾಖೆ ಆದೇಶಿಸಿದೆ.

'ಕೂಸಿನ ಮನೆ ಯೋಜನೆಗೆ ಪಂಚಾಯಿತಿ ನಿಧಿ ಮತ್ತು ಪಂಚಾಯತ್ ಅನುದಾನವನ್ನೂ ಬಳಕೆ ಮಾಡಬೇಕೆಂಬುದು ಅಧಿಕಾರ ವಿಕೇಂದ್ರೀಕರಣಕ್ಕೆ ವಿರುದ್ಧವಾದುದು. ಇಡೀ ಯೋಜನೆಯನ್ನು ಅವೈಜ್ಞಾನಿಕವಾಗಿ ರೂಪಿಸಲಾಗಿದೆ. ಗ್ರಾಮ ಪಂಚಾಯಿತಿಗಳ ಸ್ವಾಯತ್ತೆಗೆ ವಿರುದ್ಧವಾಗಿ ಯೋಜನೆಯನ್ನು ಹೇರಿಕೆ ಮಾಡಲಾಗಿದೆ' ಎಂದು ದೂರುತ್ತಾರೆ ರಾಜ್ಯ ಗ್ರಾಮ ಪಂಚಾಯಿತಿ ಸದಸ್ಯರ ಮಹಾ ಒಕ್ಕೂಟದ ಅಧ್ಯಕ್ಷ ಕಾಡಶೆಟ್ಟಿಹಳ್ಳಿ ಸತೀಶ್.

ಈ ಯೋಜನೆಗಾಗಿ ಗ್ರಾಮ ಪಂಚಾಯಿತಿಗಳ ಸ್ವಂತ ನಿಧಿ ಮತ್ತು ಅಭಿವೃದ್ಧಿ ಅನುದಾನವನ್ನು ಬಳಕೆ ಮಾಡುವಂತೆ ಹೊರಡಿಸಿರುವ ಆದೇಶವನ್ನು ಹಿಂಪಡೆಯಬೇಕು. ಯೋಜನೆಗೆ ಸಂಪೂರ್ಣವಾಗಿ ಅನುದಾನವನ್ನು ರಾಜ್ಯ ಸರ್ಕಾರವೇ ಭರಿಸುವ ವ್ಯವಸ್ಥೆ ಮಾಡಬೇಕು ಎಂಬ ಒತ್ತಾಯದೊಂದಿಗೆ ಹೋರಾಟ ಕೈಗೆತ್ತಿಕೊಳ್ಳಲು ಒಕ್ಕೂಟ ಸಜ್ಜಾಗುತ್ತಿದೆ.

ಸಿದ್ದರಾಮಯ್ಯಗೆ ₹10 ಸಾವಿರ ದಂಡ

ಒಂದನೇ ಪುಟದಿಂದ...

ಪ್ರಕರಣವೇನು?: ಬೆಳಗಾವಿಯ ಗುತ್ತಿಗೆದಾರ ಸಂತೋಷ್ ಪಾಟೀಲ ಆತ್ಮಹತ್ಯೆ ಹಿನ್ನೆಲೆಯಲ್ಲಿ ಅಂದಿನ ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್. ಈಶ್ವರಪ್ಪ ಅವರ ರಾಜೀನಾಮೆಗೆ ಆಗ್ರಹಿಸಿ 2022ರ ಏಪ್ರಿಲ್ 14ರಂದು ಬೆಂಗಳೂರಿನ ಆನಂದರಾವ್ ವೃತ್ತದ ಗಾಂಧಿ ಪ್ರತಿಮೆ ಬಳಿ ಕಾಂಗ್ರೆಸ್ ಮುಖಂಡರು ಪ್ರತಿಭಟನೆ ನಡೆಸಿದ್ದರು.

ಈ ವೇಳೆ ಸಾರ್ವಜನಿಕರ ಮುಕ್ತ ಸಂಚಾರಕ್ಕೆ ಅಡ್ಡಿಪಡಿಸಿದ, ಕಾನೂನು ಸುವ್ಯವಸ್ಥೆಗೆ ಧಕ್ಕೆ ಉಂಟು ಮಾಡಿದ ಆರೋಪದ ಅಡಿಯಲ್ಲಿ ಹೈಗ್ರೌಂಡ್ಸ್ ಠಾಣೆ ಪೊಲೀಸರು ಅರ್ಜಿದಾರರ ವಿರುದ್ಧ ಭಾರತೀಯ ದಂಡ ಸಂಹಿತೆಯ (ಐಪಿಸಿ) ಕಲಂ 143 (ಕಾನೂನುಬಾಹಿರವಾ-ಗಿ ಸಮಾವೇಶಗೊಳ್ಳುವುದು) ಮತ್ತು ಕರ್ನಾಟಕ ಪೊಲೀಸ್ ಕಾಯ್ದೆಯ ಕಲಂ 103ರ ಅಡಿ ಪ್ರಕರಣ ದಾಖಲಿಸಿದ್ದರು.

ಈ ಸಂಬಂಧ 42ನೇ ಎಸಿಎಂಎಂ ನ್ಯಾಯಾಲಯ (ಜನಪ್ರತಿನಿಧಿ-ಗಳ ವಿಶೇಷ ನ್ಯಾಯಾಲಯ) ಜಾರಿ ಮಾಡಿದ್ದಜಾಮೀನು ರಹಿತ ಬಂಧನ ವಾರಂಟ್ ಹಾಗೂ ವಿಶೇಷ ನ್ಯಾಯಾಲಯದ ವಿಚಾರಣಾ ಪ್ರಕ್ರಿಯೆ ರದ್ದುಪಡಿಸುವಂತೆ ಕೋರಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಸಚಿವರಾದ ರಾಮಲಿಂಗಾ ರೆಡ್ಡಿ, ಎಂ.ಬಿ. ಪಾಟೀಲ ಮತ್ತು ಎಐಸಿಸಿ ಮುಖಂಡ ರಣದೀಪ್ ಸಿಂಗ್ ಸುರ್ಜೇವಾಲಾ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು.

ಅಂಬೇಡ್ಕರ್–ಬಸವೇಶ್ವರ ಭಾವಚಿತ್ರ ವಿವಾದ: ಬಿಗುವಿನ ವಾತಾವರಣ

ಪ್ರಜಾವಾಣಿ ವಾರ್ತೆ



ಗೋವಿಂದ ರೆಡ್ಡಿ, ಜಿಲ್ಲಾಧಿಕಾರಿ

ಔರಾದ್ (ಬೀದರ್ ಜಿಲ್ಲೆ): ತಾಲ್ಲೂಕಿನ ಕೌಡಗಾಂವ್ ಗ್ರಾಮದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಭಾವಚಿತ್ರ ಅಳವಡಿಸಿದ್ದಕ್ಕೆ ಪ್ರತಿಯಾಗಿ ಸಮೀಪದಲ್ಲೇ ಸೋಮವಾರ ರಾತ್ರಿ ಬಸವೇಶ್ವರರ ಭಾವಚಿತ್ರವುಳ್ಳ ಧ್ವಜ ಕಟ್ಟೆ ನಿರ್ಮಿಸಲಾಗಿದೆ. ಗ್ರಾಮದಲ್ಲಿ ಬಿಗುವಿನ ಸ್ಥಿತಿ ಇದೆ.

ಗ್ರಾಮದಲ್ಲಿ ಎರಡು ವಾರದ ಹಿಂದೆ ಡಾ.ಅಂಬೇಡ್ಕರ್ ಭಾವಚಿತ್ರ ಅಳವಡಿಸಲಾಗಿತ್ತು. ಇದಕ್ಕೆ ಅವಕಾಶವಿಲ್ಲ, ತೆಗೆಯಿರಿ ಎಂದು ಪೊಲೀಸರು ಹೇಳಿದ್ದರೂ ಪರಿಶಿಷ್ಟ ಜಾತಿಯವರು ಸಹಮತ ವ್ಯಕ್ತಪಡಿಸ-ಲಿಲ್ಲ. ಗ್ರಾಮದಲ್ಲಿನ ಎಲ್ಲ ಧಾರ್ಮಿಕ ಸ್ಥಳಗಳು, ಪ್ರಮುಖರ ಮೂರ್ತಿಗಳನ್ನು ತೆರವುಗೊಳಿಸಿದರೆ ಭಾವಚಿತ್ರ ತೆರವುಗೊಳಿಸುತ್ತೇವೆ ಎಂದು ಪಟ್ಟು ಹಿಡಿದು ಧರಣಿ ನಡೆಸುತ್ತಿದ್ದಾರೆ.

ಈ ಬೆಳವಣಿಗೆ ನಡುವೆಯೇ ಸೋಮವಾರ ರಾತ್ರಿ ಲಿಂಗಾಯತ ಸಮಾಜದವರು ಬಸವೇಶ್ವರರ ಚಿತ್ರವಿರುವ ಧ್ವಜ ಕಟ್ಟೆ ನಿರ್ಮಿಸಿದ್ದಾರೆ. ಗ್ರಾಮದಲ್ಲಿ ಬಿಗುವಿನ ವಾತಾವರಣ ನಿರ್ಮಾಣವಾಗಿದೆ. ಸದ್ಯ, ಗ್ರಾಮದಲ್ಲಿ ಬಿಗಿ ಬಂದೋಬಸ್ತ್ ಮಾಡಲಾಗಿದೆ.

'ಸದ್ಯ ಗ್ರಾಮದ ಎಲ್ಲ ಸಮುದಾಯಗಳ ನಡುವೆ ಮಾತುಕತೆ ನಡೆಯುತ್ತಿದೆ. ಯಾವುದೇ ತೆರವು ಕಾರ್ಯಾಚರಣೆ ಮಾಡಿಲ್ಲ' ಎಂದು ಜಿಲ್ಲಾಧಿಕಾರಿ ಗೋವಿಂದ ರೆಡ್ಡಿ ಅವರು ಪ್ರತಿಕ್ರಿಯಿಸಿದ್ದಾರೆ.

ರಮೇಶ ಜಾರಕಿಹೊಳಿ ಸಕ್ಕರೆ ಕಾರ್ಖಾನೆ ವಿರುದ್ಧ ಸಿಐಡಿ ತನಿಖೆ

ಬೆಳಗಾವಿ: ಜಿಲ್ಲೆಯ ಗೋಕಾಕ ತಾಲ್ಲೂಕಿನ ಹಿರೇನಂದಿ ಬಳಿ ಇರುವ, ಶಾಸಕ ರಮೇಶ ಜಾರಕಿಹೊಳಿ ಸ್ಥಾಪಿಸಿದ ಸೌಭಾಗ್ಯಲಕ್ಷ್ಮಿ ಸಕ್ಕರೆ ಕಾರ್ಖಾನೆ ಮೇಲೆ ಮಂಗಳವಾರ ಸಿಐಡಿ ಅಧಿಕಾರಿಗಳ ತಂಡ ದಾಳಿ ಮಾಡಿ ತನಿಖೆ ನಡೆಸಿತು.

ಸೌಭಾಗ್ಯಲಕ್ಷ್ಮಿ ಶುಗರ್ಸ್‌ನವರು ಅಪೆಕ್ಸ್ ಬ್ಯಾಂಕಿನಿಂದ ₹439 ಕೋಟಿ ಸಾಲ ಪಡೆದು ಮರುಪಾವತಿ ಮಾಡದ ಕುರಿತು ಬ್ಯಾಂಕ್ ವ್ಯವಸ್ಥಾಪಕ ರಾಜಣ್ಣ ಮುತ್ತಶೆಟ್ಟಿ ಅವರು ಜನವರಿ 5ರಂದು ಬೆಂಗಳೂರಿನಲ್ಲಿ ದೂರು ದಾಖಲಿಸಿದ್ದರು. ಕಲಂ 406, 420ರ ಅಡಿಯಲ್ಲಿ ದೂರು ದಾಖಲಿಸಲಾಗಿತ್ತು. ರಾಜ್ಯ ಸರ್ಕಾರ ಈ ಪ್ರಕರಣದ ತನಿಖೆಯನ್ನು ಸಿಐಡಿಗೆ ಹಸ್ತಾಂತರಿಸಿದೆ.

ಮಂಗಳವಾರ ಬೆಂಗಳೂರಿನಿಂದ ಬಂದ ಅಧಿಕಾರಿಗಳು, ಕಾರ್ಖಾನೆಯಲ್ಲಿ ಸಂಜೆಯವರೆಗೆ ತನಿಖೆ ನಡೆಸಿದರು. ಈ ಕಾರ್ಖಾನೆಯನ್ನು ರಮೇಶ ಜಾರಕಿಹೊಳಿ ಪುತ್ರ ಸಂತೋಷ ನಿರ್ವಹಿಸುತ್ತಿದ್ದಾರೆ.

ಸರ್ಕಾರಿ ನೌಕರರ ಸಮಾವೇಶ 27ಕ್ಕೆ

ಮಂಗಳೂರು: ಬೆಂಗಳೂರಿನ ಅರಮನೆ ಮೈದಾನದಲ್ಲಿ ಇದೇ 27ರಂದು ರಾಜ್ಯ ಸರ್ಕಾರಿ ನೌಕರರ ಸಮ್ಮೇಳನ ಏರ್ಪಡಿಸಲಾಗಿದೆ ಎಂದು ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್. ಷಡಾಕ್ಷರಿ ಮಂಗಳವಾರ ಹೇಳಿದರು.

ಎಲ್ಲಾ ಸರ್ಕಾರಿ ನೌಕರರನ್ನು ಹಳೆಯ ಪಿಂಚಣಿ ವ್ಯವಸ್ಥೆಗೆ ಒಳಪಡಿಸಬೇಕು, ಏಳನೇ ವೇತನ ಆಯೋಗದ ವರದಿ ಜಾರಿ, ಸರ್ಕಾರಿ ನೌಕರರ ಕುಂಟುಂಬದವರಿಗೆ ಆರೋಗ್ಯ ವಿಮೆ ಯೋಜನೆ ಜಾರಿಗೆ ಹಕ್ಕೊತ್ತಾಯ ಮಂಡಿಸಲಾಗುವುದು ಎಂದು ತಿಳಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ. ಶಿವಕುಮಾರ್ ಭಾಗವಹಿಸಲಿದ್ದಾರೆ. ಅಂದಾಜು 3 ಲಕ್ಷ ಸರ್ಕಾರಿ ನೌಕರರು ಪಾಲ್ಗೊಳ್ಳುವ ನಿರೀಕ್ಷೆ ಇದೆ ಎಂದರು.

ರಾಜ್ಯ ಮಟ್ಟದ ಸಮ್ಮೇಳನದಲ್ಲಿ ಗೃಹ ಸಚಿವ ಜಿ. ಪರಮೇಶ್ವರ ಭರವಸೆ

'ಪ್ರವರ್ಗ 1'ಬಿ'ಗೆ ಸವಿತಾ ಸಮಾಜ: ಚರ್ಚಿಸಿ ಕ್ರಮ'

ಪ್ರಜಾವಾಣಿ ವಾರ್ತೆ



ಬೆಂಗಳೂರಿನಲ್ಲಿ ಮಂಗಳವಾರ ರಾಜ್ಯ ಸವಿತಾ ಕಲಾ ಸಂಘ ಆಯೋಜಿಸಿದ್ದ ರಾಜ್ಯಮಟ್ಟದ ಕಲಾ ಸಮ್ಮೇಳನ ಮತ್ತು ಕರ್ಪೂರಿ ಠಾಕೂರ್ ಅವರಿಗೆ ಗೌರವ ಸಮರ್ಪಣೆ ಕಾರ್ಯಕ್ರಮದಲ್ಲಿ (ಕುಳಿತವರು ಎಡದಿಂದ) ನಾದಸ್ವರ ಅಣ್ಣು, ಎ.ಎನ್‌.ರೆಡ್ಡಪ್ಪ, ನಾರಾಯಣಸ್ವಾಮಿ, ಮಿಟ್ಟೇಮರಿ ನರಸಿಂಹಲು ಮತ್ತು ವೇಣು ಅವರಿಗೆ 'ಕರ್ನಾಟಕ ಸವಿತಾ ಕಲಾಶ್ರೀ' ಪ್ರಶಸ್ತಿ ನೀಡಿ ಗೌರವಿಸಲಾಯಿತು. (ನಿಂತವರು ಎಡದಿಂದ) ಮುಖ್ಯಮಂತ್ರಿ ಸಲಹೆಗಾರ ಬಿ.ಆರ್‌.ಪಾಟೀಲ, ಚಿತ್ರಕಲಾ ಪರಿಷತ್ತಿನ ಅಧ್ಯಕ್ಷ ಬಿ.ಎಲ್‌.ಶಂಕರ್, ಸಚಿವ ಸತೀಶ ಜಾರಕಿಹೊಳಿ, ಕಲಬುರಗಿ ಜಿಲ್ಲೆಯ ಕುಂಚೂರು ಸವಿತಾ ಪೀಠದ ಸವಿತಾನಂದ ಸ್ವಾಮೀಜಿ, ಗೃಹ ಸಚಿವ ಜಿ.ಪರಮೇಶ್ವರ, ಸಚಿವರಾದ ಜಮೀರ್ ಅಹಮದ್ ಖಾನ್ ಹಾಗೂ ಕೆ.ಎನ್‌.ರಾಜಣ್ಣ, ವಿಧಾನ ಪರಿಷತ್ ಮಾಜಿ ಸದಸ್ಯ ಎಂ.ಸಿ.ವೇಣುಗೋಪಾಲ್ ಪಾಲ್ಗೊಂಡಿದ್ದರು — ಪ್ರಜಾವಾಣಿ ಚಿತ್ರ

ಬೆಂಗಳೂರು: ಪ್ರವರ್ಗ 2'ಎ'ನಲ್ಲಿರುವ ಸವಿತಾ ಸಮಾಜದವರನ್ನು ಪ್ರವರ್ಗ 1'ಬಿ'ಗೆ ಸೇರ್ಪಡೆ ಮಾಡಬೇಕು ಎಂಬ ಬೇಡಿಕೆಯ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಜತೆ ಚರ್ಚಿಸಿ ಕ್ರಮ ಕೈಗೊಳ್ಳಲಾಗುವುದು ಎಂದು ಗೃಹ ಸಚಿವ ಜಿ.ಪರಮೇಶ್ವರ ಹೇಳಿದರು.

ರಾಜ್ಯ ಸವಿತಾ ಕಲಾ ಸಂಘವು ನಗರದಲ್ಲಿ ಮಂಗಳವಾರ ಆಯೋಜಿಸಿದ್ದ ರಾಜ್ಯಮಟ್ಟದ ಸವಿತಾ ಕಲಾ ಸಮ್ಮೇಳನ ಹಾಗೂ ಬಿಹಾರದ ಮಾಜಿ ಮುಖ್ಯಮಂತ್ರಿ ದಿವಂಗತ ಕರ್ಪೂರಿ ಠಾಕೂರ್ ಅವರಿಗೆ ಗೌರವ ಸಮರ್ಪಣೆ ಸಮಾರಂಭದಲ್ಲಿ ಅವರು ಮಾತನಾಡಿದರು.

'ಪ್ರವರ್ಗ 2'ಎ'ನಲ್ಲಿ 214 ಜಾತಿಗಳಿದ್ದು ಅದರಲ್ಲಿ ಸವಿತಾ ಸಮಾಜ ಕಳೆದುಹೋಗಿದೆ. ಪ್ರವರ್ಗ 1'ಬಿ'ನಲ್ಲಿ ಕೆಲವೇ ಜಾತಿಗಳಿದ್ದು ಆ ಪ್ರವರ್ಗಕ್ಕೆ ಸೇರ್ಪಡೆಯಾದರೆ ಶೈಕ್ಷಣಿಕವಾಗಿ ಅನುಕೂಲವಾಗಲಿದೆ ಎಂಬುದು ಸಮುದಾಯದ ಬೇಡಿಕೆ. ಅದನ್ನು ಈಡೇರಿಸಲು ಪ್ರಯತ್ನಿಸಲಾಗು-ವುದು. ಅಭಿವೃದ್ಧಿ ನಿಗಮಕ್ಕೆ ₹50 ಕೋಟಿ ಅನುದಾನ ಮಂಜೂರು ಮಾಡುವುದೂ ಸೇರಿದಂತೆ 18 ಬೇಡಿಕೆಗಳಿದ್ದು, ಮುಖ್ಯಮಂತ್ರಿ ಅವರ ಗಮನಕ್ಕೆ ತರಲಾಗುವುದು' ಎಂದು ಭರವಸೆ ನೀಡಿದರು.

'ಸದ್ಯದಲ್ಲೇ ಸವಿತಾ ಸಮಾಜದ ಒಬ್ಬರನ್ನು ವಿಧಾನ ಪರಿಷತ್‌ಗೆ ನಾಮನಿರ್ದೇಶನ ಮಾಡಲಾಗುವುದು' ಎಂದು ಹೇಳಿದರು.

'ಠಾಕೂರ್ ಅವರು ಬದುಕಿದ್ದಾಗಲೇ ಭಾರತರತ್ನ ನೀಡದೇ ಈಗ ಗೌರವ ಕೊಡಲಾಗಿದೆ. ಕೇಂದ್ರ ಸರ್ಕಾರದ ನಿರ್ಧಾರದ ಹಿಂದೆ ರಾಜಕೀಯ ಕಾರಣವಿದೆ. ಇದಕ್ಕೆ ಟೀಕೆಗಳೂ ಬರುತ್ತಿವೆ' ಎಂದು ಜಿ.ಪರಮೇಶ್ವರ ಹೇಳಿದರು.

ವರದಿಗೆ ವಿರೋಧ ಸಲ್ಲದು: '₹168 ಕೋಟಿ ಖರ್ಚು ಮಾಡಿ, ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ನೇತೃತ್ವದಲ್ಲಿ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ನಡೆಸಲಾಗಿತ್ತು. ವರದಿಯ ಕೆಲವು ಅಂಶಗಳು ಬಹಿರಂಗವಾಗಿರುವ ಸಾಧ್ಯತೆಯಿದೆ. ಹೀಗಾಗಿ ವರದಿ ಸಲ್ಲಿಕೆಗೂ ಮುನ್ನವೇ ಕೆಲವರು ವಿರೋಧ ವ್ಯಕ್ತಪಡಿಸುತ್ತಿದ್ದಾರೆ. ಸರ್ಕಾರದ ಸವಲತ್ತು ಹಾಗೂ ಅವಕಾಶಗಳಿಂದ ವಂಚಿತರಾದವರ ಸಂಖ್ಯೆ ಎಷ್ಟಿದೆ ಎಂಬುದನ್ನು ತಿಳಿಯಲು ಸಮೀಕ್ಷೆ ನಡೆಸಿದ್ದರೂ ವಿರೋಧ ಮಾಡುತ್ತಿರುವುದು ಸರಿಯಲ್ಲ' ಎಂದು ಹೇಳಿದರು.

ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಮಾತನಾಡಿ, 'ಸವಿತಾ ಸಮಾಜದವರದ್ದು ಪ್ರಾಮಾಣಿಕ ಸೇವೆ. ಈ ಸಮಾಜಕ್ಕೆ ರಾಜಕೀಯ ಪ್ರಾತಿನಿಧ್ಯ ಕಲ್ಪಿಸಲಾಗುವುದು' ಎಂದು ಭರವಸೆ ನೀಡಿದರು.

ಸಂಘದ ಗೌರವಾಧ್ಯಕ್ಷ ಎನ್. ಶಿವಶಂಕರ್, ಅಧ್ಯಕ್ಷ ಕೆ.ಚಂದ್ರಶೇಖರ್ ಉಪಸ್ಥಿತರಿದ್ದರು.

> ಅತಿ ಹಿಂದುಳಿದ ಸವಿತಾ ಸಮಾಜದವರನ್ನು ಗಮನದಲ್ಲಿ ಇಟ್ಟುಕೊಂಡೇ ರಾಜ್ಯ ಸರ್ಕಾರಕ್ಕೆ ಆಯೋಗದ ವರದಿ ಸಲ್ಲಿಸಲಾಗುವುದು
>
> **ಜಯಪ್ರಕಾಶ್ ಹೆಗ್ಡೆ,** ಅಧ್ಯಕ್ಷ, ಹಿಂದುಳಿದ ವರ್ಗಗಳ ಆಯೋಗ

> ಪ್ರಾತಿನಿಧ್ಯ ಕಲ್ಪಿಸಲು ಕೆಲವರಿಗೆ ಚುನಾವಣೆಯಲ್ಲಿ ಟಿಕೆಟ್ ಕೊಡಲಾಗುತ್ತದೆ. ಅವರ ಸ್ನೇಹಿತರೇ ಕಾಲೆಳೆದು ಸೋಲಿಸುತ್ತಾರೆ. ನನ್ನನ್ನೂ ಆಪ್ತರೇ ಸೋಲಿಸಿದ್ದರು
>
> **ಜಿ.ಪರಮೇಶ್ವರ,** ಗೃಹ ಸಚಿವ

'ರಾಜಕೀಯ ಕಾರಣಕ್ಕೆ ಭಾರತರತ್ನ'

'ಲೋಹಿಯಾ ಒಡನಾಡಿಯಾಗಿದ್ದ ಕರ್ಪೂರಿ ಠಾಕೂರ್ ಅವರು ಬಿಹಾರದ ಮುಖ್ಯಮಂತ್ರಿ ಆಗಿದ್ದರು. ಕೆಳವರ್ಗದ ವ್ಯಕ್ತಿ ಮುಖ್ಯಮಂತ್ರಿ ಆಗಿದ್ದಕ್ಕೆ ಆ ರಾಜ್ಯದ ಕೆಲವರು ವಿರೋಧಿಸಿದ್ದರು. ಈಗ ಕೇಂದ್ರ ಸರ್ಕಾರವು ಅವರಿಗೆ ಪ್ರಾಮಾಣಿಕವಾಗಿ ಭಾರತರತ್ನ ಗೌರವ ನೀಡಿಲ್ಲ. ಚುನಾವಣೆಗೋಸ್ಕರ ಈ ಗೌರವ ನೀಡಿದೆ' ಎಂದು ಮುಖ್ಯಮಂತ್ರಿ ಸಲಹೆಗಾರ ಬಿ.ಆರ್.ಪಾಟೀಲ ದೂರಿದರು.

ದಾವಣಗೆರೆ ಲೋಕಸಭಾ ಕ್ಷೇತ್ರ: ಸಿದ್ದೇಶ್ವರಗೆ ಟಿಕೆಟ್ ಕೊಡದಂತೆ ಪಕ್ಷದ ಮುಖಂಡರ ಮೇಲೆ ರೇಣುಕಾಚಾರ್ಯ ಒತ್ತಡ

ಬಿಜೆಪಿ 'ಕದನ' ಯಡಿಯೂರಪ್ಪ ಮಧ್ಯಸ್ಥಿಕೆ

ಪ್ರಜಾವಾಣಿ ವಾರ್ತೆ

ಪ್ರಜಾ ಮತ ಜನತಂತ್ರದ ಹಬ್ಬ
ಲೋಕಸಭಾ ಚುನಾವಣೆ - 2024


ಯಡಿಯೂರಪ್ಪ


ಸಿದ್ದೇಶ್ವರ


ರೇಣುಕಾಚಾರ್ಯ

ಬೆಂಗಳೂರು: ದಾವಣಗೆರೆ ಜಿಲ್ಲಾ ಬಿಜೆಪಿಯಲ್ಲಿ ಆರಂಭವಾಗಿರುವ ಅಂತಃಯುದ್ಧಕ್ಕೆ ತೆರೆ ಎಳೆಯಲು ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ ಅವರು ಸಂಸದ ಜಿ.ಎಂ. ಸಿದ್ದೇಶ್ವರ ಮತ್ತು ಎಂ.ಪಿ.ರೇಣುಕಾಚಾರ್ಯ ನೇತೃತ್ವದ ವಿರೋಧಿ ಬಣಗಳನ್ನು ತಮ್ಮ ಮನೆಗೆ ಕರೆಸಿಕೊಂಡು ಸಂಧಾನ ನಡೆಸಿದರು.

ಈ ಬಾರಿ ಸಿದ್ದೇಶ್ವರ ಅವರನ್ನು ಕಣಕ್ಕೆ ಇಳಿಸಬಾರದು ಎಂದು ರೇಣುಕಾಚಾರ್ಯ ಮತ್ತು ಇತರರು ಪಟ್ಟು ಹಿಡಿದಿದ್ದರೆ, ತಾವೇ ಸ್ಪರ್ಧಿಸುವುದಾಗಿ ಸಿದ್ದೇಶ್ವರ ಹೇಳಿಕೊಂಡಿದ್ದಾರೆ. ಇಬ್ಬರನ್ನೂ ಸಮಾಧಾನಪಡಿಸಲು ಯಡಿಯೂರಪ್ಪ ಪ್ರಯತ್ನಿಸಿದರು.

'ಟಿಕೆಟ್ ವಿಚಾರವನ್ನು ವರಿಷ್ಠರೇ ತೀರ್ಮಾನಿಸುತ್ತಾರೆ. ವರಿಷ್ಠರ ತೀರ್ಮಾನಕ್ಕೆ ಬದ್ಧರಾಗಿ ಯಾರೇ ಅಭ್ಯರ್ಥಿ ಆದರೂ ಗೆಲ್ಲಿಸಬೇಕು' ಎಂದು ಎರಡೂ ಬಣಗಳಿಗೂ ತಿಳಿ ಹೇಳಿ ಕಳುಹಿಸಿದರು.

ದಾವಣಗೆರೆ ಕ್ಷೇತ್ರಕ್ಕೆ ಅಭ್ಯರ್ಥಿ ಯಾರಾಗಬೇಕು ಎಂಬ ಕುರಿತು ಯಡಿಯೂರಪ್ಪ ಅಭಿಪ್ರಾಯ ಕೇಳಲಾರಂಭಿಸಿದಾಗ, 'ಸಿದ್ದೇಶ್ವರ ಅವರಿಗೆ ಈ ಬಾರಿ ಟಿಕೆಟ್ ನೀಡಬಾರದು. ಕ್ಷೇತ್ರದಲ್ಲಿ ಅವರ ಬಗ್ಗೆ ವ್ಯಾಪಕ ವಿರೋಧವಿದೆ. ಸಂಸದರಾಗಿ ಏನೂ ಕೆಲಸ ಮಾಡಿಲ್ಲ. ಕಾರ್ಯಕರ್ತರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುತ್ತಿಲ್ಲ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿಗಳನ್ನೇ ಸೋಲಿಸಿದರು. ಅವರು ಈ ಬಾರಿ ಗೆಲ್ಲುವುದಿಲ್ಲ. ಆದ್ದರಿಂದ ಹೊಸಬರಿಗೆ ಟಿಕೆಟ್ ನೀಡಬೇಕು' ಎಂದು ಸಿದ್ದೇಶ್ವರ ವಿರೋಧಿ ಬಣ ಆಕ್ಷೇಪ ಎತ್ತಿತ್ತು.

'ಹೊಸಬರಿಗೆ ಟಿಕೆಟ್ ನೀಡಿದರೆ ಅಭ್ಯರ್ಥಿಗಳನ್ನು ಗೆಲ್ಲಿಸಲು ಶಕ್ತಿ ಮೀರಿ ಪ್ರಯತ್ನಿಸುತ್ತೇವೆ. ಸಿದ್ದೇಶ್ವರ ಚುನಾವಣೆಯಲ್ಲಿ ಗೆದ್ದ ಬಳಿಕ ಕ್ಷೇತ್ರದ ಕಡೆ ಮುಖವನ್ನೇ ಹಾಕುವುದಿಲ್ಲ. ಒಂದು ವೇಳೆ ಅವರಿಗೆ ಟಿಕೆಟ್ ನೀಡಿದರೆ ನಾವು ಯಾರೂ ಕೆಲಸ ಮಾಡುವುದಿಲ್ಲ. ಕ್ಷೇತ್ರದಲ್ಲಿ ಸಮೀಕ್ಷೆ ನಡೆಸಿ ಒಳ್ಳೆಯ ಅಭ್ಯರ್ಥಿಯನ್ನು ಕಣಕ್ಕೆ ಇಳಿಸಿ. ಕ್ಷೇತ್ರದಲ್ಲಿ ಗೆಲ್ಲುವ ವಾತಾವರಣವಿದೆ' ಎಂದು ಹೇಳಿದರು.

ಈ ಹಂತದಲ್ಲಿ ಸಿದ್ದೇಶ್ವರ ಮತ್ತು ಎಂ.ಪಿ. ರೇಣುಕಾಚಾರ್ಯ ಮಧ್ಯೆ ಮಾತಿನ ಜಟಾಪಟಿ ನಡೆಯಿತು. ತಮ್ಮ ಪರವಾಗಿ ಜಿಲ್ಲೆಯ ಯಾವುದೇ ಸದಸ್ಯರು ಬಾಯಿ ಬಿಡದೇ ಇದ್ದಾಗ, ಸಿದ್ದೇಶ್ವರ ಕುಪಿತಗೊಂಡು ಸಭೆಯಿಂದ ಹೊರ ನಡೆಯಲು ಮುಂದಾದಾಗ ಯಡಿಯೂರಪ್ಪ ಅವರನ್ನು ಸಮಾಧಾನ ಮಾಡಿ ಕೂರಿಸಿದರು.

ಆಗ ಮಧ್ಯಪ್ರವೇಶಿಸಿ ಮಾತನಾಡಿದ ಯಡಿಯೂರಪ್ಪ, 'ಟಿಕೆಟ್ ಯಾರಿಗೆ ಕೊಡಬೇಕು ಬಿಡಬೇಕು ಎಂಬ ಬಗ್ಗೆ ಶಾಸಕರು ಮತ್ತು ಕಾರ್ಯಕರ್ತರ ಅಭಿಪ್ರಾಯ ತೆಗೆದುಕೊಂಡು ಮೇಲಿನವರಿಗೆ ತಿಳಿಸುತ್ತೇವೆ. ಅಂತಿಮವಾಗಿ ವರಿಷ್ಠರೇ ನಿರ್ಧರಿಸುತ್ತಾರೆ. ಹಾದಿಬೀದಿ ಜಗಳ ಮಾಡುವುದು ಸರಿಯಲ್ಲ. ಯಾರೂ ಕೂಡ ನನಗೇ ಟಿಕೆಟ್ ಎಂದು ಹೇಳಿಕೊಂಡು ಓಡಾಡಬಾರದು. ಪಕ್ಷದ ಅಭ್ಯರ್ಥಿಗಳನ್ನು ಗೆಲ್ಲಿಸುವ ಕಡೆಗೆ ಗಮನ ಹರಿಸಬೇಕು' ಎಂದು ಕಿವಿಮಾತು ಹೇಳಿದರು.

ಸಭೆಯಲ್ಲಿ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ, ಮಾಜಿ ಸಚಿವ ಕೆ.ಎಸ್. ಈಶ್ವರಪ್ಪ, ಶಾಸಕ ಬಿ.ಪಿ.ಹರೀಶ್, ಮಾಜಿ ಸಚಿವ ಎಸ್.ಎ. ರವೀಂದ್ರನಾಥ್, ಮಾಜಿ ಶಾಸಕ ಗುರುಸಿದ್ದನಗೌಡ ಭಾಗವಹಿಸಿದ್ದರು.

'ಕೈ' ಪ್ರಬಲ ಆಕಾಂಕ್ಷಿ ವಿನಯಕುಮಾರ್

ದಾವಣಗೆರೆ ಲೋಕಸಭಾ ಕ್ಷೇತ್ರದಿಂದ ಕಾಂಗ್ರೆಸ್ ಟಿಕೆಟ್‌ಗೆ ತೀವ್ರ ಪೈಪೋಟಿ ಏರ್ಪಟ್ಟಿದೆ. ಸಚಿವ ಎಸ್.ಎಸ್. ಮಲ್ಲಿಕಾರ್ಜುನ ಅವರ ಪತ್ನಿ ಡಾ. ಪ್ರಭಾ ಮಲ್ಲಿಕಾರ್ಜುನ ಅವರನ್ನು ಕಣಕ್ಕಿಳಿಸಲು ಶಾಮನೂರು ಶಿವಶಂಕರಪ್ಪ ಕುಟುಂಬ ಮನಸು ಮಾಡಿದರೆ, ಇನ್ನೊಂದೆಡೆ 'ಇನ್‌ಸೈಟ್ಸ್ ಐಎಎಸ್' ಸಂಸ್ಥೆಯ ಸಂಸ್ಥಾಪಕ, ದಾವಣಗೆರೆ ತಾಲ್ಲೂಕಿನ ಕಕ್ಕರಗೊಳ್ಳದವರಾದ ಜಿ.ಬಿ. ವಿನಯಕುಮಾರ್ ಕೂಡಾ ಪ್ರಬಲ ಆಕಾಂಕ್ಷಿಯಾಗಿದ್ದಾರೆ.

ಕಳೆದೊಂದು ವರ್ಷದಿಂದ ವಿನಯಕುಮಾರ್ ಅವರು ಸಕ್ರಿಯರಾಗಿದ್ದಾರೆ. ಕ್ಷೇತ್ರದಾದ್ಯಂತ 'ವಿನಯ ನಡಿಗೆ ಹಳ್ಳಿ ಕಡೆಗೆ' ಹೆಸರಿನ ಪಾದಯಾತ್ರೆ ಕೈಗೊಂಡು ಅವರು ಜನರನ್ನು ಭೇಟಿ ಮಾಡುತ್ತಿದ್ದಾರೆ. 'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಬೆಂಬಲ ಇರುವುದರಿಂದ ಟಿಕೆಟ್ ದೊರೆಯಲಿದೆ ಎಂಬ ಸಂಪೂರ್ಣ ವಿಶ್ವಾಸವೂ ವಿನಯಕುಮಾರ್ ಅವರಲ್ಲಿದೆ' ಎಂದು ಮಾತು ಕಾಂಗ್ರೆಸ್ ವಲಯದಲ್ಲಿದೆ.

'ಕಾಂಗ್ರೆಸ್‌ನಿಂದ ಎರಡು ತಲೆ ರಾಜಕಾರಣ'

ಬೆಂಗಳೂರು: 'ತೆರಿಗೆ ಪಾಲು ಮತ್ತು ಅನುದಾನದ ಹಂಚಿಕೆಯಲ್ಲಿ ಕೇಂದ್ರ ಸರ್ಕಾರದಿಂದ ಅನ್ಯಾಯವಾಗುತ್ತಿದೆ ಎಂದು ಆರೋಪಿಸಿ ಪ್ರತಿಭಟನೆ ನಡೆಸಲು ಹೊರಟಿರುವ ಕಾಂಗ್ರೆಸ್ ಪಕ್ಷವು ಎರಡು ತಲೆಯ ರಾಜಕಾರಣ ಮಾಡುತ್ತಿದೆ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಟೀಕಿಸಿದ್ದಾರೆ.

'ಎಕ್ಸ್'ನಲ್ಲಿ ಪ್ರತಿಕ್ರಿಯಿಸಿರುವ ಅವರು, 'ಪ್ರತಿಭಟನೆ ನಡೆಸಲು ರಾಜ್ಯದ ಕಾಂಗ್ರೆಸ್ ನಾಯಕರು ದೆಹಲಿ ಯಾತ್ರೆಗೆ ಹೊರಟಿದ್ದಾರೆ. ಆದರೆ, ಇದೇ ವಿಚಾರದಲ್ಲಿ ಕೇರಳದ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ನೇತೃತ್ವದಲ್ಲಿ ಹಮ್ಮಿಕೊಂಡಿರುವ ಹೋರಾಟವನ್ನು ಅಲ್ಲಿನ ಕಾಂಗ್ರೆಸ್ ನಾಯಕರು ವಿರೋಧಿಸುತ್ತಿದ್ದಾರೆ. ಕಾಂಗ್ರೆಸ್ ಇಬ್ಬಗೆ ನೀತಿ ಅನುಸರಿಸುತ್ತಿದೆ' ಎಂದು ದೂರಿದ್ದಾರೆ.

'ವಿಜಯನ್ ಅವರು ಕರೆದಿದ್ದ ಸರ್ವಪಕ್ಷ ಸಭೆಗೆ ಕಾಂಗ್ರೆಸ್ ಸಹಕಾರ ನೀಡಿಲ್ಲ. ಕೇಂದ್ರದ ವಿರುದ್ಧ ಕೇರಳ ವಿಧಾನಸಭೆಯಲ್ಲಿ ನಿರ್ಣಯ ಕೈಗೊಳ್ಳುವಾಗಲೂ ಗೈರಾಗಿದ್ದಾರೆ' ಎಂದಿದ್ದಾರೆ.

ಕೆಎಎಸ್ 384 ಹುದ್ದೆ: ಅಧಿಸೂಚನೆಗೆ ಅಸ್ತು

ಶೇಕಡ 50ರಷ್ಟು ಸದಸ್ಯರ ಹಾಜರಾತಿಯಲ್ಲಿ ಕೆಪಿಎಸ್‌ಸಿ ಸಭೆ • ಅಧ್ಯಕ್ಷ, ಐವರು ಸದಸ್ಯರು ಗೈರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಧ್ಯಕ್ಷರು ಮತ್ತು ಐವರು ಸದಸ್ಯರ ಅನುಪಸ್ಥಿತಿ ಯಲ್ಲಿ ಕೆಪಿಎಸ್‌ಸಿ ಸಭೆ ಮಂಗಳವಾರ (ಫೆ. 6) ಮತ್ತೊಮ್ಮೆ ನಡೆದಿದೆ. ಈ ಸಭೆಯಲ್ಲಿ ಗೆಜೆಟೆಡ್ ಪ್ರೊಬೇಷನರಿ 384 ಹುದ್ದೆಗಳು ಸೇರಿದಂತೆ ವಿವಿಧ ಹುದ್ದೆಗಳ ಭರ್ತಿಗೆ ತಕ್ಷಣವೇ ಅಧಿಸೂಚನೆ ಹೊರಡಿಸಲು ತೀರ್ಮಾನಿಸಲಾಗಿದೆ.

'ಅಧ್ಯಕ್ಷ ಶಿವಶಂಕರಪ್ಪ ಎಸ್. ಸಾಹುಕಾರ್ ಅವರ ಬರುವಿಕೆಗಾಗಿ ಸುಮಾರು 2 ಗಂಟೆ ಕಾಯಲಾಗಿತ್ತು. ನಂತರ ಹಿರಿಯ ಸದಸ್ಯ ರೊನಾಲ್ಡ್ ಅನಿಲ್ ಫರ್ನಾಂಡಿಸ್ ಅವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ಸದಸ್ಯರಾದ ಆರ್. ಗಿರೀಶ್, ಡಾ. ಬಿ. ಪ್ರಭುದೇವ, ಡಾ. ಶಾಂತಾ ಹೊಸಮನಿ, ಶಕುಂತಲಾ ಎಸ್. ದುಂಡಿಗೌಡರ್ ಮತ್ತು ಕಾರ್ಯದರ್ಶಿ ಕೆ.ಎಸ್. ಲತಾಕುಮಾರಿ ಇದ್ದರು' ಎಂದು ಕೆಪಿಎಸ್‌ಸಿ ಮೂಲಗಳು ತಿಳಿಸಿವೆ.

ಆಯೋಗದ ಕಾನೂನು ಕೋಶದ ಮುಖ್ಯಸ್ಥರ ನೇಮಕ ಆದೇಶ ಹೊರಡಿಸುವವರೆಗೆ ಆಯೋಗದ ಸಭೆಗಳಿಗೆ ಹಾಜರಾಗುವುದಿಲ್ಲವೆಂದು ಪತ್ರ ನೀಡಿದ್ದ ಸದಸ್ಯರಾದ ವಿಜಯಕುಮಾರ್ ಡಿ. ಕುಚನೂರೆ, ಎಂ.ಬಿ. ಹೆಗ್ಗಣ್ಣವರ, ಡಾ. ಎಚ್.ಎಸ್. ನರೇಂದ್ರ, ಬಿ.ವಿ. ಗೀತಾ ಮತ್ತು ಮುಸ್ತಫಾ ಹುಸೇನ್ ಸಯ್ಯದ್ ಅಝೀಜ್ ಗೈರಾದರು.

2023-24ನೇ ಸಾಲಿನ ಗ್ರೂಪ್ 'ಎ' ಮತ್ತು 'ಬಿ' ವೃಂದದ ಗೆಜೆಟೆಡ್ ಪ್ರೊಬೇಷನರಿ ಒಟ್ಟು 384 ಹುದ್ದೆಗಳಿಗೆ ಸಂಬಂಧಿಸಿದಂತೆ ನೇಮಕಾತಿ ಅಧಿಸೂಚನೆ ಹೊರಡಿಸಲು ಮತ್ತು ಈ ನೇಮಕಾತಿ ಪ್ರಕ್ರಿಯೆಗಳಿಗೆ ಕಾರ್ಯದರ್ಶಿ ಸಿದ್ಧಪಡಿಸಿರುವ ತಾತ್ಕಾಲಿಕ ವೇಳಾ ಪಟ್ಟಿಗೂ ಅನುಮೋದನೆ ನೀಡಲಾಗಿದ್ದು, ಅದರಂತೆ ಕ್ರಮ ವಹಿಸಲು ಸಭೆಯಲ್ಲಿ ತೀರ್ಮಾನಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ರಾಜ್ಯದ ವಿವಿಧ ಇಲಾಖೆಗಳಿಂದ ಗ್ರೂಪ್ 'ಎ', 'ಬಿ', 'ಸಿ' ವೃಂದದ ಹುದ್ದೆಗಳ ಭರ್ತಿಗೆ ಬಂದ ಪ್ರಸ್ತಾವನೆಗಳಲ್ಲಿ ಕ್ರಮ ಬದ್ಧವಾದವುಗಳಿಗೆ ಕೂಡಲೇ ಅಧಿಸೂಚನೆ ಹೊರಡಿಸಲು ಅನುಮೋದನೆ ನೀಡಲಾಗಿದೆ. ಪೌರಾಡಳಿತ ನಿರ್ದೇಶನಾಲಯದಲ್ಲಿನ ನಗರ ಸ್ಥಳೀಯ ಸಂಸ್ಥೆಗಳಲ್ಲಿನ ಪ್ರಥಮ ದರ್ಜೆ ಕಂದಾಯ ನಿರೀಕ್ಷಕರ 37 ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ ಹೆಚ್ಚುವರಿ ಪಟ್ಟಿ ಮತ್ತು ಅಲ್ಪಸಂಖ್ಯಾತ ನಿರ್ದೇಶನಾಲಯದಲ್ಲಿ ಮೊರಾರ್ಜಿ ವಸತಿ ಶಾಲೆಗಳಲ್ಲಿನ ವಿದ್ಯಾರ್ಥಿ ನಿಲಯಗಳ ನಿಲಯ ಪಾಲಕರು 50 ಹುದ್ದೆಗಳ ನೇಮಕಾತಿಗೆ ಹೆಚ್ಚುವರಿ ಆಯ್ಕೆ ಪಟ್ಟಿ ಸಿದ್ಧಪಡಿಸಿ ಪ್ರಕಟಿಸಲು ಅನುಮೋದನೆ ನೀಡಲಾಗಿದೆ. ಅಲ್ಲದೆ, ಜ. 31ರಂದು ನಡೆದಿದ್ದ ಆಯೋಗದ ಸಭೆಯಲ್ಲಿ ವಿವಿಧ ಒಂಬತ್ತು ನೇಮಕಾತಿ ಅಧಿಸೂಚನೆಗಳ ಅಂತಿಮ ಆಯ್ಕೆ ಪಟ್ಟಿಗೆ ಅನುಮೋದನೆ ನೀಡಿ, ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿತ್ತು. ಆ ಸಭೆಯ ನಡಾವಳಿಯನ್ನೂ ಸ್ಥಿರೀಕರಿಸಲಾಯಿತು ಎಂದು ಗೊತ್ತಾಗಿದೆ.

'ಆಯೋಗದ ಕಾನೂನು ಕೋಶದ ಮುಖ್ಯಸ್ಥ ಹುದ್ದೆಯ ಭರ್ತಿಗೆ ನ. 15ರಂದು ಹೊರಡಿಸಿದ್ದ ಅಧಿಸೂಚನೆ ಹಿಂಪಡೆದು ಜ. 9ರಂದು ಹೊಸದಾಗಿ ಹೊರಡಿಸಲಾಗಿತ್ತು. ಈ ಕುರಿತು ಚರ್ಚೆ ನಡೆದಿದ್ದು, ಹೊಸ ಅಧಿಸೂಚನೆಯಂತೆ ಆಯ್ಕೆ ಪ್ರಕ್ರಿಯೆ ಕೈಗೊಳ್ಳಲು ತೀರ್ಮಾನಿಸಲಾಗಿದೆ' ಎಂದೂ ಮೂಲಗಳು ತಿಳಿಸಿವೆ.

ರಜೆ ಮೇಲೆ ತೆರಳುವಂತೆ ಕಾರ್ಯದರ್ಶಿಗೆ ಒತ್ತಡ?

'ಈಗಾಗಲೇ ಆಯೋಗದ ಆಯ್ಕೆ ಸಮಿತಿ ಸೂಚಿಸಿದ್ದ ಅಭ್ಯರ್ಥಿಯನ್ನು ಕಾನೂನು ಕೋಶದ ಮುಖ್ಯಸ್ಥ ಹುದ್ದೆಗೆ ನೇಮಿಸಿ ತಕ್ಷಣ ಆದೇಶ ಹೊರಡಿಸಬೇಕು. ಅದು ಸಾಧ್ಯವಾಗದೇ ಇದ್ದರೆ ರಜೆ ಮೇಲೆ ತೆರಳಬೇಕು' ಎಂದು ಕಾರ್ಯದರ್ಶಿ ಕೆ.ಎಸ್. ಲತಾಕುಮಾರಿ ಅವರ ಮೇಲೆ ಒತ್ತಡ ಹೇರಲಾಗುತ್ತಿದೆ ಎಂದೂ ಗೊತ್ತಾಗಿದೆ.

ಸಭೆಯಲ್ಲಿ ಶೇ 50ರಷ್ಟು ಕೋರಂ: ಕೆಪಿಎಸ್‌ಸಿ ಕಾಯ್ದೆ 1959ರ ಪ್ರಕಾರ ಆಯೋಗದ ಸಭೆ ನಡೆಸಲು ಕನಿಷ್ಠ ಶೇ 50ರಷ್ಟು ಸದಸ್ಯರು ಹಾಜರಿರಬೇಕು. ಸದ್ಯ ಆಯೋಗದಲ್ಲಿ 10 ಸದಸ್ಯರಿದ್ದು (ಅಧ್ಯಕ್ಷರನ್ನು ಹೊರತುಪಡಿಸಿ) ಸಭೆಯ ಕೋರಂಗೆ ಕನಿಷ್ಠ ಐವರು ಸದಸ್ಯರು ಇರಬೇಕು. ಜ. 31ರಂದು ನಡೆದ ಸಭೆಯಲ್ಲಿ ನಾಲ್ವರು ಸದಸ್ಯರು ಮಾತ್ರ ಹಾಜರಿದ್ದುದರಿಂದ, ಆ ಸಭೆಯು ಅನಧಿಕೃತ ಮತ್ತು ಕಾನೂನುಬಾಹಿರ ಎಂದು ಮುಖ್ಯ ಕಾರ್ಯದರ್ಶಿಗೆ ಅಧ್ಯಕ್ಷ ಶಿವಶಂಕರಪ್ಪ ಸಾಹುಕಾರ್ ಪತ್ರ ಬರೆದಿದ್ದರು. ಆದರೆ, ಮಂಗಳವಾರದ ಸಭೆಗೆ ಐವರು ಸದಸ್ಯರು ಹಾಜರಾಗಿದ್ದರು.

'ಶಿಕ್ಷಣ ಅನುದಾನದಲ್ಲೂ ತಾರತಮ್ಯ'

ಪ್ರಜಾವಾಣಿ ವಾರ್ತೆ


ಮಧು ಬಂಗಾರಪ್ಪ

ಮೈಸೂರು: 'ಸಮಗ್ರ ಶಿಕ್ಷಣ ಕರ್ನಾಟಕ (ಹಿಂದಿನ ಸರ್ವ ಶಿಕ್ಷಣ ಅಭಿಯಾನ) ಯೋಜನೆ ಅನುದಾನ ಹಂಚಿಕೆಯಲ್ಲೂ ಕೇಂದ್ರ ಸರ್ಕಾರ ರಾಜ್ಯಕ್ಕೆ ತಾರತಮ್ಯ ಮಾಡುತ್ತಿದೆ. ಪತ್ರ ಬರೆದರೂ ಪ್ರತಿಕ್ರಿಯಿಸುತ್ತಿಲ್ಲ' ಎಂದು ಶಿಕ್ಷಣ ಸಚಿವ ಮಧು ಬಂಗಾರಪ್ಪ ದೂರಿದರು.

'ಈ ಯೋಜನೆಯಡಿ ಪ್ರತಿ ಮಗುವಿಗೆ ಕೇಂದ್ರ ಸರ್ಕಾರವು ತಮಿಳುನಾಡು, ಗುಜರಾತ್ ರಾಜ್ಯಗಳಿಗೆ ವಾರ್ಷಿಕ ₹5,500-6,000 ನೀಡುತ್ತಿದೆ. ಕರ್ನಾಟಕಕ್ಕೆ ಮಾತ್ರ ₹2,400-2,800 ನಿಗದಿಪಡಿಸಿದೆ. ಅದನ್ನೂ ನೀಡಿಲ್ಲ' ಎಂದು ತಿಳಿಸಿದರು.

'ರಾಜ್ಯದ ಅಧಿಕಾರಿಗಳ ತಂಡವು ಹಲವು ಬಾರಿ ದೆಹಲಿಗೆ ತೆರಳಿ ಮನವಿಯನ್ನು ಸಲ್ಲಿಸಿದೆ. ಕೇಂದ್ರ ಶಿಕ್ಷಣ ಸಚಿವರ ಭೇಟಿಗೆ ಸಮಯ ಕೇಳಿದ್ದೇನೆ. ಈವರೆಗೆ ಅವಕಾಶ ನೀಡಿಲ್ಲ' ಎಂದು ಅವರು ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಆರೋಪಿಸಿದರು.

ರಾಗಿ ಮಾಲ್ಟ್: 'ಸರ್ಕಾರಿ ಶಾಲೆಗಳಲ್ಲಿ ಮಕ್ಕಳಿಗೆ ಹಾಲಿನೊಂದಿಗೆ ರಾಗಿ ಮಾಲ್ಟ್ ವಿತರಣೆಗೆ 10-15 ದಿನದಲ್ಲಿ ಚಾಲನೆ ಸಿಗಲಿದೆ. ವಾರದಲ್ಲಿ ಮೂರು ದಿನ ರಾಗಿ ಮಾಲ್ಟ್, ಎರಡು ದಿನ ಮೊಟ್ಟೆ ನೀಡಲಾಗುವುದು. ಈಗ ವಾರಕ್ಕೆ ಒಂದು ದಿನ ಮೊಟ್ಟೆ ನೀಡುತ್ತಿದ್ದು, ಇನ್ನೊಂದು ದಿನ ನೀಡಿದಲ್ಲಿ ₹160 ಕೋಟಿ ಹೆಚ್ಚುವರಿ ಹಣ ಬೇಕಾಗುತ್ತದೆ. ಅದನ್ನು ಸಿಎಸ್‌ಆರ್ ನಿಧಿಯಿಂದ ಸಂಗ್ರಹಿಸಲಾಗುವುದು' ಎಂದರು.

ನೀಟ್ ತರಬೇತಿ: 'ಸರ್ಕಾರದಿಂದಲೇ ಕೇಂದ್ರಗಳನ್ನು ತೆರೆದು, ಮಕ್ಕಳಿಗೆ ನೀಟ್ (NEET) ಪರೀಕ್ಷೆಗೆ ತರಬೇತಿಯನ್ನು ನೀಡಲು ಉದ್ದೇಶಿಸಲಾಗಿದೆ. ಈ ಬಜೆಟ್‌ನಲ್ಲಿ ಮುಖ್ಯಮಂತ್ರಿಯವರೇ ಇದನ್ನು ಘೋಷಿಸುವ ಸಾಧ್ಯತೆ ಇದೆ' ಎಂದರು.

'ಸರ್ಕಾರಿ ಶಾಲೆಗಳಿಗೆ ಉಚಿತ ವಿದ್ಯುತ್ ನೀಡುತ್ತಿದ್ದು, ಅದನ್ನು ಬಳಸಿಕೊಂಡು, ಕಲಿಕೆಯಲ್ಲಿ ಹಿಂದೆ ಉಳಿದಿರುವ ಮಕ್ಕಳಿಗೆ ವಾರದಲ್ಲಿ ಮೂರು ದಿನ ವಿಶೇಷ ತರಗತಿಗಳನ್ನು ನಡೆಸಲಾಗುವುದು' ಎಂದರು.

'ಮಾರ್ಚ್ 1ರಂದು ಶುಕ್ರವಾರ ನಮಾಜ್‌ಗೆ ಅವಕಾಶ ಕಲ್ಪಿಸಲು ಎಸ್ಸೆಸ್ಸೆಲ್ಸಿ ವಿಜ್ಞಾನ ಪರೀಕ್ಷೆಯನ್ನು ಮಧ್ಯಾಹ್ನಕ್ಕೆ ಮುಂದೂಡಲಾಗಿದೆ' ಎಂದು ಚಕ್ರವರ್ತಿ ಸೂಲಿಬೆಲೆ ಎಂಬ ತಲೆಹರಟೆ ಹಾಗೂ ಕೆಲವು ಬಿಜೆಪಿ ನಾಯಕರು ತಪ್ಪು ಸಂದೇಶ ಹರಡುತ್ತಿದ್ದಾರೆ. ವಾಸ್ತವದಲ್ಲಿ, ಮಾರ್ಚ್ 1ರಿಂದ ದ್ವಿತೀಯ ಪಿಯು ಪರೀಕ್ಷೆ ಶುರುವಾಗುವುದರಿಂದ ಪರೀಕ್ಷೆಯನ್ನು ಮಧ್ಯಾಹ್ನಕ್ಕೆ ಮರು ನಿಗದಿಪಡಿಸಲಾಗಿದೆ. ಸಾಮಾಜಿಕ ಜಾಲತಾಣಗಳ ಮೂಲಕ ವಿಷಬೀಜ ಬಿತ್ತುವವರ ವಿರುದ್ಧ ಪ್ರಕರಣ ದಾಖಲಿಸಲಾಗುವುದು' ಎಂದು ಎಚ್ಚರಿಸಿದರು.

'ಮಕ್ಕಳಿಂದ ಹಣ ವಸೂಲಿ ಮಾಡಿ ಸರ್ಕಾರ ಖಜಾನೆ ತುಂಬಿಸಿಕೊಳ್ಳುವ ಮಟ್ಟಕ್ಕೆ ಇಳಿದಿದೆ ಎಂದು ಎಚ್.ಡಿ.ಕುಮಾರಸ್ವಾಮಿ ಆರೋಪಿಸಿದ್ದಾರೆ. ವಾಸ್ತವದಲ್ಲಿ ಬಿಜೆಪಿ ಸರ್ಕಾರ ಅದನ್ನು ಜಾರಿಗೆ ತಂದಿತ್ತು. ನಾವು ಶುಲ್ಕ ಕಡಿಮೆ ಮಾಡಿದ್ದೇವೆ. ಅಷ್ಟೂ ಮಕ್ಕಳಿಂದ ಸಂಗ್ರಹವಾಗುವ ₹5 ಕೋಟಿಯಿಂದ ಖಜಾನೆ ತುಂಬುತ್ತದೆಯೇ' ಎಂದು ಪ್ರಶ್ನಿಸಿದರು.

ಜಿಲ್ಲಾ ಉಸ್ತುವಾರಿ ಸ್ಥಾನದಿಂದ ಜಮೀರ್ ಬದಲಿಸಲು ಆಗ್ರಹ

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): 'ವಿಜಯನಗರ ಜಿಲ್ಲಾ ಉಸ್ತುವಾರಿ ಸಚಿವ ಜಮೀರ್ ಅಹಮದ್ ಖಾನ್ ಅವರನ್ನು ಕೂಡಲೇ ಇಲ್ಲಿನ ಉಸ್ತುವಾರಿಯಿಂದ ಮುಕ್ತಗೊಳಿಸಬೇಕು. ಇಲ್ಲದಿದ್ದರೆ, ಈಗ ಮೂರು ಬಣವಾಗಿರುವ ಕಾಂಗ್ರೆಸ್ ಪಕ್ಷ ಇನ್ನಷ್ಟು ಛಿದ್ರವಾಗಲಿದೆ' ಎಂದು ಪಕ್ಷದ ಜಿಲ್ಲಾ ಘಟಕದ ಅಧ್ಯಕ್ಷ ಸಿರಾಜ್ ಶೇಖ್ ಮಂಗಳವಾರ ಎಚ್ಚರಿಕೆ ನೀಡಿದರು.

'ಜಿಲ್ಲೆಗೆ ಅಪರೂಪಕ್ಕೆ ಬರುವ ಸಚಿವರು ತಮ್ಮದೇ ವಸತಿ ಇಲಾಖೆಯ ಸಮಸ್ಯೆಗಳನ್ನು ಬಗೆಹರಿಸುತ್ತಿಲ್ಲ. ಬದಲಿಗೆ ₹ 5 ಸಾವಿರ ಕೊಟ್ಟು ಪ್ರಚಾರ ಪಡೆಯುವ ಗೀಳು ಶುರುವಾಗಿದೆ. ಅವರ ವಿರುದ್ಧ ಭ್ರಷ್ಟಾಚಾರದ ದೂರುಗಳಿವೆ. ಇನ್ನಷ್ಟು ದಿನ ಉಸ್ತುವಾರಿ ಸಚಿವರಾಗಿ ಮುಂದುವರಿದರೆ, ಪಕ್ಷಕ್ಕೆ ಸರಿಪಡಿಸಲಾಗದ ಹಾನಿ ಆಗಬಹುದು' ಎಂದು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ಜಮೀರ್ ಅಹಮದ್ ಅವರು ಜಿಲ್ಲಾಧಿಕಾರಿ ಕಚೇರಿಯಲ್ಲಿ ಖಾಸಗಿ ಏಜೆಂಟರ ಮೂಲಕ ಕೆಲಸ ಮಾಡಿಸುತ್ತಾರೆ. ಅಂಥ ಮೂರು-ನಾಲ್ಕು ಜನ ಸರ್ಕಾರಿ ವೇದಿಕೆ, ಫ್ಲೆಕ್ಸ್‌ಗಳಲ್ಲಿ ಕಾಣಿಸಿಕೊಳ್ಳುತ್ತಾರೆ. ಇಲ್ಲಿ ಶಾಸಕರು, ಪಕ್ಷದ ಅಧ್ಯಕ್ಷರು ಮತ್ತು ಕಾರ್ಯಕರ್ತರನ್ನು ಕಡೆಗಣಿಸಿ ತಮ್ಮ ಇಷ್ಟದಂತೆ ಕೆಲಸ ಮಾಡಿಸಿಕೊಳ್ಳುತ್ತಾರೆ' ಎಂದು ಆರೋಪಿಸಿದರು.

'ಸಚಿವರು ಸಿ.ಎಂಗೆ ಆಪ್ತ ಆಗಿರಬಹುದು. ಅವರ ವಿರುದ್ಧ ಮಾತನಾಡಿದ್ದಕ್ಕೆ ಅಧ್ಯಕ್ಷ ಸ್ಥಾನದಿಂದ ಪದಚ್ಯುತಿಗೊಳಿಸುವ ಸಾಧ್ಯತೆ ಇದೆ. ಅದಕ್ಕೆ ಸಿದ್ಧನಿದ್ದೇನೆ. ಪಕ್ಷಕ್ಕೆ ಹಾನಿ ತಪ್ಪಿಸಲು ಸಚಿವರ ವಿರುದ್ಧ ಧ್ವನಿ ಎತ್ತಿದ್ದೇನೆ' ಎಂದರು.

ಅನುದಾನ ಹಂಚಿಕೆ: ಜಟಾಪಟಿ ತಾರಕಕ್ಕೆ

ಒಂದನೇ ಪುಟದಿಂದ...

ಕರ್ನಾಟಕದ ಕಾಂಗ್ರೆಸ್ ಸರ್ಕಾರವು 'ನನ್ನ ತೆರಿಗೆ ನನ್ನ ಹಕ್ಕು-ಚಲೋ ದಿಲ್ಲಿ' ಹೆಸರಿನಲ್ಲಿ ಇದೇ 7ರಂದು (ಬುಧವಾರ) ಜಂತರ್‌ಮಂತರ್‌ನಲ್ಲಿ ಪ್ರತಿಭಟನೆ ಹಮ್ಮಿಕೊಂಡಿದೆ. ಇಂತಹ ಸಂದರ್ಭದಲ್ಲಿ, ಕೇಂದ್ರ ಸರ್ಕಾರದ ಹಲವು ಇಲಾಖೆಗಳು ಅನುದಾನ ಬಳಕೆಯಲ್ಲಿ ಭಾರಿ ಹಿಂದುಳಿದಿರುವುದು ಮುನ್ನೆಲೆಗೆ ಬಂದಿದೆ.

ಪ್ರಮುಖ ಕಲ್ಯಾಣ ಕಾರ್ಯಕ್ರಮಗಳನ್ನು ಜನರಿಗೆ ಮುಟ್ಟಿಸುವ ಉದ್ದೇಶದಿಂದ ಕೇಂದ್ರ ಸರ್ಕಾರವು 'ವಿಕಸಿತ ಭಾರತ ಸಂಕಲ್ಪ ಯಾತ್ರೆ' ನಡೆಸುತ್ತಿದೆ. ಈ ಯಾತ್ರೆ ಮೂಲಕ 15 ಕೋಟಿಗೂ ಅಧಿಕ ಫಲಾನುಭವಿಗಳನ್ನು ತಲುಪಲಾಗಿದೆ ಎಂದು ಹೇಳಿಕೊಂಡಿದೆ. ಈ ಯಾತ್ರೆಯು ಸರ್ಕಾರದ ಪ್ರಮುಖ ಕಲ್ಯಾಣ ಯೋಜನೆಗಳಾದ ಆಯುಷ್ಮಾನ್ ಭಾರತ್, ಪಿಎಂ ಆವಾಸ್, ಪಿಎಂ ಕಿಸಾನ್ ಸಮ್ಮಾನ್‌ನ ಈಗಿರುವ ಹಾಗೂ ಹೊಸ ಫಲಾನುಭವಿಗಳನ್ನು ತಲುಪುವ ಗುರಿಯನ್ನು ಹೊಂದಿದೆ. ಆದರೆ, ಕಲ್ಯಾಣ ಕಾರ್ಯಕ್ರಮಗಳನ್ನು ಜಾರಿಗೊಳಿಸುವ ಇಲಾಖೆಗಳ ಸಾಧನೆ ಆಶಾದಾಯಕವಾಗಿಲ್ಲ.

'2023-24ನೇ ಸಾಲಿನಲ್ಲಿ ಅನೇಕ ಇಲಾಖೆಗಳು ಬಜೆಟ್‌ನ ಶೇ 20ರಷ್ಟು ಮೊತ್ತವನ್ನೂ ಬಳಸಿಕೊಂಡಿಲ್ಲ ಎಂಬುದು ನಿಜವೇ' ಎಂದು ಶಿವಸೇನಾ (ಉದ್ಧವ್ ಠಾಕ್ರೆ ಬಣ) ಸದಸ್ಯ ಸಂಜಯ್ ರಾವುತ್ ರಾಜ್ಯಸಭೆಯಲ್ಲಿ ಮಂಗಳವಾರ ಪ್ರಶ್ನೋತ್ತರ ಅವಧಿಯಲ್ಲಿ ಪ್ರಶ್ನೆ ಕೇಳಿದರು. ಇದಕ್ಕೆ ಪ್ರತಿಕ್ರಿಯೆಯಾಗಿ, ಕೇಂದ್ರ ಸರ್ಕಾರದ 56 ಇಲಾಖೆಗಳು ಡಿಸೆಂಬರ್ ಅಂತ್ಯದ ವರೆಗೆ ಖರ್ಚು ಮಾಡಿರುವ ಹಣದ ವಿವರಗಳನ್ನು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಒದಗಿಸಿದ್ದಾರೆ.

'ವಿದ್ಯಾರ್ಥಿವೇತನದಂತಹ ಹಲವು ಯೋಜನೆಗಳಲ್ಲಿ ಬಹುಪಾಲು ವೆಚ್ಚವನ್ನು ಆರ್ಥಿಕ ವರ್ಷದ ಕೊನೆಯ ತ್ರೈಮಾಸಿಕದಲ್ಲಿ ಮಾಡಲಾಗುತ್ತದೆ' ಎಂದು ಸಚಿವರು ಸಮಜಾಯಿಷಿ ನೀಡಿದ್ದಾರೆ. 'ರಾಜ್ಯ ಸರ್ಕಾರಗಳು ಹಾಗೂ ಯೋಜನೆಗಳ ಅನುಷ್ಠಾನ ಮಾಡುವ ಸಂಸ್ಥೆಗಳು ಬಳಕೆ ಪ್ರಮಾಣಪತ್ರ ಸಲ್ಲಿಸದೆ ಇರುವುದು, ಖರೀದಿ ಪ್ರಕ್ರಿಯೆಯ ಹಂತದಲ್ಲಿರುವುದು ಸಹ ಕಡಿಮೆ ಹಣ ಬಳಕೆಗೆ ಕಾರಣ ಆಗಿರಬಹುದು' ಎಂದು ಅವರು ಹೇಳಿದ್ದಾರೆ.

ಪ್ರತಿಭಟನೆಗೆ ಬನ್ನಿ: ಸಂಸದರಿಗೆ ಸಿ.ಎಂ ಪತ್ರ

ಒಂದನೇ ಪುಟದಿಂದ...

ಈ ಹೋರಾಟಕ್ಕೆ ಬೆಂಬಲ ನೀಡಿ ಪ್ರತಿಭಟನೆಯಲ್ಲಿ ಪಾಲ್ಗೊಂಡು ರಾಜ್ಯದ ಪರವಾಗಿ ನ್ಯಾಯಕ್ಕಾಗಿ ಧ್ವನಿ ಎತ್ತುವಂತೆ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, ಸಂಸದೀಯ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಶಿ, ಎಐಸಿಸಿ ಅಧ್ಯಕ್ಷರೂ ಆಗಿರುವ ರಾಜ್ಯಸಭೆ ಸದಸ್ಯ ಮಲ್ಲಿಕಾರ್ಜುನ ಖರ್ಗೆ, ರಾಜ್ಯಸಭೆ ಸದಸ್ಯ ಎಚ್.ಡಿ. ದೇವೇಗೌಡ ಸೇರಿದಂತೆ ಎಲ್ಲರಿಗೂ ಅವರು ಪತ್ರ ಬರೆದು ಆಗ್ರಹಿಸಿದ್ದಾರೆ.

ಪತ್ರದಲ್ಲಿ ಏನಿದೆ?: 'ಒಂದು ವಿಶೇಷ ಸಂದರ್ಭದಲ್ಲಿ ಈ ಪತ್ರವನ್ನು ಬರೆಯುತ್ತಿದ್ದೇನೆ. ಕೇಂದ್ರ ಸರ್ಕಾರದಿಂದ ಆಗುತ್ತಿರುವ ನಿರಂತರ ಅನ್ಯಾಯ ಮತ್ತು ಕರ್ನಾಟಕದ ವಿಚಾರವಾಗಿ ಕೇಂದ್ರ ಸರ್ಕಾರ ತೋರುತ್ತಿರುವ ಮಲತಾಯಿ ಧೋರಣೆ ತಮಗೆ ಈಗಾಗಲೇ ತಿಳಿದ ವಿಷಯ. ಇದರ ವಿರುದ್ಧ ಪ್ರತಿಭಟಿಸಲು ಮತ್ತು ದೇಶದ ಗಮನ ಸೆಳೆಯಲು ತೀರ್ಮಾನಿಸಲಾಗಿದೆ. ರಾಜ್ಯದ ಉಪ ಮುಖ್ಯಮಂತ್ರಿ, ಎಲ್ಲ ಸಚಿವರು, ಶಾಸಕರು ಮತ್ತು ಸಂಸದರು ಸೇರಿ ದೆಹಲಿಯ ಜಂತರ್ ಮಂತರ್‌ನಲ್ಲಿ ಫೆ. 7ರಂದು ಒಂದು ದಿನದ ಧರಣಿ ಸತ್ಯಾಗ್ರಹ ನಡೆಸಲು ತೀರ್ಮಾನಿಸಿದ್ದೇವೆ.

'ಕರ್ನಾಟಕಕ್ಕೆ ತೆರಿಗೆ ಪಾಲಿನ ಹಂಚಿಕೆಯಲ್ಲಿ ಆಗುತ್ತಿರುವ ಭಾರಿ ಅನ್ಯಾಯ, ಬರ ಪರಿಹಾರ ನೀಡದಿರುವುದು, ವಿವಿಧ ಯೋಜನೆಗಳಿಗೆ ಅನುಮತಿ ಮತ್ತು ನೆರವು ನೀಡುವಲ್ಲಿ ತೋರುತ್ತಿರುವ ನಿರ್ಲಕ್ಷ್ಯ ಮತ್ತು ವಿಳಂಬ ಇತ್ಯಾದಿಗಳು ರಾಜ್ಯದಲ್ಲಿ ಜನಜೀವನವನ್ನು ವಿಪರೀತವಾಗಿ ಬಾಧಿಸುತ್ತಿವೆ. ಈ ವಿಚಾರವನ್ನು ಜವಾಬ್ದಾರಿಯುತ ಚುನಾಯಿತ ಪ್ರತಿನಿಧಿಗಳಾದ ತಾವು ಅರಿತೇ ಇರುತ್ತೀರಿ. ಆದುದರಿಂದ, ಈ ಧರಣಿ ಸತ್ಯಾಗ್ರಹದಲ್ಲಿ ತಾವು ಕೂಡಾ ಪಾಲ್ಗೊಂಡು ಅದರ ಯಶಸ್ಸಿಗೆ ನೆರವಾಗಬೇಕು ಎಂದು ತಮ್ಮಲ್ಲಿ ಕರ್ನಾಟಕದ ಸಮಸ್ತ ಜನತೆಯ ಪರವಾಗಿ ವಿನಂತಿಸುತ್ತೇನೆ' ಎಂದು ಪತ್ರದಲ್ಲಿ ಸಿದ್ದರಾಮಯ್ಯ ಅವರು ಉಲ್ಲೇಖಿಸಿದ್ದಾರೆ.

ಸಾಮಾಜಿಕ ಮಾಧ್ಯಮಗಳಲ್ಲೂ ಅಭಿಯಾನ


ಒಂದನೇ ಪುಟದಿಂದ...

ಕನ್ನಡ ಪರ ಹೋರಾಟಗಾರರು, ಒಕ್ಕೂಟ ವ್ಯವಸ್ಥೆಯ ಪರ ಹೋರಾಟಗಾರರು, ಸಾರ್ವಜನಿಕರು ಸಾಮಾಜಿಕ ಮಾಧ್ಯಮಗಳಲ್ಲಿ ಹೋರಾಟವನ್ನು ಬೆಂಬಲಿಸುತ್ತಿದ್ದಾರೆ.

ವಿರೋಧವೂ ಇದೆ: ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು ಮತ್ತು ಅವರ ಪರವಾಗಿರುವವರ ನಿಲುವನ್ನು ವಿರೋಧಿಸಿ ಬಿಜೆಪಿ ಕಾರ್ಯಕರ್ತರು ಮತ್ತು ಬೆಂಬಲಿಗರು ಕೂಡ ಸಾಮಾಜಿಕ ಮಾಧ್ಯಮಗಳಲ್ಲಿ ಅಭಿಯಾನ ನಡೆಸುತ್ತಿದ್ದಾರೆ.

ನಿಧನವಾರ್ತೆ

ವಿಶ್ರಾಂತ ಕುಲಪತಿ ಜಿ.ಕೆ.ವೀರೇಶ್



ಬೆಂಗಳೂರು: ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಜಿ.ಕೆ.ವೀರೇಶ್ (89) ಅವರು ವಯೋಸಹಜ ಅನಾರೋಗ್ಯದಿಂದ ಮಂಗಳವಾರ ಬೆಳಿಗ್ಗೆ ಗಂಗಾನಗರದ ತಮ್ಮ ಸ್ವಗೃಹದಲ್ಲಿ ನಿಧನರಾದರು.


ಇವರಿಗೆ ಪತ್ನಿ, ಇಬ್ಬರು ಪುತ್ರಿಯರು, ಪುತ್ರ ಇದ್ದಾರೆ. ಮೃತರ ಅಂತ್ಯಕ್ರಿಯೆ ಬುಧವಾರ ಮಧ್ಯಾಹ್ನ 3 ಗಂಟೆಗೆ ಹೆಬ್ಬಾಳದ ವಿದ್ಯುತ್ ಚಿತಾಗಾರದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಹಾಸನ ಜಿಲ್ಲೆ ಸಕಲೇಶಪುರ ತಾಲ್ಲೂಕಿನ ಗೊದ್ದು ಗ್ರಾಮದಲ್ಲಿ 1934ರ ಏಪ್ರಿಲ್ 4ರಂದು ಜನಿಸಿದ್ದ ವೀರೇಶ್ ಅವರು, 1957ರಲ್ಲಿ ಮೈಸೂರು ವಿಶ್ವವಿದ್ಯಾಲಯದಿಂದ ಕೃಷಿ ವಿಷಯದಲ್ಲಿ ಬಿ.ಎಸ್‌ಸಿ ಪದವಿ, 1960ರಲ್ಲಿ ನವದೆಹಲಿಯ ಐಎಆರ್‌ಐನಿಂದ ಎಂ.ಎಸ್ಸಿ ಪದವಿ, 1973ರಲ್ಲಿ ಬೆಂಗಳೂರು ಕೃಷಿ ವಿಶ್ವವಿದ್ಯಾಲಯದಲ್ಲಿ ಪಿಎಚ್.ಡಿ ಪದವಿ ಪಡೆದಿದ್ದರು.

1961ರಿಂದ 1995ರವರೆಗೆ ಬೆಂಗಳೂರು ಕೃಷಿ ವಿಶ್ವವಿದ್ಯಾಲಯದಲ್ಲಿ ಉಪನ್ಯಾಸಕ, ಸಹಾಯಕ ಪ್ರಾಧ್ಯಾಪಕ, ಪ್ರಾಧ್ಯಾಪಕ, ವಿಭಾಗದ ಮುಖ್ಯಸ್ಥರು ಹಾಗೂ ಡೀನ್‌ನಂತಹ ವಿವಿಧ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಿದ್ದರು. 1995ರಿಂದ 1998ರ ವರೆಗೆ ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಕುಲಪತಿಯಾಗಿ ಕಾರ್ಯನಿರ್ವಹಿಸಿದ್ದರು.

2001-2002ರವರೆಗೆ ಕರ್ನಾಟಕ ಕೃಷಿ ಆಯೋಗದ ಅಧ್ಯಕ್ಷರಾಗಿದ್ದರು. ರೈತರ ಆತ್ಮಹತ್ಯೆಗೆ ಕಾರಣ ತಿಳಿಯುವುದಕ್ಕಾಗಿ ಸರ್ಕಾರ ರಚಿಸಿದ್ದ ಉನ್ನತಮಟ್ಟದ ಸಮಿತಿಯ ಅಧ್ಯಕ್ಷರಾಗಿಯೂ ಕೆಲಸ ಮಾಡಿದ್ದರು. ರೈತರ ಆತ್ಮಹತ್ಯೆ ತಡೆಗೆ ಇವರ ನೇತೃತ್ವದ ಸಮಿತಿಯು ಮಹತ್ವದ ಶಿಫಾರಸುಗಳನ್ನು ಮಾಡಿತ್ತು.

ಗೋಪಾಲ ಚೆಟ್ಟಿಯಾರ್



ಮಂಗಳೂರು: ಆರ್‌ಎಸ್‌ಎಸ್ ಪ್ರಮುಖರಾಗಿದ್ದ ಗೋಪಾಲ್ ಚೆಟ್ಟಿಯಾರ್ (78) ಮಂಗಳವಾರ ಇಲ್ಲಿ ನಿಧನರಾದರು.

ಕೇರಳದ ಕಾಸರಗೋಡು ಜಿಲ್ಲೆಯ ಪೆರ್ಲದವರಾದ ಗೋಪಾಲ್ ಚೆಟ್ಟಿಯಾರ್, 1946 ಆ.8ರಂದು ಜನಿಸಿದ್ದರು. ಅಂತ್ಯಕ್ರಿಯೆ ಕಾಸರಗೋಡು ಜಿಲ್ಲೆಯ ಉಪ್ಪಳದ ಬಂದ್ಯೋಡು ಮನೆ ಪರಿಸರದಲ್ಲಿ ನಡೆಯಿತು.

ವಿದ್ಯಾರ್ಥಿ ದೆಸೆಯಲ್ಲೇ ಆರ್‌ಎಸ್‌ಎಸ್ ಸೇರಿದ್ದು, ತಹಶೀಲ್ದಾರ್ ಆಗಿ ನಿವೃತ್ತಿಯ ನಂತರ ಪೂರ್ಣವಾಗಿ ಸಂಘದ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದರು. ದಕ್ಷಿಣ ಮಧ್ಯ ಕ್ಷೇತ್ರೀಯ ಸೇವಾ ಪ್ರಮುಖ, ಕರ್ನಾಟಕ ದಕ್ಷಿಣ ಪ್ರಾಂತ ಸೇವಾ ಪ್ರಮುಖ ಹಾಗೂ ಮಂಗಳೂರು ವಿಭಾಗದ ಸಂಘ ಚಾಲಕರಾಗಿ ಕಾರ್ಯನಿರ್ವಹಿಸಿದ್ದರು.

ಅಲ್ಪಸಂಖ್ಯಾತರ ನಿರ್ದೇಶನಾಲಯ

ನಂ.16ಸಿ, ಮೌಲಾನಾ ಆಜಾದ್ ಭವನ, ಮಿಲ್ಲರ್‌ಟ್ಯಾಂಕ್ ಬೆಡ್ ರಸ್ತೆ, ವಸಂತನಗರ, ಬೆಂಗಳೂರು–560052.

ಸಂಖ್ಯೆ: ಅಸನಿ/ಮದರಸಾ/ಸಿಆರ್-01/2023-24 ದಿನಾಂಕ: 07.02.2024

ಮರು-ಟೆಂಡರ್ ಪ್ರಕಟಣೆ

2023-24ನೇ ಸಾಲಿನ ರಾಜ್ಯದಲ್ಲಿರುವ ನೋಂದಾಯಿತ ಮದರಸಾಗಳಿಗೆ ಡಿಜಿಟಲೀಕರಣ ಮತ್ತು ಗಣಕೀಕೃತ (Online-Offline Coaching) ಶಿಕ್ಷಣವನ್ನು ನೀಡಲು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ದ್ವಿ ಲಕೋಟೆ ಪದ್ಧತಿಯಲ್ಲಿ ಆನ್‌ಲೈನ್ ಟೆಂಡರ್ ಆಹ್ವಾನಿಸಲಾಗಿದೆ.

1) ಟೆಂಡರ್ ಪ್ರಕಟಣೆಯ ದಿನಾಂಕ: 07.02.2024. 2) ಟೆಂಡರ್ ಕುರಿತು ಪೂರ್ವಭಾವಿ ಸಭೆ: 12.02.2024 ಬೆಳಗ್ಗೆ 11:30 ಗಂಟೆ. 3) ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ ಮತ್ತು ಸಮಯ: 21.02.2024 ಸಂಜೆ 5:30 ಗಂಟೆಯೊಳಗೆ. 4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: 23.02.2024 ಬೆಳಿಗ್ಗೆ 11:30 ಗಂಟೆಗೆ. 5) ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: ತಾಂತ್ರಿಕ ಬಿಡ್ ಪರಿಶೀಲಿಸಿದ ನಂತರ. 6) ಟೆಂಡರ್ ತೆರೆಯುವ ಸ್ಥಳ ಮತ್ತು ಸಂಪರ್ಕಿಸಬೇಕಾದ ವಿಳಾಸ: ನಂ.16ಸಿ, ಮೌಲಾನಾ ಆಜಾದ್ ಭವನ, ಮಿಲ್ಲರ್‌ಟ್ಯಾಂಕ್ ಬೆಡ್ ರಸ್ತೆ, ವಸಂತನಗರ, ಬೆಂಗಳೂರು-560052. 7) ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ: 080-22535902/ 080-22535912.

ಇತರೆ ವಿವರಗಳನ್ನು ಅಲ್ಪಸಂಖ್ಯಾತರ ನಿರ್ದೇಶನಾಲಯದ ವೆಬ್‌ಸೈಟ್ https://dom.karnataka.gov.in ಹಾಗೂ ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್: https://kppp.karnataka.gov.in ನಲ್ಲಿ ಪಡೆಯಬಹುದಾಗಿದೆ.

ಸಹಿ/-
ನಿರ್ದೇಶಕರು
ಅಲ್ಪಸಂಖ್ಯಾತರ ನಿರ್ದೇಶನಾಲಯ, ಬೆಂಗಳೂರು

ವಾಸಾಸಂಇ/ವಾಪ್ರ/3453/2023-24

ಕರ್ನಾಟಕ ಸರ್ಕಾರ

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ–577501

ನಂ. ಚುನಾವಣೆ:ಸಿಆರ್:355/2023-24 ದಿನಾಂಕ: 03.02.2024

ಇ-ಟೆಂಡರ್ ಪ್ರಕಟಣೆ

(ದ್ವಿಲಕೋಟೆ ಪದ್ಧತಿ) (ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಮುಂಬರುವ ಲೋಕಸಭಾ ಸಾರ್ವತ್ರಿಕ ಚುನಾವಣೆ–2024ಕ್ಕೆ ಸಂಬಂಧಿಸಿದಂತೆ ಐಡಿ ಕಾರ್ಡ್, ಪಾಸ್ ಮತ್ತು ಇತರೆ ಪ್ರಿಂಟಿಂಗ್ ಸಾಮಾಗ್ರಿಗಳನ್ನು ಸರಬರಾಜು ಮಾಡಲು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಅರ್ಹ ಟೆಂಡರ್‌ದಾರರಿಂದ ಟೆಂಡರ್‌ಗಳನ್ನು ದ್ವಿ-ಲಕೋಟೆ ಪದ್ಧತಿಯಲ್ಲಿ ಆಹ್ವಾನಿಸಲಾಗಿದೆ. ವಿವರವನ್ನು ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿರುತ್ತದೆ.

(1) Commencement of download of e-Tender Form from website- https://kppp.karnataka.gov.in/:-03.02.2024 (2) Last Date for Queries on or before:-14.02.2024 at 5.00 pm (3) Pre-bid Meeting:-16.02.2024 at 11.00 am (4) Last Date for Uploading of Tender in e-procurement platform on or before:-17.02.2024 till 5.00 pm (5) Opening of Technical Bid:-19.02.2024 at 11.00 am (6) Date of Original Document Verification:-Will be done on the uploaded documents at e-portal. (7) Submission of Samples:-16.02.2024 at 11.00 am (8) Opening of Financial Bid:-Will be intimated. (9) Approximate value of tender:-Rs. 28.00 Lakhs (10) EMD Rs. 70,000/-

ಹೆಚ್ಚಿನ ಮಾಹಿತಿಗಾಗಿ, ಇ-ಪಾವತಿಗಾಗಿ ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್- https://kppp.karnataka.gov.in/ ಭೇಟಿ ನೀಡಬಹುದು. ಮಾಹಿತಿಗಾಗಿ ದೂರವಾಣಿ ಸಂಖ್ಯೆ: 08194-222176ಕ್ಕೆ ಸಂಪರ್ಕಿಸಬಹುದು.

DIPR/CTA/KSMCA/456/2023-24

ಸಹಿ/- ಅಪರ ಜಿಲ್ಲಾಧಿಕಾರಿಗಳು, ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ.

ಕರ್ನಾಟಕ ಗ್ರಾಮೀಣ ಬ್ಯಾಂಕ್

(ಭಾರತ ಸರ್ಕಾರದಿಂದ ಸ್ಥಾಪಿತ ಷೆಡ್ಯೂಲ್ ಬ್ಯಾಂಕ್-ಪ್ರವರ್ತಕರು: ಕೆನರಾ ಬ್ಯಾಂಕ್)
HO. 32, ಸಂಗನಕಲ್ಲ್ ರಸ್ತೆ, ಬಳ್ಳಾರಿ-583103.
E-mail: customersupport@kgbk.in

ಪತ್ರಿಕಾ ಪ್ರಕಟಣೆ

ಕರ್ನಾಟಕ ಗ್ರಾಮೀಣ ಬ್ಯಾಂಕ್ ರಾಜ್ಯದ 22 ಜಿಲ್ಲೆಗಳಲ್ಲಿ, 1122 ಶಾಖೆಗಳು ಮತ್ತು 1300 ವ್ಯವಹಾರ ಪ್ರತಿನಿಧಿಗಳ ಮುಖಾಂತರ 8000 ಕ್ಕೂ ಹೆಚ್ಚಿನ ಗ್ರಾಮಗಳಿಗೆ ಸೇವೆ ಸಲ್ಲಿಸುತ್ತಿದೆ. ನಮ್ಮ ಒಟ್ಟು ಗ್ರಾಹಕರ ಸಂಖ್ಯೆಯು 1.26 ಕೋಟಿಗಳನ್ನು ಮೀರಿ, ಅದರಲ್ಲಿ ಹೆಚ್ಚಿನ ಗ್ರಾಹಕರು ಗ್ರಾಮೀಣ ಹಾಗೂ ಹಿಂದುಳಿದ ಪ್ರದೇಶದವರಾಗಿರುತ್ತಾರೆ.

ಭಾರತ ಸರ್ಕಾರದ ಹಣಕಾಸು ಸೇವೆಗಳ ಇಲಾಖೆಯು ಪ್ರಾದೇಶಿಕ ಗ್ರಾಮೀಣ ಬ್ಯಾಂಕ್‌ಗಳ ತಂತ್ರಾಂಶವನ್ನು ಮೇಲ್ದರ್ಜೆಗೆ ನವೀಕರಿಸಲು ನಿರ್ದೇಶಿಸಿದ ಆದೇಶದನ್ವಯ, ಗ್ರಾಹಕ ಸೇವೆಗಳನ್ನು ಉತ್ತಮಗೊಳಿಸಲು ಮತ್ತು ಶೀಘ್ರಗೊಳಿಸಲು, ನಮ್ಮ ಬ್ಯಾಂಕು ನವೀಕರಿಸಿದ ತಂತ್ರಾಂಶವನ್ನು ಅಳವಡಿಸಿಕೊಂಡಿದೆ. ಈ ನಿಟ್ಟಿನಲ್ಲಿ ತಂತ್ರಾಂಶವನ್ನು ಹಲವಾರು ರೀತಿಯಲ್ಲಿ ಪರೀಕ್ಷಿಸಿ, ಯಾವುದೇ ನ್ಯೂನ್ಯತೆಗಳಿಲ್ಲದೇ ಎಂದು ದೃಢೀಕರಿಸಿದ ನಂತರ ದಿನಾಂಕ 28.01.2024 ರಂದು ನಮ್ಮ ಎಲ್ಲಾ ಶಾಖೆಗಳಲ್ಲಿ ವಿಶ್ವಾಸಾರ್ಹವಾಗಿ ತಂತ್ರಾಂಶವನ್ನು ಮೇಲ್ದರ್ಜೆಗೆ ನವೀಕರಿಸಲಾಗಿದೆ. ಗ್ರಾಹಕರಿಗೆ ಅನಾನುಕೂಲತೆಗಳನ್ನು ತಡೆಗಟ್ಟಲು ಬ್ಯಾಂಕ್ ಈ ಮೊದಲೇ ತನ್ನ ಸಿಬ್ಬಂದಿಗಳಿಗೆ ಮೇಲ್ದರ್ಜೆಗೊಳಿಸುವ ತಂತ್ರಾಂಶದ ಬಗ್ಗೆ ತರಬೇತಿ ನೀಡಲಾಗಿದೆ.

ಅದಾಗ್ಯೂ ಗ್ರಾಹಕ ಸೇವೆಗಳಲ್ಲಿ ಕಳೆದ ಕೆಲವು ದಿನಗಳಿಂದ ಅನಾನುಕೂಲತೆಗಳು ಉಂಟಾಗಿದ್ದು, ಸಮಸ್ಯೆಗಳನ್ನು ಅತೀ ಶೀಘ್ರದಲ್ಲೇ ಬಗೆಹರಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ತಿಳಿಯಪಡಿಸುತ್ತಿದ್ದೇವೆ ಹಾಗೂ ಅನಾನುಕೂಲತೆಗಾಗಿ ವಿಷಾದಿಸುತ್ತೇವೆ.

ಸಹಿ/- ಮಹಾ ಪ್ರಬಂಧಕರು

ಕರ್ನಾಟಕ ಸರ್ಕಾರ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ಶಸ್ತ್ರಚಿಕಿತ್ಸಕರ ಕಛೇರಿ, ಉಪವಿಭಾಗೀಯ ಸಾರ್ವಜನಿಕ ಆಸ್ಪತ್ರೆ, ಕುಂದಾಪುರ–576201
ದೂರವಾಣಿ ಸಂಖ್ಯೆ: (08254) 230333/234808 ಇ-ಮೇಲ್: ghkundapura@gmail.com

ಟೆಂಡರ್ ಪ್ರಕಟಣೆ

(1) ಟೆಂಡರ್ ಪ್ರಕಟಣೆ ಸಂಖ್ಯೆ/ದಿನಾಂಕ: ನಂ:ಸಾಆಕು:ಆಲ್ವಾಡಿ ಮರುಟೆಂಡರ್: ಪ್ರಿಜಾ: 12: 2023-24 ದಿನಾಂಕ 06.02.2024. ಟೆಂಡರ್ ವಿವರ: ಔಷಧ ಖರೀದಿ, ಟೆಂಡರ್ ಅಂದಾಜು ಮೊತ್ತ: ರೂ. 75,00,000/-, ಇ.ಎಂ.ಡಿ ಮೊತ್ತ: ರೂ. 1,87,500/-, ಟೆಂಡರ್ ಆರಂಭ ದಿನಾಂಕ: 06-02-2024, ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: 20-02-2024 ಸಮಯ ಅಪರಾಹ್ನ 4.30 ಗಂಟೆಗೆ, ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ: 21-02-2024 ಸಮಯ ಬೆಳಗ್ಗೆ 11.30 ಗಂಟೆ

(2) ಟೆಂಡರ್ ಪ್ರಕಟಣೆ ಸಂಖ್ಯೆ/ದಿನಾಂಕ: ನಂ:ಸಾಆಕು: ಆಲ್ವಾಡಿ ಮರುಟೆಂಡರ್: ಪ್ರಿಜಾ:13: 2023-24 ದಿನಾಂಕ 06.02.2024. ಟೆಂಡರ್ ವಿವರ: ಪ್ರಯೋಗಾಲಯ ರಾಸಾಯನಿಕ, ಟೆಂಡರ್ ಅಂದಾಜು ಮೊತ್ತ: ರೂ.30,00,000/-, ಇ.ಎಂ.ಡಿ ಮೊತ್ತ: ರೂ.75,000/- ಟೆಂಡರ್ ಆರಂಭ ದಿನಾಂಕ: 06-02-2024, ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: 20-02-2024 ಸಮಯ ಅಪರಾಹ್ನ 4.30 ಗಂಟೆಗೆ, ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ: 21-02-2024 ಸಮಯ ಬೆಳಗ್ಗೆ 12.00 ಗಂಟೆ

ಟೆಂಡರ್ ತೆರೆಯುವ ಸ್ಥಳ: ಶಸ್ತ್ರಚಿಕಿತ್ಸಕರ ಕಛೇರಿ, ಉಪವಿಭಾಗೀಯ ಸಾರ್ವಜನಿಕ ಆಸ್ಪತ್ರೆ, ಕುಂದಾಪುರ. ಹೆಚ್ಚಿನ ಮಾಹಿತಿಯನ್ನು https://www.kppp.karnataka.gov.in ವೆಬ್‌ಸೈಟ್ ಅಥವಾ ಈ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದು.

ವಾಸಾಸಂಇ/ಉಡುಪಿ/ಕೆಎಸ್‌ಎಂಸಿಎ/114/23-24 ದಿ: 06.02.2024

ಸಹಿ/- ಶಸ್ತ್ರಚಿಕಿತ್ಸಕರು, ಉಪವಿಭಾಗೀಯ ಸಾರ್ವಜನಿಕ ಆಸ್ಪತ್ರೆ, ಕುಂದಾಪುರ–576201, ಉಡುಪಿ ಜಿಲ್ಲೆ

ಲೋಕೋಪಯೋಗಿ ಇಲಾಖೆ

ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಬೆಂಗಳೂರು ವಿದ್ಯುತ್ ವಿಭಾಗ, 2ನೇ ಮಹಡಿ, ಲೋ.ಇ.ಪುರಕ ಕಟ್ಟಡ, ಕೆ.ಆರ್.ವೃತ್ತ, ಬೆಂಗಳೂರು-01, ದೂರವಾಣಿ: 080-22133370.

ಸಂಖ್ಯೆ: 18/2023-24 ದಿನಾಂಕ: 05.02.2024

ಅಲ್ಪಾವಧಿ ಟೆಂಡರ್ ಪ್ರಕಟಣೆ

ಮೇಲ್ಕಂಡ ಇಲಾಖೆಯು ಬೆಂಗಳೂರು, ಎಲೆಕ್ಟ್ರಾನಿಕ್ ಸಿಟಿ ಫೇಸ್-1ರಲ್ಲಿ ಫಾರ್ಮ್/ಅಗ್ರಿ ಇನ್ನೋವೇಷನ್ ಸೆಂಟರ್‌ನ ನಿರ್ಮಾಣದ ಪ್ರಸ್ತಾವನೆಗೆ Architectural Design & Drawings ಗಾಗಿ Consultency Services ಕಾಮಗಾರಿಗಾಗಿ ಕೆಪಿಪಿ ಪೋರ್ಟಲ್ http://kppp.karnataka.gov.in ಮೂಲಕ ಅರ್ಹ ಟೆಂಡರ್‌ದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಟೆಂಡರ್‌ಗಿಟ್ಟ ಮೊತ್ತ: ರೂ.100 ಲಕ್ಷಗಳು. ಕಾಲಾವಧಿ: ಬಿಡ್ ದಸ್ತಾವೇಜಿನಲ್ಲಿ ತಿಳಿಸಿರುವಂತೆ. ಟೆಂಡರ್ ದಸ್ತಾವೇಜುಗಳನ್ನು ಕೆಪಿಪಿ ಪೋರ್ಟಲ್‌ನಿಂದ ಡೌನ್‌ಲೋಡ್ ಮಾಡಿಕೊಂಡು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: 12.02.2024, ಸಂಜೆ 5.30 ಗಂಟೆವರೆಗೆ. ಪ್ರೀ-ಬಿಡ್ ಸಭೆ ದಿನಾಂಕ: 09.02.2024, ಮಧ್ಯಾಹ್ನ 2.00 ಗಂಟೆಗೆ. ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 13.02.20214, ಸಂಜೆ 4.30 ಗಂಟೆಗೆ. ಹಣಕಾಸು ಬಿಡ್ ತೆರೆಯುವ ದಿನಾಂಕ: 16.02.2024, ಸಂಜೆ 4.30 ಗಂಟೆಗೆ. ಇತರೆ ಹೆಚ್ಚಿನ ಮಾಹಿತಿಯನ್ನು ಮೇಲ್ಕಂಡ ಕಛೇರಿಯಿಂದ ಅಥವಾ ಕೆಪಿಪಿ ವೆಬ್‌ಸೈಟ್ http://kppp.karnataka.gov.in ನಿಂದ ಪಡೆಯಬಹುದು.

ಸಹಿ/- ಕಾರ್ಯಪಾಲಕ ಇಂಜಿನಿಯರ್.

ವಾಸಸಂಇ/ಉನಿ-ಸಿ.ಪಿ/3441/ಕೆಎಸ್‌ಎಂಸಿಎ/2023-24

ಕರ್ನಾಟಕ ಸರ್ಕಾರ

ಗ್ರಾಮ ಪಂಚಾಯತ ಕಾರ್ಯಾಲಯ ಗೊಜನೂರ

ತಾ : ಲಕ್ಷ್ಮೇಶ್ವರ ಜಿ : ಗದಗ

e-mail : gojanur.shi.gdg@gmail.com

ನಂ:ಗ್ರಾ.ಪಂ./ಗೊಜನೂರ/ಟೆಂಡರ/2023–24/59 ದಿನಾಂಕ : 06–02–2024

ಕೆಪಿಪಿ ಪೋರ್ಟಲ್ ಟೆಂಡರ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಪಾರದರ್ಶಕತೆ ಆಕ್ಟ್–2000 ನಿಯಮದಂತೆ ನಿಯಮಗಳನ್ವಯ ಅರ್ಹ ಗುತ್ತಿಗೆದಾರ/ಸರಬರಾಜುದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್, ಮುಖಾಂತರ **01 ಕಾಮಗಾರಿಯ ಗುಣಮಟ್ಟದ ಸಾಮಗ್ರಿ** ಪೂರೈಕೆಯ ಟೆಂಡರನ್ನು ಆಹ್ವಾನಿಸಲಾಗಿದೆ. **ಲೆಕ್ಕ ಶೀರ್ಷಿಕೆ: 2022–23ನೇ ಸಾಲಿನ MGNREGA ಯೋಜನೆ ಅಡಿ** ಟೆಂಡರನ್ನು ಆಹ್ವಾನಿಸಲಾಗಿದೆ. ಗುತ್ತಿಗೆದಾರ/ಸರಬರಾಜುದಾರರು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್, **https://kppp.karnataka.gov.in** ಮುಖಾಂತರ ಭಾಗವಹಿಸಬಹುದು. ಕಾಮಗಾರಿಗಳ **ವರ್ಕ ಇಂಡೆಂಟ್** ಸಂಖ್ಯೆಗಳು ಈ ಕೆಳಗಿನಂತೆ ಇರುತ್ತವೆ.

1) **INDENT NO : RDPR/2023-24/IND1259**

ಟೆಂಡರಿಗಿಟ್ಟ ಕನಿಷ್ಠ ಮೊತ್ತ ರೂ. : Rs: **14.00** Lacks

ಟೆಂಡರ ಅರ್ಜಿಯ ಬೆಲೆ ಹಾಗೂ ಇ.ಎಂ.ಡಿ ಮೊತ್ತದ ವಿವರ : ಅರ್ಜಿ ಬೆಲೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಂತೆ, ಇ.ಎಂ.ಡಿ. ಸಂಬಂದಪಟ್ಟ ವರ್ಕ ಇಂಡೆಂಟ್‌ನಲ್ಲಿ ನೋಡಬಹುದಾಗಿದೆ.

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಅರ್ಜಿ ಹಾಗೂ ಶೆಡ್ಯೂಲ್–ಬಿ ಯನ್ನು ವೆಬ್‌ಸೈಟಿನಲ್ಲಿ ಭರ್ತಿ ಮಾಡಿ ಸಲ್ಲಿಸುವ ದಿನಾಂಕ : **07–02–2024** ರಿಂದ **19–02–2024** ರಂದು 16.00 ಗಂಟೆಯವರೆಗೆ. ಟೆಂಡರ ತೆರೆಯುವ ದಿನಾಂಕ : **20–02–2024** ರಂದು 16.30 ಗಂಟೆಗೆ ತೆರೆಯಲಾಗುವುದು. ಹೆಚ್ಚಿನ ಮಾಹಿತಿಯನ್ನು ಈ ಕಚೇರಿಯ ಕೆಲಸದ ವೇಳೆಯಲ್ಲಿ ಪಡೆಯಬಹುದು.

ಸಹಿ/– ಪಂಚಾಯತ ಅಭಿವೃದ್ಧಿ ಅಧಿಕಾರಿಗಳು,
ಗ್ರಾಮ ಪಂಚಾಯತ ಗೊಜನೂರ

ವಾಸಾಸಂಇ/ಗದಗ/ಕೆಎಸ್‌ಎಂಸಿಎ/516/2023–24 ತಾಲೂಕ : ಲಕ್ಷ್ಮೇಶ್ವರ ಜಿಲ್ಲಾ : ಗದಗ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಚೇರಿ, ಯೋಜನೆ ದಕ್ಷಿಣ, ದಕ್ಷಿಣ ವಲಯ ಕಚೇರಿ, ಕಟ್ಟಡ, 9ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, ಜಯನಗರ 2ನೇ ಬ್ಲಾಕ್, ಬೆಂಗಳೂರು – 11.

ಸಂಖ್ಯೆ: ಕಾಪಾಅ(ದ)/ಇ–ಪ್ರೊಕ್/13/2023–24/2ನೇ ಕರೆ ದಿನಾಂಕ: 06.02.2024

ಟೆಂಡರ್ ಪ್ರಕಟಣೆ (ಐಎಫ್‌ಟಿ) (ದ್ವಿಲಕೋಟೆ ಪದ್ಧತಿ)

(ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ಮುಖಾಂತರ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಯೋಜನೆ ದಕ್ಷಿಣ, ಬೃ.ಬೆಂ.ಮ.ಪಾಲಿಕೆ, ಬೆಂಗಳೂರು, ಇವರು ಈ ಕೆಳಕಂಡ ಕಾಮಗಾರಿಗೆ ಅರ್ಹ ಟೆಂಡರುದಾರರಿಂದ ಟೆಂಡರನ್ನು ಆಹ್ವಾನಿಸಿದ್ದಾರೆ.

ಕಾಮಗಾರಿಯ ಹೆಸರು	ಟೆಂಡರ್‌ಗಿಟ್ಟ ಅಂದಾಜು ಮೊತ್ತ (₹.ಲಕ್ಷಗಳಲ್ಲಿ)	ಇಎಂಡಿ (₹.ಗಳಲ್ಲಿ)
ಬಿಟಿಎಂ ಬಡಾವಣೆ ಕ್ಷೇತ್ರದಲ್ಲಿ ಅಲಂಕಾರಿಕ ಕಂಬಿಗಳು, ನಡಿಗೆದಾರಿ ಒದಗಿಸುವುದು, ವ್ಯಾಯಾಮ ಶಾಲೆ ಉಪಕರಣಗಳು, ಮಕ್ಕಳ ಆಟದ ಉಪಕರಣಗಳಿಗೆ ಛಾವಣಿ ಒದಗಿಸುವುದು, ಮಡಿವಾಳ ಕ್ರೀಡಾ ಸಂಕೀರ್ಣಕ್ಕೆ ಹೊಸ ಗಜೆಬೋ, ದುರಸ್ಥಿ ಮತ್ತು ಹೆಚ್ಚುವರಿ ಕಾಮಗಾರಿಗಳನ್ನು ಒದಗಿಸುವುದು ಹಾಗೂ ಉದ್ಯಾನವನಗಳು ಮತ್ತು ಆಟದ ಮೈದಾನಕ್ಕೆ ಸಂಪೂರ್ಣ ಅಭಿವೃದ್ಧಿ ಕಾಮಗಾರಿಗಳನ್ನು ಮಾಡುವುದು.	750.00	ರೂ 11,25,000/– (ರೂ. 1,00,000/– ಇ–ಪೋರ್ಟಲ್ ಮೂಲಕ ಮತ್ತು ರೂ. 10,25,000/– ಬಿಜಿ ಮೂಲಕ)

<u>ಟೆಂಡರ್ ವೇಳಾಪಟ್ಟಿ:</u> (1). ಟೆಂಡರ್‌ಗಳನ್ನು ಕೆಪಿಪಿ ಪೋರ್ಟಲ್ ಮುಖಾಂತರ ಸಲ್ಲಿಸಲು ಕೊನೆಯ ದಿನಾಂಕ **19.02.2024**ರ ಸಂಜೆ **4:00** ಗಂಟೆಯವರೆಗೆ. (2) ಬಿಡ್ ಪೂರ್ವಭಾವಿ ಸಭೆಯನ್ನು ದಿನಾಂಕ **12.02.2024**ರ ಸಂಜೆ **4:00** ಗಂಟೆಗೆ ಕಾರ್ಯಪಾಲಕ ಅಭಿಯಂತರರ ಕಚೇರಿ (ಯೋಜನೆ ದಕ್ಷಿಣ), 1ನೇ ಮಹಡಿ, 9ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, ಜಯನಗರ 2ನೇ ಬ್ಲಾಕ್, ಬೆಂಗಳೂರು – 11 ಇಲ್ಲಿ ನಡೆಸಲಾಗುವುದು. (3) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ **19.02.2024**ರ ಸಂಜೆ **4:00** ಗಂಟೆಯವರೆಗೆ. (4) ತಾಂತ್ರಿಕ ಬಿಡ್‌ಗಳನ್ನು ದಿನಾಂಕ **20.02.2024**ರ ಬೆಳಿಗ್ಗೆ **10:30** ಗಂಟೆಗೆ ತೆರೆಯಲಾಗುವುದು. (5) ಆರ್ಥಿಕ ಬಿಡ್‌ಗಳನ್ನು ತಾಂತ್ರಿಕ ಬಿಡ್‌ಗಳಿಗೆ ಅನುಮೋದನೆ ದೊರೆತ ನಂತರ ಅಥವಾ ದಿನಾಂಕ **22.02.2024**ರ ಸಂಜೆ **4:00** ಗಂಟೆಗೆ ತೆರೆಯಲಾಗುವುದು. (6) ಈ ಟೆಂಡರ್ ಪ್ರಕಟಣೆಯನ್ನು ಬೃ.ಬೆಂ.ಮ.ಪಾಲಿಕೆ ವೆಬ್‌ಸೈಟ್ **www.bbmp.gov.in**. ನಲ್ಲಿಯು ಕೂಡ ವೀಕ್ಷಿಸಬಹುದಾಗಿದೆ. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ **https://kppp.karnataka.gov.in** ನಲ್ಲಿ ಪಡೆದುಕೊಳ್ಳಬಹುದಾಗಿದೆ.

ಸಹಿ/– ಕಾರ್ಯಪಾಲಕ ಅಭಿಯಂತರರು
ಯೋಜನೆ ದಕ್ಷಿಣ

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ರಾಮಕೃಷ್ಣಾಶ್ರಮ ರಸ್ತೆ ಅಮರಜ್ಯೋತಿ ನಗರ, ತುಮಕೂರು–572105 0816 – 2200209

ಟೆಂಡರ್ ಆಹ್ವಾನ ಪ್ರಕಟಣೆ

(ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾಮಗಾರಿ ಹೆಸರು: ನಗರಸಭೆ ಶಿರಾ ರವರ ಠೇವಣಿ ಕೊಡುಗೆ ಯೋಜನೆಯಡಿ ಶಿರಾ ನಗರಕ್ಕೆ 2ನೇ ಹಂತದ ಒಳಚರಂಡಿ ವ್ಯವಸ್ಥೆ ಕಲ್ಪಿಸಲು ಸರ್ವೆ, ವಿನ್ಯಾಸ ಹಾಗು ವಿಸ್ತೃತ ಯೋಜನಾ ವರದಿ ತಯಾರಿಸುವ ಕಾಮಗಾರಿ.

ಟೆಂಡರ್ ಸಂಖ್ಯೆ: Tender Indent No. KUWSDB/2023-24/OW/WORK_INDENT144.

ಟೆಂಡರ್ ಮೊತ್ತ ರೂ.10.70 ಲಕ್ಷಗಳು.

ಟೆಂಡರ್ ವಿವರ: 1. ಬಿಡ್ ದಾಖಲೆಗಳನ್ನು ವಿತರಿಸುವ ದಿನಾಂಕ: 03.02.2024 ರಿಂದ 17.02.2024 ಸಂಜೆ 05.00 ಗಂಟೆಯವರೆಗೆ.
2. ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ: 17.02.2024 ರಂದು ಸಂಜೆ 05.30 ಗಂಟೆಯವರೆಗೆ. ಹೆಚ್ಚಿನ ವಿವರಗಳನ್ನು https://kppp.karnataka.gov.in website ನಲ್ಲಿ ಪಡೆಯುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು,
ಕನನೀಸ ಮತ್ತು ಒಚ ಮಂಡಳಿ ವಿಭಾಗ, ತುಮಕೂರು.

DIPR/TUM/511/KSMCA/2023-24

ಕರ್ನಾಟಕ ಸರ್ಕಾರ

ನಗರ ಭೂ ಸಾರಿಗೆ ನಿರ್ದೇಶನಾಲಯ, ನಗರಾಭಿವೃದ್ಧಿ ಇಲಾಖೆ

ಆಯುಕ್ತರ ಕಾರ್ಯಾಲಯ ನಗರ ಭೂ ಸಾರಿಗೆ

ಬಿಎಂಟಿಸಿ, ಟಿಟಿಎಂಸಿ, 'ಬಿ' ಬ್ಲಾಕ್ (ಬಸ್ ಸ್ಟ್ಯಾಂಡ್ ಮೇಲ್ಭಾಗ), 4ನೇ ಮಹಡಿ, ಕೆ.ಹೆಚ್.ರಸ್ತೆ, ಶಾಂತಿನಗರ, ಬೆಂಗಳೂರು–560027, ದೂರವಾಣಿ : 080–22226627/6628, ಫ್ಯಾಕ್ಸ್ : 080–22226630, ಇಮೇಲ್ : dultbangalore@gmail.com, dult@karnataka.gov.in

ಸಂಖ್ಯೆ: DULT-ADM0CARE(HSTA)/3/2023/1209 ದಿನಾಂಕ: 06.02.2024

ಪ್ರಕಟಣೆ

ನಗರ ಭೂ ಸಾರಿಗೆ ನಿರ್ದೇಶನಾಲಯವು ತನ್ನ ಬೆಂಗಳೂರು ಕಛೇರಿಗೆ ಗುತ್ತಿಗೆ ಆಧಾರದ ಮೇಲೆ ವಿವಿಧ ತಾಂತ್ರಿಕ ಹುದ್ದೆಗಳಿಗೆ ಅರ್ಹ ವೃತ್ತಿಪರ ಅಭ್ಯರ್ಥಿಗಳನ್ನು ನೇಮಿಸಿಕೊಳ್ಳಲು ಉದ್ದೇಶಿಸಿರುತ್ತದೆ. ಆಸಕ್ತ ಅಭ್ಯರ್ಥಿಗಳು ಹೆಚ್ಚಿನ ವಿವರಗಳಿಗಾಗಿ ವೆಬ್‌ಸೈಟ್ **https://dult.karnataka.gov.in/59/careers/kn** ಗೆ ಭೇಟಿ ನೀಡಬಹುದು ಹಾಗೂ ಅರ್ಜಿ ಸಲ್ಲಿಸಬಹುದು.

ಸಹಿ/–
ಆಡಳಿತಾಧಿಕಾರಿಗಳು
ನಗರ ಭೂ ಸಾರಿಗೆ ನಿರ್ದೇಶನಾಲಯ
ನಗರಾಭಿವೃದ್ಧಿ ಇಲಾಖೆ, ಬೆಂಗಳೂರು

ವಾಸಾಸಂಇ/ವಾಪ್ರ/3435/2023–24

ಕರ್ನಾಟಕ ಸರ್ಕಾರ

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ ಲೋಕೋಪಯೋಗಿ ಇಲಾಖೆ ಹಾಸನ ವಿಭಾಗ, ಹಾಸನ.

ಸಂಖ್ಯೆ: 21 :ಕಾಇಂ:ಲೋಇ:ಹಾವಿ:ಸಇಂ–2:2023–24 ದಿನಾಂಕಃ 05.02.2024.

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಆದ್ಯಾದೇಶ 1999–2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ–4 ನಿಯಮದನ್ವಯ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತರಾದ ಒಂದನೇ ದರ್ಜೆ ಗುತ್ತಿಗೆದಾರರಿಂದ ಹೊಳೆನರಸೀಪುರ ಉಪವಿಭಾಗ ವ್ಯಾಪ್ತಿಯ ಕಾಮಗಾರಿಗೆ ಟೆಂಡರ್ ಕರೆಯಲಾಗಿದೆ. ಸದರಿ ಟೆಂಡರ್‌ನಲ್ಲಿನ ಕಾಮಗಾರಿ ಮೊತ್ತ ರೂ.995.00 ಲಕ್ಷ. ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಅರ್ಜಿ ಸಲ್ಲಿಸಲು ನಿಗಧಿಪಡಿಸಿರುವ ಕಡೆಯ ದಿನಾಂಕ. 22.02.2024. 16.00 ಗಂಟೆ. ಹೆಚ್ಚಿನ ವಿವರಗಳಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ಮೂಲಕ ನೋಡುವುದು ಅಥವಾ ಈ ಕಛೇರಿಯ ಸಹಾಯಕ ದೂರವಾಣಿ ಸಂಖ್ಯೆ: 08172–268437 ರಿಂದ ಕಛೇರಿಯ ವೇಳೆಯಲ್ಲಿ ಮಾಹಿತಿ ಪಡೆಯಬಹುದಾಗಿದೆ.

ಸಹಿ/–ಕಾರ್ಯಪಾಲಕ ಇಂಜಿನಿಯರ್, ಲೋಇ ಹಾಸನ ವಿಭಾಗ, ಹಾಸನ.

ವಾಸಾಸಂಇ/ಹಿಸನಿ/ಹಾಸನ/738/ಕೆಎಸ್‌ಎಂಸಿಎ/739/2023–24

ಅರಣ್ಯ ವಸತಿ ಮತ್ತು ವಿಹಾರಧಾಮಗಳ ಸಂಸ್ಥೆ(ನಿ)

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

(CIN-U55103KA1980SGC003775)

ನಂ. 49, ವೆಸ್ಟ್‌ವಿಂಗ್, ನೆಲಮಹಡಿ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು-01.ದೂರವಾಣಿ : 080-4055 4055 ಫ್ಯಾಕ್ಸ್ : 080-4055 4040

ಇ–ಮೇಲ್: accounts@junglelodges.com ವೆಬ್‌ಸೈಟ್ : www.junglelodges.com

ಸಂ: ಜೆಎಲ್ಆರ್‌ಎಲ್/2023–24/ಐಎನ್‌ಡಿಇ0001 ದಿನಾಂಕ: 05.02.2024

ಟೆಂಡರ್ ಪ್ರಕಟಣೆ

ಅರಣ್ಯ ವಸತಿ ಮತ್ತು ವಿಹಾರಧಾಮಗಳ ಸಂಸ್ಥೆ(ನಿ), ಇವರು ಅರಣ್ಯ ವಸತಿ ಮತ್ತು ವಿಹಾರಧಾಮಗಳ ಸಂಸ್ಥೆ(ನಿ)ಗೆ 60ಹೆಚ್‌ಪಿ ಓಬಿಎಂ ಜೊತೆಗೆ 16+4 ಆಸನಗಳ ಮೋಟಾರು ಬೋಟ್‌ನ ವಿನ್ಯಾಸ, ತಯಾರಿಕೆ, ಸರಬರಾಜು, ಪರೀಕ್ಷೆ ಮತ್ತು ಕಾರ್ಯಾಚರಣೆಗೊಳಿಸಲು ಟೆಂಡರ್‌ನ್ನು ಆಹ್ವಾನಿಸಿದ್ದಾರೆ. ಟೆಂಡರ್ ದಸ್ತಾವೇಜಿನ ವಿವರಗಳು ವೆಬ್‌ಸೈಟ್: **https://kppp.karnataka.gov.in** ನಲ್ಲಿ ಲಭ್ಯವಿದೆ. ಟೆಂಡರ್ ದಸ್ತಾವೇಜುಗಳನ್ನು ಸ್ವೀಕರಿಸಲು(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ) ಕೊನೆಯ **ದಿನಾಂಕ: 20.02.2024 ಸಂಜೆ 4.00 ಗಂಟೆವರೆಗೆ ಮತ್ತು ಇಎಂಡಿ ಮೊತ್ತ ರೂ.1,00,000/–**. ಇತರೆ ಯಾವುದೇ ಸ್ಪಷ್ಟೀಕರಣಕ್ಕೆ ಸಂಪರ್ಕಿಸಿ: 91–8046010000 ಮತ್ತು 91–8068948777, ಇ–ಮೇಲ್: support@eprochelpdesk.com

ಸಹಿ/– ಹಿರಿಯ ಪ್ರಧಾನ ವ್ಯವಸ್ಥಾಪಕರು.

ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)

ಕಾರ್ಯನಿರ್ವಾಹಕ ಇಂಜಿನೀಯರ ರವರ ಕಚೇರಿ ಕನೀನಿನಿ, ಕಳಸಾ ಯೋಜನೆ ವಿಭಾಗ, ಖಾನಾಪೂರ

ಅಲ್ಪಾವದಿ ಟೆಂಡರ ಪ್ರಕಟಣೆ (ಕೆಪಿಪಿ–ಪ್ರೂಕ್ಯೂರ್‌ಮೆಂಟ ಪೋರ್ಟಲ್ ಸಿಸ್ಟಮ್ ಮುಖಾಂತರ)

ಟೆಂಡರ ಪ್ರಕಟಣೆ ಸಂಖ್ಯೆ.:KNNL/KPD/KNP/PB/BGM-Roads/TND/2023-24/1122,1123, 1124 & 1125 Date : 05.02.2024

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ, ಬೆಂಗಳೂರು ಇವರ ಪರವಾಗಿ ಕಾರ್ಯನಿರ್ವಾಹಕ ಇಂಜನೀಯರ್, ಕನೀನಿನಿ, ಕಳಸಾ ಯೋಜನೆ ವಿಭಾಗ, ಖಾನಾಪೂರ ಕಚೇರಿ ಅಡಿಯಲ್ಲಿ ಬರುವ ಈ ಕೆಳಗಿನ ಕಾಮಗಾರಿಗೆ Class-I (KPWD) ಅರ್ಹಗುತ್ತಿಗೆದಾರರರಿಂದ ಶೇಕಡಾವಾರು ಟೆಂಡರಗಳನ್ನು ಕೆಪಿ–ಪ್ರೂಕ್ಯೂರ್‌ಮೆಂಟ ಪೋರ್ಟಲ್ ಸಿಸ್ಟಮ್ ಮುಖಾಂತರ ಆಹ್ವಾನಿಸಲಾಗಿದೆ.

ಕ್ರ. ಸಂ:1:ಕಾಮಗಾರಿಯ ಹೆಸರು:Construction of CC Road at Sambra village and Improvements of road from Sambra Village (Yaragatti-Belagavi main road) to Sambra - Aste connecting road in Belagavi Taluka. [KNNL/2023-24/RD/WORK_INDENT743], ಟೆಂಡರ್‌ಗೆ ಇಟ್ಟ ಮೊತ್ತ (ರೂ.ಲಕ್ಷಗಳಲ್ಲಿ): 491.74, ಕ್ರ.ಸಂ:2:ಕಾಮಗಾರಿಯ ಹೆಸರು:Construction of CC Road, Pavers and Laxmi Peeth at Basarikatti village in Talukaunder H/A 4701 for the year 2023-24 [KNNL/2023-24/RD/WORK_INDENT752], ಟೆಂಡರ್‌ಗೆ ಇಟ್ಟ ಮೊತ್ತ (ರೂ. ಲಕ್ಷಗಳಲ್ಲಿ): 349.58,ಕ್ರ. ಸಂ:3:ಕಾಮಗಾರಿಯ ಹೆಸರು:Construction of CC Road, Pavers and RCC Drain at Beejagarni, Rakasakoppa, Kavalewadi and Yelebail villages in Belagavi Taluka under H/A 4701 for the year 2023-24 [KNNL/2023-24/RD/WORK_INDENT745], ಟೆಂಡರ್‌ಗೆ ಇಟ್ಟ ಮೊತ್ತ (ರೂ. ಲಕ್ಷಗಳಲ್ಲಿ):492.76, ಕ್ರ. ಸಂ:4::ಕಾಮಗಾರಿಯ ಹೆಸರು:Construction of CC Road, Pavers and RCC Drain at Benakanahalli and Ganeshpur villages in Belagavi Taluka. under H/A 4701 for the year 2023-24 [KNNL/2023-24/RD/ WORK_INDENT754], ಟೆಂಡರ್‌ಗೆ ಇಟ್ಟ ಮೊತ್ತ (ರೂ. ಲಕ್ಷಗಳಲ್ಲಿ):494.63.

www.kppp.karnataka.gov.in ಅರ್ಜಿಗಳನ್ನು ಡೌನಲೋಡ ಮಾಡಿಕೊಳ್ಳಬಹುದು/ಭರ್ತಿಮಾಡಿದ ಟೆಂಡರಗಳನ್ನು ಸಲ್ಲಿಸುವ ಕೊನೆಯ ದಿನಾಂಕ: 19.02.2024 ರಂದು ಸಂಜೆ 16.00 ವರೆಗೆ ಸಲ್ಲಿಸಬಹುದು. ಪ್ರಿ–ಬಿಡ್ ಸಭೆಯನ್ನು ದಿನಾಂಕ: 09.02.2024ರಂದು ಮುಂಜಾನೆ 11.30 ಘಂ. ಕಾರ್ಯನಿರ್ವಾಹಕ ಇಂಜನೀಯರ, ಕನೀನಿನಿ, ಕಳಸಾ ಯೋಜನಾ ವಿಭಾಗ, ಖಾನಾಪೂರ ಕಚೇರಿಯಲ್ಲಿ ಆಯೋಜಿಸಲಾಗಿದೆ. ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 20.02.2024 ಸಂಜೆ 16.30 ಗಂಟೆಯ ನಂತರ ಪೂರ್ವಾರ್ಹತೆ ಕುರಿತಂತೆ ಇ.ಎಂ.ಡಿ. ವಿವರ, ಟೆಂಡರ ಶರತ್ತುಗಳು ಹಾಗೂ ಇತರೆ ವಿವರಗಳನ್ನು ಕೆಪಿ–ಪ್ರೂಕ್ಯೂರ್‌ಮೆಂಟ ಪೋರ್ಟಲ್ ಸಿಸ್ಟಮ್ ಮುಖಾಂತರ www. kppp. karnataka.gov.in ಸಂಪರ್ಕಿಸತಕ್ಕದ್ದು. ಹೆಚ್ಚಿನ ಮಾಹಿತಿಗಾಗಿ ಈ ಕಚೇರಿ ದೂರವಾಣಿ ಸಂಖ್ಯೆ. 08336–222163 ಸಂಪರ್ಕಿಸುವದು.

ಸಹಿ/–(ಆರ್.ಬಿ. ಮರಾಠೆ)
ಕಾರ್ಯನಿರ್ವಾಹಕ ಇಂಜನೀಯರ, ಕನೀನಿನಿ,
ಕಳಸಾ ಯೋಜನೆ ವಿಭಾಗ, ಖಾನಾಪೂರ

DIPR/BGM/RO-NO-1070/KSMCA/2023-24

ಕೆ.ಎಂ.ಎಫ್ ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ

ಕಹಾಮ ಸಂಕೀರ್ಣ, ಡಾ. ಎಂ. ಹೆಚ್. ಮರೀಗೌಡ ರಸ್ತೆ, ಬೆಂಗಳೂರು–560 029.
ಫೋನ್: 080–26096888, 26096858

IFT No : ಕಹಾಮ/ಅಭಿ/ವಿದ್ಯಾರ್ಥಿನಿಯರ ಹಾಸ್ಟಲ್ ಕಟ್ಟಡ/ತುಮೂಲ್/01625/2023–24 ದಿನಾಂಕ: 06.02.2024

ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟ್‌ಲ್ ಅಡಿಯಲ್ಲಿ ಅಲ್ಪಾವಧಿ ಟೆಂಡರ್ ಪ್ರಕಟಣೆ

ಕಹಾಮ ವತಿಯಿಂದ ತುಮಕೂರು ಹಾಲು ಒಕ್ಕೂಟಕ್ಕಾಗಿ ಟರ್ನ್ ಕೀ ಆಧಾರದಲ್ಲಿ ತುಮಕೂರು ನಗರದಲ್ಲಿ ಅನುಷ್ಠಾನಗೊಳಿಸಲು ಯೋಜಿಸಿರುವ ವಿದ್ಯಾರ್ಥಿನಿಯರ ಹಾಸ್ಟಲ್ ಕಟ್ಟಡ ನಿರ್ಮಾಣ ಕಾಮಗಾರಿ ಕೆಲಸಗಳಿಗಾಗಿ ಕರ್ನಾಟಕ ಹಾಲು ಮಹಾಮಂಡಳವು ಕೆ.ಪಿ.ಡಬ್ಲ್ಯೂ.ಡಿ/ಸಿ.ಪಿ.ಡಬ್ಲ್ಯೂ.ಡಿ/ಎಂ.ಇ.ಎಸ್ ಅಡಿಯಲ್ಲಿ ನೋಂದಾಯಿಸಿದ ಅರ್ಹಗುತ್ತಿಗೆದಾರರು /ಸಂಸ್ಥೆಗಳಿಂದ ಈ ಕೆಳಗಿನ ಕೋಷ್ಟಕದಲ್ಲಿ ನೀಡಿರುವ ಕೆಲಸಕ್ಕಾಗಿ ಕರ್ನಾಟಕ ಸಾರ್ವಜನಿಕರ ಸಂಗ್ರಹಣೆ ಪೋರ್ಟಲ್ ಮುಖೇನ ದ್ವಿಲಕೋಟೆ ಪದ್ಧತಿಯ ಅಲ್ಪಾವಧಿ ಟೆಂಡರ್‌ನ್ನು (Technical and Financial) ಆಹ್ವಾನಿಸಲಾಗಿದೆ. ಆಸಕ್ತರು ವೆಬ್‌ಸೈಟ್ http://kppp.karnataka.gov.in ಮೂಲಕ ಟೆಂಡರನ್ನು ಸಲ್ಲಿಸಬಹುದಾಗಿದೆ.

ಕ್ರಮ ಸಂಖ್ಯೆ	ಕಾಮಗಾರಿಯ ಹೆಸರು	ಅಂದಾಜು ಮೊತ್ತ ರೂ. (ಜಿ.ಎಸ್.ಟಿ ಸೇರಿ)	ಇ.ಎಂ.ಡಿ. ರೂ.	ಮುಕ್ತಾಯದ ಅವಧಿ
1	ಕಹಾಮ ವತಿಯಿಂದ ತುಮಕೂರು ಹಾಲು ಒಕ್ಕೂಟಕ್ಕಾಗಿ ಅನುಷ್ಠಾನಗೊಳಿಸಲು ಯೋಜಿಸ ಲಾಗಿರುವ ಸುಮಾರು 400 ವಿದ್ಯಾರ್ಥಿನಿಯರ ಸಾಮರ್ಥ್ಯದ ಹಾಸ್ಟಲ್ ಕಟ್ಟಡ ನಿರ್ಮಾಣ ಕಾಮಗಾರಿ ಮತ್ತಿತ್ತರೆ ಸಂಬಂಧಿಸಿದ ಸಿವಿಲ್ ಕೆಲಸಗಳು ತುಮಕೂರು ನಗರ.	ರೂ.23.04 ಕೋಟಿಗಳು	ರೂ.23,00,000/–	12 ತಿಂಗಳುಗಳು

1) ಟೆಂಡರ್ ಷೆಡ್ಯೂಲ್‌ಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ: 07.02.2024 ರಿಂದ 22.02.2024 ರ ಸಾಯಂಕಾಲ 4:00 ಗಂಟೆಯವರೆಗೆ. 2) ಟೆಂಡರುಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 22.02.2024 ಸಾಯಂಕಾಲ 4:00 ಗಂಟೆಯವರೆಗೆ. 3) ಟೆಂಡರುಗಳನ್ನು (Cover-1) ತೆರೆಯುವ ದಿನಾಂಕ: 25.02.2024 ಬೆಳಿಗ್ಗೆ 11:30 ಗಂಟೆಗೆ.

ಇನ್ನಿತರೆ ನಿಬಂಧನೆಗಳು, ಷರತ್ತುಗಳು ಹಾಗೂ ಟೆಂಡರ್‌ನ ತಿದ್ದುಪಡಿಗಳು/ಬದಲಾವಣೆಗಳನ್ನು ವೆಬ್‌ಸೈಟ್ http://kppp.karnataka.gov.in ನಲ್ಲಿ ಪಡೆಯಬಹುದಾಗಿದೆ.

ಕರ್ನಾಟಕ ಸಹಕಾರ ಹಾಲು ಮಹಾಮಂಡಳ ಪರವಾಗಿ
ಸಹಿ/– ನಿರ್ದೇಶಕರು (ಅಭಿಯಂತರ–1)

ಕರ್ನಾಟಕ ಸರಕಾರ

(ಲೋಕೋಪಯೋಗಿ, ಇಲಾಖೆ)

ಕಾರ್ಯನಿರ್ವಾಹಕ ಇಂಜಿನೀಯರ್‌ರವರ ಕಛೇರಿ ಲೋಕೋಪಯೋಗಿ ಇಲಾಖೆ, ಸೇಡಂ ವಿಭಾಗ ಜಿಲ್ಲೆಃ ಕಲಬುರಗಿ.

ಸಂ:ಕಾನಿಇಂ/ಲೋಇ./ಸೇವಿ/ತಾಶಾ–1/2023–24/2908 ದಿನಾಂಕ: 03–02–2024

:: ಅಲ್ಪಾವಧಿ ಇ–ಪ್ರೊಕ್ಯೂರಮೆಂಟ್ ಟೆಂಡರ್ ಪ್ರಕಟಣೆ ::

1) ಕಾಮಗಾರಿಯ ವಿವರ : 1. ಸೇಡಂ ತಾಲೂಕಿನ 01 ಕಾಮಗಾರಿ ಇಂಡೆಂಟ್ ಸಂ. 3054 ರಾಜ್ಯ ಹೆದ್ದಾರಿ ನಿರ್ವಹಣೆ ಯೋಜನೆ ಅಡಿಯಲ್ಲಿನ ಕಾಮಗಾರಿ : 7937, 2. ಚಿತ್ತಾಪೂರ ತಾಲೂಕಿನ 01 ಕಾಮಗಾರಿ ಇಂಡೆಂಟ್ ಸಂ. 3054 ರಾಜ್ಯ ಹೆದ್ದಾರಿ ನಿರ್ವಹಣೆ ಯೋಜನೆ ಅಡಿಯಲ್ಲಿನ ಕಾಮಗಾರಿ : 7956, 2) ಲೆಕ್ಕ ಶೀರ್ಷಿಕೆ : 2023–24ನೇ ಸಾಲಿನ 3054 ರಾಜ್ಯ ಹೆದ್ದಾರಿ ನಿರ್ವಹಣೆ ಯೋಜನೆ ಅಡಿಯಲ್ಲಿನ ಕಾಮಗಾರಿಗಳು, 3) ಟೆಂಡರಿಗಿಟ್ಟ ಮೊತ್ತ: **ಕನಿಷ್ಠ ರೂ. 150.00 ಲಕ್ಷಗಳು, ಗರಿಷ್ಠ ರೂ. 200.00 ಲಕ್ಷಗಳು,** 4) ಗುತ್ತಿಗೆದಾರರ ಅರ್ಹತೆ: 3ನೇ ದರ್ಜೆ & ಮೇಲ್ಪಟ್ಟು, 5) ಪೂರ್ವಭಾವಿ ಸಭೆ ದಿನಾಂಕ: **14–02–2024 ಬೆಳಿಗ್ಗೆ 11:30 ಗಂಟೆವರೆಗೆ,** 6) ಟೆಂಡರ್ ಸ್ಪಷ್ಟೀಕರಣ ಪಡೆಯುವ ಹಾಗೂ ಸಲ್ಲಿಸುವ ಅಂತಿಮ ದಿನಾಂಕ : **15–02–2024 ಸಾಯಂಕಾಲ 17:30 ಗಂಟೆಯವರೆಗೆ,** 7) ಟೆಂಡರ್ ಅರ್ಜಿ ಬೆಲೆ ಮತ್ತು ಇ.ಎಂ.ಡಿ ಮೊತ್ತ: ಟೆಂಡರ್ ಫಾರಂ ಬೆಲೆ & ಇ.ಎಮ್.ಡಿ ಇ–ಪ್ರೊಕ್ಯೂರಮೆಂಟ್‌ನಲ್ಲಿ ನಮೂದಿಸಿದಂತೆ, 8) ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ: **17–02–2024 ರ ಸಾಯಂಕಾಲ 16:00 ಗಂಟೆಯವರೆಗೆ,** 9) ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **19–02–2024 ರ ಸಾಯಂಕಾಲ 16:30 ಗಂಟೆಯವರೆಗೆ,** 10) ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ: **21–02–2024 ರ ಸಾಯಂಕಾಲ 16:30 ಗಂಟೆಯವರೆಗೆ,** 11) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ: ಕಾರ್ಯನಿರ್ವಾಹಕ ಇಂಜಿನೀಯರ್, ಲೋಕೋಪಯೋಗಿ ಇಲಾಖೆ, ವಿಭಾಗ ಸೇಡಂ, 12) ಅಂತರಜಾಲ ತಾಣದ ವಿಳಾಸ: www.kppp.karnataka.gov.in, 13) ಬದಲಾವಣೆಗಾಗಿ ಸಂಪರ್ಕಿಸುವ ಬಗ್ಗೆ : ಯಾವುದೇ ಮಾರ್ಪಾಡು ಬದಲಾವಣೆಗಳನ್ನು **www.kppp.karnataka.gov.in** ಮಾಡಲಾಗುವುದು.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರ್
ಲೋಕೋಪಯೋಗಿ, ಇಲಾಖೆ ವಿಭಾಗ ಸೇಡಂ

ವಾ.ಸಾ.ಸಂ.ಇ/ಕಲಬುರಗಿ/776/ಕೆ.ಎಸ್.ಎಂ.ಸಿ.&ಎ/2023–24

ಪುರಸಭಾ ಕಾರ್ಯಾಲಯ ವಿಜಯಪುರ

ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ. ದೂರವಾಣಿ : 080–2766 6100.
ಇ–ಮೇಲ್: itstaff_ulb_vijayapura@yahoo.co.in, ವೆಬ್‌ಸೈಟ್: www.vijayapuratown.mrc.gov.in

ಸಂಖ್ಯೆ : ಪು.ವಿ./ತಾಂತ್ರಿಕ/ಸಿ.ಆರ್./ಟೆಂಡರ್/04/2023–24 ದಿನಾಂಕ : 02–12–2023

ಟೆಂಡರ್ ಪ್ರಕಟಣೆ

(ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

ಮುಖ್ಯಾಧಿಕಾರಿ ಪುರಸಭೆ ವಿಜಯಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರಿಂದ ಇ–ಪ್ರೊಕ್ಯೂರ್‌ಮೆಂಟ್ ಮೂಲಕ 2023–24 ನೇ ಸಾಲಿನ ಎಸ್.ಎಫ್.ಸಿ. ಮುಕ್ತ ನಿಧಿ, ಎಸ್.ಸಿ.ಎಸ್.ಪಿ. ಮತ್ತು ಟಿ.ಎಸ್.ಪಿ., ಸ್ವಚ್ಛ ಭಾರತ್ ಮಿಷನ್ – 01 ರ ಯೋಜನೆ, 2022–23 ನೇ ಸಾಲಿನ ಪುರಸಭಾ ನಿಧಿಯ ಅನುದಾನದ ಯೋಜನೆಯಡಿ ಕಾಮಗಾರಿಗಳಿಗೆ ಕರ್ನಾಟಕ ಸ್ಟ್ಯಾಂಡರ್ಡ್ ಡಾಕ್ಯೂಮೆಂಟ್ – 01 ಹಾಗೂ 04 ರ ಪ್ರಕಾರ ಟೆಂಡರ್‌ನ್ನು ಏಕ–ಲಕೋಟೆ ಮತ್ತು ದ್ವಿ–ಲಕೋಟೆ ಪದ್ಧತಿಯಡಿ ಅರ್ಹ ದರ್ಜೆಯ ನೋಂದಾಯಿತ ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್ ಕರೆಯಲಾಗಿರುತ್ತದೆ.

2023–24 ನೇ ಸಾಲಿನ ಎಸ್.ಎಫ್.ಸಿ. ಮುಕ್ತ ನಿಧಿ ಮತ್ತು ಎಸ್.ಸಿ.ಎಸ್.ಪಿ. ಮತ್ತು ಟಿ.ಎಸ್.ಪಿ. ಅನುದಾನ ಮತ್ತು ಸ್ವಚ್ಛ ಭಾರತ ಮಿಷನ್ ಯೋಜನೆ 01

ಕ್ರ. ಸಂ.	ಟೆಂಡರ್ ಸಂಖ್ಯೆ	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇ.ಎಂ.ಡಿ. (ರೂ. ಗಳಲ್ಲಿ)	ಮೀಸಲಾತಿ
01	INDENT NO. : DMA/2023-24/OW/WORK_INDENT12801	423.42	6,35,130/-	OTHER
02	INDENT NO. : DMA/2023-24/WS/WORK_INDENT10193/CALL-2	15.00	37,500/-	OTHER
03	INDENT NO. : DMA/2023-24/WS/WORK_INDENT10195/CALL-2	1.50	3,750/-	OTHER
04	INDENT NO. : DMA/2023-24/OW/WORK_INDENT7977/CALL-2	1.80	4,500/-	OTHER
05	INDENT NO. : DMA/2023-24/SE/1458/CALL-2	15.00	37,500/-	OTHER
06	INDENT NO. : DMA/2023-24/SE/1728/CALL-2	15.93	39,650/-	OTHER

ಟೆಂಡರ್ ಪ್ರಕಟಣೆಯ ದಿನಾಂಕಗಳು : (01) ಎ) ಕ್ರ. ಸಂಖ್ಯೆ 01 ರವರೆಗೆ ಟೆಂಡರ್ ನಮೂನೆ ಕೋರಿ ಇ–ಪ್ರೊಕ್ಯೂರ್‌ಮೆಂಟ್ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ : 17–02–2024 ರಂದು ಸಂಜೆ 17.30 ಗಂಟೆಯವರೆಗೆ. ಬಿ) ಕ್ರ. ಸಂಖ್ಯೆ 01 ರ ಟೆಂಡರ್ ನಮೂನೆಗಳನ್ನು ತೆರೆಯುವ ದಿನಾಂಕ ಮತ್ತು ಸಮಯ : 19–02–2023 ರಂದು ಬೆಳಿಗ್ಗೆ 11.00 ಗಂಟೆಗೆ ಅಥವಾ ನಂತರದ ಕೆಲಸದ ದಿನ. ಸಿ) ಕ್ರ. ಸಂಖ್ಯೆ 01 ರ ಆರ್ಥಿಕ ಬಿಡ್ ತೆರೆಯುವ ದಿನಾಂಕ : 02–03–2024 ರಂದು ಬೆಳಿಗ್ಗೆ 11.00 ಗಂಟೆಗೆ, (02) ಎ) ಕ್ರ. ಸಂಖ್ಯೆ 04, 05, 06 ರವರೆಗೆ ಟೆಂಡರ್ ನಮೂನೆ ಕೋರಿ ಇ–ಪ್ರೊಕ್ಯೂರ್‌ಮೆಂಟ್ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ : 19–02–2024 ರಂದು ಸಂಜೆ 17.30 ಗಂಟೆಯವರೆಗೆ, ಬಿ) ಕ್ರ. ಸಂಖ್ಯೆ 04, 05, 06 ರವರೆಗೆ ಟೆಂಡರ್ ನಮೂನೆಗಳನ್ನು ತೆರೆಯುವ ದಿನಾಂಕ, ಸಮಯ : 21–02–2023 ರಂದು ಬೆಳಿಗ್ಗೆ 11.00 ಗಂಟೆಗೆ ಅಥವಾ ನಂತರದ ಕೆಲಸದ ದಿನ, (03) ಎ) ಕ್ರ. ಸಂಖ್ಯೆ 02, 03 ಕ್ಕೆ ಸಂಬಂದಿಸಿದಂತೆ ಟೆಂಡರ್ ನಮೂನೆ ಕೋರಿ ಇ–ಪ್ರೊಕ್ಯೂರ್‌ಮೆಂಟ್ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ : 12–02–2024 ರಂದು ಸಂಜೆ 17.30 ಗಂಟೆಯವರೆಗೆ, ಬಿ) ಕ್ರ. ಸಂಖ್ಯೆ 02, 03 ರ ಟೆಂಡರ್ ನಮೂನೆಗಳನ್ನು ತೆರೆಯುವ ದಿನಾಂಕ ಮತ್ತು ಸಮಯ : 14–02–2024 ರಂದು ಬೆಳಿಗ್ಗೆ 11.00 ಗಂಟೆಗೆ ಅಥವಾ ನಂತರದ ಕೆಲಸದ ದಿನ, 04) ಕ್ರ. ಸಂಖ್ಯೆ 1 ಕ್ಕೆ ಸಂಬಂದಿಸಿದಂತೆ ಟೆಂಡರ್ ಪೂರ್ವ ಭಾವಿ ಸಭೆ ದಿನಾಂಕ ಮತ್ತು ಸ್ಥಳ : 08–02–2024 ರಂದು ಬೆಳಿಗ್ಗೆ 11.00 ಘಂಟೆಗೆ ಪುರಸಭೆ ಕಛೇರಿ, ವಿಜಯಪುರ.

ಸಹಿ/– ಅಧ್ಯಕ್ಷರು, ಪುರಸಭೆ, ವಿಜಯಪುರ. ಸಹಿ/– ಉಪಾಧ್ಯಕ್ಷರು, ಪುರಸಭೆ, ವಿಜಯಪುರ. ಸಹಿ/– ಮುಖ್ಯಾಧಿಕಾರಿ, ಪುರಸಭೆ, ವಿಜಯಪುರ.

ವಾಸಾಸಂಇ/ಉನಿಕ/ಬೆಂಗ್ರಾಜಿ/ಮಣಿಪಾಲ್/3431/2022–23

ಕರ್ನಾಟಕ ಗೃಹ ಮಂಡಳಿ

Karnataka Housing Board Building Communities

ಗೃಹ ಆಯುಕ್ತರವರ ಕಛೇರಿ, ಕರ್ನಾಟಕ ಗೃಹ ಮಂಡಳಿ, ಕಾವೇರಿ ಭವನ, ಬೆಂಗಳೂರು–560 009.

ಸಂಖ್ಯೆ: ಕಗೃಮಂ/ಕಾ/ಹಂಚಿಕೆ/ಲಾಟರಿ/2023–24 ದಿನಾಂಕ: 03–02–2024

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ಗೃಹ ಮಂಡಳಿ ವತಿಯಿಂದ ಈ ಕೆಳಕಂಡ ಬಡಾವಣೆಗಳಲ್ಲಿ ಅಭಿವೃದ್ಧಿಪಡಿಸಿರುವ ನಿವೇಶನಗಳನ್ನು ಹಂಚಿಕೆ ಮಾಡುವ ಸಲುವಾಗಿ **ದಿನಾಂಕ: 23–11–2023 ಮತ್ತು 03–01–2024 ರ ದಿನಪತ್ರಿಕೆಗಳಲ್ಲಿ** ನೀಡಿರುವ ಪ್ರಕಟಣೆಗೆ ಅನುಗುಣವಾಗಿ ನಿಗಧಿತ ಆರಂಭಿಕ ಠೇವಣಿ ಮೊತ್ತದೊಂದಿಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿದ ಅರ್ಜಿದಾರರಿಗೆ ಇ–ಲಾಟರಿ ಮುಖಾಂತರ ಹಂಚಿಕೆ ಮಾಡಲು ತಾತ್ಕಾಲಿಕ & ಅಂತಿಮ ಅರ್ಹ/ಅನರ್ಹ ಅರ್ಜಿದಾರರ ಪಟ್ಟಿಯನ್ನು ಪ್ರಕಟಿಸಿ ಈ ಕೆಳಕಂಡಂತೆ ವೇಳಾಪಟ್ಟಿಯನ್ನು ನಿಗದಿಪಡಿಸಲಾಗಿದೆ.

ಕ್ರ. ಸಂ.	ಬಡಾವಣೆ	ಅರ್ಹ & ಅನರ್ಹ ಅರ್ಜಿದಾರರ ತಾತ್ಕಾಲಿಕ ಪಟ್ಟಿ ಪ್ರಕಟಣೆ ದಿನಾಂಕ	ಆಕ್ಷೇಪಣೆ ಸಲ್ಲಿಸಲು ಕೊನೆಯ ದಿನಾಂಕ	ಅರ್ಹ & ಅನರ್ಹ ಅರ್ಜಿದಾರರ ಅಂತಿಮ ಪಟ್ಟಿ ಪ್ರಕಟಣೆ ದಿನಾಂಕ	ಲಾಟರಿ ದಿನಾಂಕ ಮತ್ತು ಸಮಯ
1	ಬಳ್ಳಾರಿ ಜಿಲ್ಲೆ, ಎನ್.ಜಿ.ಓ. (ಮುಂಡ್ರಿಗಿ) ಹಲಕುಂದಿ	08-02-2024	15-02-2024	19-02-2024	21–02–2024 ಬೆಳ್ಳಗ್ಗೆ 11.00 ಗಂಟೆಗೆ
2	ಬಾಗಲಕೋಟೆ ಜಿಲ್ಲೆ, ಹುನಗುಂದ ತಾಲ್ಲೂಕು ಚಿಕ್ಕಬಾದವಾಡಗಿ	08-02-2024	15-02-2024	19-02-2024	21–02–2024 ಮಧ್ಯಾಹ್ನ 3.00 ಗಂಟೆಗೆ
3	ಮೈಸೂರು ಜಿಲ್ಲೆ ಹುಣಸೂರು ಮೂಕನ ಹಳ್ಳಿ	08-02-2024	15-02-2024	19-02-2024	22–02–2024 ಬೆಳಗ್ಗೆ 11.00 ಗಂಟೆಗೆ
4	ವಿಜಯನಗರ ಜಿಲ್ಲೆ, ಹರಪನಹಳ್ಳಿ ತಾಲ್ಲೂಕು, ಅನಂತನಹಳ್ಳಿ, ಮೆಳ್ಳೆಕಟ್ಟೆ	08-02-2024	15-02-2024	19-02-2024	22–02–2024 ಬೆಳ್ಳಗ್ಗೆ 12.00 ಗಂಟೆಗೆ
5	ಚಿತ್ರದುರ್ಗ ಮದುಕರಿಪುರ 2ನೇ ಹಂತ	08-02-2024	15-02-2024	19-02-2024	22–02–2024 ಮಧ್ಯಾಹ್ನ 3.00 ಗಂಟೆಗೆ
6	ವಿಜಯಪುರ ಜಿಲ್ಲೆ, ಬಬಲೇಶ್ವರ	08-02-2024	15-02-2024	19-02-2024	23–02–2024 ಬೆಳ್ಳಗ್ಗೆ 11.00 ಗಂಟೆಗೆ
7	ವಿಜಯಪುರ ಜಿಲ್ಲೆ, ಮುದ್ದೇಬಿಹಾಳ 2ನೇ ಹಂತ	08-02-2024	15-02-2024	19-02-2024	23–02–2024 ಮಧ್ಯಾಹ್ನ 3.00 ಗಂಟೆಗೆ

ಇ–ಲಾಟರಿ ನಡೆಯುವ ಸ್ಥಳ:– ಮಂಡಳಿ ಸಭಾಂಗಣ, 4ನೇ ಮಹಡಿ, ಕಗೃಮಂ, ಕಾವೇರಿ ಭವನ, ಬೆಂಗಳೂರು

ವಿಶೇಷ ಸೂಚನೆ: ಹೆಚ್ಚಿನ ಮಾಹಿತಿಗಾಗಿ ಮಂಡಳಿಯ ವೆಬ್‌ಸೈಟ್ **https://www.khb.karnataka.gov.in** ಸಂಪರ್ಕಿಸುವುದು.

ಸಹಿ/– ಗೃಹ ಆಯುಕ್ತರು,
ಕರ್ನಾಟಕ ಗೃಹ ಮಂಡಳಿ, ಬೆಂಗಳೂರು

DIPR/CP/RO3417/AAPL/2023-24



ಸುಭಾಷಿತ

ಅಹಂಕಾರವು ಅವಿವೇಕಿಗಳ ಆಸ್ತಿ.

–ಬೀಚಿ

ಪೇಟಿಎಂ ಪೇಮೆಂಟ್ಸ್ ಬ್ಯಾಂಕ್‌ಗೆ ನಿರ್ಬಂಧ ಬ್ಯಾಂಕ್ ತಪ್ಪಿಗೆ ಗ್ರಾಹಕರಿಗೆ ಸಮಸ್ಯೆ

ಮಾರ್ಚ್ 1ರಿಂದ ಜಾರಿಗೆ ಬರುವಂತೆ ಹಲವು ಬಗೆಯ ನಿರ್ಬಂಧಗಳನ್ನು ಪೇಟಿಎಂ ಪೇಮೆಂಟ್ಸ್ ಬ್ಯಾಂಕ್ ಮೇಲೆ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಹೇರಿದೆ. ಇದು ಬ್ಯಾಂಕಿಂಗ್ ವಲಯದಲ್ಲಿ ಸಂಚಲನ ಸೃಷ್ಟಿಸಿದೆ. ಆರ್‌ಬಿಐ ಈ ಹಿಂದೆಯೂ ಕೆಲವು ನಿರ್ಬಂಧಗಳನ್ನು ಈ ಪೇಮೆಂಟ್ಸ್ ಬ್ಯಾಂಕ್ ಮೇಲೆ ಹೇರಿತ್ತು. ಹೊಸ ಗ್ರಾಹಕರನ್ನು ಸೇರಿಸದೆ ಮಾಡಿಕೊಳ್ಳದಂತೆ 2022ರ ಮಾರ್ಚ್‌ನಲ್ಲಿ ತಾಕೀತು ಮಾಡಿತ್ತು. ಅದರ ಮುಂದುವರಿದ ಭಾಗವಾಗಿ ಈಗ ಹೊಸದಾಗಿ ನಿರ್ಬಂಧಗಳನ್ನು ಹೇರಿದೆ. ಇವು ಜಾರಿಗೆ ಬಂದ ನಂತರದಲ್ಲಿ, ಪೇಟಿಎಂ ಪೇಮೆಂಟ್ಸ್ ಬ್ಯಾಂಕ್ ಖಾತೆಗಳಿಗೆ, ವಾಲೆಟ್‌ಗಳಿಗೆ ಹೊಸದಾಗಿ ಹಣ ಜಮಾ ಮಾಡಲು ಅವಕಾಶ ಇರುವುದಿಲ್ಲ. ಪೇಟಿಎಂ ಪೇಮೆಂಟ್ಸ್ ನೀಡಿರುವ ನ್ಯಾಷನಲ್ ಕಾಮನ್ ಮೊಬಿಲಿಟಿ ಕಾರ್ಡ್‌ಗಳಿಗೆ ಹೊಸದಾಗಿ ಹಣ ಹಾಕಿಕೊಳ್ಳಲು ಸಾಧ್ಯವಿಲ್ಲ. ಬ್ಯಾಂಕ್ ಖಾತೆಗಳಲ್ಲಿ ಇರುವ ಹಣವನ್ನು ಹಿಂಪಡೆಯುವ ಸೌಲಭ್ಯವೊಂದನ್ನು ಹೊರತುಪಡಿಸಿದರೆ, ಈ ಬ್ಯಾಂಕ್ ಮೂಲಕ ಇತರ ಯಾವುದೇ ಸೇವೆ ಪಡೆಯಲು ಅವಕಾಶ ಇರುವುದಿಲ್ಲ. ಅಂದರೆ, ಮಾರ್ಚ್ 1ರಿಂದ ಈ ಬ್ಯಾಂಕ್ ಸೇವೆಗಳು ಗ್ರಾಹಕರ ಪಾಲಿಗೆ ಬಹುತೇಕ ಸ್ಥಗಿತವಾದಂತೆಯೇ. ಈ ಬ್ಯಾಂಕ್‌ನ ಗ್ರಾಹಕರಿಗೆ ಇದರಿಂದ ತೊಂದರೆ ಆಗುವುದಂತೂ ಖಚಿತ.



ಸೀಮಿತ ಮಾರುಕಟ್ಟೆ ಹೊಂದಿರುವ ಪೇಮೆಂಟ್ಸ್ ಬ್ಯಾಂಕ್‌ಗಳ ಅಸ್ತಿತ್ವಕ್ಕೆ ಸಂಬಂಧಿಸಿದ ವಿಸ್ತೃತ ಚರ್ಚೆಗೆ ಈ ವಿದ್ಯಮಾನ ಅವಕಾಶ ಮಾಡಿಕೊಡುತ್ತದೆ

ಚಿಲ್ಲರೆ ವಹಿವಾಟುಗಳ ಸಂದರ್ಭದಲ್ಲಿ ಸ್ಮಾರ್ಟ್‌ಫೋನ್ ಬಳಸಿ ಹಣ ಪಾವತಿಸುವ ಸೌಲಭ್ಯ ಒದಗಿಸುವ ಕಂಪನಿಗಳ ಸಾಲಿನಲ್ಲಿ ಪೇಟಿಎಂಗೆ ದೊಡ್ಡ ಸ್ಥಾನ ಇದ್ದೇ ಇದೆ. ಹೀಗಿದ್ದರೂ, ಪೇಟಿಎಂನ ಮಾತೃಸಂಸ್ಥೆಯಾದ ಒನ್ 97 ಕಮ್ಯುನಿಕೇಷನ್ಸ್ ಹಾಗೂ ಪೇಟಿಎಂ ಸ್ಥಾಪಕ ವಿಜಯ್ ಶೇಖರ್ ಶರ್ಮಾ ಅವರು ಬಹುಪಾಲು ಷೇರು ಹೊಂದಿರುವ ಪೇಟಿಎಂ ಪೇಮೆಂಟ್ಸ್ ಬ್ಯಾಂಕ್ ನಿಯಮಗಳನ್ನು ಸರಿಯಾಗಿ ಪಾಲಿಸದೇ ಇದ್ದುದನ್ನು ಸಮರ್ಥಿಸಿಕೊಳ್ಳಲು ಆಗುವುದಿಲ್ಲ. ಪೇಟಿಎಂ ಪೇಮೆಂಟ್ಸ್ ಬ್ಯಾಂಕ್‌ನ ಮೇಲೆ ಆರ್‌ಬಿಐ ನಡೆಸಿದ ಪ್ರಹಾರವು ದೇಶದ ಫಿನ್‌ಟೆಕ್ ಉದ್ಯಮದ ಒಂದು ವಲಯದಲ್ಲಿ ಆತಂಕಕ್ಕೆ ಕಾರಣವಾಗಿದೆ. ದೇಶದ ಫಿನ್‌ಟೆಕ್ ಹಾಗೂ ನವೋದ್ಯಮ ವಲಯಗಳ ಕೇಂದ್ರ, ಪೇಟಿಎಂ ಪೇಮೆಂಟ್ಸ್ ಬ್ಯಾಂಕ್ ಮೇಲಿನ ಕಠಿಣ ಕ್ರಮಗಳನ್ನು ಹಿಂಪಡೆಯಬೇಕು ಎಂಬ ಆಗ್ರಹದೊಂದಿಗೆ ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ಮತ್ತು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರಿಗೆ ಪತ್ರ ಬರೆದಿದ್ದಾರೆ ಎಂದು ವರದಿಯಾಗಿದೆ. ಆದರೆ, ಫಿನ್‌ಟೆಕ್ ಕಂಪನಿಗಳಿಗೆ ನಿಯಮಗಳಿಂದ ವಿನಾಯಿತಿ ನೀಡಲು ಸಾಧ್ಯವಿಲ್ಲ; ನಿಯಮಗಳನ್ನು ಅನುಸರಿಸಬೇಕಿರುವುದು ಆ ಕಂಪನಿಗಳ ಹೊಣೆ ಎಂದು ಕೇಂದ್ರ ಸಚಿವ ರಾಜೀವ್ ಚಂದ್ರಶೇಖರ್ ಈಗಾಗಲೇ ಹೇಳಿದ್ದಾರೆ.

ಪೇಟಿಎಂ ಪೇಮೆಂಟ್ಸ್ ಬ್ಯಾಂಕ್ ವಿರುದ್ಧ ಇಂತಹ ಕಠಿಣ ಕ್ರಮಕ್ಕೆ ಮುಂದಾಗಿರುವುದಕ್ಕೆ ನಿರ್ದಿಷ್ಟ ಕಾರಣಗಳು ಏನು ಎಂಬುದನ್ನು ಆರ್‌ಬಿಐ ವಿವರಿಸಿಲ್ಲ. ಈ ರೀತಿಯ ಕ್ರಮಕ್ಕೆ ಮುಂದಾಗಲು ಹಲವು ಗಂಭೀರ ಕಾರಣಗಳು ಇದ್ದವು ಎಂದು ವರದಿಗಳು ಹೇಳುತ್ತವೆ. ಬ್ಯಾಂಕ್ ಖಾತೆಗಳಿಗೆ ಅಗತ್ಯವಿರುವ ಕೆವೈಸಿ ದಾಖಲೆಗಳನ್ನು ಸರಿಯಾಗಿ ನಿರ್ವಹಿಸದೆ ಇದ್ದುದು ಒಂದು ಪ್ರಮುಖ ಕಾರಣ ಎಂದು ಕೆಲವು ವರದಿಗಳು ಹೇಳುತ್ತವೆ. ಇಷ್ಟೆಲ್ಲ ನಡೆಯುವಾಗ ಪೇಟಿಎಂ ಪೇಮೆಂಟ್ಸ್ ಬ್ಯಾಂಕ್‌ನ ಆಡಳಿತ ಮಂಡಳಿ ಏನು ಮಾಡುತ್ತಿತ್ತು ಎಂಬ ಪ್ರಶ್ನೆ ಎದುರಾಗುತ್ತದೆ. ಪೇಮೆಂಟ್ಸ್ ಬ್ಯಾಂಕ್ ಎಂಬ ಹೊಸ ಬಗೆಯ, ಹೊಸ ಕಾಲದ ಬ್ಯಾಂಕಿಂಗ್ ವ್ಯವಸ್ಥೆಗೆ ಚಾಲನೆ ನೀಡುವಾಗ ಆರ್‌ಬಿಐ ಮನಸ್ಸಿನಲ್ಲಿ ಇದ್ದುದು ಹಣಕಾಸಿನ ಒಳಗೊಳ್ಳುವಿಕೆಯ ವಿಚಾರ. ಹೀಗಿದ್ದರೂ, ಪೇಟಿಎಂ ಪೇಮೆಂಟ್ಸ್ ಬ್ಯಾಂಕ್ ನಿರ್ಬಂಧಗಳನ್ನು ವಿಧಿಸುವ ಸಂದರ್ಭದಲ್ಲಿ ಗ್ರಾಹಕರು ಮುಂದೆ ಏನು ಮಾಡಬೇಕು ಎಂಬುದನ್ನು ಆರ್‌ಬಿಐ ಹೇಳಿಲ್ಲ. ಪೇಮೆಂಟ್ಸ್ ಬ್ಯಾಂಕ್‌ಗಳನ್ನು ಹೆಚ್ಚಾಗಿ ಬಳಸುವವರು ಸಣ್ಣ ವರಮಾನ ಹೊಂದಿರುವವರು. ಇವರಲ್ಲಿ ಸಮಾಜದ ಎಲ್ಲ ವರ್ಗಗಳಿಗೂ ಸೇರಿದವರು ಇದ್ದಾರೆ. ಮಾರ್ಚ್ 1ರಿಂದ ಬ್ಯಾಂಕ್ ಖಾತೆಗಳಿಗೆ ಹೊಸದಾಗಿ ಹಣ ಜಮಾ ಮಾಡುವುದು ಸಾಧ್ಯವಾಗದಿರುವುದರಿಂದ ತೊಂದರೆಗೆ ಒಳಗಾಗುವವರು ಸಣ್ಣ ಆದಾಯದ ಗ್ರಾಹಕರು. ಪೇಟಿಎಂ ಪೇಮೆಂಟ್ಸ್ ಬ್ಯಾಂಕ್‌ನ ಖಾತೆಗಳನ್ನು ವಹಿಸಿಕೊಳ್ಳಲು ಬೇರೆ ಬ್ಯಾಂಕ್‌ಗಳು ಮುಂದಾಗದೇ ಇದ್ದಲ್ಲಿ, ತೊಂದರೆ ಇನ್ನಷ್ಟು ಹೆಚ್ಚಾಗಬಹುದು. ಬ್ಯಾಂಕ್ ಮಾಡಿರುವ ತಪ್ಪಿಗೆ ಗ್ರಾಹಕರಿಗೆ ತೊಂದರೆ ಆಗಬಾರದು. ಆರ್‌ಬಿಐ ನಿರ್ಧಾರ ಸ್ವಾಗತಾರ್ಹ. ಆದರೆ, ಪೇಮೆಂಟ್ಸ್ ಬ್ಯಾಂಕ್‌ಗಳಿಗೆ ಇರುವ ಸೀಮಿತ ಮಾರುಕಟ್ಟೆಯನ್ನು ಪರಿಗಣಿಸಿದರೆ, ಈ ಮಾದರಿಯ ಬ್ಯಾಂಕ್‌ಗಳು ಹಣಕಾಸಿನ ಒಳಗೊಳ್ಳುವಿಕೆಯ ಉದ್ದೇಶವನ್ನು ಎಷ್ಟರಮಟ್ಟಿಗೆ ಈಡೇರಿಸಿವೆ, ಈ ಉದ್ದೇಶವನ್ನು ವಾಣಿಜ್ಯ ಬ್ಯಾಂಕ್‌ಗಳ ಮೂಲಕ, ಸಹಕಾರ ಸಂಘಗಳ ಮೂಲಕ ಅಥವಾ ಕಿರು ಹಣಕಾಸು ಬ್ಯಾಂಕ್‌ಗಳ ಮೂಲಕ ಸಾಧಿಸಲು ಸಾಧ್ಯವಿಲ್ಲವೇ ಎಂಬ ವಿಸ್ತೃತ ಚರ್ಚೆಗೂ ಈ ವಿದ್ಯಮಾನವು ಒಂದು ಕಾರಣವಾಗಿ ಒದಗಿಬರಬಹುದು.

ದಿನದ ಟ್ವೀಟ್

ಭೇಟಿ ಯಾಕಿಲ್ಲ?



ಮಣಿಪುರದಲ್ಲಿ ಹೋದ ವರ್ಷ ಜನಾಂಗೀಯ ಹಿಂಸಾಚಾರ ಭುಗಿಲೆದ್ದ ಬಳಿಕ ಮೊದಲ ಬಾರಿಗೆ ಈಶಾನ್ಯ ಭಾಗಕ್ಕೆ ಭೇಟಿ ನೀಡಿದ ಮೋದಿ, ಸಂಘರ್ಷಪೀಡಿತ ರಾಜ್ಯಕ್ಕೆ ತೆರಳದೇ ಇರುವ ತಮ್ಮ ನಿರ್ಧಾರಕ್ಕೆ ಅಂಟಿಕೊಂಡಿದ್ದಾರೆ. ಇದು ಅಪರಾಧಸದೃಶ ನಿರ್ದಯ ನಡೆ. ದೃಷ್ಟಿ ನೆಟ್ಟಿರುವುದು ಅಸ್ಸಾಂನ ಚುನಾವಣಾ ಪ್ರಚಾರದ ಮೇಲೆ.

ಸೀತಾರಾಂ ಯಚೂರಿ, ಸಿಪಿಎಂ ನಾಯಕ

ಕಿಡಿನುಡಿ



ಸಿದ್ದರಾಮಯ್ಯ ಅವರು ಪ್ರತಿಭಟನೆ ನಡೆಸುತ್ತಿರುವುದು ರಾಜಕೀಯ ಹಗೆತನ ಮತ್ತು ಚುನಾವಣೆ ಪ್ರಹಸನ ಅಲ್ಲದೆ ಮತ್ತೇನೂ ಅಲ್ಲ. ಇಡೀ ರಾಜ್ಯದ ತೆರಿಗೆ ಸಂಗ್ರಹದಲ್ಲಿ ಬೆಂಗಳೂರಿನದ್ದೇ ಸಿಂಹಪಾಲು ಇದೆ. ಈ ತೆರಿಗೆ ಹಣದಲ್ಲಿ ಸಿದ್ದರಾಮಯ್ಯ ಅವರ ವರುಣ, ಡಿ.ಕೆ. ಶಿವಕುಮಾರ್ ಅವರ ಕನಕಪುರ ಕ್ಷೇತ್ರಗಳಿಗೆ ಹಣ ಹೋಗುತ್ತಿಲ್ಲವೇ? ಹೆಚ್ಚು ತೆರಿಗೆ ನೀಡುತ್ತಿದ್ದೇವೆ ಎಂದು ಬೆಂಗಳೂರಿಗರು ಪ್ರತ್ಯೇಕ ರಾಜ್ಯ ಕೇಳಲು ಸಾಧ್ಯವೇ?

ಎನ್.ರವಿಕುಮಾರ್, ವಿಧಾನ ಪರಿಷತ್ತಿನ ಬಿಜೆಪಿ ಸದಸ್ಯ

25 ವರ್ಷಗಳ ಹಿಂದೆ

ಭಾನುವಾರ, 7-2-1999

• ಫೆ. 18ರಿಂದ ದೆಹಲಿಯಲ್ಲಿ ಭಾರತ – ಪಾಕಿಸ್ತಾನ ಮರು ಮಾತುಕತೆ

ಇಸ್ಲಾಮಾಬಾದ್, ಫೆ. 6 (ಎಎಫ್‌ಪಿ)– ನವದೆಹಲಿಯಲ್ಲಿ ಇದೇ ತಿಂಗಳ 18ರಂದು ಭಾರತದ ಜತೆ ಮತ್ತೆ ಮಾತುಕತೆ ಆರಂಭಿಸಲು ಪಾಕಿಸ್ತಾನ ಇಂದು ಒಪ್ಪಿಗೆ ನೀಡಿದೆ.

ಭಾರತದ ವಿದೇಶಾಂಗ ಕಾರ್ಯದರ್ಶಿ ಕೆ. ರಘುನಾಥ್ ಅವರೊಂದಿಗೆ ಮಾತುಕತೆ ನಡೆಸಲು ಪಾಕಿಸ್ತಾನದ ವಿದೇಶಾಂಗ ಕಾರ್ಯದರ್ಶಿ ಶಂಸದ್ ಅಹಮದ್ ಅವರು 17ರಂದು ನವದೆಹಲಿ ತಲುಪಲಿದ್ದಾರೆ. ಮೂರು ದಿನಗಳ ಮಾತುಕತೆಯು ಶಾಂತಿ ಮತ್ತು ಭದ್ರತೆಯನ್ನು ಕುರಿತದ್ದಾಗಿದೆ. ಅಲ್ಲದೆ, ಮಾತುಕತೆಯಲ್ಲಿ ಪರಸ್ಪರ ವಿಶ್ವಾಸ ಮೂಡಿಸುವುದು ಹಾಗೂ ಕಾಶ್ಮೀರದ ಪ್ರಶ್ನೆ ಕೂಡ ಬರುತ್ತವೆ ಎಂದು ಹೇಳಲಾಗಿದೆ.

• ಪರ್ಯಾಯ ಭದ್ರಾ ಯೋಜನೆಗೆ ಹೋರಾಟ: ಎಚ್ಚರಿಕೆ

ಬೆಂಗಳೂರು, ಫೆ. 6– ಪರ್ಯಾಯ ಭದ್ರಾ ಮೇಲ್ದಂಡೆ ಯೋಜನೆಯನ್ನು ಕೈಗೆತ್ತಿಕೊಳ್ಳುವ ಬಗ್ಗೆ ಈ ತಿಂಗಳ ಒಳಗೆ ಸರ್ಕಾರ ಖಚಿತ ನಿರ್ಧಾರ ತೆಗೆದುಕೊಳ್ಳದಿದ್ದಲ್ಲಿ ಉಗ್ರ ಹೋರಾಟ ನಡೆಸುವುದಾಗಿ ‘ಚಿತ್ರದುರ್ಗ ಜಿಲ್ಲಾ ನೀರಾವರಿ ಹಾಗೂ ಸಂಪನ್ಮೂಲ ಅಭಿವೃದ್ಧಿ ಹೋರಾಟ ಸಮಿತಿ’ ಇಂದು ರಾಜ್ಯ ಸರ್ಕಾರಕ್ಕೆ ಎಚ್ಚರಿಕೆ ನೀಡಿದೆ.

ಮಧ್ಯ ಕರ್ನಾಟಕದ ಜಿಲ್ಲೆಗಳಿಗೆ ನೀರು ಒದಗಿಸುವ ಈ ಯೋಜನೆಯ ಜಾರಿಗೆ ಒತ್ತಾಯಿಸಲು ಹೋರಾಟ ಕಾರ್ಯಕ್ರಮಗಳನ್ನು ರೂಪಿಸಲು ಇಲ್ಲಿ ಸೇರಿದ್ದ ಸಮಿತಿಯ ಪದಾಧಿಕಾರಿಗಳ ಸಭೆಯಲ್ಲಿ ಈ ಎಚ್ಚರಿಕೆ ನೀಡಲಾಯಿತು.

50 ವರ್ಷಗಳ ಹಿಂದೆ

ಗುರುವಾರ, 7-2-1974

• ದೆಹಲಿ ಅರಬ್‌ಲೀಗ್ ಕಟ್ಟಡ ಪ್ಯಾಲೆಸ್ಟೀನ್ ವಿದ್ಯಾರ್ಥಿಗಳ ವಶಕ್ಕೆ

ನವದೆಹಲಿ, ಫೆ. 6– ಇಲ್ಲಿನ ಗಾಲ್ಫ್‌ಲಿಂಕ್ಸ್ ಪ್ರದೇಶದಲ್ಲಿರುವ ಅರಬ್‌ಲೀಗ್ ಕಚೇರಿಯನ್ನು ಐವತ್ತಕ್ಕೂ ಹೆಚ್ಚು ಪ್ಯಾಲೆಸ್ಟೀನ್ ವಿದ್ಯಾರ್ಥಿಗಳು ಇಂದು ಆಕ್ರಮಿಸಿಕೊಂಡರು.

ಅರಬ್– ಇಸ್ರೇಲಿ ಸೈನಿಕರ ವಾಪಸಾತಿಗೆ ಜಿನೀವಾದಲ್ಲಿ ಮೂಡಿದ ಒಪ್ಪಂದವನ್ನು ಪ್ರತಿಭಟಿಸಿ ವಿದ್ಯಾರ್ಥಿಗಳು ಈ ಕ್ರಮ ಕೈಗೊಂಡಿದ್ದಾರೆ.

ಅರಬ್‌ಲೀಗ್ ರಾಜತಾಂತ್ರಿಕ ಆಯೋಗದ ಪ್ರಮುಖ ಪ್ರತಿನಿಧಿ ಇಬ್ರಾಹಿಂ ಅವರ ನಿವಾಸವು ಇದೇ ಕಟ್ಟಡದಲ್ಲಿದ್ದು, ಒಂದು ಗಂಟೆಯ ನಂತರ ಅವರು ಅದನ್ನು ಬಿಟ್ಟು ಹೊರಟರು.

• ಗುಜರಾತ್ ಹಿಂಸಾಕಾಂಡ ಅಂತ್ಯಕ್ಕೆ ಇಂದಿರಾ ಕರೆ

ರುಡೌಲಿ, (ಉತ್ತರ ಪ್ರದೇಶ) ಫೆ. 6– ‘ಶಾಂತಿ ಸ್ಥಾಪನೆಯಾದಾಗ ಮಾತ್ರ ಜನರ ಕುಂದು ಕೊರತೆಗಳನ್ನು ಸರಿಪಡಿಸಬಹುದಾದುದರಿಂದ ಗುಜರಾತಿನಲ್ಲಿ ಹಿಂಸಾಚಾರ ನಿಲ್ಲಿಸಬೇಕು’ ಎಂದು ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿ ಅವರು ಇಂದು ಇಲ್ಲಿ ಕರೆ ಕೊಟ್ಟರು.

ಬಹಿರಂಗ ಸಭೆಯಲ್ಲಿ ಮಾತನಾಡಿದ ಶ್ರೀಮತಿ ಗಾಂಧಿ, ಶಾಂತಿ ಸ್ಥಾಪನೆಯಾದಾಗ ಸರ್ಕಾರ ವಿವಿಧ ಜನಾಭಿಪ್ರಾಯಗಳನ್ನು ಕೇಳಿ ಅದಕ್ಕನುಗುಣವಾಗಿ ವರ್ತಿಸಬಹುದು. ಕಾನೂನುಬಾಹಿರ ಚಟುವಟಿಕೆ ಮತ್ತು ಹಿಂಸಾಚಾರ ಮುಂದುವರಿಯುತ್ತಿದ್ದರೆ ನಿರ್ಧಾರ ತೆಗೆದುಕೊಳ್ಳಲಾಗದು ಎಂದರು.

ಭಾರತ–ಅರ್ಜೆಂಟೀನಾ ನಡುವಿನ ಈ ಸಂಬಂಧದ ಒಪ್ಪಂದಕ್ಕೆ ವಿಶೇಷ ಮಹತ್ವವಿದೆ

ಲಿಥಿಯಮ್: ಸ್ವಾವಲಂಬನೆಗೆ ಪ್ರಯತ್ನ



ವಿಶ್ಲೇಷಣೆ

ಎಚ್.ಆರ್.ಕೃಷ್ಣಮೂರ್ತಿ

ಭಾರತ ಮತ್ತು ಅರ್ಜೆಂಟೀನಾ ಜನವರಿ ತಿಂಗಳ ಮಧ್ಯ-ಭಾಗದಲ್ಲಿ ಮುಖ್ಯವಾದ ಒಪ್ಪಂದವೊಂದಕ್ಕೆ ಸಹಿ ಹಾಕಿವೆ. ಅದರ ಫಲವಾಗಿ, ನಮ್ಮ ದೇಶದ ಸರ್ಕಾರಿ ಸ್ವಾಮ್ಯದ ‘ಖನಿಜ್ ವಿದೇಶ್ ಇಂಡಿಯಾ ಲಿಮಿಟೆಡ್’ ಸಂಸ್ಥೆ ಮೊದಲ ಬಾರಿಗೆ ವಿದೇಶಿ ನೆಲದಲ್ಲಿ ಅತಿ ಮಹತ್ವದ ಲಿಥಿಯಮ್ ಲೋಹಧಾತುವಿಗಾಗಿ ವ್ಯವಸ್ಥಿತವಾದ ವೈಜ್ಞಾನಿಕ ಅನ್ವೇಷಣೆಯನ್ನು ಪ್ರಾರಂಭಿಸಲಿದೆ.

ದೇಶದ ರಕ್ಷಣಾ ವಲಯ, ಪರಮಾಣು ಶಕ್ತಿ, ಬಾಹ್ಯಾಕಾಶ, ಎಲೆಕ್ಟ್ರಾನಿಕ್ಸ್, ವೈದ್ಯಕೀಯ ಉಪಕರಣಗಳು, ಬ್ಯಾಟರಿಚಾಲಿತ ವಾಹನಗಳು, ಸೌರವಿದ್ಯುತ್ ಪ್ಯಾನೆಲ್‌ಗಳು, ಗಾಳಿಯಂತ್ರದ ಟರ್ಬೈನುಗಳು, ಮೊಬೈಲ್ ಫೋನ್, ಕಂಪ್ಯೂಟರ್‌ನಂತಹ ಕ್ಷೇತ್ರಗಳ ಅತ್ಯಾಧುನಿಕ ತಂತ್ರಜ್ಞಾನಗಳಲ್ಲಿ ನಿರ್ಣಾಯಕ ಪಾತ್ರ ವಹಿಸುವ ಲಿಥಿಯಮ್‌ಗೆ ‘ಬಿಳಿ ಬಂಗಾರ’ ಎಂಬ ಹೆಸರಿದ್ದು, ಕಚ್ಚಾತೈಲದಷ್ಟೇ ಆರ್ಥಿಕ ಮಹತ್ವವಿದೆ. ಹೀಗಾಗಿ, ಪ್ರಪಂಚದ ಎಲ್ಲ ದೇಶಗಳಿಗೂ ಆದ್ಯತೆಯ ಮೇರೆಗೆ ಲಿಥಿಯಮ್ ಬೇಕೇ ಬೇಕು.

ಅಮೆರಿಕದ ಭೂವೈಜ್ಞಾನಿಕ ಸರ್ವೇಕ್ಷಣಾ ಸಂಸ್ಥೆಯ ಮೂಲದಂತೆ, ಪ್ರಪಂಚದ ಒಟ್ಟು ಲಿಥಿಯಮ್ ನಿಕ್ಷೇಪದ ಪ್ರಮಾಣ 8.07 ಕೋಟಿ ಟನ್‌ಗಳು. ಅದರ ಅರ್ಧಭಾಗ ‘ಲಿಥಿಯಮ್ ತ್ರಿಕೋನ’ ಎಂದೇ ಪ್ರಸಿದ್ಧವಾಗಿರುವ ಬೊಲಿವಿಯಾ, ಅರ್ಜೆಂಟೀನಾ ಮತ್ತು ಚಿಲಿ ದೇಶಗಳಲ್ಲಿದೆ. ಆದರೆ ಗಣಿಗಾರಿಕೆ ಮತ್ತು ಸಂಸ್ಕರಣೆಯ ನಂತರ ವಿವಿಧ ಉಪಯೋಗಗಳಿಗೆ ಬೇಕಿರುವ ಸಿದ್ಧರೂಪದ ಲಿಥಿಯಮ್‌ನ ಜಾಗತಿಕ ಬೇಡಿಕೆಯ ಶೇ 80ರಷ್ಟು ಚೀನಾದ ಹಿಡಿತದಲ್ಲಿದೆ. 2020-21ರಲ್ಲಿ ನಮ್ಮ ದೇಶದ ವಾರ್ಷಿಕ ಬೇಡಿಕೆಯ ಶೇ 54ರಷ್ಟು ಬಂದದ್ದು ಚೀನಾದಿಂದಲೇ.

ಲಿಥಿಯಮ್ ಸಾರ್ವಭೌಮತ್ವದ ಈ ಸಾಮರ್ಥ್ಯವನ್ನು ಚೀನಾವು ಒತ್ತಾಯ, ನಿರ್ಬಂಧ, ದಬ್ಬಾಳಿಕೆಯ ರಾಜಕಾರಣ ಮತ್ತು ಅಂತರರಾಷ್ಟ್ರೀಯ ವ್ಯವಹಾರಗಳ ಪ್ರಬಲ ಅಸ್ತ್ರವನ್ನಾಗಿ ಬಳಸುತ್ತಿದೆ. ಚೀನಾ ದೇಶದ ಈ ಪ್ರಬಲ ಹಿಡಿತದಿಂದ ಪಾರಾಗಿ, ವಿವಿಧ ದೇಶಗಳಿಗೆ ಅಗತ್ಯವಾದ ಅತಿ ಮಹತ್ವದ ಖನಿಜಗಳು ನಿರಂತರವಾಗಿ ದೊರೆಯುವಂತೆ ಮಾಡುವ ಉದ್ದೇಶದಿಂದ ‘ಮಿನರಲ್ಸ್ ಸೆಕ್ಯೂರಿಟಿ ಪಾರ್ಟ್‌ನರ್‌ಷಿಪ್’ ಎಂಬ ಜಾಗತಿಕ ವ್ಯವಸ್ಥೆಯೊಂದು 2022ರ ಜೂನ್‌ನಲ್ಲಿ ಅಸ್ತಿತ್ವಕ್ಕೆ ಬಂದಿತು. ಆಸ್ಟ್ರೇಲಿಯಾ, ಕೆನಡಾ, ಫಿನ್ಲೆಂಡ್, ಫ್ರಾನ್ಸ್, ಜರ್ಮನಿ, ಜಪಾನ್, ಕೊರಿಯಾ, ಸ್ವೀಡನ್, ಇಂಗ್ಲೆಂಡ್, ಅಮೆರಿಕ ದೇಶಗಳ ಸಂಘಟನೆಗೆ, ಹಿಂದಿನ ವರ್ಷದ ಜೂನ್‌ನಲ್ಲಿ ಭಾರತವೂ ಸೇರಿದೆ.

2030ರ ವೇಳೆಗೆ ದೇಶದ ಒಟ್ಟು ವಿದ್ಯುತ್ ಬೇಡಿಕೆಯ ಅರ್ಧದಷ್ಟನ್ನು ನವೀಕರಿಸಬಹುದಾದ ಶಕ್ತಿಮೂಲಗಳಿಂದ ಪಡೆಯಬೇಕೆನ್ನುವುದು ಸರ್ಕಾರದ ಗುರಿ. ಅದೇ ವೇಳೆಗೆ, ದೇಶದಲ್ಲಿ ಮಾರಾಟವಾಗುವ ಒಟ್ಟು ಖಾಸಗಿ ಕಾರುಗಳ ಪೈಕಿ ಶೇ 30ರಷ್ಟು, ವಾಣಿಜ್ಯ ವಾಹನಗಳ ಶೇ 70ರಷ್ಟು, ದ್ವಿಚಕ್ರ ಮತ್ತು ತ್ರಿಚಕ್ರ ವಾಹನಗಳ ಶೇ 80ರಷ್ಟು ಬ್ಯಾಟರಿಚಾಲಿತ ಇ-ವಾಹನಗಳಾಗಿರಬೇಕೆಂಬ ಗುರಿಯೂ ಇದೆ. ಈ ಮಹತ್ವಾಕಾಂಕ್ಷೆಯ ಗುರಿಯನ್ನು ಸಾಧಿಸಬೇಕಾದರೆ ಇ-ವಾಹನಗಳು, ಸೋಲಾರ್ ಪ್ಯಾನೆಲ್‌ಗಳು ಮತ್ತು ಗಾಳಿಯಂತ್ರದ ಟರ್ಬೈನುಗಳಲ್ಲಿ ಬಳಕೆಯಾಗುವ ಲಿಥಿಯಮ್-ಅಯಾನು ಬ್ಯಾಟರಿ ಕ್ಷೇತ್ರದಲ್ಲಿ ತ್ವರಿತಗತಿಯಲ್ಲಿ ನಾವು ಸ್ವಾವಲಂಬನೆಯನ್ನು ಸಾಧಿಸಬೇಕು. ಪ್ರಸ್ತುತ ನಮ್ಮ ದೇಶದ ಲಿಥಿಯಮ್-ಅಯಾನು ಬ್ಯಾಟರಿಗಳ ವಾರ್ಷಿಕ ಬೇಡಿಕೆಯ ಶೇ 70ರಷ್ಟು ಭಾಗ ಚೀನಾದಿಂದ ಆಮದಾಗುತ್ತಿದೆ.

ಜಾಗತಿಕ ಮಟ್ಟದಲ್ಲಿ ಪ್ರಪಂಚದ ಅತಿದೊಡ್ಡ 10 ಲಿಥಿಯಮ್-ಅಯಾನು ಬ್ಯಾಟರಿ ಉತ್ಪಾದಕ ಕಂಪನಿಗಳಲ್ಲಿ ಆರು ಚೀನಾದಲ್ಲಿವೆ. ಜಾಗತಿಕ ಬೇಡಿಕೆಯ ಶೇ 77ರಷ್ಟನ್ನು ಅವು ಪೂರೈಸುತ್ತಿವೆ. ಈ ಪರಿಸ್ಥಿತಿಯಲ್ಲಿ, ವಿಕ್ರಮ್ ಸಾರಾಭಾಯ್ ಸ್ಪೇಸ್ ಸೆಂಟರ್ 1.5ರಿಂದ 100 ಆ್ಯಂಪಿಯರ್ ಸಾಮರ್ಥ್ಯದ ಲಿಥಿಯಮ್ ಅಯಾನು ಬ್ಯಾಟರಿಗಳನ್ನು ಅಭಿವೃದ್ಧಿಪಡಿಸಿ, ಪರೀಕ್ಷಿಸಿ, ಅತ್ಯಂತ ಯಶಸ್ವಿಯಾಗಿ ಅನೇಕ ಉಪಗ್ರಹ ಮತ್ತು ಉಡಾವಣಾ ವಾಹನಗಳಲ್ಲಿ ಬಳಸಿರುವುದು ಅತ್ಯುತ್ತಮ ಬೆಳವಣಿಗೆ. ಇದೀಗ ಈ ತಂತ್ರಜ್ಞಾನವನ್ನು ದೇಶದ ಖಾಸಗಿ ಉತ್ಪಾದಕರಿಗೆ ವರ್ಗಾಯಿಸಲಾಗಿದೆ.

‘ಖನಿಜ್ ವಿದೇಶ್ ಇಂಡಿಯಾ ಲಿಮಿಟೆಡ್’- ನ್ಯಾಷನಲ್ ಅಲ್ಯೂಮಿನಿಯಮ್ ಕಂಪನಿ, ಹಿಂದೂಸ್ತಾನ್ ಕಾಪರ್ ಲಿಮಿಟೆಡ್ ಮತ್ತು ಮಿನರಲ್ ಎಕ್ಸ್‌ಪ್ಲೋರೇಷನ್ ಕಾರ್ಪೊರೇಷನ್ ಲಿಮಿಟೆಡ್ ಸಂಸ್ಥೆಗಳ ಸಹಭಾಗಿತ್ವದಲ್ಲಿ, ವಿದೇಶಗಳಲ್ಲಿ ಅತಿ ಮಹತ್ವದ ಖನಿಜಗಳ ಶೋಧನೆ ಮತ್ತು ಗಣಿಗಾರಿಕೆಯ ಉದ್ದೇಶದಿಂದ 2019ರಲ್ಲಿ ಅಸ್ತಿತ್ವಕ್ಕೆ ಬಂದ ಸಂಸ್ಥೆ. ಈ ಸಂಸ್ಥೆ ಇದೀಗ ಅರ್ಜೆಂಟೀನಾದ ಮೂರು ಸರ್ಕಾರಿ ಕಂಪನಿಗಳೊಡನೆ ಮಾಡಿಕೊಂಡಿರುವ ಒಪ್ಪಂದದ ಮೂಲಕವಾಗಿ ಅಲ್ಲಿನ ಕ್ಯಾಟಾಮಾರ್ಕಾ ಪ್ರಾಂತ್ಯದ ಒಟ್ಟು 15,703 ಹೆಕ್ಟೇರ್ ವಿಸ್ತೀರ್ಣದ ಐದು ಲಿಥಿಯಮ್ ಲವಣ ಕ್ಷೇತ್ರಗಳಲ್ಲಿ ಲಿಥಿಯಮ್‌ಗಾಗಿ ಅನ್ವೇಷಣೆ ನಡೆಸಿ, ವಾಣಿಜ್ಯೋದ್ಯಮದ ದೃಷ್ಟಿಯಿಂದ ಗಣಿಗಾರಿಕೆ ನಡೆಸಲು ಸಂಪೂರ್ಣ ಹಕ್ಕನ್ನು ಪಡೆದುಕೊಂಡಿದೆ. ಇದರಿಂದಾಗಿ ಲಿಥಿಯಮ್ ಗಣಿಗಾರಿಕೆಗೆ ಸಂಬಂಧಿಸಿದ ತಾಂತ್ರಿಕ ಜ್ಞಾನ ಹಾಗೂ ಕಾರ್ಯಾಚರಣೆಯ ಅನುಭವಗಳು ಉನ್ನತೀಕರಣಗೊಂಡು, ದೇಶದ ಗಣಿಗಾರಿಕಾ ಕ್ಷೇತ್ರದಲ್ಲಿ ತ್ವರಿತಗತಿಯ ಮುನ್ನಡೆ ಸಾಧ್ಯವಾಗುವ ನಿರೀಕ್ಷೆಯಿದೆ.



ನಮ್ಮ ದೇಶದಲ್ಲಿಯೇ ಈ ಅಮೂಲ್ಯ ಖನಿಜ ನಿಕ್ಷೇಪಕ್ಕಾಗಿ ವ್ಯವಸ್ಥಿತವಾದ ಅನ್ವೇಷಣೆ ಭಾರತೀಯ ಭೂವೈಜ್ಞಾನಿಕ ಸರ್ವೇಕ್ಷಣಾ ಸಂಸ್ಥೆಯ ನೇತೃತ್ವದಲ್ಲಿ ಭರದಿಂದ ಸಾಗಿದೆ. ಜಮ್ಮು ಮತ್ತು ಕಾಶ್ಮೀರದ ರೆಸ್ಸೆ ಜಿಲ್ಲೆಯ ಸಲಾಲ್ ಹೈಮಾನ್ ಪ್ರದೇಶದಲ್ಲಿ ಹೋದ ವರ್ಷದ ಜನವರಿಯಲ್ಲಿ ಲಿಥಿಯಮ್ ನಿಕ್ಷೇಪವನ್ನು ಸಂಸ್ಥೆ ಪತ್ತೆ ಮಾಡಿದೆ. ಈ ನಿಕ್ಷೇಪದ ಪ್ರಮಾಣ ಸುಮಾರು 59 ಲಕ್ಷ ಟನ್‌ಗಳಿರಬಹುದೆಂಬ ಅಂದಾಜು ದೊರೆತಿದೆ. ಇದು ಭಾರತದ ಅತಿ ದೊಡ್ಡ ಪ್ರಮಾಣದ ಲಿಥಿಯಮ್ ನಿಕ್ಷೇಪವಾಗುವುದರ ಜೊತೆಗೆ, ನಮ್ಮ ದೇಶವನ್ನು ಜಗತ್ತಿನ ಲಿಥಿಯಮ್ ನಿಕ್ಷೇಪದ ಪ್ರಮುಖ ದೇಶಗಳಾದ ಬೊಲಿವಿಯಾ (3.90 ಕೋಟಿ ಟನ್), ಚಿಲಿ (1.99 ಕೋಟಿ ಟನ್), ಆಸ್ಟ್ರೇಲಿಯಾ (77 ಲಕ್ಷ ಟನ್), ಚೀನಾ (67 ಲಕ್ಷ ಟನ್) ಮತ್ತು ಅರ್ಜೆಂಟೀನಾ (57 ಲಕ್ಷ ಟನ್) ಸಾಲಿನಲ್ಲಿ ನಿಲ್ಲಿಸುವ ನಿರೀಕ್ಷೆಯಿದೆ.

ಇದರ ಜೊತೆಗೆ ಹಿಂದಿನ ವರ್ಷದ ನವೆಂಬರ್‌ನಲ್ಲಿ ಜಾರ್ಖಂಡ್‌ನ ಕೊಡೆರ್ಮಾ ಜಿಲ್ಲೆಯಲ್ಲಿ ಲಿಥಿಯಮ್ ನಿಕ್ಷೇಪ ಪತ್ತೆಯಾಗಿದ್ದು, ಅದರ ಪ್ರಮಾಣವನ್ನು ಅಂದಾಜು ಮಾಡಲಾಗುತ್ತಿದೆ ಎಂದು ಭಾರತೀಯ ಭೂವೈಜ್ಞಾನಿಕ ಸರ್ವೇಕ್ಷಣಾ ಸಂಸ್ಥೆಯ ಮಹಾನಿರ್ದೇಶಕರು ತಿಳಿಸಿದ್ದಾರೆ. ಪರಮಾಣು ಶಕ್ತಿ ಇಲಾಖೆಯ ಭಾಗವಾದ ‘ಅಟಾಮಿಕ್ ಮಿನರಲ್ಸ್ ಡೈರೆಕ್ಟರೇಟ್ ಫಾರ್ ಎಕ್ಸ್‌ಪ್ಲೋರೇಷನ್ ಆ್ಯಂಡ್ ರಿಸರ್ಚ್’ ಸಂಸ್ಥೆಯು ಕರ್ನಾಟಕದ ಮಂಡ್ಯ ಜಿಲ್ಲೆಯ ಮರಳಗಾಲ ಮತ್ತು ಅಲ್ಲಪಟ್ಟಣ ಪ್ರದೇಶಗಳಲ್ಲಿ ನಡೆಸಿದ ಪ್ರಾರಂಭಿಕ ಸಮೀಕ್ಷೆಯಿಂದ, ಸುಮಾರು 1,600 ಟನ್‌ಗಳಷ್ಟು ಲಿಥಿಯಮ್ ನಿಕ್ಷೇಪದ ಬಗ್ಗೆ ಸೂಚನೆ ದೊರೆತಿದೆ. ಯಾದಗಿರಿ ಜಿಲ್ಲೆಯಲ್ಲಿಯೂ ಇಂತಹ ಸಮೀಕ್ಷೆಗಳು ನಡೆದಿವೆ.

ಯಾವುದೇ ಖನಿಜ ನಿಕ್ಷೇಪವನ್ನು ಪತ್ತೆ ಮಾಡುವ ಕಾರ್ಯಾಚರಣೆಯು ವೈಜ್ಞಾನಿಕವಾಗಿ ಪೂರ್ವಭಾವಿ ಸ್ಥಳಾನ್ವೇಷಣೆ (ಜಿ4), ಪ್ರಾರಂಭಿಕ ಸಮೀಕ್ಷೆ (ಜಿ3), ಶಿಲಾವೈಜ್ಞಾನಿಕ ಅನ್ವೇಷಣೆ, ಅಧ್ಯಯನ (ಜಿ2) ಮತ್ತು ವಿಸ್ತೃತ ಅನ್ವೇಷಣೆ (ಜಿ1) ಎಂಬ ನಾಲ್ಕು ಮುಖ್ಯ ಹಂತಗಳಲ್ಲಿ ನಡೆಯುತ್ತದೆ. ಈ ಹಂತಗಳ ನಂತರ ಗಣಿಗಾರಿಕೆಯ ತಾಂತ್ರಿಕ ಮತ್ತು ಆರ್ಥಿಕ ಕಾರ್ಯಸಾಧ್ಯತೆಗಳನ್ನು ಪರಿಶೀಲಿಸಿ ಅಂತಿಮ ತೀರ್ಮಾನವನ್ನು ಕೈಗೊಳ್ಳಲಾಗುತ್ತದೆ. ಜಿ4 ಮತ್ತು ಜಿ3 ಹಂತಗಳಲ್ಲಿ ಖನಿಜದ ದರ್ಜೆ, ಗುಣಮಟ್ಟ ಹಾಗೂ ಪ್ರಮಾಣದ ಬಗ್ಗೆ ದೊರೆಯುವ ಮಾಹಿತಿ ನಿಖರವಲ್ಲದ ಒಂದು ಸ್ಥೂಲ ಅಂದಾಜು ಮಾತ್ರ. ಜಿ2 ಹಂತದಲ್ಲಿ ಬಹಳಷ್ಟು ವಿಶ್ವಾಸಾರ್ಹವಾದ ಮಾಹಿತಿ ದೊರೆತು, ಅಂತಿಮವಾಗಿ ಜಿ1 ಹಂತದಲ್ಲಿ ಗಣಿಗಾರಿಕೆಗೆ ಬೇಕಾದ ಬಹುತೇಕ ಖಚಿತ ಮಾಹಿತಿ ದೊರೆಯುತ್ತದೆ.

ಜಮ್ಮು ಮತ್ತು ಕಾಶ್ಮೀರ, ಜಾರ್ಖಂಡ್, ಕರ್ನಾಟಕದಲ್ಲಿ ಲಿಥಿಯಮ್ ನಿಕ್ಷೇಪದ ಬಗ್ಗೆ ಜಿ4 ಮತ್ತು ಜಿ3 ಹಂತದ ಮಾಹಿತಿಗಳು ಮಾತ್ರ ಲಭ್ಯವಿವೆ. ಹೀಗಾಗಿ, ಬರೀ ಈ ಹಂತದ ಮಾಹಿತಿಗಳ ಆಧಾರದ ಮೇಲೆ, ಲಿಥಿಯಮ್ ಕೊರತೆ ಕೊನೆಗಾಣಲಿದೆ ಎಂಬ ನಿರ್ಧಾರಕ್ಕೆ ಬರುವುದು ಜಾಣತನವಲ್ಲ ಎಂದು ವಿಜ್ಞಾನಿಗಳು ಎಚ್ಚರಿಸಿದ್ದಾರೆ. ಈ ನಾಲ್ಕೂ ಹಂತಗಳು ಮುಗಿದು ಲಿಥಿಯಮ್ ಉತ್ಪಾದನೆ ಪ್ರಾರಂಭವಾಗಲು ಸರಾಸರಿ ಎಂಟರಿಂದ ಹತ್ತು ವರ್ಷಗಳು ಅಗತ್ಯ. ಸತತ ಪ್ರಯತ್ನಗಳಿಂದ ಈ ಅವಧಿಯನ್ನು ಐದರಿಂದ ಆರು ವರ್ಷಗಳಿಗೆ ಇಳಿಸುವುದು ಸಾಧ್ಯವಾದಲ್ಲಿ, 2030ರ ವೇಳೆಗೆ ದೇಶದ ಮುಂದಿರುವ ಮಹತ್ವಾಕಾಂಕ್ಷೆಯ ಗುರಿಯನ್ನು ಸಾಧಿಸಬಹುದು.

ಚುರುಮುರಿ



ತೆರಿಗೆ ನೋವು

• ಮಣ್ಣೆ ರಾಜು

‘ಭಾರತ ಜನನಿಯ ತನುಜಾತೆಯಾದ ಕರ್ನಾಟಕ ಮಾತೆಯು ತನ್ನ ತಾಯಿಯ ಮೇಲೆ ವಿಪರೀತ ಕೋಪಗೊಂಡಿದ್ದಾಳೆ ಕಣ್ರೀ...’ ಅಂದಳು ಸುಮಿ.

‘ನಾಡಮಾತೆಯ ವಿಚಾರದಲ್ಲಿ ದೇಶಮಾತೆಯು ಮಲತಾಯಿ ಧೋರಣೆ ಅನುಸರಿಸುತ್ತಿದ್ದಾಳಂತೆ. ತನ್ನ ಮಮತೆಯ ಮಕ್ಕಳಿಗೆ ಹೆಚ್ಚುವರಿ ಅನುದಾನ ನೀಡುತ್ತಾ ಒಬ್ಬ ಮಗಳಿಗೆ ಬೆಣ್ಣೆ, ಇನ್ನೊಬ್ಬಳಿಗೆ ಸುಣ್ಣ ಹಚ್ಚುತ್ತಾಳೆ. ಸ್ವಂತ ಮಕ್ಕಳ ಬಗ್ಗೆ ತಾರತಮ್ಯ ಮಾಡುವುದು ಸರಿಯಲ್ಲ ಎಂದರೆ, ಅಪೌಷ್ಟಿಕತೆಯಿಂದ ಬಳಲುತ್ತಿರುವ ಅಶಕ್ತ ಮಕ್ಕಳಿಗೆ ಹೆಚ್ಚುವರಿ ತುತ್ತು ತಿನ್ನಿಸುವುದು ತಾಯಿ ಧರ್ಮ ಅಂತ ದೇಶಮಾತೆ ಹೇಳುತ್ತಾಳೆ’ ಅಂದ ಶಂಕ್ರಿ.

‘ನಾಡಮಾತೆಯಿಂದ ತೆರಿಗೆಯ ದೊಡ್ಡ ಗಂಟು ಪಡೆಯುವ ದೇಶಮಾತೆಯು ಮಗಳು ಕಷ್ಟಕ್ಕೆ ಸಿಲುಕಿದಾಗ ಕೈ ತುಂಬಾ ನೀಡಿ ನೆರವಾಗುವ ಬದಲು, ಚಿಲ್ಲರೆ ಕಾಸು ಕೊಟ್ಟು ಕೈ ತೊಳೆದುಕೊಳ್ತಾಳಂತೆ. ಅನುದಾನ ನೀಡಿಕೆಯಲ್ಲಿ ತಾರತಮ್ಯ, ಮಳೆ ಕೊರತೆಯಿಂದ ತತ್ತರಿಸಿದ್ದರೂ ಬರ ಪರಿಹಾರ ಕಾಮಗಾರಿಗಳಿಗೆ ಬಿಡಿಗಾಸೂ ಬಿಡುಗಡೆ ಮಾಡಿಲ್ಲ. ಮಗಳು ಬರ, ಜ್ವರಪೀಡಿತಳಾದ ಸಂದರ್ಭದಲ್ಲಾದರೂ ತಾಯಿ ಕರುಳು ಮಿಡಿಯಬೇಕು’.

‘ಮಗಳಿಗೆ ತೆರಿಗೆ ನೋವು ಕಾಣಿಸಿದಾಗಲೂ ತಾಯಿ ಸ್ಪಂದಿಸಲಿಲ್ಲ ಅಂತ ದೇಶಮಾತೆಯ ಧೋರಣೆಗೆ ಬೇಸತ್ತ ನಾಡಮಾತೆಯ ಮಕ್ಕಳು ‘ನನ್ನ ತೆರಿಗೆ ನನ್ನ ಹಕ್ಕು’ ಎಂಬ ಘೋಷಣೆಯಡಿ ‘ನಮ್ಮ ಪಾಲು ನಮಗೆ ಕೊಡಿ’ ಎಂದು ದಿಲ್ಲಿಗೆ ಹೋರಾಟಕ್ಕೆ ಹೊರಟಿದ್ದಾರೆ’.

‘ದೇಶಮಾತೆ, ನಾಡಮಾತೆ ನಡುವಿನ ಜಗಳ, ರಗಳೆ ಮುಗಿಯೋದು ಯಾವಾಗ?’

‘ಈಗ ಅಮ್ಮ, ಮಗಳ ಗ್ರಹಗತಿ ಚೆನ್ನಾಗಿಲ್ಲ. ಯುಗಾದಿ ಕಳೆದು, ಎಲೆಕ್ಷನ್ ಮುಗಿದ ಮೇಲೆ ಶುಭ ಕಾಲ ಬಂದು ಇಬ್ಬರ ಮುನಿಸು, ಮನಸ್ತಾಪ ನಿವಾರಣೆ ಆಗುತ್ತೆ...’ ಎಂದು ಶಂಕ್ರಿ ಸಮಾಧಾನ ಹೇಳಿದ.

ಸಂಗತ

ಕೋರ್ಸ್ ಆಯ್ಕೆ: ದಾರಿ ತಪ್ಪೀರಿ

ಗ್ರಾಮೀಣ ಪ್ರದೇಶದ ಮಕ್ಕಳು ಹೆಚ್ಚಾಗಿ ಕೋರ್ಸ್ ಆಯ್ಕೆ ಗೊಂದಲದಲ್ಲಿ ಇರುತ್ತಾರೆ. ಅಂತಹವರಿಗೆ ಸೂಕ್ತ ಮಾರ್ಗದರ್ಶನ ನೀಡಬೇಕಾದ ಗುರುತರ ಹೊಣೆ ಅಧ್ಯಾಪಕರದು

• ಮಲ್ಲಿಕಾರ್ಜುನ ಹೆಗ್ಗಳಗಿ

ಸರ್ಕಾರಿ ಪದವಿ ಕಾಲೇಜೊಂದರಲ್ಲಿ ಬಿಎಸ್‌ಡಬ್ಲ್ಯು (ಬ್ಯಾಚುಲರ್ ಆಫ್ ಸೋಷಿಯಲ್ ವರ್ಕ್) 3ನೇ ಸೆಮಿಸ್ಟರ್‌ನಲ್ಲಿ ಓದುತ್ತಿರುವ ಇಬ್ಬರು ವಿದ್ಯಾರ್ಥಿಗಳು ನನ್ನನ್ನು ಭೇಟಿ ಮಾಡಲು ಬಂದಿದ್ದರು. ಅವರ ಭೇಟಿಯ ಉದ್ದೇಶವು ‘ಹಿರಿಯ ನಾಗರಿಕರೊಂದಿಗೆ ಮಾತುಕತೆ’ ಆಗಿತ್ತು. ಅವರು ಪ್ರಶ್ನಿಸುವ ಮೊದಲೇ ನಾನೇ ಅವರನ್ನು ‘ನೀವು ಬಿಎಸ್‌ಡಬ್ಲ್ಯು ಕೋರ್ಸ್ ಆಯ್ಕೆ ಮಾಡಿಕೊಂಡದ್ದು ಯಾಕೆ?’ ಎಂದು ಕೇಳಿದೆ. ಅವರು ತಲೆ ಕೆರೆದುಕೊಂಡು ನಿಧಾನವಾಗಿ ಹೇಳಿದರು. ‘ಬಿಎಸ್‌ಡಬ್ಲ್ಯು ಪಾಠ ಮಾಡುವ ಅಧ್ಯಾಪಕರು ಬಹಳ ಒತ್ತಾಯ ಮಾಡಿದ್ದರಿಂದ ಈ ವಿಷಯ ಆಯ್ಕೆ ಮಾಡಿಕೊಂಡಿದ್ದೇವೆ. ವಿದ್ಯಾರ್ಥಿಗಳಿಲ್ಲದೆ ಈ ಕೋರ್ಸ್ ಮುಚ್ಚಿ ತಮಗಾಗುವ ವೈಯಕ್ತಿಕ ಹಾನಿ ತಪ್ಪಿಸಿಕೊಳ್ಳುವುದಕ್ಕೆ ನಮ್ಮನ್ನು ಬಲಿಪಶು ಮಾಡಿದರು’ ಎಂದರು. ಅವರ ಮಾತಿನಲ್ಲಿ ಅಧ್ಯಾಪಕರ ಬಗ್ಗೆ ಸಿಟ್ಟು, ಅಸಮಾಧಾನ ಸ್ಪಷ್ಟವಾಗಿ ಕಾಣುತ್ತಿತ್ತು.

ಇದು ಈ ಇಬ್ಬರು ವಿದ್ಯಾರ್ಥಿಗಳ ಗೊಂದಲ ಮಾತ್ರ ಅಲ್ಲ, ಪ್ರಾಥಮಿಕದಿಂದ ಪಿಎಚ್.ಡಿ. ಪದವಿಯವರೆಗೂ ಕೆಲವು ಅಧ್ಯಾಪಕರು ತಮ್ಮ ವೈಯಕ್ತಿಕ ಹಿತಾಸಕ್ತಿ ಕಾಪಾಡಿಕೊಳ್ಳುವುದಕ್ಕಾಗಿ ವಿದ್ಯಾರ್ಥಿಗಳಿಗೆ ಆಸಕ್ತಿ ಇಲ್ಲದ ವಿಷಯಗಳನ್ನು ಕಲಿಕೆಗೆ ಆಯ್ಕೆ ಮಾಡಿಕೊಳ್ಳುವುದಕ್ಕೆ ಒತ್ತಾಯಪಡಿಸುತ್ತಾರೆ. ಇದು ವಿದ್ಯಾರ್ಥಿಗಳ ಭವಿಷ್ಯವನ್ನೇ ನುಂಗಿಹಾಕುವ ಆತಂಕದ ಸಂಗತಿಯಾಗಿದೆ.

ಗ್ರಾಮೀಣ ಪ್ರದೇಶದ ಬಹಳಷ್ಟು ಪಾಲಕರು ಮತ್ತು ವಿದ್ಯಾರ್ಥಿಗಳಿಗೆ ವಿಷಯ ಆಯ್ಕೆಯ ಖಚಿತತೆ ಇರುವುದಿಲ್ಲ. ತಮ್ಮ ಕಾರ್ಯ ಸರಿದೂಗಿಸಿಕೊಳ್ಳಲು ಅಧ್ಯಾಪಕರು ಇಂಥವರನ್ನು ಬಳಸಿಕೊಳ್ಳುತ್ತಾರೆ. ಪದವಿ ಪ್ರಥಮ ವರ್ಷದ ಪ್ರವೇಶ ಪಡೆಯುವ ಬಹಳಷ್ಟು ವಿದ್ಯಾರ್ಥಿಗಳು ಸಾಮಾನ್ಯವಾಗಿ ವಿಷಯ ಆಯ್ಕೆಯ ಗೊಂದಲದಲ್ಲಿ ಇರುತ್ತಾರೆ. ಮಾರ್ಗದರ್ಶನಕ್ಕಾಗಿ ಅಧ್ಯಾಪಕರನ್ನು ಸಂಪರ್ಕಿಸಿದಾಗ ಅವರು ತಮ್ಮ ಹಿತಾಸಕ್ತಿ ಕಾಪಾಡಿಕೊಳ್ಳಲು ಅನುವಾಗುವಂತಹ ಸಲಹೆ ನೀಡುವ ಸಂದರ್ಭಗಳೇ ಹೆಚ್ಚು. ಇನ್ನು ಕೆಲವು ಅಧ್ಯಾಪಕರು ತಾವೇ ವಿದ್ಯಾರ್ಥಿಗಳನ್ನು ಸಂಪರ್ಕಿಸಿ ‘ನಾನು ಪಾಠ ಮಾಡುವ ವಿಷಯವನ್ನೇ ಆಯ್ಕೆ ಮಾಡಿಕೊಳ್ಳಿ. ವಿಷಯ ಸರಳವಾಗಿದೆ. ಹೆಚ್ಚು ಅಂಕಗಳು ಬರುತ್ತವೆ. ಉದ್ಯೋಗ ಬೇಗ ಸಿಗುತ್ತದೆ. ನಾನೂ ಸಹಾಯ ಮಾಡುತ್ತೇನೆ’ ಎಂದು ಹುರಿದುಂಬಿಸುತ್ತಾರೆ.

ಕಲಿಕೆಯು ನದಿಯ ಪ್ರವಾಹ ಇದ್ದ ಹಾಗೆ. ಅದು ಮುಂದಕ್ಕೆ ಹರಿಯುತ್ತದೆ, ಹಿಂದಕ್ಕೆ ಹೋಗಲು ಆಗುವುದಿಲ್ಲ. ಎಷ್ಟೋ ವಿದ್ಯಾರ್ಥಿಗಳು ಒತ್ತಾಯಕ್ಕೆ ಒಳಗಾಗಿ ಇಷ್ಟವಿಲ್ಲದ ವಿಷಯ ಆಯ್ಕೆ ಮಾಡಿಕೊಂಡು ಬದುಕಿನ ಉದ್ದಕ್ಕೂ ನರಳುತ್ತಾರೆ. ಪ್ರಾಚಾರ್ಯರನ್ನು ಒಳಗೊಂಡು ಅಧ್ಯಾಪಕರು, ಶಿಕ್ಷಕರು ತಮ್ಮ ಸೇವಾ ಭದ್ರತೆಗೆ ಅನುಕೂಲವಾಗುವಂತೆ ವಿದ್ಯಾರ್ಥಿಗಳನ್ನು ಬಳಸಿಕೊಳ್ಳುತ್ತಿರುವುದು ನೋವಿನ ಸಂಗತಿ. ‘ಹಿಂದಿ ಪಾಠ ಮಾಡುವ ಪ್ರಿನ್ಸಿಪಾಲರು ಒತ್ತಾಯ ಮಾಡಿದ್ದರಿಂದ ಕನ್ನಡ ಬಿಟ್ಟು ಹಿಂದಿ ಆಯ್ಕೆ ಮಾಡಿಕೊಂಡೆ’ ಎಂದು ನನ್ನ ಮೊಮ್ಮಗ ಹೇಳಿದಾಗ ನಾನು ಅನುಭವಿಸಿದ ಸಂಕಟ ಅಷ್ಟಿಷ್ಟಲ್ಲ.

ಕೆಲವು ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸುವವರು ಪಾಠ ಮಾಡುವುದಕ್ಕಿಂತ ಹೆಚ್ಚಾಗಿ ಶಿಕ್ಷಣವನ್ನು ಮಾರ್ಕೆಟಿಂಗ್ ಮಾಡುವುದರಲ್ಲಿ ಹೆಚ್ಚಿನ ಪರಿಣತಿ ತೋರಿಸಬೇಕಾಗುತ್ತದೆ. ತಮ್ಮ ಶಾಲೆಗೆ ಯಾರು ಹೆಚ್ಚು ಮಕ್ಕಳನ್ನು ಕರೆತರುತ್ತಾರೋ ಅವರಿಗೆ ಮುಖ್ಯ ಅಧ್ಯಾಪಕ, ಉಪ ಪ್ರಾಚಾರ್ಯ, ಪ್ರಾಚಾರ್ಯ ಹುದ್ದೆ ನೀಡುವುದಾಗಿ ಶಿಕ್ಷಕರ ಮಧ್ಯೆ ಸ್ಪರ್ಧೆ ಹುಟ್ಟುಹಾಕುತ್ತಾರೆ. ಶಿಕ್ಷಕರು ಸ್ಪರ್ಧೆಗೆ ಇಳಿದು ಪಾಲಕರು ಮತ್ತು ವಿದ್ಯಾರ್ಥಿಗಳಿಗೆ ಏನೇನೋ ಹೇಳಿ ತಮ್ಮ ಶಾಲೆ, ಕಾಲೇಜುಗಳಿಗೆ ಕರೆತರುತ್ತಾರೆ. ಶಿಕ್ಷಕರ ಮಾತು ಕೇಳಿ ಪ್ರವೇಶ ಪಡೆದ ಶಾಲೆ ಕಾಲೇಜುಗಳಲ್ಲಿ ಸೂಕ್ತ ಸೌಲಭ್ಯಗಳು ಇರುವುದಿಲ್ಲ. ಆಯ್ಕೆ ಮಾಡಿಕೊಳ್ಳುವುದಕ್ಕೆ ಹೆಚ್ಚು ವಿಷಯಗಳು ಇರುವುದಿಲ್ಲ. ಹಾಸ್ಟೆಲ್ ವ್ಯವಸ್ಥೆ ಚೆನ್ನಾಗಿರುವುದಿಲ್ಲ. ಇದು ವಿದ್ಯಾರ್ಥಿಗಳ ಹಿನ್ನಡೆಗೆ ಕಾರಣವಾಗುತ್ತದೆ ಮಾತ್ರವಲ್ಲ ತಮ್ಮನ್ನು ಅಲ್ಲಿಗೆ ಕರೆತಂದ ಶಿಕ್ಷಕರ ಬಗ್ಗೆ ಗೌರವ ಕಡಿಮೆಯಾಗುತ್ತದೆ.

ಗ್ರಾಮೀಣ ಪ್ರದೇಶದ ಬಡ ಮುಸ್ಲಿಂ ಕುಟುಂಬಗಳ ಮಕ್ಕಳು ಉರ್ದು ಮಾಧ್ಯಮ ಶಾಲೆಗಳಿಗೆ ಹೋಗುತ್ತಾರೆ. ಇವರಿಗೆ ಉರ್ದು ಮಾಧ್ಯಮದಲ್ಲಿ ಕಲಿಯುವ ಆಸಕ್ತಿ ಇರದಿದ್ದರೂ ಅಲ್ಲಿನ ಶಿಕ್ಷಕರು ತಮ್ಮ ಶಾಲೆಯ ಮಕ್ಕಳ ಕನಿಷ್ಠ ಹಾಜರಾತಿ ಸಂಖ್ಯೆ ಕಾಯ್ದುಕೊಳ್ಳುವ ಉದ್ದೇಶದಿಂದ ಆಗ್ರಹಪಡಿಸಿ ಮಕ್ಕಳನ್ನು ಶಾಲೆಗೆ ಕರೆದುಕೊಂಡು ಬರುತ್ತಿರುವ ಉದಾಹರಣೆಗಳು ಬಹಳಷ್ಟಿವೆ. ಗ್ರಾಮೀಣ ಉರ್ದು ಶಾಲೆಗಳು ಬರೀ ಪ್ರಾಥಮಿಕ 5ನೇ ವರ್ಗದವರೆಗೆ ಮಾತ್ರ ಇರುವುದರಿಂದ ಆ ಶಾಲೆಗೆ ಸೇರಿಕೊಂಡ ಬಹಳಷ್ಟು ಮಕ್ಕಳು ಹೆಚ್ಚಿನ ಶಿಕ್ಷಣದಿಂದ ವಂಚಿತರಾಗುತ್ತಾರೆ. ಮುಸ್ಲಿಂ ವಿದ್ಯಾರ್ಥಿಗಳು ಶಿಕ್ಷಣ ಪಡೆಯುವಲ್ಲಿ ಹಿಂದುಳಿಯುವುದಕ್ಕೆ ಇರುವ ಪ್ರಮುಖ ಕಾರಣಗಳಲ್ಲಿ ಇದೂ ಒಂದು.



ಅನೇಕ ಖಾಸಗಿ ಶಿಕ್ಷಣ ಸಂಸ್ಥೆಗಳು ವಾರ್ಷಿಕ ಗುರಿ ನಿಗದಿಪಡಿಸುತ್ತವೆ. ಆ ಗುರಿ ತಲುಪುವುದಕ್ಕೆ ಸಿಬ್ಬಂದಿ ಶ್ರಮಿಸಬೇಕು ಎಂದು ಸೂಚಿಸುತ್ತವೆ. ಮಾರ್ಕೆಟಿಂಗ್ ತಂತ್ರಗಳಲ್ಲಿ ಶಿಕ್ಷಕರೂ ಸಹಭಾಗಿ ಆಗಬೇಕಾಗುತ್ತದೆ. ಇವರು ‘ನಮ್ಮ ಕಾಲೇಜಿಗೆ ಸೇರಿಕೊಂಡರೆ ವೈದ್ಯರಾಗುತ್ತೀರಿ, ಎಂಜಿನಿಯರ್ ಆಗುತ್ತೀರಿ, ಐಎಎಸ್ ಪಾಸ್ ಆಗುತ್ತೀರಿ’ ಎಂದೆಲ್ಲ ವಿದ್ಯಾರ್ಥಿಗಳನ್ನು ಪುಸಲಾಯಿಸುವುದನ್ನು ನೋಡಿದರೆ ನಗು ಬರುತ್ತದೆ. ವಿದ್ಯಾರ್ಥಿಗಳ ಒಲವು, ಪಾಲಕರ ಮಿತಿಯನ್ನು ಗಮನದಲ್ಲಿಟ್ಟು, ಮುಂದಿನ ಬದುಕಿಗೆ ಬೆಳಕಾಗುವಂತೆ ಪಠ್ಯ ವಿಷಯ, ಕೋರ್ಸ್ ಆಯ್ಕೆಗೆ ಶಿಕ್ಷಕರು ಮಾರ್ಗದರ್ಶನ ಮಾಡಬೇಕು. ವಿಶಾಲವಾದ ಅನುಗ್ರಹ ಭಾವನೆಯನ್ನು ಅವರು ಹೊಂದಿರಬೇಕು. ಗುರು ಎಂಥ ಒತ್ತಡದ ನಡುವೆಯೂ ವಿವೇಕ ಮತ್ತು ವಿವೇಚನೆ ಕಳೆದುಕೊಳ್ಳಬಾರದು. ನಿಜ ಅರ್ಥದಲ್ಲಿ ಮಾರ್ಗದರ್ಶಕನಾಗಬೇಕು.

ವಾಚಕರ ವಾಣಿ

ಶೂನ್ಯ ಬ್ಯಾಂಕ್ ಖಾತೆ: ಶುಲ್ಕ ಬೇಡ

ಸರ್ಕಾರಿ ಶಾಲೆಯ ಮಕ್ಕಳು ವಿದ್ಯಾರ್ಥಿ ವೇತನ ಪಡೆಯಲು ಶೂನ್ಯ ಬ್ಯಾಲೆನ್ಸ್ ಬ್ಯಾಂಕ್ ಖಾತೆ ಹೊಂದಿರಬೇಕೆಂಬ ನಿಯಮವಿದೆ. ಆದರೆ ಈ ಖಾತೆಗೆ ಇಂತಿಷ್ಟು ಹಣ ಜಮಾ ಮಾಡಬೇಕೆಂದು ಬ್ಯಾಂಕುಗಳು ಸೂಚಿಸುತ್ತವೆ. ಅದರಂತೆ ಗ್ರಾಮೀಣ ಭಾಗದ ಪೋಷಕರು ಹಣ ಜಮಾ ಮಾಡುತ್ತಾರೆ. ಆದರೆ ಸೇವಾ ಶುಲ್ಕವೆಂದು ಖಾತೆಯಲ್ಲಿನ ಹಣವನ್ನು ಬ್ಯಾಂಕ್ ಕಡಿತಗೊಳಿಸುತ್ತಾ ಹೋಗುತ್ತದೆ. ಇದರಿಂದ ಪೋಷಕರು ಕಂಗಾಲಾಗುತ್ತಾರೆ. ಖಾತೆಯಲ್ಲಿ ಇತರ ಯಾವ ವಹಿವಾಟೂ ನಡೆಯುವುದಿಲ್ಲವಾದ್ದರಿಂದ ಬಳಿಕ ಖಾತೆ ನಿಷ್ಕ್ರಿಯಗೊಳ್ಳುತ್ತದೆ. ಆಗ ಸರ್ಕಾರ ಹಾಕಿದ ವಿದ್ಯಾರ್ಥಿ ವೇತನ ಜಮಾ ಆಗದೆ ತೊಂದರೆಯಾಗುತ್ತದೆ. ಖಾತೆಯನ್ನು ಮತ್ತೆ ಕ್ರಿಯಾಶೀಲಗೊಳಿಸಲು ಜಿಲ್ಲಾ ಅಥವಾ ತಾಲ್ಲೂಕು ಕೇಂದ್ರದ ಬ್ಯಾಂಕುಗಳಿಗೆ ಅಡ್ಡಾಡಬೇಕಾಗುತ್ತದೆ. ಇದರಿಂದ ಕೃಷಿ ಕೆಲಸಕ್ಕೆ ಅಡಚಣೆಯಾಗಿ, ಮಕ್ಕಳ ಓದಿಗೂ ತೊಂದರೆಯಾಗುತ್ತದೆ.

ಬ್ಯಾಂಕುಗಳು ಬರೀ ಲಾಭಾಂಶವನ್ನು ನೋಡದೆ, ಮಾನವೀಯತೆಯನ್ನು ಮೈಗೂಡಿಸಿಕೊಳ್ಳಬೇಕಾದ ಅಗತ್ಯವಿದೆ. ಶೂನ್ಯ ಬ್ಯಾಂಕ್ ಖಾತೆಗೆ ಸೇವಾ ಶುಲ್ಕದಿಂದ ವಿನಾಯಿತಿ ನೀಡಬೇಕಾಗಿದೆ.

ರಾಜೇಂದ್ರ ಕುಮಾರ್ ಕೆ. ಮುದ್ನಾಳ್, ಠಾಣಗುಂದಿ, ಯಾದಗಿರಿ

ಪ್ರಚಾರದ ವೇದಿಕೆಯಾದ ಹಂಪಿ ಉತ್ಸವ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಂದ ಇತ್ತೀಚೆಗೆ ಚಾಲನೆ ಪಡೆದ ಹಂಪಿ ಉತ್ಸವದ ಉದ್ಘಾಟನಾ ಕಾರ್ಯಕ್ರಮವು ಗ್ಯಾರಂಟಿ ಯೋಜನೆಗಳ ಪ್ರಚಾರ, ಮುಖ್ಯಮಂತ್ರಿಯವರ ಗುಣಗಾನ ಮತ್ತು ಕೇಂದ್ರ ಸರ್ಕಾರದ ವಿರುದ್ಧದ ಟೀಕೆಗೆ ಸೀಮಿತವಾಗಿದ್ದು ದುರ್ದೈವದ ಸಂಗತಿ.

ರಾಜ್ಯದ ಪಂಚ ಗ್ಯಾರಂಟಿಗಳು ಪ್ರತಿ ಮನೆಗೂ ಒಂದಲ್ಲ ಒಂದು ರೀತಿಯಲ್ಲಿ ತಲುಪಿವೆ. ಯೋಜನೆಯ ಲಾಭ ಪಡೆಯುತ್ತಿರುವ ಫಲಾನುಭವಿಗಳಲ್ಲಿ ಸರ್ಕಾರದ ಬಗ್ಗೆ ಅಭಿಮಾನ ಇದೆ. ಆದರೆ ನಾಡಿನ ಸಂಸ್ಕೃತಿ ಮತ್ತು ಆ ಪ್ರದೇಶದ ಕಲೆ, ಇತಿಹಾಸದ ಕುರಿತು ಯುವಪೀಳಿಗೆಗೆ ತಿಳಿಸಬೇಕಾದ ವೇದಿಕೆಯನ್ನು ಸಂಪೂರ್ಣವಾಗಿ ಗ್ಯಾರಂಟಿ ಯೋಜನೆಗಳ ಪ್ರಚಾರಕ್ಕಾಗಿ ಬಳಸಿಕೊಂಡಿದ್ದು ಅನೇಕರಲ್ಲಿ ಬೇಸರ ಮೂಡಿಸಿತು.

2020ರಲ್ಲಿ ನಡೆದಿದ್ದ ಹಂಪಿ ಉತ್ಸವದಲ್ಲಿಯೂ ಇದೇ ರೀತಿ ಅಂದಿನ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಸರ್ಕಾರದ ಯೋಜನೆಗಳ ಕುರಿತು ಭಾಷಣ ಮಾಡಿದರೆ, ಸಚಿವರಾಗಿದ್ದ ಬಿ. ಶ್ರೀರಾಮುಲು ಅವರು ಯಡಿಯೂರಪ್ಪ ಅವರನ್ನು ಹೊಗಳಲು ವೇದಿಕೆಯನ್ನು ಬಳಸಿಕೊಂಡಿದ್ದರು. ವಿಶ್ವ ಪ್ರಸಿದ್ಧ ಹಂಪಿಯಲ್ಲಿ ಬಹಳಷ್ಟು ಸಮಸ್ಯೆಗಳಿವೆ. ಶ್ರೀಮಂತ ಪ್ರವಾಸಿಗರು ಮಾತ್ರ ಇಲ್ಲಿ ಉಳಿದುಕೊಳ್ಳಬಹುದಾದ ಸ್ಥಿತಿ ಇದೆ. ನಾನಾ ಕಡೆಗಳಿಂದ ಬರುವ ಪ್ರವಾಸಿಗರಿಗೆ ಕಡಿಮೆ ವೆಚ್ಚದಲ್ಲಿ ಉಳಿದುಕೊಳ್ಳಲು ‘ಯಾತ್ರಿ ನಿವಾಸ’ದಂತಹ ಯೋಜನೆಯನ್ನು ಘೋಷಿಸಿದ್ದರೆ ಕಾರ್ಯಕ್ರಮ ಹೆಚ್ಚು ಅರ್ಥ ಪೂರ್ಣವಾಗಿರುತ್ತಿತ್ತು. ಹಂಪಿ ಉತ್ಸವವನ್ನು ರಾಷ್ಟ್ರೀಯ ಉತ್ಸವವನ್ನಾಗಿ ಆಚರಿಸುವುದಷ್ಟೇ ಅಲ್ಲದೆ ಪ್ರತಿವರ್ಷವೂ ಅನುಕೂಲವಾಗುವಂತೆ ದಿನಾಂಕ ನಿಗದಿಪಡಿಸಲಾಗುವುದು ಎಂದು ಸಿ.ಟಿ. ರವಿ ಅವರು ತಾವು ಸಚಿವರಾಗಿದ್ದಾಗ ಹೇಳಿದ್ದರು. ಆದರೆ ಅದು ಈವರೆಗೂ ಸಾಧ್ಯವಾಗಿಲ್ಲ. ಸರ್ಕಾರ ಇನ್ನು ಮುಂದಾದರೂ ಹಂಪಿ ಉತ್ಸವಕ್ಕೆ ಕಾಯಂ ದಿನಾಂಕವನ್ನು ನಿಗದಿ ಮಾಡಲಿ.

ಮಣಿಕಂಠ ಪಾ. ಹಿರೇಮಠ, ಹಂಪಿ

ಜನಕಲ್ಯಾಣ: ರಾಜ್ಯಗಳ ಜೊತೆ ಪೈಪೋಟಿ ಸಲ್ಲ!

ಪಡಿತರ ಕಾರ್ಯಕ್ರಮವು ಸಂವಿಧಾನಾತ್ಮಕವಾಗಿ ರಾಜ್ಯಗಳ ಜವಾಬ್ದಾರಿ. ಈ ಕ್ಷೇತ್ರದಲ್ಲಿ ಒಕ್ಕೂಟ ಸರ್ಕಾರವು ನೇರವಾಗಿ ಪ್ರವೇಶಿಸುತ್ತಿದೆ. ಉದಾಹರಣೆಗೆ, ‘ಭಾರತ ಬ್ರ್ಯಾಂಡ್’ ಅಕ್ಕಿ ಯೋಜನೆಯಲ್ಲಿ ಒಕ್ಕೂಟವು ಕೆ.ಜಿ.ಗೆ ₹ 29ರಂತೆ ಅಕ್ಕಿ ಮಾರಾಟ ಮಾಡುವ ಕಾರ್ಯಕ್ಕೆ ಕೈ ಹಾಕಿದೆ. ಭಾರತೀಯ ಆಹಾರ ನಿಗಮವು ಅಕ್ಕಿಯನ್ನು ರಾಜ್ಯಗಳಿಗೆ ಮಾರಾಟ ಮಾಡುವುದನ್ನು ನಿಷೇಧಿಸಲಾಗಿದೆ. ಅದರಿಂದ ಅಕ್ಕಿಯನ್ನು ಪಡೆದುಕೊಂಡು ಭಾರತ ಬ್ರ್ಯಾಂಡ್ ಎಂಬ ಹೆಸರಿನಲ್ಲಿ ಅಕ್ಕಿಯನ್ನು ನೇರವಾಗಿ ಮಾರಾಟ ಮಾಡುವ ಒಕ್ಕೂಟ ಸರ್ಕಾರದ ಕ್ರಮವು ರಾಜ್ಯ ಸರ್ಕಾರಗಳ ಹಕ್ಕುಗಳ ಉಲ್ಲಂಘನೆಯಾಗಿದೆ.

ಒಕ್ಕೂಟ ಸರ್ಕಾರವು ಬಾಯಲ್ಲಿ ಸಹಕಾರವಾದಿ ಒಕ್ಕೂಟ ತತ್ವವನ್ನು ಹೇಳುತ್ತದೆ, ಆಚರಣೆಯಲ್ಲಿ ಸ್ಪರ್ಧಾತ್ಮಕ–ಕೇಂದ್ರೀಕೃತ ಒಕ್ಕೂಟ ತತ್ವವನ್ನು ಅನುಸರಿಸುತ್ತಿದೆ. ಇದು ಒಕ್ಕೂಟ ವ್ಯವಸ್ಥೆಯನ್ನು ದುರ್ಬಲಗೊಳಿಸುತ್ತದೆ. ಇದನ್ನು ಒಕ್ಕೂಟ ಸರ್ಕಾರ ಕೈಬಿಟ್ಟು ರಾಜ್ಯ ಸರ್ಕಾರಗಳಿಗೆ ನೆರವು ನೀಡಬೇಕು. ಈ ಮೂಲಕ ಇಂತಹ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಬೇಕು.

ಟಿ.ಆರ್.ಚಂದ್ರಶೇಖರ, ಬೆಂಗಳೂರು

ಮತಾಂತರ: ಗೊಂದಲ ಬಗೆಹರಿಯಲಿ


ಹಿಂದೂ ಸನಾತನ ಧರ್ಮದ ಬಗ್ಗೆ ಒಲವಿದ್ದು, ಹಿಂದೂ ಧರ್ಮ ಸ್ವೀಕರಿಸಲು ಬಯಸುವವರಿಗೆ ಪವಿತ್ರ ಜಲ ಸಿಂಪಡಿಸಿ ಹಿಂದೂ ಧರ್ಮ ಸೇರಲು ತಿರುಪತಿ ತಿರುಮಲ ದೇವಸ್ಥಾನಮ್ (ಟಿಟಿಡಿ) ಸಹಕರಿಸುತ್ತದೆ ಎಂದು ವರದಿಯಾಗಿದೆ (ಪ್ರ.ವಾ., ಫೆ. 6). ಮುಂದುವರಿದು, ಹಿಂದೂ ಧರ್ಮವನ್ನು ಪಾಲಿಸಲು ಇಚ್ಛಿಸುವ ಅನ್ಯಧರ್ಮೀಯರಿಗೆ ಹಿಂದೂ ಧರ್ಮದ ಪದ್ಧತಿಗಳು, ಸಂಪ್ರದಾಯ ಮತ್ತು ಆಚರಣೆಗಳ ಕುರಿತು ತರಬೇತಿ ನೀಡಲಾಗುವುದು ಎಂದು ಸಹ ತಿಳಿಸಲಾಗಿದೆ. ಸ್ವಇಚ್ಛೆಯಿಂದ ಬರುವವರಿಗೆ ಹಿಂದೂ ಧರ್ಮ ಸೇರ್ಪಡೆಗೆ ಅವಕಾಶ ಮಾಡಿಕೊಟ್ಟಿರುವುದೇನೋ ಸರಿ. ಆದರೆ ಹಿಂದೂ ಧರ್ಮದಲ್ಲಿ ಹಲವಾರು ಜಾತಿ, ಉಪ ಪಂಗಡಗಳಿದ್ದು ಯಾವ ಜಾತಿಗೆ ಸೇರ್ಪಡೆ ಮಾಡಿಕೊಳ್ಳುತ್ತಾರೆ?

ಒಂದೊಂದು ಜಾತಿ, ಪಂಗಡದಲ್ಲೂ ಒಂದೊಂದು ಬಗೆಯ ಧಾರ್ಮಿಕ ಆಚರಣೆಗಳಿವೆ. ಹೀಗಾಗಿ, ಯಾವ ಆಚರಣೆಗಳ ಕುರಿತು ತರಬೇತಿ ನೀಡಲಿದ್ದಾರೆ ಎಂಬುದನ್ನೂ ಸ್ಪಷ್ಟಪಡಿಸಬೇಕಾಗುತ್ತದೆ. ಇಲ್ಲವಾದಲ್ಲಿ ಜಾತಿ, ಉಪಜಾತಿಗಳ ನಡುವೆ ಈಗಾಗಲೇ ಇರುವ ತಾರತಮ್ಯಕ್ಕೆ ತಾರತಮ್ಯದ ಮತ್ತೊಂದು ವರ್ಗ ಸೇರ್ಪಡೆಗೊಂಡಂತೆ ಆಗುತ್ತದಷ್ಟೇ.

ಕೆ.ಎಂ.ನಾಗರಾಜು, ಮೈಸೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಬರ ಪರಿಹಾರದ ಹೊಣೆ ನಮ್ಮದಲ್ಲ, ರಾಜ್ಯಗಳದ್ದು ಎನ್ನುತ್ತಿದೆ ಕೇಂದ್ರ



ಕಲಬುರಗಿ ಜಿಲ್ಲೆಯ ಅಫಜಲಪುರ ತಾಲ್ಲೂಕಿನ ಜೋಗೂರು ಗ್ರಾಮದ ಬರಡಾದ ಹೊಲದಲ್ಲಿ ರೈತ... ಪ್ರಜಾವಾಣಿ ಚಿತ್ರ: ತಾಜುದ್ದೀನ ಆಜಾದ್

ಬರ ಪರಿಹಾರ ಯಾರ ಹೊಣೆ? 1

ಕರ್ನಾಟಕದ 223 ತಾಲ್ಲೂಕುಗಳಲ್ಲಿ ಬರದ ಸ್ಥಿತಿ ಇದೆ. ಲಕ್ಷಾಂತರ ಹೆಕ್ಟೇರ್‌ನಷ್ಟು ಬೆಳೆ ನಷ್ಟವಾಗಿದೆ. ಬರದಿಂದಾದ ನಷ್ಟದ ಸ್ವಲ್ಪ ಪ್ರಮಾಣವನ್ನು ಕೇಂದ್ರ ಸರ್ಕಾರವು ತುಂಬಿಸಿಕೊಡಬೇಕು ಎಂದು ರಾಜ್ಯ ಸರ್ಕಾರ ಈಗಾಗಲೇ ಹಲವು ಬಾರಿ ಮನವಿ ಸಲ್ಲಿಸಿದೆ. ಆದರೆ, ಬರಕ್ಕೆ ಪರಿಹಾರ ನೀಡಬೇಕಾದ ಹೊಣೆಗಾರಿಕೆಯನ್ನು ಕೇಂದ್ರ ಸರ್ಕಾರವು ತನ್ನ ಹೆಗಲಿನಿಂದ ಇಳಿಸಿಕೊಳ್ಳುವ ರೀತಿಯಲ್ಲಿ ನಿಯಮಗಳನ್ನು ಹಿಂದೆಯೇ ಬದಲಿಸಿತ್ತು. ಹೀಗಾಗಿ ರಾಜ್ಯಕ್ಕೆ ಪರಿಹಾರ ನೀಡುತ್ತಿಲ್ಲ

ಪ್ರಜಾವಾಣಿ ವಾರ್ತೆ


ಬರದ ಸ್ಥಿತಿಯನ್ನು ನಿರ್ವಹಿಸುವ ಸಲುವಾಗಿ 2010ರಲ್ಲಿ ಯುಪಿಎ ಸರ್ಕಾರವು 'ಬರ ನಿರ್ವಹಣಾ ಕೈಪಿಡಿ: ಮಾರ್ಗಸೂಚಿ'ಯನ್ನು ಜಾರಿಗೆ ತಂದಿತ್ತು. ಈ ಕೈಪಿಡಿಯ 'ಬರ ನಿರ್ವಹಣೆ' ಅಧ್ಯಾಯದಲ್ಲಿನ ವಿವರವು ಈ ಮುಂದಿನಂತಿತ್ತು: 'ಬರ ನಿರ್ವಹಣೆ ಎಂಬುದು ಅತ್ಯಂತ ಸಂಕೀರ್ಣವಾದ ಪ್ರಕ್ರಿಯೆ. ಬರ ನಿರ್ವಹಣೆಯಲ್ಲಿ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರದ ಹಲವು ಸಚಿವಾಲಯಗಳ ನಿರಂತರ ಭಾಗವಹಿಸುವಿಕೆ ಅತ್ಯಗತ್ಯ. ಕೇಂದ್ರ ಸರ್ಕಾರದ ಮಟ್ಟದಲ್ಲಿ ಕೇಂದ್ರದ ಸಂಸ್ಥೆಗಳು ಮತ್ತು ರಾಜ್ಯ ಮಟ್ಟದಲ್ಲಿ ರಾಜ್ಯದ ಸಂಸ್ಥೆಗಳು ಬರ ನಿರ್ವಹಣೆಯಲ್ಲಿ ಸಕ್ರಿಯವಾಗಿ ಭಾಗಿಯಾಗಬೇಕು'.

2010ರಲ್ಲಿ ಜಾರಿಗೆ ತಂದಿದ್ದ ಕೈಪಿಡಿಯಲ್ಲಿ, ಬರ ನಿರ್ವಹಣೆಯ ಹೊಣೆಗಾರಿಕೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳೆರಡರದ್ದೂ ಹೌದು ಎಂಬುದನ್ನು ಸ್ಪಷ್ಟವಾಗಿ ಹೇಳಲಾಗಿತ್ತು. ಆದರೆ ಕೇಂದ್ರದಲ್ಲಿನ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರವು ಈ ನಿಯಮವನ್ನು 2016ರಲ್ಲಿ ಬದಲಿಸಿತು. ಬರ ನಿರ್ವಹಣೆಯ ಸಂಪೂರ್ಣ ಜವಾಬ್ದಾರಿ ರಾಜ್ಯ ಸರ್ಕಾರಗಳದ್ದು ಎಂದು ಹೇಳಿತು.

2016ರಲ್ಲಿ ಜಾರಿಗೆ ತಂದಿದ್ದ ನಿಯಮಗಳಿಗೆ 2020ರಲ್ಲಿ ಮತ್ತೆ ತಿದ್ದುಪಡಿ ತರಲಾಗಿತ್ತು. 2023ರಲ್ಲಿ ಆ ವರ್ಷದ ಬರ ನಿರ್ವಹಣೆಗೆ ಎಂದು ಮತ್ತೆ ಪರಿಷ್ಕೃತ ಮಾರ್ಗಸೂಚಿಗಳನ್ನು ಹೊರಡಿಸಲಾಗಿತ್ತು. 'ಬರ ನಿರ್ವಹಣೆಯ (ಯಾವುದೇ ಪ್ರಾಕೃತಿಕ ವಿಕೋಪ) ಪ್ರಾಥಮಿಕ ಜವಾಬ್ದಾರಿ ರಾಜ್ಯ ಸರ್ಕಾರಗಳದ್ದು ಮಾತ್ರ. ರಾಜ್ಯ ಸರ್ಕಾರವು ಕೈಗೊಳ್ಳುವ ಪರಿಹಾರ ಕಾರ್ಯಗಳಿಗೆ ಕೇಂದ್ರವು ನೆರವಾಗಬಹುದು ಅಷ್ಟೆ. ಬರ ಪರಿಸ್ಥಿತಿಯನ್ನು ಎದುರಿಸುವಲ್ಲಿ ರಾಜ್ಯ ಸರ್ಕಾರಗಳಿಗೆ ಪಡಿತರ ಮತ್ತು ಹಣಕಾಸು ನೆರವು ಒದಗಿಸಬಹುದಷ್ಟೆ. ರಾಜ್ಯದಲ್ಲಿ ತೀವ್ರ ಬರದ ಸ್ಥಿತಿ ಇದ್ದಾಗಷ್ಟೇ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದ ನೆರವನ್ನು ಕೋರಬೇಕು' ಎಂದು ನೂತನ ಕೈಪಿಡಿಯು ಹೇಳುತ್ತದೆ.

ಬರದ ಸಂದರ್ಭದಲ್ಲಿ ಜನರಿಗೆ ಪಡಿತರ ಮತ್ತು ಔದ್ಯೋಗಿಕ ನೆರವು ಒದಗಿಸಬೇಕು. ಜಾನುವಾರುಗಳಿಗೆ ಮೇವನ್ನು ಒದಗಿಸಬೇಕು. ಕುಡಿಯುವ ನೀರಿಗೆ ತೊಂದರೆಯಾಗದಂತೆ ಹೊಸ ಕೊಳವೆ ಬಾವಿಗಳನ್ನು ಕೊರೆಸಬೇಕು. ಗ್ರಾಮಗಳಿಗೆ ಟ್ಯಾಂಕರ್ ಮೂಲಕ ನೀರು ಒದಗಿಸಲು ಕ್ರಮ ತೆಗೆದುಕೊಳ್ಳಬೇಕು. ಪೌಷ್ಟಿಕಾಂಶದ ಕೊರತೆಯಾಗದಂತೆ ಕ್ರಮ ತೆಗೆದುಕೊಳ್ಳಬೇಕು. ಜನರು ಗುಳೆ ಹೋಗುವುದನ್ನು ತಡೆಯಬೇಕು. ಬೆಳೆ ನಷ್ಟವಾಗಿದ್ದರೆ, ಬೇಸಾಯದ ವೆಚ್ಚವನ್ನು ಭರಿಸಬೇಕು... ಇವು ಬರ ನಿರ್ವಹಣೆ ಸಂದರ್ಭದಲ್ಲಿ ತೆಗೆದುಕೊಳ್ಳಲೇಬೇಕಾದ ಪರಿಹಾರ ಕ್ರಮಗಳು. 2010ರ ಕೈಪಿಡಿಯ ಪ್ರಕಾರ ಈ ಎಲ್ಲಾ ಪರಿಹಾರ ಕಾರ್ಯಗಳನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕೈಗೊಳ್ಳಬೇಕಿತ್ತು. ಆದರೆ ಈಗಿನ ಕೇಂದ್ರ ಸರ್ಕಾರವು ಪದೇ ಪದೇ ಬದಲಿಸಿದ ಬರ ನಿರ್ವಹಣೆ ಕೈಪಿಡಿಯ ಪ್ರಕಾರ ಈ ಎಲ್ಲಾ ಕಾರ್ಯಗಳನ್ನು ರಾಜ್ಯ ಸರ್ಕಾರವೇ ಕೈಗೊಳ್ಳಬೇಕು.

ಈ ಪರಿಹಾರ ಕಾರ್ಯಗಳನ್ನು ರಾಜ್ಯ ಸರ್ಕಾರವು ತನ್ನಲ್ಲಿರುವ 'ರಾಜ್ಯ ವಿಪತ್ತು ನಿರ್ವಹಣಾ ನಿಧಿ'ಯ (ಎಸ್‌ಡಿಆರ್‌ಎಫ್) ಮೂಲಕ ಕೈಗೊಳ್ಳಬೇಕು. ಆ ಹಣ ಸಾಲದೇ ಇದ್ದರೆ ಕೇಂದ್ರ ಸರ್ಕಾರದ 'ರಾಷ್ಟ್ರೀಯ ವಿಪತ್ತು ನಿರ್ವಹಣಾ ನಿಧಿ'ಯಿಂದ (ಎನ್‌ಡಿಆರ್‌ಎಫ್) ನೆರವನ್ನು ಒದಗಿಸಬೇಕು. ಈ ಎರಡೂ ನಿಧಿಗಳ ಹಣ ಸಾಲದೇ ಇದ್ದಾಗ, ಇತರ ಯೋಜನೆಗಳ ಹಣವನ್ನು ಅತ್ಯಗತ್ಯದ ಪ್ರಮಾಣದಲ್ಲಿ ಮಾತ್ರ ಬರ ಪರಿಹಾರ ಕಾರ್ಯಗಳಿಗೆ ಬಳಸಿಕೊಳ್ಳಬೇಕು ಎಂದು 2010ರ ಕೈಪಿಡಿಯಲ್ಲಿ ಸೂಚಿಸಲಾಗಿತ್ತು. ಆದರೆ ಈಗಿನ ಕೈಪಿಡಿಯಲ್ಲಿ, 'ಬರ ಪರಿಹಾರಕ್ಕೆ ಎಸ್‌ಡಿಆರ್‌ಎಫ್‌ನ ಹಣವು ಸಾಲದೇ ಇದ್ದರೆ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಬೇಕು. ಹಣಕಾಸು ನೆರವು ಒದಗಿಸುವಂತೆ ಕೋರಬೇಕು. ಆದರೆ ಪರಿಹಾರ ಒದಗಿಸುವ ಇಲ್ಲವೇ ಮನವಿಯನ್ನು ತಿರಸ್ಕರಿಸುವ ಅಧಿಕಾರ ಕೇಂದ್ರದ್ದು' ಎಂದು ವಿವರಿಸಲಾಗಿದೆ.



ಹೀಗೆ ಒಂದೆಡೆ ಎನ್‌ಡಿಆರ್‌ಎಫ್ ಮೂಲಕ ರಾಜ್ಯಗಳಿಗೆ ಬರ ಪರಿಹಾರದ ನೆರವನ್ನು ಕೇಂದ್ರವು ಒದಗಿಸಬೇಕು ಎಂದು ಹೇಳುತ್ತಲೇ, ಇನ್ನೊಂದೆಡೆ ಪರಿಹಾರವನ್ನು ನೀಡುವುದಕ್ಕೆ ತಾನು ಬದ್ಧವಾಗಿರಬೇಕಿಲ್ಲ ಎಂದು ಕೇಂದ್ರ ಸರ್ಕಾರದ ನಿಯಮಗಳು ಹೇಳುತ್ತವೆ.

2016ರಲ್ಲಿ ಈ ನಿಯಮಗಳಿಗೆ ಬದಲಾವಣೆ ತರುವಾಗ ರಾಜ್ಯದಲ್ಲಿದ್ದ ಕಾಂಗ್ರೆಸ್ ಸರ್ಕಾರವು ಅದಕ್ಕೆ ತೀವ್ರ ಆಕ್ಷೇಪ ವ್ಯಕ್ತಪಡಿಸಿತ್ತು. ಆದರೆ ಅದನ್ನು ಕಡೆಗಣಿಸಿ ನೂತನ ನಿಯಮಗಳನ್ನು ಜಾರಿಗೆ ತರಲಾಗಿತ್ತು. 2020ರಲ್ಲಿ ಮತ್ತೆ ಆ ನಿಯಮಗಳಿಗೆ ಬದಲಾವಣೆ ತರುವಾಗ ರಾಜ್ಯದಲ್ಲಿದ್ದ ಬಿಜೆಪಿ ಸರ್ಕಾರವೂ ಆಕ್ಷೇಪಗಳನ್ನು ದಾಖಲಿಸಿತ್ತು. ಆಗಲೂ ಅದನ್ನು ಕಡೆಗಣಿಸಿ, ನೂತನ ನಿಯಮಗಳನ್ನು ಜಾರಿಗೆ ತರಲಾಗಿತ್ತು. ಈ ಎಲ್ಲಾ ಬದಲಾವಣೆಗಳ ಕಾರಣದಿಂದಲೇ ಬರ ನಿರ್ವಹಣೆಯ ಸಂಪೂರ್ಣ ಹೊಣೆ ರಾಜ್ಯ ಸರ್ಕಾರಗಳ ಹೆಗಲಿಗೆ ಬಿದ್ದಿದೆ. ಕೇಂದ್ರ ಸರ್ಕಾರವು ಪರಿಹಾರವನ್ನು ಕೊಡಬೇಕೇ ಅಥವಾ ತಿರಸ್ಕರಿಸಬೇಕೇ ಎಂಬ ನಿರ್ಧಾರ ಕೈಗೊಳ್ಳುವ ಅಧಿಕಾರವನ್ನು ಚಲಾಯಿಸುತ್ತಿದೆ.

ರೈತರಿಗೆ ₹1,000 ಕೊಡಿ ಸಾಕು: ಕೇಂದ್ರ

ಕೇಂದ್ರ ಸರ್ಕಾರದ ನೂತನ 'ಬರ ನಿರ್ವಹಣಾ ಕೈಪಿಡಿ'ಯ ಪ್ರಕಾರ ರೈತರಿಗೆ ಕನಿಷ್ಠ ₹1,000 ಪರಿಹಾರ (ಬೇಸಾಯ ವೆಚ್ಚ ಸಹಾಯಧನ) ನೀಡಬೇಕು ಎಂದು ನೂತನ ಕೈಪಿಡಿ ಹೇಳುತ್ತದೆ. 2023ನೇ ಸಾಲಿನ ಬರ ನಿರ್ವಹಣೆಗೆಂದು ಸಿದ್ಧಪಡಿಸಿದ ಮಾರ್ಗಸೂಚಿಯಲ್ಲೂ ಇದನ್ನೇ ಹೇಳಲಾಗಿದೆ. 2 ಹೆಕ್ಟೇರ್‌ಗಿಂತ ಹೆಚ್ಚು ಜಮೀನು ಹೊಂದಿರುವ ರೈತರಿಗೆ ಗರಿಷ್ಠ ಮೊತ್ತದ ಪರಿಹಾರ ಒದಗಿಸಬೇಕು ಮತ್ತು ಸಣ್ಣ ಹಿಡುವಳಿದಾರರಿಗೆ ಕನಿಷ್ಠ ಪರಿಹಾರ ಒದಗಿಸಿದರೆ ಸಾಕು ಎಂದು ಮಾರ್ಗಸೂಚಿ ಹೇಳುತ್ತದೆ.

ಹೆಕ್ಟೇರ್‌ಗೆ ಕನಿಷ್ಠ ₹1,000 ಪರಿಹಾರ ಕೊಟ್ಟರೆ ಸಾಕು ಎಂದು ಕೇಂದ್ರ ಸರ್ಕಾರದ ನಿಯಮಗಳು ಹೇಳುವುದರಿಂದಲೇ, ಹೆಚ್ಚಿನ ಪರಿಹಾರ ಒದಗಿಸಲು ಅಗತ್ಯವಿರುವ ಹಣವನ್ನು ನೀಡಲು ಕೇಂದ್ರ ಸರ್ಕಾರ ಹಿಂದೇಟು ಹಾಕುತ್ತಿದೆ. ಬೇಸಾಯದ ವೆಚ್ಚದ ಒಂದು ಪಾಲನ್ನಷ್ಟೇ ರೈತರಿಗೆ ಒದಗಿಸಬೇಕು, ಬೆಳೆ ನಷ್ಟದ ಮೊತ್ತವನ್ನಲ್ಲ. ರೈತರು ಬೆಳೆ ವಿಮೆಯನ್ನು ಮಾಡಿಸಿಕೊಳ್ಳುವಂತೆ ರಾಜ್ಯ ಸರ್ಕಾರವು ಉತ್ತೇಜಿಸಬೇಕು. ಬೆಳೆ ನಷ್ಟವಾದಾಗ, ವಿಮೆಯ ಮೂಲಕ ಪರಿಹಾರ ಪಡೆದುಕೊಳ್ಳಬೇಕು ಎಂದು ನೂತನ ನಿಯಮವು ಹೇಳುತ್ತದೆ.


ಕೇಂದ್ರದ ಪ್ರಕಾರ ರೈತರಿಗೆ ನೀಡಬೇಕಾದ ಪರಿಹಾರ ಮೊತ್ತ

ಭೂ ಒಡೆತನ	ಕೃಷಿ ವಿಧಾನ	ಪರಿಹಾರ ಮೊತ್ತ (ಒಂದು ಹೆಕ್ಟೇರ್‌ಗೆ)
2 ಹೆಕ್ಟೇರ್‌ವರೆಗಿನ ರೈತರಿಗೆ	ಮಳೆಯಾಶ್ರಿತ	ಕನಿಷ್ಠ ₹1,000– ಗರಿಷ್ಠ ₹8,500
	ನೀರಾವರಿ	ಕನಿಷ್ಠ ₹2,000– ಗರಿಷ್ಠ ₹17,000
	ಬಹುವಾರ್ಷಿಕ ಬೆಳೆ	ಕನಿಷ್ಠ ₹2,500– ಗರಿಷ್ಠ ₹22,500
2 ಹೆಕ್ಟೇರ್‌ಗಿಂತ ಹೆಚ್ಚು ಜಮೀನು ಇರುವ ರೈತರಿಗೆ	ಮಳೆಯಾಶ್ರಿತ	₹8,500
	ನೀರಾವರಿ	₹17,000
	ಬಹುವಾರ್ಷಿಕ ಬೆಳೆ	₹22,500

* ಬೆಳೆ ನಷ್ಟದ ಪ್ರಮಾಣ ಶೇ 33 ಮತ್ತು ಅದಕ್ಕಿಂತಲೂ ಹೆಚ್ಚು ಇದ್ದರೆ ಮಾತ್ರ ಪರಿಹಾರಕ್ಕೆ ಅರ್ಹ

ಆಧಾರ: ಬರ ನಿರ್ವಹಣೆ ಕೈಪಿಡಿ–2010, ಬರ ನಿರ್ವಹಣೆ ಕೈಪಿಡಿ ಮಾರ್ಗಸೂಚಿಗಳು 2016 ಮತ್ತು 2020, 2023ರ ಬರ: ರಾಷ್ಟ್ರೀಯ ವಿಪತ್ತು ನಿರ್ವಹಣಾ ಕಾರ್ಯಯೋಜನೆ, ಬರ ನಿರ್ವಹಣಾ ಅಂತರ ಸಚಿವಾಲಯ ತಂಡಕ್ಕೆ ಮಾರ್ಗಸೂಚಿಗಳು–2023, ಪಿಟಿಐ

ಕರ್ನಾಟಕಕ್ಕೆ ಯಾವುದೇ ಹಣ ಕೊಡಬೇಕಿಲ್ಲ ಎನ್ನುತ್ತಿರುವುದೇಕೆ...



ನಿರ್ಮಲಾ ಸೀತಾರಾಮನ್

ಬರ ಪರಿಹಾರಕ್ಕೆ ಹಣಕಾಸು ನೆರವು ಒದಗಿಸುವಂತೆ ರಾಜ್ಯ ಸರ್ಕಾರವು ಹಲವು ಬಾರಿ ಮನವಿ ಮಾಡಿದರೂ, ಕೇಂದ್ರ ಸರ್ಕಾರ ಪರಿಹಾರ ನೀಡುತ್ತಿಲ್ಲ ಎಂದು ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪದೇ–ಪದೇ ಹೇಳುತ್ತಿದ್ದಾರೆ. ಈ ಬಗ್ಗೆ ಪ್ರತಿಕ್ರಿಯೆ ನೀಡಿದ್ದ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು, 'ಕರ್ನಾಟಕಕ್ಕೆ ನಾವು ಯಾವುದೇ ಹಣ ನೀಡಬೇಕಿಲ್ಲ' ಎಂದು ಹೇಳಿದ್ದರು. ಬರ ನಿರ್ವಹಣೆಯ ಕೈಪಿಡಿಯ ನಿಯಮಗಳ ಆಧಾರದಲ್ಲೇ ನಿರ್ಮಲಾ ಅವರು ಹಾಗೆ ಪ್ರತಿಪಾದಿಸಿದ್ದರು.

ಪ್ರಾಕೃತಿಕ ವಿಕೋಪಗಳ ನಿರ್ವಹಣೆಗೆ ಕೇಂದ್ರ ಸರ್ಕಾರವು ಎನ್‌ಡಿಆರ್‌ಎಫ್ ಅಡಿಯಲ್ಲಿ ನಿಧಿಯನ್ನು ತೆಗೆದಿರಿಸುತ್ತದೆ. ರಾಜ್ಯಗಳಿಂದ ಸಂಗ್ರಹಿಸಿದ ತೆರಿಗೆ ಹಣದಲ್ಲಿಯೇ ಒಂದು ಭಾಗವನ್ನು ಎನ್‌ಡಿಆರ್‌ಎಫ್‌ಗೆಂದು ಮೀಸಲಿರಿಸಲಾಗುತ್ತದೆ. ಹಣಕಾಸು ಆಯೋಗವು ನಿಗದಿ ಮಾಡಿದ ಪ್ರಮಾಣದಲ್ಲಿ ಎನ್‌ಡಿಆರ್‌ಎಫ್ ನಿಧಿಯ ಸ್ವಲ್ಪ ಪ್ರಮಾಣವನ್ನು ರಾಜ್ಯ ಸರ್ಕಾರಗಳಿಗೆ ಹಂಚಿಕೆ ಮಾಡುತ್ತದೆ. 14ನೇ ಹಣಕಾಸು ಆಯೋಗವು ಕರ್ನಾಟಕಕ್ಕೆ 2023–24ನೇ ಸಾಲಿನಲ್ಲಿ ₹929 ಕೋಟಿಯನ್ನು ಈ ನಿಧಿ ಅಡಿ ಒದಗಿಸಬೇಕು ಎಂದು ಹೇಳಿತ್ತು. ಅದರಲ್ಲಿ ತನ್ನ ಪಾಲಿನ ₹697.60 ಕೋಟಿಯನ್ನು ಕರ್ನಾಟಕಕ್ಕೆ ಬಿಡುಗಡೆ ಮಾಡಲಾಗಿದೆ ಎಂದು ಕೇಂದ್ರ ಸರ್ಕಾರವು ಹೇಳುತ್ತಿದೆ.

ಕೇಂದ್ರ ಸರ್ಕಾರದ್ದೇ ನಿಯಮಗಳ ಪ್ರಕಾರ ರೈತರಿಗೆ ಪರಿಹಾರ ಮತ್ತು ಇತರ ಪರಿಹಾರ ಕಾರ್ಯಗಳಿಗೆ ₹18,171 ಕೋಟಿ ನೆರವು ನೀಡಿ ಎಂದು ರಾಜ್ಯ ಸರ್ಕಾರ ಕೇಳಿದೆ. 2023–24ನೇ ಸಾಲಿನ ಎಸ್‌ಡಿಆರ್‌ಎಫ್ ನಿಧಿಯಲ್ಲಿ ₹929 ಕೋಟಿಯಷ್ಟಿದೆ. ಈ ಹಣವನ್ನು ಬೆಳೆ ಪರಿಹಾರಕ್ಕೆ ಒದಗಿಸಲೂ ಸಾಧ್ಯವಿಲ್ಲ, ಕುಡಿಯುವ ನೀರು, ಕೊಳವೆ ಬಾವಿ, ಮೇವು–ಗೋಶಾಲೆಗಳ ಸ್ಥಾಪನೆಗೆ ಒದಗಿಸಲೂ ಸಾಲುವುದಿಲ್ಲ. ಹೀಗಾಗಿಯೇ ಎನ್‌ಡಿಆರ್‌ಎಫ್ ನಿಧಿಯಿಂದ ಹೆಚ್ಚಿನ ನೆರವು ಒದಗಿಸಿ ಎಂದು ರಾಜ್ಯ ಸರ್ಕಾರವು ಕೇಳುತ್ತಿದೆ.

ಆದರೆ, 'ಕರ್ನಾಟಕಕ್ಕೆ ಎಸ್‌ಡಿಆರ್‌ಎಫ್ ಅಡಿ ನಾವು ಒದಗಿಸಬೇಕಿರುವ ₹697.60 ಕೋಟಿಯನ್ನು ಒದಗಿಸಿದ್ದೇವೆ. ನಮ್ಮಿಂದ ಯಾವುದೇ ಬಾಕಿ ಇಲ್ಲ. ಆ ಹಣದಲ್ಲೇ ಪರಿಹಾರ ಕಾರ್ಯ ನಡೆಸಿ' ಎಂದು ಕೇಂದ್ರ ಹಣಕಾಸು ಸಚಿವರು ಹೇಳಿದ್ದಾರೆ. ಬರ ನಿರ್ವಹಣೆಗೆ ಎನ್‌ಡಿಆರ್‌ಎಫ್ ನಿಧಿಯಿಂದ ಹಣ ಒದಗಿಸಬೇಕಿದ್ದರೂ, ಕರ್ನಾಟಕದಲ್ಲಿ ತೀವ್ರ ಬರ ಇದೆ ಎಂಬುದನ್ನು ಕೇಂದ್ರವು ಪರಿಗಣಿಸದೇ ಇರುವ ಕಾರಣಕ್ಕೆ ಪರಿಹಾರದ ಹಣವನ್ನು ನೀಡುತ್ತಿಲ್ಲ. ಕರ್ನಾಟಕದಲ್ಲಿ ತೀವ್ರ ಬರದ ಸ್ಥಿತಿ ಇದೆ ಎಂಬುದನ್ನು ಒಪ್ಪಿಕೊಳ್ಳುತ್ತದೆಯೇ ಅಥವಾ ಇಲ್ಲವೇ ಎಂಬುದನ್ನೂ ಸ್ಪಷ್ಟಪಡಿಸಿಲ್ಲ.

ಸಿನಿ ಬಿಟ್ಸ್

'ಧೀರ ಸಾಮ್ರಾಟ'ನಿಗೆ ಜೋಡಿಯಾದ ಅದ್ವಿತಿ



ಅದ್ವಿತಿ ಶೆಟ್ಟಿ

ರಾಕೇಶ್ ಹಾಗೂ ಅದ್ವಿತಿ ಶೆಟ್ಟಿ ನಟಿಸಿರುವ 'ಧೀರ ಸಾಮ್ರಾಟ್' ಸಿನಿಮಾ ಫೆಬ್ರುವರಿ 16ರಂದು ಬಿಡುಗಡೆಯಾಗುತ್ತಿದೆ. ಚಂದನವನದ ಡೈನಾಮಿಕ್ ಪ್ರಿನ್ಸ್ ಪ್ರಜ್ವಲ್ ದೇವರಾಜ್ ಸಿನಿಮಾದ ಟ್ರೈಲರ್ ಬಿಡುಗಡೆಗೊಳಿಸಿ ಚಿತ್ರತಂಡಕ್ಕೆ ಶುಭಕೋರಿದರು. ಹೊಸಬರೇ ಸೇರಿಕೊಂಡು ಸಿದ್ಧಪಡಿಸಿರುವ ಈ ಚಿತ್ರವನ್ನು ತನ್ವಿ ಪ್ರೊಡಕ್ಷನ್ ಹೌಸ್ ಮೂಲಕ ಗುರುಬಂಡಿ ಅವರು ನಿರ್ಮಾಣ ಮಾಡಿದ್ದಾರೆ. ಈಗಾಗಲೇ ಚಿತ್ರದ ಎರಡು ಹಾಡುಗಳು ಬಿಡುಗಡೆಗೊಂಡಿವೆ. ಕಿರುತೆರೆಯ ಹಲವು ವಿಭಾಗಗಳಲ್ಲಿ ಕೆಲಸ ಮಾಡಿ ಅನುಭವವಿರುವ ಪವನ್ ಕುಮಾರ್ ಕಥೆ ಬರೆದು ನಿರ್ದೇಶನ ಮಾಡುವುದರ ಜೊತೆಗೆ ಪಾತ್ರವೊಂದಕ್ಕೂ ಬಣ್ಣಹಚ್ಚಿದ್ದಾರೆ. ಸಸ್ಪೆನ್ಸ್ ಥ್ರಿಲ್ಲರ್ ಕಥಾಹಂದರದ ಈ ಸಿನಿಮಾದಲ್ಲಿ ಐದು ಧೀರ ಹುಡುಗರ ಗೆಳತನ ಹೇಗಿರುತ್ತದೆ ಎಂಬುದನ್ನು ಹೇಳಲಾಗಿದೆ ಎಂದಿದೆ ಚಿತ್ರತಂಡ. ತಾರಾಗಣದಲ್ಲಿ ಶಂಕರಭಟ್, ಶೋಭರಾಜ್, ಬಲ ರಾಜವಾಡಿ, ರಮೇಶ್ ಭಟ್, ಮನ್‌ಮೋಹನ್ ರೈ, ರವಿರಾಜ್, ಜ್ಯೋತಿ ಮರೂರು, ಮಂಡ್ಯ ಚಂದ್ರು ಮುಂತಾದವರು ನಟಿಸಿದ್ದಾರೆ. ರಾಘವ್ ಶುಭಾಷ್ ಸಂಗೀತ, ವೀರೇಶ್ ಎನ್‌.ಟಿ.ಎ. ಹಾಗೂ ಅರುಣ್ ರಮೇಶ್ ಛಾಯಾಚಿತ್ರಗ್ರಹಣ ಚಿತ್ರಕ್ಕಿದೆ. ❖

'ಅಗ್ನಿಲೋಕ'ಕ್ಕೆ ಕಾಲಿಟ್ಟ ಯಶಸ್ವ



ಮಂಜುಶ್ರೀ, ಯಶಸ್ವ

ಕನ್ನಡ ಚಿತ್ರರಂಗದ ಹಿರಿಯ ಛಾಯಾಚಿತ್ರಗ್ರಾಹಕ, ನಿರ್ಮಾಪಕ, ನಿರ್ದೇಶಕ ಎಚ್‌.ಎಂ.ಕೆ. ಮೂರ್ತಿ ಅವರ ಮೊಮ್ಮಗ ಯಶಸ್ವ 'ಅಗ್ನಿಲೋಕ' ಚಿತ್ರದ ಮೂಲಕ ಸ್ಯಾಂಡಲ್‌ವುಡ್ ಪ್ರವೇಶಿಸಲು ಅಣಿಯಾಗಿದ್ದಾರೆ. ಮಗನ ಚಿತ್ರಕ್ಕೆ ರಾಜೇಶ್ ಮೂರ್ತಿ ಅವರೇ ಕಥೆ–ಚಿತ್ರಕಥೆ ಬರೆದು ಆ್ಯಕ್ಷನ್, ಕಟ್ ಹೇಳಿದ್ದಾರೆ. 'ಬೆಂಗಳೂರು, ಕೆಜಿಎಫ್, ಮಂಡ್ಯ, ಚಿಕ್ಕಮಗಳೂರು ಸುತ್ತಮುತ್ತ ಸುಮಾರು 30 ದಿನಗಳ ಕಾಲ ಚಿತ್ರೀಕರಣ ನಡೆಸಲಾಗಿದೆ. ಎಲ್ಲ ಕೆಲಸಗಳು ಮುಗಿದಿದ್ದು ಚಿತ್ರವೀಗ ಸೆನ್ಸಾರ್ ಹಂತದಲ್ಲಿದೆ. ಮಾರ್ಚ್ ಮೊದಲ ವಾರ ಚಿತ್ರ ತೆರೆಗೆ ತರುವ ಆಲೋಚನೆಯಿದೆ' ಎಂದು ರಾಜೇಶ್ ಮೂರ್ತಿ ತಿಳಿಸಿದ್ದಾರೆ. ವಿಷ್ಣು ಪುಷ್ಪ ಫಿಲಂಸ್ ಮೂಲಕ ಶ್ರೀಮತಿ ಪುಷ್ಪ ಮಂಜುನಾಥ್ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ. ಮಂಜುಶ್ರೀ ಚಿತ್ರದ ನಾಯಕಿ. ನೆಲ ಮಹೇಶ್ ಅವರು ನಾಯಕನ ತಂದೆಯ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ವಿನೋದ್ ಛಾಯಾಚಿತ್ರಗ್ರಹಣ, ನಿತೀಶ್ ಕುಮಾರ್ ಅವರ ಸಂಗೀತ ಸಂಯೋಜನೆ ಈ ಚಿತ್ರಕ್ಕಿದೆ. ❖

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

ಬುಧವಾರ ಫೆಬ್ರುವರಿ 7, 2024

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯಣ ಹೇಮಂತ ಋತು ತಿಥಿ: ಪುಷ್ಯ ಕೃಷ್ಣ ದ್ವಾದಶಿ ಗಂ. 14-02 **ನಕ್ಷತ್ರ:** ಪೂರ್ವಾಷಾಢ ಗಂ. 28-37 **ಯೋಗ:** ವಜ್ರ ಗಂ. 26-53
ಕರಣ: ತೈತಿಲ ಗಂ. 14-02, ಮಕರ ಮಾಸದ 24 ನೇ ದಿನ, **ಮಳೆನಕ್ಷತ್ರ:** ಧನಿಷ್ಠಾ 1
ರಾಹುಕಾಲ: ಮಧ್ಯಾಹ್ನ 12-00 – 01-30
ಸೂರ್ಯೋದಯ: 07-00 **ಸೂರ್ಯಾಸ್ತ :** 06-30
ಮುಸ್ಲಿಂ ದಿನಾಂಕ: 26 ರಜಬ್
ಅದೃಷ್ಟ ಸಂಖ್ಯೆ: 7, 6

ಮೇಷ: ಸಂಸಾರದಲ್ಲಿ ಅಂತಃಕಲಹಗಳು ನಡೆದು, ಅಸಮಾಧಾನಕ್ಕೆ ಕಾರಣವಾಗುವುದು. ಸಹೋದ್ಯೋಗಿಗಳ ನಡವಳಿಕೆಯು ನಿಮಗೆ ಕೆಲಸದಲ್ಲಿ ಹೆಚ್ಚಿನ ಸ್ಫೂರ್ತಿಯನ್ನು ನೀಡುವುದು. ಲೇವಾದೇವಿ ವ್ಯವಹಾರ ಲಾಭ ತರಲಿದೆ.

ವೃಷಭ: ನಿಮ್ಮ ಉತ್ಪಾದಿತ ವಸ್ತುಗಳಿಗೆ ಹೆಚ್ಚಿನ ಬೇಡಿಕೆ ದೊರೆತು ಸಂತೋಷಕರ ವಾತಾವರಣ ಉಂಟಾಗಲಿದೆ. ಉದ್ಯೋಗ ನಿಮಿತ್ತ ಕಚೇರಿಯ ಸಮಸ್ಯೆ ತನ್ನಂತಾನೆ ಬಗೆಹರಿಯುವುದು. ಮನೆಯಲ್ಲಿ ಸಂತಾನದ ಶುಭ ಸುದ್ದಿ ಕೇಳುವಿರಿ.

ಮಿಥುನ: ನಿಮ್ಮಲ್ಲಿರುವ ಮಾತಿನ ಚಾತುರ್ಯದಿಂದ ಇಂದು ಎಲ್ಲಾ ಕೆಲಸಗಳು ಸರಾಗವಾಗಿ ನೆರವೇರಲಿವೆ. ವ್ಯಾಪಾರದಲ್ಲಿ ಸಾಲ ಪಾವತಿಯಿಂದ ಸಮಾಧಾನ ಲಭಿಸಲಿದೆ. ವಸ್ತುವಿನ ಆಯ್ಕೆಯಲ್ಲಿ ಗೊಂದಲ ಎದುರಾಗಬಹುದು.

ಕರ್ಕಾಟಕ: ವೈದ್ಯರು ಅದರಲ್ಲೂ ನರ ರೋಗ ತಜ್ಞರು ತೋರಿದ ಬೇಜವಾಬ್ದಾರಿತನದಿಂದ ಪಾಪ ಸಂಗ್ರಹಣೆಯಾಗುವುದು. ಸಂಸಾರದಲ್ಲಿ ಯಾವುದೇ ಕಾರಣಕ್ಕೂ ಅನುಮಾನಗಳಿಗೆ ಜಾಗ ನೀಡಬೇಡಿ, ನಂಬಿಕೆ ವಿಶ್ವಾಸವಿರಲಿ.

ಸಿಂಹ: ವೃತ್ತಿರಂಗದಲ್ಲಿ ಅನವಶ್ಯಕವಾಗಿ ಇತರರ ಕೋಪಕ್ಕೆ ಗುರಿಯಾಗುವುದನ್ನು ನಿಮ್ಮ ಸ್ನೇಹಿತರು ತಪ್ಪಿಸುವರು. ರಾಜಕೀಯ ರಂಗದಲ್ಲಿ ಬಹಳ ದಿನಗಳ ನಂತರ ಯಶಸ್ಸು ದೊರೆಯಲಿದೆ. ಆರೋಗ್ಯ ವೃದ್ಧಿಯಾಗುವುದು.

ಕನ್ಯಾ: ಖರ್ಚಿನ ವಿಚಾರದಲ್ಲಿ ಮಿತವ್ಯಯಿಗಳಾಗುವ ಯತ್ನದಿಂದಾಗಿ ಶ್ರೀಮಂತಿಕೆ ಗಳಿಸಬಹುದು. ಕೋರ್ಟುಕಚೇರಿ ವ್ಯವಹಾರದಲ್ಲಿ ಜಯ ಪಡೆಯುವ ಬಗ್ಗೆ ಅಧಿಕವಾದ ಪ್ರಯತ್ನವಿರಲಿ. ಸ್ನೇಹಿತರೊಂದಿಗೆ ಪ್ರಯಾಣ ಬೆಳಸುವಿರಿ.

ತುಲಾ: ನಿಮ್ಮ ಪ್ರಿಯಕರನಲ್ಲಿ ಭಾವನೆಗಳನ್ನು ಹಂಚಿಕೊಳ್ಳಲು ಸೂಕ್ತ ಸಮಯ. ಕಾರ್ಖಾನೆ ಕೆಲಸಗಾರರ ಬೇಡಿಕೆಗಳು ಇತ್ಯರ್ಥವಾಗಲಿವೆ. ಅರಸಿ ಬಂದ ಉದ್ಯೋಗದ ನಿರಾಕರಣೆ ನಿಮ್ಮ ಮೂರ್ಖತನಕ್ಕೆ ಉದಾಹರಣೆಯಾಗುವುದು.

ವೃಶ್ಚಿಕ: ಸರ್ಕಾರಿ ಕಚೇರಿಗಳಲ್ಲಿನ ಕೆಲಸಕ್ಕೆ ಹೆಚ್ಚು ಓಡಾಡುವ ಸಂದರ್ಭ ಇರಲಿದೆ. ಸ್ನೇಹಿತರು ನಿಮ್ಮ ವಿಶ್ವಾಸವನ್ನು ದುರುಪಯೋಗ ಪಡಿಸಿಕೊಳ್ಳುವ ಸಾಧ್ಯತೆ ಇದೆ. ಅಕ್ಕ ಪಕ್ಕದ ವ್ಯಕ್ತಿಗಳ ಬಗ್ಗೆ ಎಚ್ಚರವಹಿಸಿ.

ಧನು: ಗಿಡ ಮೂಲಿಕೆಯ ಔಷಧಿಯನ್ನು ನೀಡುವವರಿಗೆ ವೈದ್ಯಕೀಯ ಲೋಕದಲ್ಲಿ ಒಂದು ಸಾಧನೆ ಮಾಡಿದ ಸಂತೋಷ ಸಿಗಲಿದೆ. ಕೆಲಸದಲ್ಲಿ ಒತ್ತಡ ಹೆಚ್ಚಿರುವುದರಿಂದ ಅತಿಜವಾಬ್ದಾರಿಯುತವಾಗಿ ಕಾರ್ಯ ನಿರ್ವಹಿಸಿ.

ಮಕರ: ಸಂದರ್ಭಕ್ಕನುಗುಣವಾಗಿ ವರ್ತಿಸುವ ಪಾಠವನ್ನು ಇಂದಿನ ದಿನವೇ ನಿಮಗೆ ಬೋಧಿಸುವುದು. ವಿದ್ಯಾರ್ಥಿಗಳಿಗೆ ಗಣಿತದಲ್ಲಿ ಕಠಿಣ ಸಾಧನೆ ಅಗತ್ಯವೆನಿಸುವುದು. ಮದುವೆಯ ಬಗ್ಗೆ ಮನೆಯಲ್ಲಿ ನಿರ್ಧಾರ ತಿಳಿಸುವಿರಿ.

ಕುಂಭ: ಹಿಂದೆಯೇ ಬರಬೇಕಾಗಿದ್ದ ಸಾಲದ ಹಣ ಬಂಧುವೊಬ್ಬರ ನೆರವಿನಿಂದ ನಿಮ್ಮ ಕೈಸೇರಲಿದೆ. ಕೃಷಿ ಸಂಬಂಧಿತ ಯೋಜನೆಗಳ ಬಗ್ಗೆ ಚಿಂತಿಸುವ ಅಗತ್ಯವಿಲ್ಲ. ಅರಣ್ಯ ಅಧಿಕಾರಿಗಳಿಗೆ ಹೆಚ್ಚಿನ ಕೆಲಸವಿರುವುದು.

ಮೀನ: ಮಕ್ಕಳ ಮನಸ್ಸಿಗೆ ನೋವಾಗದಂತೆ ನಡೆದುಕೊಳ್ಳುವುದು ನಿಮಗೆ ಕಷ್ಟವಾದರೂ ಅನಿವಾರ್ಯವಾಗಿ ನಡೆದುಕೊಳ್ಳಿರಿ. ಹಲವು ದಿನಗಳಿಂದ ಮನೆಯವರಲ್ಲಿ ಕಾಣಿಸಿಕೊಂಡಿದ್ದ ಇರಿಸು ಮುರಿಸು ಕ್ರಮೇಣ ಸರಿಹೋಗಲಿದೆ.

ಇರುವುದೆಲ್ಲವ ಬಿಟ್ಟು

ನುಡಿ ಬೆಳಗು



ಕಲೀಮ್ ಉಲ್ಲಾ, ಕನ್ನಡ ಉಪನ್ಯಾಸಕ

ಸಿದ್ಧಾರ್ಥ ಅರಮನೆ ಬಿಟ್ಟು ಹೊರಡುವ ದಿನವೇ ಪತ್ನಿ ಯಶೋಧರೆ ಗಂಡು ಮಗುವಿಗೆ ಜನ್ಮ ನೀಡಿದ್ದಳು. ನಡುರಾತ್ರಿ ಚೆನ್ನನ ಜೊತೆ ಹೊರಡುವ ಮನ್ನ ಮಗುವನ್ನೊಮ್ಮೆ ಎತ್ತಿ ಮುದ್ದಾಡುವ ಆಸೆ ಹುಟ್ಟಿತು. ಕೊಠಡಿಗೆ ಹೋಗಿ ಮಂಚದ ಬಳಿ ನಿಂತನು. ಹೂಹಾಸಿಗೆಯಲ್ಲಿ ತಾಯಿ– ಮಗು ಮಲಗಿದ್ದರು. ಎಚ್ಚರಗೊಳಿಸಿದರೆ ಹೋಗುವುದನ್ನು ತಡೆದಾರು. ಸನ್ಯಾಸಿಯಾಗುವ ನನ್ನ ದೃಢಮನಸ್ಸು ಸಡಿಲವಾದೀತೆಂದು ಎಣಿಸಿ ಮುಗುವಿಗೂ ಮುತ್ತಿಡದೆ, ಪತ್ನಿಗೂ ತಿಳಿಸದೆ ಸಿದ್ಧಾರ್ಥ ಆಚೆ ಬಂದು ನಿಂತನು. ಅವನ ಮನಸ್ಸು ಹೊಯ್ದಾಡುತ್ತಿತ್ತು.

ಹೊರಗೆ ಚೆನ್ನ ಸಿದ್ಧಾರ್ಥನ ಪ್ರೀತಿಯ ಕುದುರೆ ಕಂಥಕನ ಹಿಡಿದು ನಿಂತಿದ್ದ. ಅದನ್ನೇರಿ ಪಟ್ಟಣದಿಂದ ಹೊರ ಹೊರಟಾಗ ಆಸೆ, ದ್ವೇಷ, ಅಸೂಯೆ ಮುಂತಾದ ಕೆಡುಕುಗಳಿಗೆ ಪ್ರೋತ್ಸಾಹ ಕೊಡುವ ಮಾರನೆಂಬ ದೇವತೆ ಅಡ್ಡಬಂದು ನಿಂತನು. ಸಿದ್ಧಾರ್ಥನಲ್ಲಿ ಆಸೆ ಹುಟ್ಟಿಸಿ, ರಾಜ್ಯ ತೊರೆಯುವ ನಿರ್ಧಾರವನ್ನು ಏನಾದರೂ ಮಾಡಿ ಬದಲಿಸುವ ಸಂಕಲ್ಪ ಅವನದಾಗಿತ್ತು. ಏಳು ದಿನದಲ್ಲಿ ನಿನಗೆ ಬೇಕಾದಷ್ಟು ರಾಜ್ಯಗಳು ಕೈವಶವಾಗುತ್ತವೆ. ನೀನು ದೊಡ್ಡ ಚಕ್ರಾಧಿಪತಿಯಾಗುವ ಅವಕಾಶವಿದೆ. ಇದನ್ನು ಹಾಳು ಮಾಡಿಕೊಳ್ಳಬೇಡ. ಅರಮನೆಗೆ ಹಿಂತಿರುಗು ಎಂದು ಅವನು ಪ್ರಲೋಭಿಸಿದನು.

ಆಗ ಸಿದ್ಧಾರ್ಥ ನಕ್ಕು ಇರುವ ರಾಜ್ಯವನ್ನೇ ಬಿಟ್ಟು ಹೊರಟಿರುವೆ. ನನಗೆ ಪ್ರಭುತ್ವದ ಆಸೆಯಿಲ್ಲ. ಸನ್ಯಾಸಿಯಾಗಿ ಜನರಿಗೆಲ್ಲಾ ಸುಖದ ದಾರಿ ತೋರಿಸಬೇಕಾಗಿದೆ. ಬುದ್ಧನಾಗಿ ಜಗಕೆ ಶಾಂತಿ ತೋರಬೇಕಾಗಿದೆ ದಾರಿ ಬಿಡು ಎಂದು ಮುಂದೆ ಹೊರಟನು.

ರಾತ್ರಿಯೆಲ್ಲಾ ಸಾಗಿ ಬೆಳಗಿನ ಹೊತ್ತಿಗೆ ಅನುಮಾ ನದಿಯ ದಡ ತಲುಪಿದ ಸಿದ್ಧಾರ್ಥ ತನ್ನ ಪಯಣ ನಿಲ್ಲಿಸಿದನು. ಸನ್ಯಾಸಿಯಾಗುವವನಿಗೆ ರಾಜ ಪೋಷಾಕುಗಳು, ಆಭರಣಗಳು ಇರಬಾರದೆಂದು ನಿಶ್ಚಯಿಸಿ ಆಭರಣಗಳನ್ನು ಚೆನ್ನನಿಗೆ ಕೊಟ್ಟನು. ತೊಟ್ಟ ಬಟ್ಟೆ ಬರೆಗಳನ್ನು ಓರ್ವ ಭಿಕ್ಷುಕನಿಗೆ ಅರ್ಪಿಸಿದನು. ಭಿಕ್ಷುಕನಿಂದ ಹರಕು ಬಟ್ಟೆಗಳನ್ನು ಸ್ವೀಕರಿಸಿ ಹಾಕಿಕೊಂಡನು. ತನ್ನ ಸೊಗಸಾದ ತಲೆಗೂದಲನ್ನು, ಮೃದುವಾಗಿ ಬೆಳೆದ ಗಡ್ಡವನ್ನು ಕತ್ತಿಯಿಂದ ಸವರಿದನು.

'ಚೆನ್ನ ನೀನಿನ್ನು ಹೊರಡು. ನನ್ನ ಈ ಸನ್ಯಾಸದ ಸುದ್ದಿಯನ್ನು ಅರಮನೆಗೆ ತಿಳಿಸಿ ಎಲ್ಲರನ್ನು ಸಮಾಧಾನ ಪಡಿಸು' ಎಂದಾಗ ಸಿದ್ಧಾರ್ಥನ ತೊರೆದು ಹೋಗಲು ಮನಸ್ಸಿಲ್ಲದ ಚೆನ್ನ ಖಿನ್ನನಾಗುತ್ತಾನೆ. 'ನಿಮ್ಮ ಜೊತೆಗೇ ನಾನೂ ಬರುತ್ತೇನೆ ಒಪ್ಪಿಕೊಳ್ಳಿ' ಎಂದಾಗ ಸಿದ್ಧಾರ್ಥ ನಯವಾಗಿ ತಿರಸ್ಕರಿಸುತ್ತಾನೆ. ಒಲ್ಲದ ಮನಸ್ಸಿನಿಂದ ಚೆನ್ನ ಮತ್ತು ಕುದುರೆ ಕಪಿಲವಸ್ತುವಿಗೆ ಹೊರಡುತ್ತಾರೆ. ತನ್ನ ಪ್ರೀತಿಯ ಒಡೆಯನ ಅಗಲಿಕೆ ತಾಳಲಾರದ ಕುದುರೆ ಕಂಥಕ ಮಾರ್ಗದಲ್ಲೇ ಸಾಯುತ್ತದೆ.


ಇರುವ ಸುಖಗಳ ಬಿಟ್ಟು, ಅಧಿಕಾರ ಧಿಕ್ಕರಿಸಿ, ರಕ್ತ ಸಂಬಂಧಗಳ ತೊರೆದು ಹೀಗೆ ಹೊರಡುವುದು ಸಾಮಾನ್ಯ ಮನುಷ್ಯರಿಗೆ ಸಾಧ್ಯವಿಲ್ಲದ ಕೆಲಸ. ಮನುಷ್ಯನ ದುಃಖಗಳಿಗೆ ಉತ್ತರ ಹುಡುಕಲು ಹೊರಟ ಸಿದ್ಧಾರ್ಥ ತಾನೂ ದುಃಖಗಳ ನುಂಗಿಕೊಂಡೇ ನಡೆದವನು. ತುಂಬು ಸಂಸಾರವನ್ನು, ಎಳೆ ಮಗುವಿನ ಪ್ರೀತಿಯನ್ನು ನಿರಾಕರಿಸುವುದು ಸಲೀಸಾದ ಮಾತಲ್ಲ. ಆತ ತುಂಬು ಯೌವ್ವನದ ದಿನದಲ್ಲೇ ಮಾಡಿದ ವೈರಾಗ್ಯದ ಸಂಕಲ್ಪ; ಸಾವಿಗೆ ಒಂದು ಕ್ಷಣ ಬಾಕಿ ಉಳಿದಾಗಲೂ ನಮ್ಮಲ್ಲಿ ಮೂಡುವುದು ಕಷ್ಟವಿದೆ. ❖

ಪದಬಂಧ 5584

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಏನೇನೂ ಸಂಸ್ಕಾರವಿರದ ಗಾಂಪ (4)
3.ಋತುಗಳ ರಾಜನ ತಿಂಗಳು (3)
5.ಅದೇ ತಾನೆ ಮದುವೆಯಾದ ಗಂಡ ಹೆಂಡಿರು (5)
7.ಮಗ ಇಲ್ಲಿದ್ದಾನೆ (3)
9.ಕತ್ತು ಕೊನೆಗಿಟ್ಟು ತೋರಿದ ಬಲ! (3)
11.ಗುರುವಿನ ನಖ (3)
13.ಕಳೆಯುವ ಲೆಕ್ಕವಿದು (5)
15.ಈಕೆ ಹೆಂಗಸು (2)
16.ಮಧ್ಯ ವಯಸ್ಸಿದು (4)

ಮೇಲಿಂದ ಕೆಳಕ್ಕೆ
1.ಉತ್ತಮ ಕುಲದಲ್ಲಿ ಹುಟ್ಟಿದವನು (4)
2.ಒಂದೇ ವಿಷಯದಲಿ ಮಗ್ನನಾಗಿರುವವನು (3)
4.ಸದ್ಯದ ಪರಿಸ್ಥಿತಿಯಿದು (3)
6.ಹೀಗೆ ಸೈನ್ಯ ಸಮೇತ ಯುದ್ಧಕ್ಕೆ ಹೋಗು (3)
8.ಹಾಡಿನ ಒಂದು ಭಾಗ (2)
9.ಉಚ್ಚ ದನಿಯನ್ನು ಹೀಗೂ ಹೇಳುವರು (3)
10.ದಾಕ್ಷಿಣ್ಯ ಅಥವಾ ಋಣ (2)
12.ಅಸ್ವಸ್ಥ ಎನಿಸಿಕೊಂಡಿರುವ ಅಲಯ (4)
13.ಈತ ಕೆಟ್ಟಚಟವುಳ್ಳವನು (3)
14.ಇದು ತುಂಬಾ ಹೊಸದು (3)



5583ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಮಹಾಪೂರ 3.ಕರತವಿ
5.ಸದರ 6.ಜರಾಯು
8.ಪ್ರಸಂಗ 10.ಆಸರೆ
11.ವಾಯಸ 13.ಅಳುಕು
15.ಯಥಾಸ್ಥಿತಿ 16.ರಣಭೇರಿ

ಮೇಲಿಂದ ಕೆಳಕ್ಕೆ:
1.ಮಹಾರಾಜ 2.ರಭಸ
3.ಕಮ್ಮಾರ 4.ವಿನಿಯೋಗ
7.ರಾಜಸ 9.ಸಂದಾಯ
10.ಆಯುವ್ಯಯ 12.ಸದಾಚಾರಿ
13.ಅದಿತಿ 14.ಕುಬೇರ

ಸುಡೊಕು 5969

	2			5		8		
8			3		9		2	1
	4			1				7
	3	2				7		6
				7	2		9	
7	9		8		6			5
3	1		9		5		7	
	7			8		1	6	9
	6	9			1		3	


ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5968 ಸುಡೊಕು

4	2	1	3	8	9	5	6	7
8	7	9	1	5	6	4	2	3
3	6	5	4	2	7	9	8	1
6	8	7	5	9	4	3	1	2
2	1	4	7	6	3	8	5	9
5	9	3	8	1	2	6	7	4
9	3	2	6	7	8	1	4	5
1	4	8	2	3	5	7	9	6
7	5	6	9	4	1	2	3	8

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	21,771
ಇಂದಿನ ಅಂತ್ಯ	21,929
▲	157
ದಿನದ ಗರಿಷ್ಠ	21,951

ವಿನಿಮಯ ದರ

$ ಡಾಲರ್	83.05
£ ಪೌಂಡ್	104.27
€ ಯುರೊ	89.35
¥ ಯೆನ್ (100ಕ್ಕೆ)	56

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹585
12 ಕ್ಕೆ	₹78
ಮೈಸೂರು	
100ಕ್ಕೆ	₹587

ಖಾದ್ಯ ತೈಲ ಮುಂಬೈ (10 ಕೆಜಿಗೆ) (ಆವರಣದಲ್ಲಿ ಹಿಂದಿನ ದಿನದ ದರ)

ಶೇಂಗಾ (ರಿಫೈನ್ಡ್)	₹1515 (1520)
ಸೋಯಾ (ರಿಫೈನ್ಡ್)	₹885 (870)
ಸೂರ್ಯಕಾಂತಿ (ರಿಫೈನ್ಡ್)	₹900 (895)
ಪಾಮೋಲಿನ್	₹850 (840)

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹10000-10208
ಮಂಗಳೂರು	₹7228-7787
ತಿಪಟೂರು	₹8500-9520

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹162
ಆರ್‌ಎಸ್‌ಎಸ್-5	₹157
ಗುಡ್ ಲಾಟ್	₹140

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹258-455
ದ್ವಿತಳಿ (ಬಿ.ವಿ)	₹322-583


ಈರುಳ್ಳಿ (ಕ್ವಿಂಟಲ್‌ಗೆ)

ದಪ್ಪ	₹1500-2000
ಮಧ್ಯಮ	₹1000-1500
ಸಣ್ಣ	₹500-1000

ಪೇಟಿಎಂ ಷೇರು ಚೇತರಿಕೆ

ನವದೆಹಲಿ (ಪಿಟಿಐ): ಸತತ ಮೂರು ದಿನಗಳಿಂದ ಕುಸಿತದ ಹಾದಿ ಹಿಡಿದಿದ್ದ ಪೇಟಿಎಂನ ಮಾತೃಸಂಸ್ಥೆಯಾದ ಒನ್‌97 ಕಮ್ಯುನಿಕೇಷನ್ ಲಿಮಿಟೆಡ್‌ನ ಷೇರುಗಳು ಮಂಗಳವಾರ ಚೇತರಿಕೆಯ ಹಳಿಗೆ ಮರಳಿವೆ.

ಪೇಟಿಎಂ ಪೇಮೆಂಟ್ ಬ್ಯಾಂಕ್ ಲಿಮಿಟೆಡ್‌ಗೆ (ಪಿಪಿಬಿಎಲ್) ಭಾರತೀಯ ರಿಸರ್ವ್ ಬ್ಯಾಂಕ್ ವಿಧಿಸಿರುವ ನಿರ್ಬಂಧದಿಂದಾಗಿ ಷೇರುಗಳ ಮೌಲ್ಯ ಶೇ 42ರಷ್ಟು ಕುಸಿದಿತ್ತು. ಮುಂಬೈ ಷೇರುಪೇಟೆ ಸೂಚ್ಯಂಕ (ಬಿಎಸ್‌ಇ) ಸೆನ್ಸೆಕ್ಸ್‌ನಲ್ಲಿ ಷೇರಿನ ಮೌಲ್ಯ ಶೇ 7.79ರಷ್ಟು ಹೆಚ್ಚಳವಾಗಿದ್ದು, ಪ್ರತಿ ಷೇರಿನ ಬೆಲೆ ₹472.50ಕ್ಕೆ ಏರಿಕೆಯಾಗಿದೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿಯಲ್ಲಿ ಷೇರಿನ ಮೌಲ್ಯ ಶೇ 7.99ರಷ್ಟು ಹೆಚ್ಚಳವಾಗಿದೆ. ಪ್ರತಿ ಷೇರಿನ ಬೆಲೆ ₹473.55ಕ್ಕೆ ತಲುಪಿದೆ.



ವಾಹನ ನಿಯೋಜನೆ: ವಾರದೊಳಗೆ ಜಿಲ್ಲೆಗಳಿಗೆ ಸೇವೆ ವಿಸ್ತರಣೆ

ಭಾರತ್ ಅಕ್ಕಿ ಮಾರಾಟ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರೀಯ ಕೃಷಿ ಸಹಕಾರ ಮಾರುಕಟ್ಟೆ ಮಹಾಮಂಡಳದಿಂದ (ನಾಫೆಡ್) ವಾಹನಗಳ ಮೂಲಕ 'ಭಾರತ್ ಬ್ರ್ಯಾಂಡ್' ಅಕ್ಕಿ ಮಾರಾಟಕ್ಕೆ ನಗರದಲ್ಲಿ ಮಂಗಳವಾರ ವಿಧ್ಯುಕ್ತವಾಗಿ ಚಾಲನೆ ನೀಡಲಾಗಿದೆ.

ಬೆಂಗಳೂರಿನ ವಿವಿಧೆಡೆ ಆರು ವಾಹನಗಳ ಮೂಲಕ ಅಕ್ಕಿ ಮಾರಾಟ ಮಾಡಲಾಗುತ್ತಿದೆ. ಪ್ರತಿ ಕೆ.ಜಿಗೆ ₹29 ದರ ನಿಗದಿಪಡಿಸಲಾಗಿದ್ದು, 5 ಕೆ.ಜಿ ಮತ್ತು 10 ಕೆ.ಜಿ ಪ್ಯಾಕೆಟ್‌ಗಳಲ್ಲಿ ದೊರೆಯಲಿದೆ. ಇನ್ನೊಂದು ವಾರದೊಳಗೆ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಈ ಸೇವೆ ವಿಸ್ತರಣೆಯಾಗಲಿದೆ.

'ಮಾರಾಟ ವಾಹನಗಳಲ್ಲಿ ಅಕ್ಕಿಯ ಜೊತೆಗೆ 'ಭಾರತ್ ಬ್ರ್ಯಾಂಡ್' ಗೋಧಿ ಹಿಟ್ಟು ಮತ್ತು ಕಡಲೆ ಬೇಳೆ ಕೂಡ ದೊರೆಯಲಿದೆ. ಬೆಂಗಳೂರಿನಲ್ಲಿ ವಲಯವಾರು ಮಟ್ಟದಲ್ಲಿ ವಾಹನಗಳನ್ನು ನಿಯೋಜಿಸಲಾಗಿದೆ. ಪ್ರತಿ ದಿನವೂ ಇವು ಒಂದೊಂದು ಸ್ಥಳಕ್ಕೆ ತೆರಳಲಿವೆ' ಎಂದು ನಾಫೆಡ್‌ನ ರಾಜ್ಯ ಮುಖ್ಯಸ್ಥೆ ಜ್ಯೋತಿ ಪಾಟೀಲ್ 'ಪ್ರಜಾವಾಣಿ'ಗೆ ವಿವರಿಸಿದರು.

'ಮೌಂಟ್ ಕಾರ್ಮೆಲ್ ಕಾಲೇಜಿನ ಬಳಿ ಇರುವ ಮಹಾಮಂಡಳದ ಕಚೇರಿಯಲ್ಲಿಯೂ ಒಂದು ಕೌಂಟರ್ ತೆರೆಯಲಾಗಿದೆ. ಗ್ರಾಹಕರು ಇಲ್ಲಿಗೆ ನೇರವಾಗಿ ಬಂದು ಅಕ್ಕಿ ಖರೀದಿಸಬಹುದಾಗಿದೆ' ಎಂದು ತಿಳಿಸಿದರು.

'ಜಿಲ್ಲೆಗಳಲ್ಲಿ ಸ್ಥಳೀಯ ಚಿಲ್ಲರೆ ಮಾರಾಟಗಾರರ ಮೂಲಕವೂ ಭಾರತ್ ಬ್ರ್ಯಾಂಡ್ ಅಕ್ಕಿ ಮಾರಾಟಕ್ಕೆ ನಿರ್ಧರಿಸಲಾಗಿದೆ' ಎಂದರು.



ಬೆಂಗಳೂರಿನ ನಾಫೆಡ್ ಕಚೇರಿ ಮುಂಭಾಗ ಮಂಗಳವಾರ 'ಭಾರತ್ ಬ್ರ್ಯಾಂಡ್' ಅಕ್ಕಿ ಮಾರಾಟದ ವಾಹನಗಳಿಗೆ ಚಾಲನೆ ನೀಡಲಾಯಿತು

–ಪ್ರಜಾವಾಣಿ ಚಿತ್ರ

ರಾಜ್ಯದಲ್ಲಿ ಮಾರಾಟದ ವಿವರ

2,000 ಟನ್	ಕಡಲೆ ಬೇಳೆ
500 ಟನ್	ಗೋಧಿ ಹಿಟ್ಟು

(2023ರ ಆಗಸ್ಟ್‌ನಿಂದ ಇಲ್ಲಿಯವರೆಗೆ)

ಅಕ್ಕಿ ಖರೀದಿಸಿದ ಸಚಿವ ಗೋಯಲ್

ನವದೆಹಲಿ (ಪಿಟಿಐ): 'ನಾನು ಭಾರತ್ ಬ್ರ್ಯಾಂಡ್‌ನ ಗೋಧಿ ಹಿಟ್ಟು, ಕಡಲೆ ಬೇಳೆ ಬಳಸುತ್ತಿದ್ದೇನೆ. ಈ ಎರಡೂ ಪದಾರ್ಥಗಳು ರುಚಿಕರವಾಗಿವೆ. ಈಗ ಅಕ್ಕಿಯನ್ನೂ ಖರೀದಿಸಿದ್ದೇನೆ. ಅದರ ಗುಣಮಟ್ಟವೂ ಉತ್ತಮವಾಗಿದೆ' ಎಂದು ಕೇಂದ್ರ ಆಹಾರ ಮತ್ತು ಗ್ರಾಹಕರ ವ್ಯವಹಾರಗಳ ಸಚಿವ ಪೀಯೂಷ್ ಗೋಯಲ್ ಹೇಳಿದರು.

ಅಕ್ಕಿ ಮಾರಾಟಕ್ಕೆ ಚಾಲನೆ ನೀಡಿದ ಬಳಿಕ ಮಾತನಾಡಿದ ಅವರು, 'ಈ ಅಕ್ಕಿ ಮಾರಾಟದಿಂದ ದೇಶ ಮಧ್ಯಮ ವರ್ಗ ಮತ್ತು ಬಡಜನರಿಗೆ ಹೆಚ್ಚು ಅನುಕೂಲವಾಗಲಿದೆ' ಎಂದರು.

'ಸರ್ಕಾರ ಕೈಗೊಂಡಿರುವ ಕ್ರಮಗಳಿಂದಾಗಿ ಟೊಮೆಟೊ ಹಾಗೂ ಈರುಳ್ಳಿ ದರ ಇಳಿಕೆಯಾಗಿದೆ. ಗೋಧಿ ಹಿಟ್ಟು ಮಾರಾಟದಿಂದಾಗಿ ಕಳೆದ ಆರು ತಿಂಗಳಿನಿಂದಲೂ ಗೋಧಿ ಹಣದುಬ್ಬರ ಕಡಿಮೆಯಾಗಿದೆ' ಎಂದು ಹೇಳಿದರು.

ಸದ್ಯ ಭಾರತೀಯ ಆಹಾರ ನಿಗಮದ ಮೂಲಕ ಅಕ್ಕಿಯನ್ನು ಎತ್ತುವಳಿ ಮಾಡಿದ ಬಳಿಕ ಸಂಸ್ಕರಿಸಲಾಗುತ್ತದೆ. ಬಳಿಕ ಪ್ಯಾಕೆಟ್‌ಗಳನ್ನು ಮಾಡಿ ಮಾರಾಟ ಮಾಡಲಾಗುತ್ತಿದೆ ಎಂದು ವಿವರಿಸಿದರು.

ಇ-ಕಾಮರ್ಸ್ ವೇದಿಕೆಯಲ್ಲೂ ಲಭ್ಯ

ಚಿಲ್ಲರೆ ವ್ಯಾಪಾರ ವಲಯದ ಇ-ಕಾಮರ್ಸ್ ವೇದಿಕೆಗಳಲ್ಲೂ 'ಭಾರತ್ ಬ್ರ್ಯಾಂಡ್' ಅಕ್ಕಿ ದೊರೆಯಲಿದೆ.

ಮೊದಲ ಹಂತದಲ್ಲಿ ರಿಲಯನ್ಸ್ ರಿಟೇಲ್, ಬ್ಲಿಂಕಿಟ್ ಹಾಗೂ ಬಿಗ್‌ಬಾಸ್ಕೆಟ್ ಜೊತೆಗೆ ನಾಫೆಡ್ ಒಪ್ಪಂದ ಮಾಡಿಕೊಂಡಿದೆ. ಇನ್ನೆರಡು ದಿನಗಳಲ್ಲಿ ಬೆಂಗಳೂರು ಸೇರಿದಂತೆ ಜಿಲ್ಲೆಗಳಲ್ಲಿ ಇರುವ ರಿಲಯನ್ಸ್ ರಿಟೇಲ್ ಮಳಿಗೆಗಳಲ್ಲಿ ದೊರೆಯಲಿದೆ.

'ಅಲ್ಲದೇ, ಫ್ಲಿಪ್‌ಕಾರ್ಟ್ ಮತ್ತು ಸ್ಟಾರ್ ಬಜಾರ್‌ನಲ್ಲಿಯೂ ಅಕ್ಕಿ ಮಾರಾಟಕ್ಕೆ ನಿರ್ಧರಿಸಲಾಗಿದೆ. ಈ ಸಂಬಂಧ ಒಪ್ಪಂದ ಕುರಿತು ಚರ್ಚೆ ನಡೆಯುತ್ತಿದೆ' ಎಂದು ಜ್ಯೋತಿ ಪಾಟೀಲ್ ತಿಳಿಸಿದರು.

ಮೊದಲ ಹಂತದಲ್ಲಿ ಕೇಂದ್ರ ಸರ್ಕಾರವು ನಾಫೆಡ್‌ಗೆ 1.25 ಲಕ್ಷ ಟನ್ ಅಕ್ಕಿಯನ್ನು ಹಂಚಿಕೆ ಮಾಡಿದೆ. ಬೇಡಿಕೆಗೆ ಅನುಗುಣವಾಗಿ ಹಂಚಿಕೆ ಪ್ರಮಾಣವನ್ನು ಹೆಚ್ಚಿಸಲಿದೆ ಎಂದರು.

ಕಿಸಾನ್ ಮಾನ್‌ಧನ್: ರಾಜ್ಯದ 41,683 ರೈತರು ನೋಂದಣಿ

ನವದೆಹಲಿ (ಪಿಟಿಐ): ದೇಶದ ಸಣ್ಣ ಮತ್ತು ಅತಿಸಣ್ಣ ರೈತರಿಗೆ ಪಿಂಚಣಿ ನೀಡಲು ಕೇಂದ್ರ ಸರ್ಕಾರವು ಜಾರಿಗೊಳಿಸಿರುವ ಪ್ರಧಾನ ಮಂತ್ರಿ ಕಿಸಾನ್ ಮಾನ್‌ಧನ್ ಯೋಜನೆಯಡಿ (ಪಿಎಂಕೆಎಂವೈ) ಇಲ್ಲಿಯವರೆಗೆ 23.30 ಲಕ್ಷ ರೈತರು ಹೆಸರು ನೋಂದಾಯಿಸಿದ್ದಾರೆ.

'2019ರ ಸೆಪ್ಟೆಂಬರ್‌ನಲ್ಲಿ ಈ ಯೋಜನೆಯು ಅನುಷ್ಠಾನಗೊಂಡಿದೆ.

18ರಿಂದ 40 ವರ್ಷದ ಒಳಗಿನ ರೈತರು ಸೌಲಭ್ಯಕ್ಕೆ ಅರ್ಹರಿರುತ್ತಾರೆ. 60 ವರ್ಷದ ಬಳಿಕ ಅವರಿಗೆ ಮಾಸಿಕ ₹3 ಸಾವಿರ ಪಿಂಚಣಿ ಸಿಗಲಿದೆ' ಎಂದು ಕೇಂದ್ರ ಕೃಷಿ ಸಚಿವ ಅರ್ಜುನ್ ಮುಂಡಾ ಅವರು, ಲೋಕಸಭೆಗೆ ನೀಡಿರುವ ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ.

'ಯೋಜನೆಯಡಿ ಇಲ್ಲಿಯವರೆಗೆ ಕರ್ನಾಟಕದಲ್ಲಿ 41,683 ರೈತರು ಹೆಸರು ನೋಂದಾಯಿಸಿದ್ದಾರೆ. ಪ್ರಸಕ್ತ ವರ್ಷದ ಜನವರಿ 31ರ ವರೆಗೆ ಈ ರೈತರು ₹10.78 ಕೋಟಿ ವಂತಿಗೆ ಪಾವತಿಸಿದ್ದಾರೆ' ಎಂದು ತಿಳಿಸಿದ್ದಾರೆ.

ವಯಸ್ಸಿನ ಆಧಾರದ ಮೇಲೆ ಫಲಾನುಭವಿಗಳು ಮಾಸಿಕವಾಗಿ ₹55ರಿಂದ ₹ 200 ವಂತಿಗೆ ಕಟ್ಟಬೇಕಿದೆ. ರೈತರು ಪಾವತಿಸಿದ ಮೊತ್ತಕ್ಕೆ ಅನುಗುಣವಾಗಿ ಕೇಂದ್ರ ಸರ್ಕಾರವು ಸಮಾನ ಮೊತ್ತವನ್ನು ಪಿಂಚಣಿ ನಿಧಿಗೆ ಪಾವತಿ ಮಾಡುತ್ತದೆ.

ಪ್ರಶ್ನೋತ್ತರ



ಪ್ರಮೋದ ಶ್ರೀಕಾಂತ ದೈತೋಟ

ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ರಾಜೇಂದ್ರ ಎಸ್., ಮೈಸೂರು.

- **ಪ್ರಶ್ನೆ: ನಾನು ಸೇನೆಯಲ್ಲಿ 20 ವರ್ಷ ಸೇವೆ ಸಲ್ಲಿಸಿದ ಬಳಿಕ ಅಂಚೆ ಇಲಾಖೆಯಲ್ಲಿ ಅಂಚೆ ಸಹಾಯಕನಾಗಿ 2004ರ ನವೆಂಬರ್ 30ರಿಂದ 2022ರ ಮೇ 31ರ ವರೆಗೆ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ್ದೇನೆ. ಪ್ರಸ್ತುತ ನನ್ನ ಆದಾಯ ಈ ರೀತಿ ಇದೆ. ಸೇನಾ ಮಾಸಿಕ ಪಿಂಚಣಿ ₹32,131, ಬಾಕಿ ಸೇನಾ ಪೆನ್ಶನ್ ₹1,03,128, ಎನ್‌ಪಿಎಸ್‌ನಿಂದ ಪಡೆದ ಶೇ 60 ಹಣ ಹಾಗೂ ಉಳಿತಾಯ ಮಾಡಿದ್ದ ಹಣವನ್ನು ಹಿರಿಯ ನಾಗರಿಕರ ಉಳಿತಾಯ ಖಾತೆಯಲ್ಲಿ ಹೂಡಿ ಮಾಡಿ ಅದರಿಂದ ವಾರ್ಷಿಕ ₹1,11,000 ಬಡ್ಡಿ ಪಡೆಯುತ್ತಿರುವೆ. ಇದಲ್ಲದೆ ಎನ್‌ಪಿಎಸ್‌ನಿಂದ ಮಾಸಿಕ ಪಿಂಚಣಿ ₹4,181, ಉಳಿತಾಯದ ಹಣಕ್ಕೆ ಬರುವ ವಾರ್ಷಿಕ ಬಡ್ಡಿ ₹6,500 ಕೂಡ ಸಿಗುತ್ತಿದೆ. ನಾನು ಮಾಸಿಕ ₹10,750 ಮನೆ ಬಾಡಿಗೆ ಕಟ್ಟುತ್ತಿದ್ದು, ಇದಕ್ಕೆ ಆದಾಯ ತೆರಿಗೆ ವಿನಾಯಿತಿ ಇದೆಯೇ? ಹಾಗೂ ಸೈನಿಕರ ಮಾಸಿಕ ಪಿಂಚಣಿಗೆ ವಿನಾಯಿತಿ ಇದೆಯೇ ಎಂಬುದನ್ನು ದಯವಿಟ್ಟು ತಿಳಿಸಿ.**

ಉತ್ತರ: ವೃತ್ತಿಯಲ್ಲಿದ್ದಾಗ ಪಡೆಯುವ ವೇತನಕ್ಕೆ ತೆರಿಗೆ ಅನ್ವಯವಾಗುವಂತೆ ಅದೇ ವ್ಯಕ್ತಿ ನಿವೃತ್ತಿಯಾದಾಗ ಬರುವ ಪಿಂಚಣಿಗೂ ಆದಾಯ ತೆರಿಗೆ ಅನ್ವಯವಾಗುತ್ತದೆ. ಅದು ಕೂಡ ವೇತನ ಆದಾಯದ ವ್ಯಾಪ್ತಿಯೊಳಗೆ ಬರುತ್ತದೆ. ಹೀಗಾಗಿ, ಪಿಂಚಣಿ ಆದಾಯಕ್ಕೆ ವಿಶೇಷ ವಿನಾಯಿತಿ ಇಲ್ಲ. ನೀವು ಕೊಟ್ಟಿರುವ ಮಾಹಿತಿಯಂತೆ, ವಾರ್ಷಿಕವಾಗಿ ಸುಮಾರು ₹3.85 ಲಕ್ಷ ಪಿಂಚಣಿ ಬರುತ್ತಿದೆ. ಇದಕ್ಕೆ ವಾರ್ಷಿಕವಾಗಿ ₹50 ಸಾವಿರದ ಸ್ಟ್ಯಾಂಡರ್ಡ್ ಡಿಡೆಕ್ಷನ್ ಇದೆ. ಉಳಿದ ಮೊತ್ತವಷ್ಟೆ ತೆರಿಗೆಗೊಳಪಡುವ ಆದಾಯ ಆಗಿರುತ್ತದೆ.

ಇನ್ನು ಹಿಂದಿನ ಪೆನ್ಶನ್ ವಿಚಾರವಾಗಿ ಹೇಳುವುದಾದರೆ, ಅದು ಹಳೆಯ ವರ್ಷಗಳ ಬಾಕಿ ಮೊತ್ತವಾಗಿರುವ ಕಾರಣ ಅದೂ ಮೇಲೆ ತಿಳಿಸಿರುವಂತೆ ಪೆನ್ಶನ್ ಭಾಗವಾಗಿಯೇ ತೆರಿಗೆಗೊಳಪಡುತ್ತದೆ. ಆದರೆ, ಹಿಂದಿನ ಅನೇಕ ವರ್ಷಗಳ ಮೊತ್ತವನ್ನು ಒಂದೇ ಬಾರಿಗೆ ಪಾವತಿಸಿರುವ ಕಾರಣ ನಿಮಗೆ ಆದಾಯ ತೆರಿಗೆಯ ಸೆಕ್ಷನ್ 89ರಡಿ ವಿನಾಯಿತಿ ಪಡೆದುಕೊಳ್ಳಬಹುದು. ಈ ಬಗ್ಗೆ ತೆರಿಗೆ ಲೆಕ್ಕ ಹಾಕಲು ನಿಮ್ಮ ಹಿಂದಿನ ವರ್ಷಗಳ ಆದಾಯ ಮಾಹಿತಿ, ಬಾಕಿ ಪಾವತಿಗೆ ಸಂಬಂಧಿಸಿದ ಆರ್ಥಿಕ ವರ್ಷ ಮತ್ತು ಮೊತ್ತ ಇತ್ಯಾದಿ ವಿವರವನ್ನು ಸ್ಥಳೀಯ ತೆರಿಗೆ ಸಲಹೆಗಾರರಿಗೆ ತೋರಿಸಿ ವಿನಾಯಿತಿ ಲೆಕ್ಕ ಹಾಕಿಸಿ. ಇದಕ್ಕಾಗಿ ಫಾರಂ 10ಇ ಅನ್ನು ಆದಾಯ ತೆರಿಗೆ ರಿಟರ್ನ್ಸ್ ಸಲ್ಲಿಸುವ ಮೊದಲು ಭರ್ತಿ ಮಾಡಿ ಸಲ್ಲಿಸಬೇಕು. ಇದಲ್ಲದೆ ಎನ್‌ಪಿಎಸ್‌ನಿಂದ ಮಾಸಿಕ ಪಿಂಚಣಿಯೂ ಬರುವುದಾಗಿ ತಿಳಿಸಿದ್ದೀರಿ. ಇದು ನಿಮ್ಮ ಪಿಂಚಣಿ ಆದಾಯದ ಭಾಗವಾಗಿ ತೆರಿಗೆಗೆ ಒಳಪಡುತ್ತದೆ.

ಇನ್ನು ಬಡ್ಡಿ ಆದಾಯಕ್ಕೆ ಸಂಬಂಧಿಸಿ, ಈ ಆದಾಯ ಇತರೆ ಆದಾಯ ವರ್ಗದಡಿ ತೆರಿಗೆಗೊಳಪಡುತ್ತದೆ. ಹಿರಿಯ ನಾಗರಿಕರಿಗೆ ಬರುವ ಬಡ್ಡಿ ಆದಾಯಕ್ಕೆ ₹50 ಸಾವಿರದ ತನಕ ಸೆಕ್ಷನ್ 80ಟಿಟಿಬಿ ಇದರಡಿ ಒಟ್ಟಾರೆ ವಿನಾಯಿತಿ ಇದೆ. ನೀವು ಮನೆ ಬಾಡಿಗೆಯನ್ನು ಕಟ್ಟುತ್ತಿರುವುದಾಗಿ ಹೇಳಿದ್ದೀರಿ. ನಿಮಗೆ ಯಾವುದೇ ಮನೆ ಬಾಡಿಗೆ ಭತ್ಯೆ ಬರುತ್ತಿಲ್ಲದ ಕಾರಣ, ಸೆಕ್ಷನ್ 80ಜಿಜಿ ಪ್ರಕಾರ ವಿನಾಯಿತಿ ಪಡೆಯುವ ಅವಕಾಶವಿದೆ. ವಿನಾಯಿತಿಗೆ ಲೆಕ್ಕಾಚಾರಕ್ಕೆ ಸಂಬಂಧಿಸಿ, ತಿಂಗಳಿಗೆ ಗರಿಷ್ಠ ₹5,000 ತನಕ ವಿನಾಯಿತಿ ಸಿಗುತ್ತದೆ. ಇದಕ್ಕಾಗಿ ಫಾರಂ 10ಬಿಎ ಅನ್ನು ಆದಾಯ ತೆರಿಗೆ ರಿಟರ್ನ್ಸ್ ಸಲ್ಲಿಸುವ ಮೊದಲು ಸಲ್ಲಿಸಬೇಕು. ವಾರ್ಷಿಕ ಬಾಡಿಗೆ ₹1 ಲಕ್ಷ ಮೀರುವ ಕಾರಣ ನಿಮ್ಮ ಮನೆಯ ಮಾಲೀಕರ ಹೆಸರು, ಪ್ಯಾನ್, ವಿಳಾಸ ಇತ್ಯಾದಿ ಕೆಲವು ವಿವರವನ್ನು ನೀಡಬೇಕಾಗುತ್ತದೆ. ಪ್ರಸ್ತುತ ಇರುವ ನಿಮ್ಮ ಆದಾಯಕ್ಕೆ ಹೊಸ ತೆರಿಗೆ ಪದ್ಧತಿ ಆಯ್ಕೆ ಮಾಡಿಕೊಳ್ಳಿ. ಒಟ್ಟಾರೆ ತೆರಿಗೆ ಬರಲಾರದು.

ಲಲಿತಾ ಎಂ., ಬೆಂಗಳೂರು.

- **ಪ್ರಶ್ನೆ: ಈ ಸಾಲಿನಲ್ಲಿ ಕಡಿಮೆ ತೆರಿಗೆ ಅನ್ವಯವಾಗುವ ಹೊಸ ತೆರಿಗೆ ಪದ್ಧತಿ ಅಳವಡಿಸಿಕೊಂಡು, ಮುಂದಿನ ಸಾಲಿನಲ್ಲಿ ಹೊಸ ತೆರಿಗೆ ಪದ್ಧತಿಯಡಿ ತೆರಿಗೆ ಹೆಚ್ಚಾದಲ್ಲಿ ಹಳೆಯ ತೆರಿಗೆ ಪದ್ಧತಿಗೆ ಬದಲಾಯಿಸಿಕೊಳ್ಳಬಹುದೇ ಎಂಬುದರ ಬಗ್ಗೆ ತಿಳಿದುಕೊಳ್ಳಬೇಕಿದೆ. ನಮ್ಮ ಪ್ರತಿ ವರ್ಷದ ಆದಾಯಕ್ಕೆ ತಕ್ಕಂತೆ ಹೊಸ/ ಹಳೆಯ ತೆರಿಗೆ ಪದ್ಧತಿಗಳನ್ನು ಆಯ್ಕೆ ಮಾಡಲು ನಿಯಮಗಳಲ್ಲಿ ಅವಕಾಶ ಇದೆಯೇ ಎಂಬ ಬಗ್ಗೆ ಮಾಹಿತಿ ನೀಡುವಂತೆ ಕೋರುತ್ತೇನೆ.**

ಉತ್ತರ: ತೆರಿಗೆದಾರರಿಗೆ ಹಳೆಯ ಅಥವಾ ಹೊಸ ತೆರಿಗೆ ಪದ್ಧತಿಯಡಿ ತಮಗೆ ಸೂಕ್ತವೆಂಬ ತೆರಿಗೆ ಪದ್ಧತಿಯನ್ನು ಆಯ್ಕೆ ಮಾಡುವ ಅವಕಾಶವಿದೆ. ಒಂದು ವೇಳೆ ವರ್ಷದ ಆರಂಭದಲ್ಲಿ ಉದ್ಯೋಗದಾತರಿಗೆ ತಮ್ಮ ಆಯ್ಕೆಯ ತೆರಿಗೆ ಪದ್ಧತಿಯನ್ನು ಈಗಾಗಲೇ ನೀಡಿದ್ದರೆ, ತಾವು ರಿಟರ್ನ್ಸ್ ಸಲ್ಲಿಸುವ ಸಂದರ್ಭದಲ್ಲಿ ತೆರಿಗೆ ಲಾಭದಾಯಕವಾದ ಪದ್ಧತಿಗೆ ಬದಲಾಯಿಸಿ ರಿಟರ್ನ್ಸ್ ಸಲ್ಲಿಸಲು ಅವಕಾಶವಿದೆ. ಇನ್ನು ಮುಂದಿನ ವರ್ಷಗಳಲ್ಲೂ ತಮ್ಮ ಅನುಕೂಲಕರ ಆಯ್ಕೆಯನ್ನು ಮಾಡಲು ಅವಕಾಶವಿದೆ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ. ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001.
ಇ-ಮೇಲ್:businessdesk@prajavani.co.in

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	1000-1100
ನಡುಗೋಲು	1250-1300
ರಾಶಿ	1350-1400
ರಾಶಿ ಉತ್ತಮ	1450-1500
ಹೆರಕಿದ್ದು	2000-2100
ಹಸಿರು ಸಾಧಾರಣ	1300-1400
ಹಸಿರು ಉತ್ತಮ	1800-1850
ಹಸಿರು ಅತಿ ಉತ್ತಮ	2200-2300
ಕಾಳು ಮೆಣಸು	550
ಅಡಿಕೆ	
ಬಂಟ್ವಾಳ	
ಕೋಕ	18000-28500
ಹೊಸತು	28500-35000
ಹಳತು	42000-44000
ಕಾರ್ಕಳ	
ಹೊಸತು	25000-35000
ಹಳತು	30000-44500
ಪುತ್ತೂರು	
ಹೊಸತು	26500-35000
ಶಿವಮೊಗ್ಗ	
ಬೆಟ್ಟೆ	40099-55199
ಗೊರಬಲು	18000-36000
ರಾಶಿ	28299-48699
ಸರಕು	46659-82500
ಸಿದ್ದಾಪುರ	
ಬಿಳಿಗೋಟು	28699-31589
ಚಾಲಿ	35509-37299
ಕೋಕ	27899-33019
ಹೊಸಚಾಲಿ	30119-36511
ಕೆಂಪುಗೋಟು	30869-35899
ರಾಶಿ	44899-47449
ತಟ್ಟಿಬೆಟ್ಟೆ	41889-46309
ಶಿರಸಿ	
ಬೆಟ್ಟೆ	38698-43209
ಬಿಳಿಗೋಟು	23591-33108
ಚಾಲಿ	35709-38800
ಕೆಂಪುಗೋಟು	28800-36829
ರಾಶಿ	43508-48099
ಯಲ್ಲಾಪುರ	
ಅಪಿ	54000-59169
ಬಿಳಿಗೋಟು	24109-33819
ಚಾಲಿ	33801-39088
ಕೋಕ	18900-31299
ಕೆಂಪುಗೋಟು	26899-37519
ರಾಶಿ	46888-53369
ತಟ್ಟಿಬೆಟ್ಟೆ	37161-46009

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್	ಅಲ್ಲಾನಾ	ನ್ಯೂಯಾರ್ಕ್
ಎಪಿ	14,400	14400	-	189.50 ಸೆಂಟ್ಸ್
ಎಸಿ	7,900	7,700	-	
ಆರ್‌ಪಿ	12,750	13,000	-	ಲಂಡನ್
ಆರ್‌ಸಿ	7,425	7300	-	3,188 ಡಾಲರ್ಸ್

ಸಹಿಸುವ ಮಟ್ಟದಲ್ಲಿ ಹಣದುಬ್ಬರ: ನಿರ್ಮಲಾ

ನವದೆಹಲಿ (ಪಿಟಿಐ): ದೇಶದಲ್ಲಿ ಹಣದುಬ್ಬರವು ಸಹಿಸಿಕೊಳ್ಳಬಹುದಾದ ಮಟ್ಟದಲ್ಲಿಯೇ ಇದ್ದು, ಸರ್ಕಾರವು ಬೆಲೆ ಏರಿಕೆ ನಿಯಂತ್ರಣಕ್ಕೆ ಅಗತ್ಯ ಕ್ರಮ ವಹಿಸಲಿದೆ ಎಂದು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದರು.

ರಾಜ್ಯಸಭೆಯಲ್ಲಿ ಮಂಗಳವಾರ ಮಾತನಾಡಿದ ಅವರು, 2022ರ ಏಪ್ರಿಲ್‌ನಿಂದ ಡಿಸೆಂಬರ್‌ವರೆಗೆ ಚಿಲ್ಲರೆ ಹಣದುಬ್ಬರವು ಸರಾಸರಿ ಶೇ6.8ರಷ್ಟಿತ್ತು. 2023ರಲ್ಲಿ ಇದೇ ಅವಧಿಯಲ್ಲಿ ಸರಾಸರಿ ಶೇ 5.5ರಷ್ಟು ದಾಖಲಾಗಿದೆ. ಸದ್ಯ ಹಣದುಬ್ಬರವು ಸ್ಥಿರವಾಗಿದೆ ಎಂದು ತಿಳಿಸಿದರು. 'ಈರುಳ್ಳಿಯನ್ನು ದೀರ್ಘಕಾಲ ಕೆಡದಂತೆ ಸಂಸ್ಕರಿಸುವ ಬಗ್ಗೆ ಬಾಬಾ ಪರಮಾಣು ಸಂಶೋಧನಾ ಸಂಸ್ಥೆಯು (ಬಿಎಆರ್‌ಸಿ) ಸರ್ಕಾರದ ಜೊತೆ ಕೆಲಸ ಮಾಡುತ್ತಿದೆ ಎಂದರು.

ಮುಂಬೈ ಧಾರಣೆ

ಶೇಂಗಾ

06-02-2024

ಜಾವಾ 70/80(ಹೊಸ)	11300-11400
ಜಾವಾ 80/90(ಹೊಸ)	10900-11000
ದಪ್ಪ ಮಧ್ಯಪ್ರದೇಶ(ಹೊಸ)	9800-9900
ದಪ್ಪ ಗುಜರಾತ್(ಹೊಸ)	10400-10500

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1525 (1530)
ಒಂದು ವಾರದ ಡೆಲಿವರಿ	1520 (1525)
ಸೋಯಾ ಕಚ್ಚಾ	843 (834)
ಪಾಮ್ ವಾರದ ಡೆಲಿವರಿ	848 (838)
ಸೂರ್ಯಕಾಂತಿ ಎಣ್ಣೆ ಕಚ್ಚಾ	845 (845)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
₹62,300 (62,150)
ಬೆಳ್ಳಿ ಕೆ.ಜಿ ₹70,000 (70,350)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಚಿಲಿ ಕಾಳ್ಗಿಚ್ಚು: ಮೃತರ ಸಂಖ್ಯೆ 123ಕ್ಕೆ ಏರಿಕೆ

ಸ್ಯಾಂಟಿಯಾಗೊ (ಎಪಿ): ಮಧ್ಯ ಚಿಲಿಯಲ್ಲಿ ಕಳೆದ ಕೆಲ ದಿನಗಳಿಂದ ಆವರಿಸಿರುವ ಕಾಳ್ಗಿಚ್ಚಿನಿಂದ ಮೃತಪಟ್ಟವರ ಸಂಖ್ಯೆ 123ಕ್ಕೆ ಏರಿಕೆಯಾಗಿದ್ದು, ನೂರಾರು ಜನರು ನಾಪತ್ತೆಯಾಗಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ವಿನಾ ಡೆಲ್ ಮಾರ್ ನಗರದಲ್ಲಿ ಶುಕ್ರವಾರದಿಂದ ಬೆಂಕಿ ಕಾಣಿಸಿಕೊಂಡಿದ್ದು, ಬೆಂಕಿಯ ತೀವ್ರತೆ ಸೋಮವಾರ ಸ್ವಲ್ಪ ತಗ್ಗಿದೆ. ವಾಲ್ಪರೈಸೊ ಪ್ರದೇಶದ ಕ್ವಿಲ್ಪೆ ಮತ್ತು ವಿಲ್ಲ ಅಲೆಮಾನಾ ನಗರಗಳಲ್ಲಿ ಅಪಾರ ಹಾನಿಯುಂಟಾಗಿದ್ದು, ಕನಿಷ್ಠ 3,000 ಮನೆಗಳು ಬೆಂಕಿಗೆ ಆಹುತಿಯಾಗಿವೆ ಎಂದು ಅಧ್ಯಕ್ಷ ಗೇಬ್ರಿಯಲ್ ಬೋರಿಕ್ ತಿಳಿಸಿದ್ದಾರೆ. 'ಹಲವು ಮೃತದೇಹಗಳು ಕೆಟ್ಟ ಸ್ಥಿತಿಯಲ್ಲಿದ್ದು, ಗುರುತು ಪತ್ತೆ ಸಾಧ್ಯವಾಗುತ್ತಿಲ್ಲ. ವಿಧಿವಿಜ್ಞಾನ ಪ್ರಯೋಗಾಲಯ ಸಿಬ್ಬಂದಿ, ಕಾಣೆಯಾದವರ ಬಗ್ಗೆ ದೂರು ನೀಡಿದ ಸಂಬಂಧಿಗಳಿಂದ ಆನುವಂಶಿಕ ಮಾದರಿ ಪಡೆಯುತ್ತಿದ್ದಾರೆ' ಎಂದು ವಿಧಿವಿಜ್ಞಾನ ಪ್ರಯೋಗಾಲಯದ ಸೇವೆಯ ನಿರ್ದೇಶಕ ಮಾರಿಸೋಲ್ ಪ್ರಾಡೊ ತಿಳಿಸಿದ್ದಾರೆ.

ತೆರೆಯದ ಏರ್‌ಬ್ಯಾಗ್: ಕಾರಿನ ಹಣ ಮರುಪಾವತಿಗೆ ಆದೇಶ

ಮಲಪ್ಪುರ (ಪಿಟಿಐ): ಅಪಘಾತ ಸಂಭವಿಸಿದ ವೇಳೆ ಏರ್‌ಬ್ಯಾಗ್ ತೆರೆಯದ ಕಾರಣ ಗಂಭೀರವಾಗಿ ಗಾಯಗೊಂಡಿದ್ದ ಕಾರಿನ ಮಾಲೀಕನಿಗೆ, ಆ ಕಾರು ಖರೀದಿಸಿದ ಸಂಪೂರ್ಣ ಹಣವನ್ನು ಮರುಪಾವತಿಸುವಂತೆ ಕೇರಳದ ಮಲಪ್ಪುರ ಜಿಲ್ಲಾ ಗ್ರಾಹಕರ ನ್ಯಾಯಾಲಯವು, ಮಾರುತಿ ಸುಜುಕಿ ಇಂಡಿಯಾ ಕಂಪನಿಗೆ ಸೂಚಿಸಿದೆ.

ಇಂಡಿಯಾನೂರ್ ನಿವಾಸಿ ಮಹಮ್ಮದ್ ಮುಸ್ಲಿಯಾರ್ ಎಂಬವರು ಖರೀದಿಸಿದ್ದ ಕಾರು 2021ರ ಜೂನ್ 30ರಂದು ಅಪಘಾತಕ್ಕೀಡಾಗಿತ್ತು. ಏರ್‌ಬ್ಯಾಗ್ ತೆರೆದುಕೊಳ್ಳದ ಕಾರಣ ಅವರು ಗಂಭೀರವಾಗಿ ಗಾಯಗೊಂಡಿದ್ದರು. ಕಾರಿಗೂ ಹೆಚ್ಚಿನ ಹಾನಿಯಾಗಿತ್ತು. ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ್ದ ಸಾರಿಗೆ ವಾಹನ ನಿರೀಕ್ಷಕರು ಕೂಡ, ಏರ್‌ಬ್ಯಾಗ್ ತೆರೆದುಕೊಳ್ಳದಿರುವ ಬಗ್ಗೆ ವರದಿ ಸಲ್ಲಿಸಿದ್ದರು. ವಿಚಾರಣೆ ನಡೆಸಿದ ನ್ಯಾಯಾಲಯವು, 'ಒಂದು ತಿಂಗಳೊಳಗೆ ಸಂತ್ರಸ್ತರಿಗೆ ಕಾರಿನ ಬೆಲೆ ₹4,35,854 ಮತ್ತು ದೂರಿನ ಖರ್ಚಾಗಿ ₹20 ಸಾವಿರ ಪಾವತಿಸಬೇಕು. ತಪ್ಪಿದರೆ ಶೇ 9ರಷ್ಟು ಬಡ್ಡಿ ಸೇರಿಸಿ ನೀಡಬೇಕಿದೆ' ಎಂದು ಆದೇಶಿಸಿದೆ.

₹5.5 ಲಕ್ಷ ಕೋಟಿ ಹೂಡಿಕೆ

ನೈಸರ್ಗಿಕ ಅನಿಲ ಉತ್ಪಾದನೆಗೆ ಒತ್ತು: ಪ್ರಧಾನಿ ಮೋದಿ

ಬೆತುಲ್ (ಗೋವಾ) (ಪಿಟಿಐ): ದೇಶೀಯವಾಗಿ ನೈಸರ್ಗಿಕ ಅನಿಲ ಉತ್ಪಾದನೆಯನ್ನು ಹೆಚ್ಚಿಸಲು ಭಾರತವು ಮುಂದಿನ ಐದರಿಂದ ಆರು ವರ್ಷಗಳಲ್ಲಿ ಸುಮಾರು ₹5.5 ಲಕ್ಷ ಕೋಟಿ ಹೂಡಿಕೆ ಮಾಡಲಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಮಂಗಳವಾರ ಹೇಳಿದರು.

'ಇಂಡಿಯಾ ಎನರ್ಜಿ ವೀಕ್'ನಲ್ಲಿ ಮಾತನಾಡಿದ ಅವರು, ಸರ್ಕಾರ ಕೈಗೊಂಡಿರುವ ಸುಧಾರಣೆಗಳಿಂದಾಗಿ ದೇಶೀಯ ನೈಸರ್ಗಿಕ ಅನಿಲ ಉತ್ಪಾದನೆಯಲ್ಲಿ ಏರಿಕೆಯಾಗಿದೆ. ದೇಶದ ಒಟ್ಟಾರೆ ಇಂಧನದಲ್ಲಿ ನೈಸರ್ಗಿಕ ಅನಿಲದ ಪಾಲು ಶೇ6.3ರಷ್ಟಿದೆ. ಅದನ್ನು 2030ರ ವೇಳೆಗೆ ಶೇ 15ಕ್ಕೆ ಏರಿಸುವ ಗುರಿ ಹೊಂದಲಾಗಿದೆ ಎಂದು ತಿಳಿಸಿದರು.

2070ರ ವೇಳೆಗೆ ದೇಶದಲ್ಲಿ ಇಂಗಾಲ ಹೊರಸೂಸುವಿಕೆಯನ್ನು ಶೂನ್ಯಕ್ಕೆ ಇಳಿಸುವುದು ಕೇಂದ್ರ ಸರ್ಕಾರದ ಗುರಿಯಾಗಿದೆ. ಇದನ್ನು ಸಾಧಿಸಲು ಭಾರತವು ನೈಸರ್ಗಿಕ ಅನಿಲ ಉತ್ಪಾದನೆಗೆ ಆದ್ಯತೆ ನೀಡಲು ನಿರ್ಧರಿಸಿದೆ ಎಂದು ತಿಳಿಸಿದರು.



ನರೇಂದ್ರ ಮೋದಿ

ವಿದ್ಯುತ್ ಉತ್ಪಾದನೆ, ರಸಗೊಬ್ಬರ ತಯಾರಿಕೆ, ವಾಹನಗಳನ್ನು ಓಡಿಸಲು, ಅಡುಗೆಗಾಗಿ ನೈಸರ್ಗಿಕ ಅನಿಲವನ್ನು ಬಳಸಬಹುದಾಗಿದೆ. ಇದು ಇತರ ಇಂಧನಗಳಿಗಿಂತ ಕಡಿಮೆ ಮಾಲಿನ್ಯಕಾರವೂ ಆಗಿರುವುದರಿಂದ, ಕೇಂದ್ರ ಹೆಚ್ಚಿನ ಒಲವು ಹೊಂದಿದೆ ಎಂದರು.

ಎಥೆನಾಲ್ ಬಳಕೆಗೆ ಉತ್ತೇಜನ: ಭಾರತವು ಜೈವಿಕ ಇಂಧನ ಬಳಕೆಗೆ ಪ್ರೋತ್ಸಾಹ ನೀಡುತ್ತಿದೆ. ಪೆಟ್ರೋಲ್‌ನಲ್ಲಿ ಎಥೆನಾಲ್ ಮಿಶ್ರಣಕ್ಕೆ ಉತ್ತೇಜನ ನೀಡುತ್ತಿದೆ. 2014ರಲ್ಲಿ ಶೇ1.5ರಷ್ಟಿದ್ದ ಮಿಶ್ರಣವನ್ನು ಶೇ12ಕ್ಕೆ ಏರಿಸಲಾಗಿದೆ. ಜಗತ್ತಿನ ಶೇ17ರಷ್ಟು ಜನಸಂಖ್ಯೆಯನ್ನು ಭಾರತ ಹೊಂದಿದ್ದರೂ, ದೇಶದ ಇಂಗಾಲ ಹೊರಸೂಸುವಿಕೆ ಪಾಲು ಶೇ 4ರಷ್ಟಿದೆ ಎಂದು ಪ್ರಧಾನಿ ವಿವರಿಸಿದರು.

62 ಸಾವಿರ ಟನ್ ಕೊಬ್ಬರಿ ಖರೀದಿ ನಿಗದಿ: ರೈತರ ಆತಂಕ

ಪ್ರಜಾವಾಣಿ ವಾರ್ತೆ

ಹಿರೀಸಾವೆ (ಹಾಸನ ಜಿಲ್ಲೆ): ರಾಜ್ಯದಿಂದ 62 ಸಾವಿರ ಟನ್ ಕೊಬ್ಬರಿಯನ್ನಷ್ಟೇ ಖರೀದಿಸಬೇಕು ಎಂದು ಕೇಂದ್ರ ಸರ್ಕಾರ ಸೂಚಿಸಿರುವುದು ತೆಂಗು ಬೆಳೆಗಾರರಲ್ಲಿ ಆತಂಕ ಮೂಡಿಸಿದೆ.

ಮೊದಲು ಹೆಸರು ನೋಂದಣಿ ಮಾಡಿದವರಿಂದಷ್ಟೇ ಕೊಬ್ಬರಿ ಖರೀದಿಸಲಾಗುತ್ತದೆ ಎಂಬ ಆತಂಕವೂ ರೈತರಿಗೆ ಕಾಡುತ್ತಿದೆ. ಹಾಗಾಗಿ, ಎರಡನೇ ದಿನವಾದ ಮಂಗಳವಾರ ನಾಫೆಡ್ ಖರೀದಿ ಕೇಂದ್ರಗಳ ಮುಂದೆ ಸಾಲುಗಟ್ಟಿ ನಿಂತಿದ್ದರು. ನೋಂದಣಿಗೆ ಸರ್ಕಾರವು 45 ದಿನಗಳ ಸಮಯ ನೀಡಿದೆ.

'ರೈತರ ಬಳಿ 1 ಲಕ್ಷ ಟನ್‌ಗೂ ಹೆಚ್ಚು ಕೊಬ್ಬರಿ ದಾಸ್ತಾನು ಇದೆ. ನಿಗದಿಪಡಿಸಿರುವ ಪ್ರಮಾಣಕ್ಕಿಂತಲೂ ಹೆಚ್ಚು ಕೊಬ್ಬರಿ ಖರೀದಿಸಲು ರಾಜ್ಯದ ಸಂಸದರು ಕೇಂದ್ರದ ಮೇಲೆ ಒತ್ತಡ ಹೇರಬೇಕು' ಎಂದು ರಾಜ್ಯ ಸಹಕಾರ ಮಾರಾಟ ಮಹಾಮಂಡಳದ ನಿರ್ದೇಶಕ ಪುಟ್ಟಸ್ವಾಮಿ ಗೌಡ ಒತ್ತಾಯಿಸಿದ್ದಾರೆ.

ಡಿಜಿಟಲ್ ವಂಚನೆ: 2,200 ಸಾಲದ ಆ್ಯಪ್‌ಗಳಿಗೆ ಗೂಗಲ್ ಕೊಕ್

ನವದೆಹಲಿ (ಪಿಟಿಐ): ನಾಗರಿಕರಿಗೆ ಸಾಲದ ಆಮಿಷವೊಡ್ಡಿ ಡಿಜಿಟಲ್ ವಂಚನೆಯಲ್ಲಿ ತೊಡಗಿದ್ದ 2,200ಕ್ಕೂ ಹೆಚ್ಚು ಮೊಬೈಲ್ ಆ್ಯಪ್‌ಗಳನ್ನು ಗೂಗಲ್ ಪ್ಲೇ ಸ್ಟೋರ್‌ನಿಂದ ತೆಗೆದು ಹಾಕಲಾಗಿದೆ ಎಂದು ಕೇಂದ್ರ ಸರ್ಕಾರವು, ಮಂಗಳವಾರ ರಾಜ್ಯಸಭೆಗೆ ತಿಳಿಸಿದೆ.

'2022ರ ಸೆಪ್ಟೆಂಬರ್‌ನಿಂದ 2023ರ ಆಗಸ್ಟ್‌ವರೆಗೆ ನಡೆಸಿದ ಪರಿಶೀಲನೆಯಲ್ಲಿ ಹಣದ ವಂಚನೆಯಲ್ಲಿ ತೊಡಗಿದ್ದ ಈ ಆ್ಯಪ್‌ಗಳನ್ನು ಗೂಗಲ್ ಕಂಪನಿಯು ತೆಗೆದುಹಾಕಿದೆ' ಎಂದು ಕೇಂದ್ರ ಹಣಕಾಸು ಖಾತೆಯ ರಾಜ್ಯ ಸಚಿವ ಭಾಗವತ್ ಕೆ. ಕರದ್ ಅವರು, ಸಂಸತ್‌ನ ಮೇಲ್ಮನೆಗೆ ನೀಡಿರುವ ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ.

ಕೇಂದ್ರ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯದ ಮಾಹಿತಿ ಅನ್ವಯ, 2021ರ ಏಪ್ರಿಲ್‌ನಿಂದ 2022ರ ಜುಲೈವರೆಗೆ ಗೂಗಲ್ ಕಂಪನಿಯು 3,500ರಿಂದ 4,000 ಸಾಲದ ಆ್ಯಪ್‌ಗಳ ಪರಿಶೀಲನೆ ನಡೆಸಿತ್ತು. ಈ ಅವಧಿಯಲ್ಲಿ 2,500ಕ್ಕೂ ಹೆಚ್ಚು ಸಾಲದ ಆ್ಯಪ್‌ಗಳನ್ನು ತೆಗೆದುಹಾಕಿದೆ ಎಂದು ವಿವರಿಸಿದ್ದಾರೆ.

ಜನರ ಹಿತದೃಷ್ಟಿಯಿಂದ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಹಾಗೂ ಮಧ್ಯಸ್ಥಿಕೆದಾರರ ಕೋರಿಕೆ ಮೇರೆಗೆ ಕೇಂದ್ರವು ವಂಚನೆ ಆ್ಯಪ್‌ಗಳ ವಿರುದ್ಧ ಕಠಿಣ ಕ್ರಮಕ್ಕೆ ಮುಂದಾಗಿದೆ ಎಂದು ತಿಳಿಸಿದ್ದಾರೆ.

ಸಾಲದ ಆ್ಯಪ್‌ಗಳು ದುಬಾರಿ ಬಡ್ಡಿ ವಿಧಿಸುವ ಮೂಲಕ ಜನರ ಶೋಷಣೆಯಲ್ಲಿ ತೊಡಗಿವೆ. ಹಾಗಾಗಿ, ಡಿಜಿಟಲ್ ವೇದಿಕೆಗಳ ಮೂಲಕ ಸಾಲ ನೀಡುವುದಕ್ಕೆ ಚೌಕಟ್ಟು ರೂಪಿಸಲು ಆರ್‌ಬಿಐ ಕಠಿಣ ಮಾರ್ಗಸೂಚಿಗಳನ್ನು ರೂಪಿಸಿದೆ. ಸಾಲ ವಸೂಲಾತಿ ವೇಳೆ ಅಕ್ರಮ ಮಾರ್ಗ ಅನುಸರಿಸುವುದನ್ನು ನಿಯಂತ್ರಿಸುವ ಬಗ್ಗೆ ಸ್ಪಷ್ಟಪಡಿಸಲಾಗಿದೆ ಎಂದು ತಿಳಿಸಿದ್ದಾರೆ. 2021ರ ಏಪ್ರಿಲ್‌ನಿಂದ 2023ರ ಆಗಸ್ಟ್ ವರೆಗೆ 4,700ಕ್ಕೂ ಹೆಚ್ಚು ಸಾಲದ ಆ್ಯಪ್‌ಗಳನ್ನು ಗೂಗಲ್ ಪ್ಲೇ ಸ್ಟೋರ್‌ನಿಂದ ತೆಗೆದು ಹಾಕಲಾಗಿದೆ.

ಬ್ರಿಟನ್ ರಾಜ 3ನೇ ಚಾರ್ಲ್ಸ್‌ಗೆ ಕ್ಯಾನ್ಸರ್

ಲಂಡನ್ (ಪಿಟಿಐ): ಬ್ರಿಟನ್ ರಾಜ 3ನೇ ಚಾರ್ಲ್ಸ್ ಅವರಿಗೆ ಕ್ಯಾನ್ಸರ್ ಇರುವುದು ದೃಢಪಟ್ಟಿದ್ದು, ಚಿಕಿತ್ಸೆ ಆರಂಭಿಸಲಾಗಿದೆ ಎಂದು ಬಕ್ಕಿಂಗ್‌ಹ್ಯಾಮ್ ಅರಮನೆ ತಿಳಿಸಿದೆ. ಆದರೆ ಯಾವ ರೀತಿಯ ಕ್ಯಾನ್ಸರ್ ಎಂಬುದನ್ನು ಅದು ತಿಳಿಸಿಲ್ಲ.

'ವೈದ್ಯರ ಶಿಫಾರಸಿನಂತೆ ಚಾರ್ಲ್ಸ್ ಅವರ ಸಾರ್ವಜನಿಕ ಸಮಾರಂಭಗಳನ್ನು ಮುಂದೂಡಲಾಗುವುದು ಆದರೆ, ದೇಶದ ಮುಖ್ಯಸ್ಥರಾಗಿ ಅವರ ಕರ್ತವ್ಯಗಳನ್ನು ಮುಂದುವರಿಸಲಿದ್ದಾರೆ' ಎಂದು ತಿಳಿಸಿದೆ.

ಸಚಿವ ಮುರುಗನ್ ವಿರುದ್ಧ ಡಿಎಂಕೆ ನಾಯಕ ಬಾಲು 'ಆಕ್ಷೇಪಾರ್ಹ' ಹೇಳಿಕೆಯಿಂದ ವಿವಾದ

ಲೋಕಸಭೆ: ಬಿಜೆಪಿ– ಡಿಎಂಕೆ ಜಟಾಪಟಿ

ನವದೆಹಲಿ (ಪಿಟಿಐ): ಡಿಎಂಕೆ ಸಂಸದ ಟಿ.ಆರ್.ಬಾಲು ಅವರು ಕೇಂದ್ರ ಸಚಿವ ಎಲ್.ಮುರುಗನ್ ವಿರುದ್ಧ ನೀಡಿದ ಹೇಳಿಕೆಯು ಲೋಕಸಭೆಯಲ್ಲಿ ಮಂಗಳವಾರ ಬಿಜೆಪಿ ಹಾಗೂ ಡಿಎಂಕೆ ನಡುವೆ ಮಾತಿನ ಸಮರಕ್ಕೆ ಕಾರಣವಾಯಿತು.

ಕೇಂದ್ರ ಸರ್ಕಾರವು ತಮಿಳುನಾಡಿಗೆ ನೀಡಿದ ಪ್ರವಾಹ ಪರಿಹಾರ ಮೊತ್ತಕ್ಕೆ ಸಂಬಂಧಿಸಿದಂತೆ ಪ್ರಶ್ನೋತ್ತರ ಅವಧಿಯಲ್ಲಿ ಚರ್ಚೆ ನಡೆಯುತ್ತಿದ್ದಾಗ ಈ ಬೆಳವಣಿಗೆ ನಡೆದಿದೆ.

ಡಿಎಂಕೆಯ ಇಬ್ಬರು ಸಂಸದರು ಈ ವಿಷಯದ ಕುರಿತು ಪ್ರಶ್ನೆ ಕೇಳಿದ ಬೆನ್ನಲ್ಲೇ, ಬಾಲು ಅವರು ಪೂರಕ ಪ್ರಶ್ನೆಯೊಂದನ್ನು ಮುಂದಿಟ್ಟರು. ಕೇಂದ್ರ ಪಶು ಸಂಗೋಪನಾ ಮತ್ತು ಮೀನುಗಾರಿಕೆ ರಾಜ್ಯ ಖಾತೆ ಸಚಿವ ಮುರುಗನ್ ಅವರು ಈ ವೇಳೆ ಮಧ್ಯಪ್ರವೇಶಿಸಿ, ಡಿಎಂಕೆ ನಾಯಕ 'ಅಪ್ರಸ್ತುತ' ಪ್ರಶ್ನೆ ಕೇಳುತ್ತಿದ್ದಾರೆ ಎಂದು ಹೇಳಿದರು.

ಇದರಿಂದ ಆಕ್ರೋಶಿತರಾದ ಬಾಲು, 'ಆಕ್ಷೇಪಾರ್ಹ' ಪದ ಬಳಸಿ ಮುರುಗನ್ ವಿರುದ್ಧ ಹರಿಹಾಯ್ದರು. ಈ ವೇಳೆ ಬಿಜೆಪಿ ಮತ್ತು ಡಿಎಂಕೆ ಸಂಸದರ ನಡುವೆ ಮಾತಿನ ಚಕಮಕಿ ನಡೆದು, ಗದ್ದಲ ಉಂಟಾಯಿತು. ಬಾಲು ಹೇಳಿಕೆ ಖಂಡಿಸಿ ಸಂಸದೀಯ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಶಿ ಅವರು ಸೇರಿದಂತೆ ಬಿಜೆಪಿ ಸಂಸದರು ಪ್ರತಿಭಟನೆ ನಡೆಸಿದರು. ದಲಿತ ನಾಯಕನನ್ನು ಅವಮಾನಿಸಿದ್ದಕ್ಕೆ ಕ್ಷಮೆಯಾಚಿಸುವಂತೆ ಬಾಲು ಅವರನ್ನು ಒತ್ತಾಯಿಸಿದರು. ಆದರೆ ಕ್ಷಮೆಯಾಚಿಸಲು ನಿರಾಕರಿಸಿದ ಬಾಲು, ತಮ್ಮ ಮಾತುಗಳನ್ನು ಪುನರುಚ್ಚರಿಸಿದರು. ಈ ವೇಳೆ, ಸ್ಪೀಕರ್ ಓಂ ಬಿರ್ಲಾ ಅವರು ಆಕ್ಷೇಪಾರ್ಹ ಪದವನ್ನು ಕಡತದಿಂದ ತೆಗೆಸಿದರು. ಇದರ ಬೆನ್ನಲ್ಲೇ ಡಿಎಂಕೆ, ಕಾಂಗ್ರೆಸ್ ಮತ್ತು ಎಡಪಕ್ಷಗಳ ಸದಸ್ಯರು ಸಭಾತ್ಯಾಗ ಮಾಡಿದರು.



ಡಿಎಂಕೆ ಸಂಸದರಾದ ಎ.ರಾಜಾ ಮತ್ತು ಟಿ.ಆರ್.ಬಾಲು ಅವರು ಸುದ್ದಿಗಾರರೊಂದಿಗೆ ಮಾತನಾಡಿದರು —ಪಿಟಿಐ ಚಿತ್ರ

'ಅಸಾಂವಿಧಾನಿಕ ಪದ ಬಳಸಿಲ್ಲ'

ಸದನದ ಹೊರಗೆ ಸುದ್ದಿಗಾರರ ಜತೆ ಮಾತನಾಡಿದ ಬಾಲು, 'ಸಂಸತ್ತಿನಲ್ಲಿ ತಮಿಳುನಾಡಿನ ಹಿತಾಸಕ್ತಿಗೆ ವಿರುದ್ಧವಾಗಿ ಮಾತನಾಡಿರುವ ಮುರುಗನ್ ಒಬ್ಬ ದ್ರೋಹಿ' ಎಂದು ದೂರಿದರು.

'ಮುರುಗನ್ ಅವರು ಸಂಸದ ಮತ್ತು ಸಚಿವರಾಗಲು ಅನರ್ಹ ಎಂದು ಹೇಳಿದ್ದೇನೆ. ನಾನು ಬಳಸಿರುವ 'ಅನರ್ಹ' ಎಂಬ ಪದ ಅಸಾಂವಿಧಾನಿಕ ಅಲ್ಲ' ಎಂದಿದ್ದಾರೆ. ಬಾಲು ಅವರು ಮುರುಗನ್ ಅವರ ಸಾಮಾಜಿಕ ಹಿನ್ನೆಲೆ ಬಗ್ಗೆ ಯಾವುದೇ ಹೇಳಿಕೆ ನೀಡಿಲ್ಲ ಎಂದು ಡಿಎಂಕೆಯ ಇನ್ನೊಬ್ಬ ನಾಯಕ ಎ.ರಾಜಾ ಹೇಳಿದರು.

'ಅಪ್ರಸ್ತುತ ಪ್ರಶ್ನೆ ಕೇಳಬೇಡಿ ಎಂದಿದ್ದಕ್ಕೆ ಮುರುಗನ್ ಅವರನ್ನು 'ಅನರ್ಹ' ಎಂದಿರುವುದು ದಲಿತ ಸಚಿವರಿಗೆ ಮಾಡಿದ ಅವಮಾನ' ಎಂದು ಸಚಿವ ಅರ್ಜುನ್ ರಾಮ್ ಮೇಘವಾಲ್ ಪ್ರತಿಕ್ರಿಯಿಸಿದರು.

ಸಂಸತ್ ಅಧಿವೇಶನ ಒಂದು ದಿನ ವಿಸ್ತರಣೆ

ದೇಶದ ಆರ್ಥಿಕ ಪರಿಸ್ಥಿತಿಯು 2014ಕ್ಕೂ ಮೊದಲು ಹೇಗಿತ್ತು, ಆ ಅವಧಿಯ ನಂತರದಲ್ಲಿ ಹೇಗಾಗಿದೆ ಎಂಬುದನ್ನು ಹೋಲಿಸಿ ತೋರಿಸುವ ಶ್ವೇತಪತ್ರವನ್ನು ಮಂಡಿಸಲು ಕೇಂದ್ರ ಸರ್ಕಾರ ತೀರ್ಮಾನಿಸಿರುವ ಕಾರಣ, ಸಂಸತ್ತಿನ ಬಜೆಟ್ ಅಧಿವೇಶನವು ಒಂದು ದಿನದ ಮಟ್ಟಿಗೆ ವಿಸ್ತರಣೆ ಆಗಲಿದೆ. ಅಂದರೆ, ಅಧಿವೇಶನವು ಶನಿವಾರ ಮುಗಿಯಲಿದೆ.

'ಬಜೆಟ್ ಅಧಿವೇಶನವು ಶುಕ್ರವಾರದ ಬದಲಿಗೆ, ಶನಿವಾರ ಕೊನೆಗೊಳ್ಳಲಿದೆ' ಎಂದು ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಶಿ ಹೇಳಿದರು.

ಯುಪಿಎ ಆಡಳಿತ ಅವಧಿಯ ಆರ್ಥಿಕ ಸಂಕಷ್ಟಗಳು ಹಾಗೂ ಅದರ ನಕಾರಾತ್ಮಕ ಪರಿಣಾಮಗಳನ್ನು ಶ್ವೇತಪತ್ರವು ವಿವರಿಸಲಿದೆ ಎಂದು ಮೂಲಗಳು ತಿಳಿಸಿವೆ.

ಪರೀಕ್ಷಾ ಅಕ್ರಮ ತಡೆ ಮಸೂದೆಗೆ ಅಂಗೀಕಾರ

ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಂಬಂಧಿಸಿದ ಅಕ್ರಮ ಪ್ರಕರಣಗಳಲ್ಲಿ ಗರಿಷ್ಠ ಶಿಕ್ಷೆ ವಿಧಿಸುವ ದಿಸೆಯಲ್ಲಿ ರೂಪಿಸಲಾಗಿರುವ ಸಾರ್ವಜನಿಕ ಪರೀಕ್ಷೆ (ಅಕ್ರಮ ತಡೆ) ಮಸೂದೆ– 2024 ಲೋಕಸಭೆಯಲ್ಲಿ ಮಂಗಳವಾರ ಅಂಗೀಕಾರವಾಯಿತು.

ಪರೀಕ್ಷಾ ಅಕ್ರಮಗಳಿಗೆ ಸಂಬಂಧಿಸಿ ದೋಷ ಸಾಬೀತಾದರೆ, ಕನಿಷ್ಠ 10 ವರ್ಷ ಸಜೆ ಮತ್ತು ₹ 1 ಕೋಟಿವರೆಗೆ ದಂಡವಿಧಿಸುವ ಅವಕಾಶವನ್ನು ಈ ಮಸೂದೆ ನೀಡಿದೆ.

ಅರ್ಹತೆ ಹೊಂದಿರುವ ವಿದ್ಯಾರ್ಥಿಗಳು ಮತ್ತು ಅಭ್ಯರ್ಥಿಗಳ ಹಿತಾಸಕ್ತಿ ಕಾಪಾಡುವ ನಿಟ್ಟಿನಲ್ಲಿ ಈ ಮಸೂದೆ ರೂಪಿಸಲಾಗಿದೆ ಎಂದು ಕೇಂದ್ರ ಸಚಿವ ಜಿತೇಂದ್ರ ಸಿಂಗ್ ಅವರು ಲೋಕಸಭೆಯಲ್ಲಿ ಹೇಳಿದರು.

ರಾಜಸ್ಥಾನದ ಶಿಕ್ಷಕರ ನೇಮಕಾತಿ ಪರೀಕ್ಷೆ, ಹರಿಯಾಣದ ಸಾಮಾನ್ಯ ಪ್ರವೇಶ ಪರೀಕ್ಷೆ (ಗ್ರೂಪ್–ಡಿ) ಸೇರಿ ವಿವಿಧ ರಾಜ್ಯಗಳ ಹಲವು ಸ್ಪರ್ಧಾತ್ಮಕ ಪರೀಕ್ಷೆಗಳು ಅಕ್ರಮಗಳ ಕಾರಣಕ್ಕೆ ರದ್ದುಗೊಂಡ ಬಳಿಕ ಕೇಂದ್ರ ಸರ್ಕಾರ ಈ ಕ್ರಮ ಕೈಗೊಂಡಿದೆ.

ಕಾಂಗ್ರೆಸ್ ಆಕ್ಷೇಪ: ಈ ಮಸೂದೆ ಕೇವಲ ಶಿಕ್ಷೆಯ ಕುರಿತು ಮಾತನಾಡುತ್ತದೆಯೇ ಹೊರತು, ಅಕ್ರಮ ತಡೆಯುವ ಕುರಿತ ಯಾವ ಕ್ರಮವನ್ನೂ ಇದರಲ್ಲಿ ಉಲ್ಲೇಖಿಸ ಲಾಗಿಲ್ಲ ಎಂದು ಕಾಂಗ್ರೆಸ್ ಸಂಸದ ಅಧೀರ್ ರಂಜನ್ ಚೌಧರಿ ಹೇಳಿದರು.

ಆರ್‌ಎಸ್‌ಪಿ ಮತ್ತು ಟಿಎಂಸಿ ಪಕ್ಷಗಳ ಸಂಸದರು ಕೂಡಾ ಮಸೂದೆ ಕುರಿತು ಆಕ್ಷೇಪ ವ್ಯಕ್ತಪಡಿಸಿದರು. ಆದರೆ, ವಿರೋಧ ಪಕ್ಷಗಳ ಬಹುತೇಕ ಸಂಸದರು ಮಸೂದೆಯನ್ನು ಬೆಂಬಲಿಸಿದರು.

ಅಜಿತ್ ಪವಾರ್ ಬಣವೇ ನೈಜ ಎನ್‌ಸಿಪಿ: ಆಯೋಗ

ನವದೆಹಲಿ (ಪಿಟಿಐ): ಮಹಾರಾಷ್ಟ್ರದ ಉಪ ಮುಖ್ಯಮಂತ್ರಿ ಅಜಿತ್ ಪವಾರ್ ಅವರ ನೇತೃತ್ವದ ನ್ಯಾಷನಲಿಸ್ಟ್ ಕಾಂಗ್ರೆಸ್ ಪಕ್ಷದ (ಎನ್‌ಸಿಪಿ) ಬಣವನ್ನೇ ನೈಜ ಎನ್‌ಸಿಪಿ ಎಂದು ಚುನಾವಣಾ ಆಯೋಗ ಮಂಗಳವಾರ ಪ್ರಕಟಿಸಿದೆ. ಅಲ್ಲದೇ 'ಗೋಡೆ ಗಡಿಯಾರ' ಚಿಹ್ನೆಯನ್ನೂ ಅದೇ ಬಣಕ್ಕೆ ಹಂಚಿಕೆ ಮಾಡಿದೆ. ಇದರಿಂದ ಪಕ್ಷದ ಸಂಸ್ಥಾಪಕ ಶರದ್ ಪವಾರ್‌ಗೆ ಭಾರಿ ಹಿನ್ನಡೆ ಆದಂತಾಗಿದೆ.

ಪಕ್ಷದ ಸಂವಿಧಾನದ ಗುರಿ, ಉದ್ದೇಶ ಮತ್ತು ಶಾಸಕರ ಸಂಖ್ಯೆಯನ್ನು ಆಧರಿಸಿ ಈ ನಿರ್ಧಾರಕ್ಕೆ ಬರಲಾಗಿದೆ ಎಂದು ಆಯೋಗ ತಿಳಿಸಿದೆ.

ಮುಂಬರುವ ರಾಜ್ಯಸಭಾ ಚುನಾವಣೆಯನ್ನು ಗಮನದಲ್ಲಿರಿಸಿ, ಬುಧವಾರ ಮಧ್ಯಾಹ್ನದ ವೇಳೆಗೆ ತನ್ನ ರಾಜಕೀಯ ಪಕ್ಷಕ್ಕೆ ಸಂಬಂಧಿಸಿದಂತೆ ಮೂರು ಹೆಸರುಗಳನ್ನು ಸೂಚಿಸಲು ಶರದ್ ಪವಾರ್ ನೇತೃತ್ವದ ಬಣಕ್ಕೆ ಚುನಾವಣಾ ಆಯೋಗ ಅವಕಾಶ ಮಾಡಿಕೊಟ್ಟಿದೆ.

ಕಳೆದ ವರ್ಷದ ಜುಲೈನಲ್ಲಿ ಎನ್‌ಸಿಪಿ ಇಬ್ಭಾಗವಾಗಿತ್ತು. ಅಜಿತ್ ಪವಾರ್ ಅವರ ನೇತೃತ್ವದಲ್ಲಿ ಪಕ್ಷದ ಬಹುತೇಕ ಶಾಸಕರು ಏಕನಾಥ ಶಿಂದೆ ನೇತೃತ್ವದ ಬಿಜೆಪಿ–ಶಿವಸೇನಾ ಮೈತ್ರಿ ಸರ್ಕಾರಕ್ಕೆ ಬೆಂಬಲ ಸೂಚಿಸಿದ್ದರು. ಅಜಿತ್ ಪವಾರ್ ಉಪ ಮುಖ್ಯಮಂತ್ರಿಯಾಗಿ ಪ್ರಮಾಣ ಸ್ವೀಕರಿಸಿದ್ದರು. ಆ ಬಳಿಕ ಎನ್‌ಸಿಪಿ ಸಂಸ್ಥಾಪಕ ಶರದ್ ಪವಾರ್ ಮತ್ತು ಉಪ ಮುಖ್ಯಮಂತ್ರಿ ಅಜಿತ್ ಪವಾರ್ ಬಣಗಳ ನಡುವೆ ನಿರಂತರ ವಾಕ್ಸಮರ ನಡೆದಿತ್ತು.

'ಚುನಾವಣಾ ಆಯೋಗದ ನಿರ್ಧಾರವನ್ನು ನಾವು ನಮ್ರತೆಯಿಂದ ಸ್ವೀಕರಿಸುತ್ತೇವೆ' ಎಂದು ಅಜಿತ್ ಪವಾರ್ 'ಎಕ್ಸ್'ನಲ್ಲಿ ಬರೆದುಕೊಂಡಿದ್ದಾರೆ.

ಆಯೋಗದ ನಿರ್ಧಾರಕ್ಕೆ ಬೇಸರ ವ್ಯಕ್ತಪಡಿಸಿರುವ ಶರದ್ ಪವಾರ್ ನೇತೃತ್ವದ ಬಣದ ನಾಯಕ ಅನಿಲ್ ದೇಶಮುಖ್ ಅವರು, 'ಇದು ಪ್ರಜಾಪ್ರಭುತ್ವದ ಕೊಲೆ. ಇದು ನಡೆದಿರುವುದು ದುರದೃಷ್ಟಕರ' ಎಂದು ಪ್ರತಿಕ್ರಿಯಿಸಿದ್ದಾರೆ.

ಸುಪ್ರೀಂ ಮೊರೆ: 'ಚುನಾವಣಾ ಆಯೋಗದ ನಿರ್ಧಾರವನ್ನು 48 ಗಂಟೆಗಳಲ್ಲಿ ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸುತ್ತೇವೆ. ಅಲ್ಲದೆ ಆಯೋಗಕ್ಕೆ ಬುಧವಾರ ಮೂರು ಹೆಸರು ಮತ್ತು ಚಿಹ್ನೆಗಳನ್ನು ಸಲ್ಲಿಸುತ್ತೇವೆ' ಎಂದು ಶರದ್ ಪವಾರ್ ಬಣದ ನಾಯಕಿ, ಸಂಸದೆ ಸುಪ್ರಿಯಾ ಸುಳೆ ಅವರು ತಿಳಿಸಿದ್ದಾರೆ.

ಪಟಾಕಿ ಕಾರ್ಖಾನೆಯಲ್ಲಿ ಸ್ಫೋಟ: 11 ಸಾವು

ಭೋಪಾಲ್/ಹರ್ದಾ (ಪಿಟಿಐ): ಮಧ್ಯಪ್ರದೇಶದ ಹರ್ದಾ ಪಟ್ಟಣದ ಪಟಾಕಿ ಕಾರ್ಖಾನೆಯಲ್ಲಿ ಮಂಗಳವಾರ ಸಂಭವಿಸಿದ ಸ್ಫೋಟದಲ್ಲಿ 11 ಜನರು ಮೃತಪಟ್ಟಿದ್ದು, 174 ಮಂದಿ ಗಾಯಗೊಂಡಿದ್ದಾರೆ.

ರಾಜಧಾನಿ ಭೋಪಾಲ್‌ನಿಂದ ಸುಮಾರು 150 ಕಿ.ಮೀ ದೂರದಲ್ಲಿ ಹರ್ದಾ ಪಟ್ಟಣ ಇದೆ. ಇಲ್ಲಿನ ಹೊರವಲಯದ ಮಗರ್ಧ ರಸ್ತೆಯಲ್ಲಿರುವ ಬೈರಾಗರ್ ಪ್ರದೇಶದ ಕಾರ್ಖಾನೆಯಲ್ಲಿ ಈ ದುರಂತ ಸಂಭವಿಸಿದೆ.

ಎಸ್‌ಸಿ, ಎಸ್‌ಟಿ ಉಪ ವರ್ಗೀಕರಣದ ಅಧಿಕಾರ

'ಸುಪ್ರೀಂ' ವಿಚಾರಣೆ ಆರಂಭ

ನವದೆಹಲಿ (ಪಿಟಿಐ): ಶಿಕ್ಷಣ ಮತ್ತು ಸರ್ಕಾರಿ ಉದ್ಯೋಗಗಳಲ್ಲಿ ಮೀಸಲಾತಿ ನೀಡಲು ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಪಂಗಡಗಳಲ್ಲಿ ಉಪ ವರ್ಗೀಕರಣ ಮಾಡುವ ಅಧಿಕಾರವನ್ನು ರಾಜ್ಯ ಸರ್ಕಾರಗಳು ಹೊಂದಿವೆಯೇ ಎಂಬ ಕಾನೂನಿನ ಪ್ರಶ್ನೆಯ ಬಗ್ಗೆ ಸುಪ್ರೀಂ ಕೋರ್ಟ್ ಪರಿಶೀಲನೆ ಆರಂಭಿಸಿದೆ.

ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಡಿ.ವೈ. ಚಂದ್ರಚೂಡ್ ನೇತೃತ್ವದಲ್ಲಿ ಏಳು ಮಂದಿ ನ್ಯಾಯಮೂರ್ತಿಗಳ ಸಂವಿಧಾನ ಪೀಠವು ಈ ಕಾನೂನು ಪ್ರಶ್ನೆಯ ಬಗ್ಗೆ ವಿಚಾರಣೆ ಶುರು ಮಾಡಿದೆ.

'ಪಂಜಾಬ್ ಪರಿಶಿಷ್ಟ ಜಾತಿಗಳ ಮತ್ತು ಹಿಂದುಳಿದ ವರ್ಗಗಳ (ಸೇವಾ ಮೀಸಲಾತಿ) ಕಾಯ್ದೆ 2006'ರ ಸಿಂಧುತ್ವವನ್ನು ಕೂಡ ಈ ಪೀಠವು ಪರಿಶೀಲನೆಗೆ ಒಳಪಡಿಸಲಿದೆ. ನೇರ ನೇಮಕಾತಿಗಳಲ್ಲಿ ಪರಿಶಿಷ್ಟ ಜಾತಿಗಳಿಗೆ ಮೀಸಲಾಗಿರುವ ಕೋಟಾದಲ್ಲಿ ಶೇಕಡ 50ರಷ್ಟು ಸ್ಥಾನಗಳನ್ನು ಭರ್ತಿ ಮಾಡುವಾಗ 'ವಾಲ್ಮೀಕಿ' ಮತ್ತು 'ಮಜಾಬಿ ಸಿಖ್' ಸಮುದಾಯದವರಿಗೆ ಮೊದಲ ಆದ್ಯತೆ ನೀಡಬೇಕು ಎಂದು ಈ ಕಾಯ್ದೆಯು ಹೇಳುತ್ತದೆ.

ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ, ವಿಕ್ರಮ್ ನಾಥ್, ಬೇಲಾ ಎಂ. ತ್ರಿವೇದಿ, ಪಂಕಜ್ ಮಿತ್ತಲ್, ಮನೋಜ್ ಮಿಶ್ರಾ ಮತ್ತು ಸತೀಶ್ ಚಂದ್ರ ಮಿಶ್ರಾ ಅವರು ಕೂಡ ಈ ಪೀಠದಲ್ಲಿ ಇದ್ದಾರೆ. ಈ ಪೀಠವು ಒಟ್ಟು 23 ಅರ್ಜಿಗಳ ವಿಚಾರಣೆ ನಡೆಸಲಿದೆ. 2010ರಲ್ಲಿ ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್ ನೀಡಿದ್ದ ಆದೇಶವನ್ನು ಪ್ರಶ್ನಿಸಿ ಪಂಜಾಬ್ ಸರ್ಕಾರ ಸಲ್ಲಿಸಿರುವ ಅರ್ಜಿಯೂ ಇವುಗಳಲ್ಲಿ ಸೇರಿದೆ.

ಪಂಜಾಬ್ ಸರ್ಕಾರ ರೂಪಿಸಿದ್ದ ಕಾಯ್ದೆಯ ಸೆಕ್ಷನ್ 4(5)ಅನ್ನು ಹೈಕೋರ್ಟ್ ರದ್ದುಪಡಿಸಿತ್ತು. ಇದು 2004ರಲ್ಲಿ ಸುಪ್ರೀಂ ಕೋರ್ಟ್‌ನ ಸಂವಿಧಾನ ಪೀಠವು ಇ.ವಿ. ಚಿನ್ನಯ್ಯ ಮತ್ತು ಆಂಧ್ರಪ್ರದೇಶ ನಡುವಿನ ಪ್ರಕರಣದಲ್ಲಿ ನೀಡಿದ್ದ ತೀರ್ಪಿಗೆ ವಿರುದ್ಧವಾಗಿದೆ ಎಂದು ಹೇಳಿತ್ತು. ಪರಿಶಿಷ್ಟ ಜಾತಿಗಳ ಉಪ ವರ್ಗೀಕರಣವು ಸಂವಿಧಾನದ 14ನೆಯ ವಿಧಿಯನ್ನು ಉಲ್ಲಂಘಿಸುತ್ತದೆ ಎಂದು ಚಿನ್ನಯ್ಯ ಪ್ರಕರಣದ ತೀರ್ಪಿನಲ್ಲಿ ಹೇಳಲಾಗಿದೆ.

ಪರಿಶಿಷ್ಟ ಜಾತಿಗಳು ಎಂದು ಪರಿಗಣಿತವಾಗಿರುವ ಜಾತಿಗಳನ್ನು, ಪರಿಶಿಷ್ಟ ಜಾತಿಗಳ ಪಟ್ಟಿಯಿಂದ ತೆಗೆಯುವ ಅಧಿಕಾರ ಇರುವುದು ಸಂಸತ್ತಿಗೆ ಮಾತ್ರವೇ ವಿನಾ ವಿಧಾನಸಭೆಗಳಿಗೆ ಇಲ್ಲ ಎಂದು 2004ರ ತೀರ್ಪಿನಲ್ಲಿ ಹೇಳಲಾಗಿದೆ.

2004ರ ತೀರ್ಪು ತನಗೆ ಅನ್ವಯಿಸುವುದಿಲ್ಲ ಎಂದು ಕೂಡ ಪಂಜಾಬ್ ಸರ್ಕಾರವು ಸುಪ್ರೀಂ ಕೋರ್ಟ್‌ನಲ್ಲಿ ಹೇಳಿತ್ತು. ಪಂಜಾಬ್ ಸರ್ಕಾರದ ಅರ್ಜಿಯ ವಿಚಾರಣೆ ನಡೆಸಿದ್ದ ಸುಪ್ರೀಂ ಕೋರ್ಟ್‌ನ ಐವರು ನ್ಯಾಯಮೂರ್ತಿಗಳ ಪೀಠವು, ಚಿನ್ನಯ್ಯ ತೀರ್ಪಿನಲ್ಲಿ ಹೇಳಿದ್ದಕ್ಕೆ ಭಿನ್ನವಾದ ನಿಲುವು ತಾಳಿತು. ಇಡೀ ವಿಚಾರವನ್ನು ಏಳು ಅಥವಾ ಅದಕ್ಕೂ ಹೆಚ್ಚಿನ ಸಂಖ್ಯೆಯ ನ್ಯಾಯಮೂರ್ತಿಗಳನ್ನು ಹೊಂದಿರುವ ವಿಸ್ತೃತವಾದ ನ್ಯಾಯಪೀಠವು ವಿಚಾರಣೆ ನಡೆಸಿ, ಇನ್ನಷ್ಟು ಅಧಿಕಾರಯುತವಾದ ತೀರ್ಪು ನೀಡಬೇಕು ಎಂಬ ಅಭಿಪ್ರಾಯ ವ್ಯಕ್ತಪಡಿಸಿತ್ತು.

'ಔರಂಗಜೇಬ ದೇಗುಲ ನೆಲಸಮಗೊಳಿಸಿದ್ದ'

ಮಥುರಾ ದೇಗುಲ: ಆರ್‌ಟಿಐ ಅಡಿ ಕೇಳಿದ್ದ ಪ್ರಶ್ನೆಗೆ ಎಎಸ್‌ಐ ನೀಡಿರುವ ಉತ್ತರದಲ್ಲಿ ಉಲ್ಲೇಖ

ಪ್ರಜಾವಾಣಿ ವಾರ್ತೆ

ಲಖನೌ: 'ಕೃಷ್ಣ ಜನ್ಮಭೂಮಿ ಜಾಗದಲ್ಲಿದ್ದ ಹಿಂದೂ ದೇವಸ್ಥಾನವನ್ನು ಮೊಘಲರ ದೊರೆ ಔರಂಗಜೇಬ ಧ್ವಂಸಗೊಳಿಸಿದ್ದ ಮತ್ತು ಆ ಸ್ಥಳದಲ್ಲಿ ಮಸೀದಿ ನಿರ್ಮಿಸಲಾಗಿದೆ' ಎಂದು ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ (ಎಎಸ್‌ಐ) ತಿಳಿಸಿದೆ.

ಉತ್ತರ ಪ್ರದೇಶದ ಮೈನ್‌ಪುರಿ ಜಿಲ್ಲೆಯ ಅಜಯ್ ಕುಮಾರ್ ಎಂಬುವವರು ಮಾಹಿತಿ ಹಕ್ಕು ಕಾಯ್ದೆ (ಆರ್‌ಟಿಐ) ಅಡಿ ಸಲ್ಲಿಸಿದ್ದ ಅರ್ಜಿಗೆ ನೀಡಿರುವ ಉತ್ತರದಲ್ಲಿ ಎಎಸ್‌ಐ, ಈ ಮಾಹಿತಿ ಒದಗಿಸಿದೆ.

ಎಎಸ್‌ಐ ನೀಡಿರುವ ಈ ಮಾಹಿತಿಯು, ಶ್ರೀಕೃಷ್ಣ ಜನ್ಮಭೂಮಿ–ಶಾಹಿ ಈದ್ಗಾ ಮಸೀದಿ ಪ್ರಕರಣದಲ್ಲಿ ಪ್ರಮುಖ ಸಾಕ್ಷ್ಯವಾಗಬಹುದು ಎಂದು ವಿಶ್ಲೇಷಿಸಲಾಗುತ್ತಿದೆ.

ಬ್ರಿಟಿಷ್ ಆಳ್ವಿಕೆ ವೇಳೆ, 1920ರಲ್ಲಿ ಹೊರಡಿಸಿದ್ದ ಗೆಜೆಟ್ ಅಧಿಸೂಚನೆಯನ್ನು ಎಎಸ್‌ಐ ತಾನು ನೀಡಿದ ಉತ್ತರದಲ್ಲಿ ಉಲ್ಲೇಖಿಸಿದೆ. 'ಮಸೀದಿಯೊಂದನ್ನು ನಿರ್ಮಿಸುವುದಕ್ಕಾಗಿ ಶ್ರೀಕೃಷ್ಣ ಜನ್ಮಭೂಮಿ ದೇವಸ್ಥಾನ ಸಂಕೀರ್ಣದ ಭಾಗವಾಗಿತ್ತು ಎನ್ನಲಾದ ಕೇಶವದೇವ ದೇವಸ್ಥಾನವನ್ನು ಧ್ವಂಸಗೊಳಿಸಲಾಗಿತ್ತು' ಎಂದು ತಿಳಿಸಿದೆ.


ಹೈಕೋರ್ಟ್‌ಗೆ ಸಲ್ಲಿಕೆ: 'ಶ್ರೀಕೃಷ್ಣ ಜನ್ಮಭೂಮಿ–ಶಾಹಿ ಈದ್ಗಾ ಮಸೀದಿ ಪ್ರಕರಣದ ವಿಚಾರಣೆ ಅಲಹಾಬಾದ್ ಹೈಕೋರ್ಟ್‌ನಲ್ಲಿ ಫೆ.22ರಂದು ನಡೆಯಲಿದೆ. ಅಜಯ್ ಕುಮಾರ್ ಅವರಿಗೆ ಎಎಸ್‌ಐ ನೀಡಿರುವ ಈ ಉತ್ತರವನ್ನು ಸಾಕ್ಷ್ಯವಾಗಿ ಹೈಕೋರ್ಟ್‌ಗೆ ಸಲ್ಲಿಸಲಾಗುವುದು' ಎಂದು ಈ ಪ್ರಕರಣದಲ್ಲಿ ಹಿಂದೂ ಅರ್ಜಿದಾರರ ಪರ ವಕೀಲರು ಹೇಳಿದ್ದಾರೆ.

ಗ್ಯಾನವಾಪಿ: ವಾದ ಆಲಿಸಿದ ಹೈಕೋರ್ಟ್

ಪ್ರಯಾಗ್‌ರಾಜ್ (ಪಿಟಿಐ): ಗ್ಯಾನವಾಪಿ ಮಸೀದಿಯ ನೆಲಮಾಳಿಗೆಯಲ್ಲಿ ಪೂಜೆಗೆ ಅವಕಾಶ ನೀಡಿದ್ದ ಜಿಲ್ಲಾ ನ್ಯಾಯಾಲಯದ ಆದೇಶ ಪ್ರಶ್ನಿಸಿ ಮಸೀದಿ ಸಮಿತಿ ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ಅಲಹಾಬಾದ್ ಹೈಕೋರ್ಟ್ ಮಂಗಳವಾರ ಆರಂಭಿಸಿತು.

ಹಿಂದೂ ಮತ್ತು ಮುಸ್ಲಿಂ ಪರ ವಕೀಲರ ವಾದ ಆಲಿಸಿದ ನ್ಯಾಯಮೂರ್ತಿ ರೋಹಿತ್ ರಂಜನ್ ಅಗರವಾಲ್ ಅವರು ವಿಚಾರಣೆ ಬುಧವಾರವೂ ಮುಂದುವರಿಯಲಿದೆ ಎಂದರು.

ಮಸೀದಿಯ ನೆಲಮಾಳಿಗೆಯಲ್ಲಿ ಪೂಜೆಗೆ ಅವಕಾಶ ಕಲ್ಪಿಸಿ ವಾರಾಣಸಿ ಜಿಲ್ಲಾ ನ್ಯಾಯಾಲಯ ಜನವರಿ 31 ರಂದು ಆದೇಶ ಹೊರಡಿಸಿತ್ತು. ಮಸೀದಿಯ ನಿರ್ವಹಣೆ ನೋಡಿಕೊಳ್ಳುತ್ತಿರುವ ಅಂಜುಮಾನ್ ಇಂತೆಜಾಮಿಯಾ ಸಮಿತಿಯು ಈ ಆದೇಶ ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಿದೆ.



ಮಸೀದಿ ಸಮಿತಿ ಪರ ಹಾಜರಿದ್ದ ಹಿರಿಯ ವಕೀಲ ಎಸ್‌ಎಫ್‌ಎ ನಖ್ವಿ ಅವರು, 'ಅರ್ಜಿಯಲ್ಲಿ ಕೋರಿದ್ದ ಅಂತಿಮ ಪರಿಹಾರವನ್ನು ಆರಂಭದಲ್ಲೇ ಕೊಟ್ಟಿದ್ದಾರೆ. ಆದ್ದರಿಂದ ಈ ಆದೇಶವನ್ನು ಒಪ್ಪಲಾಗದು' ಎಂದು ವಾದಿಸಿದರು.

ಜಿಲ್ಲಾ ನ್ಯಾಯಾಲಯವು ಈ ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಾಧೀಶರೊಬ್ಬರು ನಿವೃತ್ತಿಯಾಗುವ ದಿನದಂದೇ, 'ತರಾತುರಿಯಲ್ಲಿ' ಆದೇಶ ಹೊರಡಿಸಿದ್ದಾರೆ ಎಂದು ಪೀಠಕ್ಕೆ ತಿಳಿಸಿದರು. ವಾರಾಣಸಿ ಜಿಲ್ಲಾ ನ್ಯಾಯಾಧೀಶ ಅಜಯ್ ಕೃಷ್ಣ ವಿಶ್ವೇಶ ಅವರು ಜ.31 ರಂದು ಸೇವೆಯಿಂದ ನಿವೃತ್ತಿಯಾಗಿದ್ದರು. ಹಿಂದೂ ಪರ ವಕೀಲರಾದ ವಿಷ್ಣು ಶಂಕರ್ ಜೈನ್, 'ಆ ಸ್ಥಳದಲ್ಲಿ ಹಿಂದಿನಿಂದಲೂ ಪೂಜೆ ನಡೆಸಲಾಗುತ್ತಿತ್ತು. 1993 ರಲ್ಲಿ ಪೂಜೆ ನಿಲ್ಲಿಸಲಾಗಿತ್ತು. ಈಗ ಪೂಜೆಗೆ ಅವಕಾಶ ನೀಡಿರುವುದರಿಂದ ಮುಸ್ಲಿಮರಿಗೆ ತೊಂದರೆ ಉಂಟಾಗಿಲ್ಲ' ಎಂದು ವಾದಿಸಿದರು.

ನೆಲಮಾಳಿಗೆಗಳ ಸಮೀಕ್ಷೆ– ಅರ್ಜಿ ವಿಚಾರಣೆ 15ಕ್ಕೆ

ವಾರಾಣಸಿ(ಪಿಟಿಐ): ಗ್ಯಾನವಾಪಿ ಮಸೀದಿಯಲ್ಲಿ, ಬಂದ್ ಮಾಡಲಾಗಿರುವ ಎಲ್ಲ ನೆಲಮಾಳಿಗೆಗಳ ಕುರಿತು ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ(ಎಎಸ್‌ಐ) ಯಿಂದ ಸಮೀಕ್ಷೆ ನಡೆಸುವಂತೆ ಕೋರಿ ಸಲ್ಲಿಸಲಾಗಿರುವ ಅರ್ಜಿಯ ವಿಚಾರಣೆಯನ್ನು ಫೆ. 15ರಂದು ನಡೆಸುವುದಾಗಿ ಇಲ್ಲಿನ ನ್ಯಾಯಾಲಯ ಮಂಗಳವಾರ ಹೇಳಿದೆ.

'ಅರ್ಜಿಯ ಮುಂದಿನ ವಿಚಾರಣೆಯನ್ನು ಫೆ.15ರಂದು ನಿಗದಿ ಮಾಡಿ ಹಂಗಾಮಿ ಜಿಲ್ಲಾ ನ್ಯಾಯಾಧೀಶ ಅನಿಲ್ ಕುಮಾರ್ ಆದೇಶಿಸಿದ್ದಾರೆ' ಎಂದು ಅರ್ಜಿದಾರರ ಪರ ವಕೀಲ ಮದನಮೋಹನ್ ಯಾದವ್ ಅವರು ತಿಳಿಸಿದ್ದಾರೆ.

ಬೆಂಗಳೂರಿಗೆ ಬಾಂಗ್ಲಾ ಪ್ರಜೆಗಳ ಕಳ್ಳಸಾಗಾಟ: ಆರೋಪ ಪಟ್ಟಿ ಸಲ್ಲಿಕೆ

ಪ್ರಜಾವಾಣಿ ವಾರ್ತೆ

ಗುವಾಹಟಿ: ಬಾಂಗ್ಲಾದೇಶದ ಪ್ರಜೆಗಳನ್ನು ಅಕ್ರಮವಾಗಿ ಬೆಂಗಳೂರಿಗೆ ಕರೆತರುವ ಮತ್ತು ರೋಹಿಂಗ್ಯಾ ಸಮುದಾಯದವರಿಗೆ ದೇಶದ ವಿವಿಧ ಭಾಗಗಳಲ್ಲಿ ನೆಲೆಸಲು ನಕಲಿ ದಾಖಲೆಗಳನ್ನೂ ಸೃಷ್ಟಿಸಿ ಕೊಡುವ ಅಂತರರಾಷ್ಟ್ರೀಯ ಜಾಲವೊಂದು ಸಕ್ರಿಯವಾಗಿದೆ ಎಂದು ರಾಷ್ಟ್ರೀಯ ತನಿಖಾ ಸಂಸ್ಥೆಯು (ಎನ್‌ಐಎ) ಎರಡು ನ್ಯಾಯಾಲಯಗಳಿಗೆ ಸೋಮವಾರ ಸಲ್ಲಿಸಿರುವ ಎರಡು ಪ್ರತ್ಯೇಕ ಆರೋಪಪಟ್ಟಿಯಲ್ಲಿ ತಿಳಿಸಿದೆ.

ಭಾರತದಲ್ಲಿ ಅಕ್ರಮವಾಗಿ ನೆಲೆಸಿದ ಆರೋಪ ಎದುರಿಸುತ್ತಿರುವ 36 ಮಂದಿ ವಿರುದ್ಧ ಈ ಆರೋಪಪಟ್ಟಿ ಸಲ್ಲಿಸಲಾಗಿದೆ. ಮ್ಯಾನ್ಮಾರ್ ಮೂಲದ ರೋಹಿಂಗ್ಯಾದ ಒಬ್ಬ ನಿರಾಶ್ರಿತ ಹಾಗೂ ಬಾಂಗ್ಲಾದೇಶದ 16 ಪ್ರಜೆಗಳು ಇದರಲ್ಲಿ ಸೇರಿದ್ದಾರೆ.

ಪಶ್ಚಿಮ ಬಂಗಾಳಕ್ಕೆ ಹೊಂದಿಕೊಂಡಿರುವ ಬೆನಪೋಲ್ ಮತ್ತು ಜಶೋರ್ ಬಳಿ ಹಾಗೂ ತ್ರಿಪುರಾದ ಅಖೌರಾ ಸಮೀಪ ಬಾಂಗ್ಲಾ–ಭಾರತ ಗಡಿಯ ಮೂಲಕ ಇವರನ್ನು ಅಕ್ರಮವಾಗಿ ಭಾರತದೊಳಗೆ ಕರೆತರಲಾಗಿತ್ತು. ಗಡಿಯ ಎರಡೂ ಭಾಗಗಳಲ್ಲಿರುವ ದಲ್ಲಾಳಿಗಳು ಇದಕ್ಕೆ ನೆರವಾಗಿದ್ದರು ಎಂದು ಎನ್‌ಐಎ ಮಂಗಳವಾರ ಹೊರಡಿಸಿದ ಪ್ರಕಟಣೆಯಲ್ಲಿ ಹೇಳಿದೆ. ಒಳ್ಳೆಯ ಉದ್ಯೋಗ ಮತ್ತು ಹೆಚ್ಚಿನ ವೇತನದ ಭರವಸೆ ನೀಡಿ ಸಂತ್ರಸ್ತರನ್ನು ಭಾರತಕ್ಕೆ ಕರೆತರಲಾಗಿದೆ.

'ಸಂತ್ರಸ್ತರು ಗಡಿ ದಾಟಿ ಭಾರತಕ್ಕೆ ಬರಲು ದಲ್ಲಾಳಿಗಳಿಗೆ ಹಣ ಪಾವತಿಸಿದ್ದರು. ಬೆಂಗಳೂರಿಗೆ ಕರೆತಂದ ಬಳಿಕ ಅವರನ್ನು ಕಡಿಮೆ ಕೂಲಿಯ ಕೆಲಸಕ್ಕೆ ಬಲವಂತದಿಂದ ತಳ್ಳಲಾಗುತ್ತಿತ್ತು. ಪ್ರತಿಭಟಿಸಿದವರನ್ನು ಅಕ್ರಮ ವಲಸಿಗರೆಂದು ಹೇಳಿ ಜೈಲಿಗೆ ಕಳುಹಿಸುವ ಬೆದರಿಕೆಯನ್ನು ಕಳ್ಳಸಾಗಣೆದಾರರು ಹಾಕುತ್ತಿದ್ದರು' ಎಂದು ತಿಳಿಸಿದೆ.

ಅಸ್ಸಾಂನಲ್ಲಿ ಕಳೆದ ವರ್ಷ ದಾಖಲಾಗಿದ್ದ ಮಾನವ ಕಳ್ಳಸಾಗಾಟ ಪ್ರಕರಣಕ್ಕೆ ಸಂಬಂಧಿಸಿದಂತೆ ಎನ್‌ಐಎ ಮತ್ತೊಂದು ಆರೋಪಪಟ್ಟಿಯನ್ನೂ ಸಲ್ಲಿಸಿದೆ.

'ನಾಯಿಗೆ ತಿನಿಸಲು ಮಾಲೀಕನಿಗೆ ಬಿಸ್ಕೆಟ್ ನೀಡಿದ್ದೆ'

ಗುಮ್ಲಾ (ಜಾರ್ಖಂಡ್) (ಪಿಟಿಐ): ಭಾರತ ಜೋಡೊ ನ್ಯಾಯ ಯಾತ್ರೆ ವೇಳೆ, ನಾಯಿಗೆ ತಿನಿಸಲು ವ್ಯಕ್ತಿಯೊಬ್ಬರಿಗೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಬಿಸ್ಕೆಟ್ ನೀಡಿದ ದೃಶ್ಯವಿರುವ ವಿಡಿಯೊ ವ್ಯಾಪಕವಾಗಿ ಹರಿದಾಡಿದೆ.

ಇದರ ಬೆನ್ನಲ್ಲೇ, ರಾಹುಲ್ ಗಾಂಧಿ ಅವರು ಮಂಗಳವಾರ ಸ್ಪಷ್ಟೀಕರಣ ನೀಡಿದ್ದು, 'ನಾನು ಬಿಸ್ಕೆಟ್ ತಿನಿಸಲು ಮುಂದಾದೆ. ಆದರೆ, ನಾಯಿ ತಿನ್ನಲಿಲ್ಲ. ಆಗ, ನೀವೇ ತಿನಿಸಿ ಎಂದು ಹೇಳಿ ಅದರ ಮಾಲೀಕನಿಗೆ ಬಿಸ್ಕೆಟ್ ನೀಡಿದೆಯಷ್ಟೆ' ಎಂದು ಹೇಳಿದ್ದಾರೆ.

ಈ ವಿಡಿಯೊ ಹಂಚಿಕೊಂಡಿದ್ದ ಬಿಜೆಪಿ ನಾಯಕರು, 'ರಾಹುಲ್ ಗಾಂಧಿ ಅವರು ತಮ್ಮ ಪಕ್ಷದ ಕಾರ್ಯಕರ್ತರನ್ನು ಕೂಡ ಇದೇ ರೀತಿ ನಡೆಸಿಕೊಂಡಿದ್ದರು' ಎಂದು ಛೇಡಿಸಿದ್ದರು. ಈ ಹಿನ್ನೆಲೆಯಲ್ಲಿ ರಾಹುಲ್ ಗಾಂಧಿ ಈ ಸ್ಪಷ್ಟನೆ ನೀಡಿದ್ದಾರೆ.

ಸಚಿವೆ ಆತಿಶಿ ಆರೋಪದ ವಿರುದ್ಧ ಕಾನೂನು ಕ್ರಮ; ತನಿಖಾ ಸಂಸ್ಥೆ ಎಚ್ಚರಿಕೆ

ಕೇಜ್ರಿವಾಲ್ ಆಪ್ತರ ಮನೆ ಮೇಲೆ ಇ.ಡಿ ದಾಳಿ

ನವದೆಹಲಿ (ಪಿಟಿಐ): ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರ ಆಪ್ತ ಸಹಾಯಕ ಬಿಭವ್ ಕುಮಾರ್ ಮತ್ತು ಎಎಪಿಯ ಹಲವು ನಾಯಕರಿಗೆ ಸೇರಿದ ರಾಜಧಾನಿಯಲ್ಲಿನ ಸ್ಥಳಗಳ ಮೇಲೆ ಜಾರಿ ನಿರ್ದೇಶನಾಲಯ (ಇ.ಡಿ) ಮಂಗಳವಾರ ದಾಳಿ ನಡೆಸಿದೆ.

ಬಿಭವ್ ಕುಮಾರ್ ಅವರ ನಿವಾಸ, ದೆಹಲಿ ಜಲ ಮಂಡಳಿ (ಡಿಜೆಬಿ) ಮಾಜಿ ಸದಸ್ಯ ಶಲಭ್ ಕುಮಾರ್, ರಾಜ್ಯಸಭೆ ಸದಸ್ಯ ಮತ್ತು ಪಕ್ಷದ ರಾಷ್ಟ್ರೀಯ ಖಜಾಂಚಿ ಎನ್.ಡಿ. ಗುಪ್ತಾ ಅವರ ಕಚೇರಿ, ಎಎಪಿ ಜತೆಗೆ ನಂಟಿರುವ ಚಾರ್ಟರ್ಡ್ ಅಕೌಂಟೆಂಟ್ ಪಂಕಜ್ ಮಂಗಲ್ ಅವರ ಸಂಸ್ಥೆಯ ಅಧಿಕಾರಿಗಳಿಗೆ ಸೇರಿದ 10ರಿಂದ 12 ಸ್ಥಳಗಳಲ್ಲಿ ಇ.ಡಿ ಶೋಧ ನಡೆಸಿದೆ ಎಂದು ಅಧಿಕೃತ ಮೂಲಗಳು ತಿಳಿಸಿವೆ.

ಡಿಜೆಬಿ ಕಾಮಗಾರಿ ಗುತ್ತಿಗೆ ನೀಡುವಾಗ ಲಂಚ ಪಡೆದು ಅದನ್ನು ಎಎಪಿಯ ಚುನಾವಣಾ ನಿಧಿಗೆ ವರ್ಗಾಯಿಸಿರುವ ಆರೋಪ ಪ್ರಕರಣದ ತನಿಖೆಯ ಭಾಗವಾಗಿ ಈ ದಾಳಿ ನಡೆದಿದೆ. ಜ.31ರಂದು ಡಿಜೆಬಿಯ ನಿವೃತ್ತ ಮುಖ್ಯ ಎಂಜಿನಿಯರ್ ಜಗದೀಶ್ ಕುಮಾರ್ ಅರೋರಾ ಮತ್ತು ಗುತ್ತಿಗೆದಾರ ಅನಿಲ್ ಕುಮಾರ್ ಅಗರ್‌ವಾಲ್ ಅವರನ್ನು ಇ.ಡಿ ಬಂಧಿಸಿತ್ತು. ಎನ್‌ಕೆಜಿ ಇನ್‌ಫ್ರಾಸ್ಟ್ರಕ್ಚರ್ ಲಿಮಿಟೆಡ್ ಕಂಪನಿಗೆ ಅರ್ಹತೆ ಇಲ್ಲದಿದ್ದರೂ ₹38 ಕೋಟಿ ವೆಚ್ಚದ ಕಾಮಗಾರಿಯ ಗುತ್ತಿಗೆ ನೀಡಲಾಗಿದೆ ಎಂದು ಸಿಬಿಐ ಎಫ್‌ಐಆರ್‌ನಲ್ಲಿ ಆರೋಪಿಸಿದೆ.

ಇ.ಡಿ ಮೂಲಗಳ ಪ್ರಕಾರ, ಎನ್‌ಕೆಜಿ ಇನ್‌ಫ್ರಾಸ್ಟ್ರಕ್ಚರ್ ಲಿಮಿಟೆಡ್ ನಕಲಿ ಮತ್ತು ಸುಳ್ಳು ದಾಖಲೆ ಸಲ್ಲಿಸಿ ಬಿಡ್ ಪಡೆದಿದೆ. ಟೆಂಡರ್ ಮೊತ್ತದಲ್ಲಿ ₹17 ಕೋಟಿ ಮಾತ್ರ ಖರ್ಚು ಮಾಡಿ, ಬಾಕಿ ಹಣ ಕಬಳಿಸಲಾಗಿದೆ. ಅರೋರಾ, ಲಂಚವನ್ನು ನಗದು ಮತ್ತು ಬ್ಯಾಂಕ್ ಖಾತೆಯ ಮೂಲಕ ಪಡೆದು, ಬಿಭವ್, ಶಲಭ್ ಕುಮಾರ್, ಪಂಕಜ್ ಮಂಗಲ್ ಅವರಿಗೆ ಮತ್ತು ಎಎಪಿಯ ಚುನಾವಣಾ ನಿಧಿಗೆ ವರ್ಗಾಯಿಸಿರುವುದು ತನಿಖೆಯಲ್ಲಿ ಕಂಡುಬಂದಿದೆ.

ಇ.ಡಿ ವಿರುದ್ಧ ಆತಿಶಿ ಗಂಭೀರ ಆರೋಪ

ದೆಹಲಿ ಅಬಕಾರಿ ನೀತಿಯ ತನಿಖೆ ಸೇರಿ ಕೆಲವು ಪ್ರಕರಣಗಳಲ್ಲಿ ಸಾಕ್ಷಿಗಳ ಹೇಳಿಕೆಗಳ ಧ್ವನಿ ಮುದ್ರಣದ ತುಣುಕುಗಳನ್ನು ಇ.ಡಿ ಅಳಿಸಿಹಾಕಿದೆ ಎಂದು ಎಎಪಿ ನಾಯಕಿ, ದೆಹಲಿ ಸಚಿವೆ ಆತಿಶಿ ಅವರು ಮಂಗಳವಾರ ಆರೋಪ ಮಾಡಿದ್ದಾರೆ.

ಇ.ಡಿ ನ್ಯಾಯಾಲಯಕ್ಕೆ ಸಲ್ಲಿಸಿರುವ ದೃಶ್ಯಾವಳಿಯಲ್ಲಿ ಆಡಿಯೊ ಇಲ್ಲ ಎಂದು ಹೇಳಿರುವ ಸಚಿವೆ, ನ್ಯಾಯಾಲಯ ಮತ್ತು ದೇಶದ ಮುಂದೆ ಸಾಕ್ಷ್ಯಗಳನ್ನು ಹಾಜರುಪಡಿಸಲಿ ಎಂದು ತನಿಖಾ ಸಂಸ್ಥೆಗೆ ಸವಾಲು ಹಾಕಿದರು.

ಆರೋಪ ತಳ್ಳಿಹಾಕಿದ ಇ.ಡಿ: ಆತಿಶಿ ಅವರ ಆರೋಪವನ್ನು ಜಾರಿ ನಿರ್ದೇಶನಾಲಯ ಮಂಗಳವಾರ ತಳ್ಳಿಹಾಕಿದೆ.

ಸಚಿವೆಯ ಆರೋಪಗಳು ಸುಳ್ಳು, ಆಧಾರರಹಿತ ಮತ್ತು ದುರುದ್ದೇಶ ಪೂರಿತವಾಗಿವೆ. ಸಚಿವೆಯ ವಿರುದ್ಧ ಕಾನೂನು ಕ್ರಮಕ್ಕೆ ಚಿಂತನೆ ನಡೆಸಲಾಗುತ್ತಿದೆ ಎಂದು ಇ.ಡಿ ಮೂಲಗಳು ತಿಳಿಸಿವೆ.

ಸಹ–ಜೀವನ: ನೋಂದಣಿ ಕಡ್ಡಾಯ

ಒಂದನೇ ಪುಟದಿಂದ...

'ಯಾವುದೇ ಚರ್ಚೆ ಇಲ್ಲದೆಯೇ, ಸಂಸದೀಯ ಸಂಪ್ರದಾಯ ಉಲ್ಲಂಘಿಸುವ ಮೂಲಕ ತರಾತುರಿಯಲ್ಲಿ ಮಸೂದೆಯನ್ನು ಅಂಗೀಕರಿಸುವುದು ಸರ್ಕಾರದ ಇಚ್ಛೆಯಾಗಿರುವಂತೆ ಕಾಣಿಸುತ್ತಿದೆ' ಎಂದು ಟೀಕಿಸಿದರು. ಯುಸಿಸಿ ಮಸೂದೆ ಮಂಡನೆಗೆ ಅನುಕೂಲ ಮಾಡಿಕೊಡುವ ಸಲುವಾಗಿ ಪ್ರಶ್ನೋತ್ತರ ಅವಧಿಯನ್ನು ಕಲಾಪ ಸಲಹಾ ಸಮಿತಿಯು ರದ್ದುಗೊಳಿಸಿತ್ತು.

ಈ ನಿರ್ಧಾರವನ್ನು ಖಂಡಿಸಿ ವಿರೋಧ ಪಕ್ಷಗಳು ಪ್ರತಿಭಟನೆ ನಡೆಸಿದವು. ವಿಪಕ್ಷಗಳ ಪ್ರತಿಭಟನೆಗೆ ಮಣಿದ ಸ್ಪೀಕರ್ ರಿತು ಖಂಡೂರಿ, ಮಸೂದೆ ಕುರಿತು ಮಾತನಾಡಲು ಹೆಚ್ಚು ಸಮಯ ನೀಡಿದರು. ನಂತರ ಮಾತನಾಡಿದ ಯಶಪಾಲ್ ಆರ್ಯ, 'ಮಸೂದೆಯಲ್ಲಿರುವ ಅವಕಾಶಗಳನ್ನು ಸಮಗ್ರವಾಗಿ ವಿಶ್ಲೇಷಿಸಲು ಪರಿಶೀಲನಾ ಸಮಿತಿಗೆ ಒಪ್ಪಿಸಬೇಕು' ಎಂದರು.



ಏಕರೂಪ ನಾಗರಿಕ ಸಂಹಿತೆ ಮಸೂದೆ ಮಂಡನೆಗೂ ಮುನ್ನ ಉತ್ತರಾಖಂಡ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಅವರು ಸಂವಿಧಾನದ ಪ್ರತಿಯೊಂದಿಗೆ ಮಂಗಳವಾರ ವಿಧಾನಸಭೆ ಪ್ರವೇಶಿಸಿದರು —ಪಿಟಿಐ ಚಿತ್ರ

'ಯುಸಿಸಿ ಮಸೂದೆ ಸಿದ್ಧಪಡಿಸಲು ರಚಿಸಿದ್ದ ತಜ್ಞರ ಸಮಿತಿಯು ವಿವಿಧ ಧರ್ಮಗಳ ಶಾಸ್ತ್ರಜ್ಞರನ್ನು ಒಳಗೊಂಡಿರಬೇಕಿತ್ತು' ಎಂದು ಪ್ರತಿಪಾದಿಸಿದರು.

ಪ್ರಮುಖ ಅಂಶಗಳು

- ಮಸೂದೆಯು ಇಡೀ ಉತ್ತರಾಖಂಡಕ್ಕೆ ಹಾಗೂ ದೇಶದ ಇತರ ಭಾಗಗಳಲ್ಲಿ ವಾಸಿಸುತ್ತಿರುವ ಉತ್ತರಾಖಂಡದ ಜನರಿಗೆ ಅನ್ವಯ
- ಬಹುವಿವಾಹ ಪದ್ಧತಿ ನಿಷೇಧ
- ವಿವಿಧ ಸಮುದಾಯಗಳ ಪದ್ಧತಿ/ಆಚರಣೆಗಳ ಪ್ರಕಾರ ವಿವಾಹಕ್ಕೆ ಅವಕಾಶ
- ಸಹ–ಜೀವನ ಆರಂಭಿಸಿ ಒಂದು ತಿಂಗಳ ಒಳಗಾಗಿ ರಿಜಿಸ್ಟ್ರಾರ್ ಅವರಿಗೆ ಹೇಳಿಕೆಯನ್ನು ಸಲ್ಲಿಸದಿದ್ದಲ್ಲಿ ಒಂದು ತಿಂಗಳ ಜೈಲು ಶಿಕ್ಷೆ ಅಥವಾ ₹ 10 ಸಾವಿರ ದಂಡ ಇಲ್ಲವೇ ಎರಡೂ ವಿಧಿಸಲು ಅವಕಾಶ
- ತಪ್ಪು ಮಾಹಿತಿ ಸಲ್ಲಿಸಿದಲ್ಲಿ ದಂಡವೂ ಅಧಿಕ
- ಸಹ–ಜೀವನ ಸಂಬಂಧದಿಂದ ಬೇರ್ಪಟ್ಟರೆ ವ್ಯಕ್ತಿಯಿಂದ ಮಹಿಳೆಯು ಜೀವನ ನಿರ್ವಹಣಾ ವೆಚ್ಚ ಕೇಳಿ ಕೋರ್ಟ್ ಮೆಟ್ಟಿಲೇರಬಹುದು. ಸಹ–ಜೀವನ ಸಂಬಂಧ ಅಂತ್ಯಗೊಳಿಸಲು ಅವಕಾಶ

ಬಿಜೆಪಿಯ ಪ್ರಮುಖ ಕಾರ್ಯಸೂಚಿ

ವಿವಾಹ, ವಿಚ್ಛೇದನ, ಭೂಮಿ–ಸ್ವತ್ತುಗಳ ಒಡೆತನ ಹಾಗೂ ಉತ್ತರಾಧಿಕಾರ ವಿಚಾರವಾಗಿ ಎಲ್ಲ ಧರ್ಮೀಯರಿಗೂ ಒಂದೇ ಕಾನೂನು ಇರಬೇಕು ಎಂಬುದು ಬಿಜೆಪಿಯ ಪ್ರಮುಖ ಕಾರ್ಯಸೂಚಿ. ಲೋಕಸಭಾ ಚುನಾವಣೆ ಸಮೀಪಿಸುತ್ತಿರುವ ಈ ಸಂದರ್ಭದಲ್ಲಿ ಉತ್ತರಾಖಂಡ ಸರ್ಕಾರ ಇಂತಹ ಕಾಯ್ದೆ ಜಾರಿಗೆ ಮುಂದಾಗಿರುವುದು ಗಮನಾರ್ಹ. ದೇಶಕ್ಕೆ ಸ್ವಾತಂತ್ರ್ಯ ಲಭಿಸಿದ ನಂತರ ಇದೇ ಮೊದಲ ಬಾರಿಗೆ ರಾಜ್ಯ ಸರ್ಕಾರವೊಂದು ಏಕರೂಪ ನಾಗರಿಕ ಸಂಹಿತೆ ಮಸೂದೆಯನ್ನು ಮಂಡಿಸಿದಂತಾಗಿದೆ. ಅಲ್ಲದೇ, ಬಿಜೆಪಿ ಅಧಿಕಾರದಲ್ಲಿರುವ ರಾಜ್ಯಗಳು ಕೂಡ ಇಂಥಹದ್ದೇ ಮಸೂದೆಯನ್ನು ಮಂಡಿಸುವ ಸಾಧ್ಯತೆಯೂ ಇದೆ. ಗುಜರಾತ್ ಮತ್ತು ಅಸ್ಸಾಂ ಸರ್ಕಾರಗಳು ಈ ಮಸೂದೆ ಕುರಿತು ಅಧ್ಯಯನ ನಡೆಸಿ, ಅನುಷ್ಠಾನಗೊಳಿಸುವ ಸಾಧ್ಯತೆ ಇದೆ. ಬಿಜೆಪಿ ನೇತೃತ್ವದ ಸರ್ಕಾರ ಇರುವ ಗೋವಾದಲ್ಲಿ ಪೋರ್ಚುಗೀಸರ ಕಾಲದಿಂದಲೂ ಏಕರೂಪ ನಾಗರಿಕ ಕಾಯ್ದೆ ಜಾರಿಯಲ್ಲಿದೆ.

ಫೈನಲ್ ಪ್ರವೇಶಿಸಿದ ಭಾರತ

19 ವರ್ಷದೊಳಗಿನವರ ವಿಶ್ವಕಪ್ ಕ್ರಿಕೆಟ್ • ಸಚಿನ್, ಉದಯ್ ಅಮೋಘ ಆಟ



ಅರ್ಧಶತಕ ಗಳಿಸಿದ ಸಚಿನ್ ದಾಸ್ (ಎಡ) ಅವರನ್ನು ಅಭಿನಂದಿಸಿದ ನಾಯಕ ಉದಯ್ ಸಹಾರನ್ –ಪಿಟಿಐ ಎಕ್ಸ್ ಚಿತ್ರ

ಬೆನೋನಿ (ಪಿಟಿಐ): ನಾಯಕ ಉದಯ್ ಸಹಾರನ್ ಮತ್ತು ಸಚಿನ್ ದಾಸ್ ಅವರ ಅಮೋಘ ಆಟದ ನೆರವಿನಿಂದ ಭಾರತ ತಂಡ, ಐಸಿಸಿ 19 ವರ್ಷದೊಳಗಿನವರ ಏಕದಿನ ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಆತಿಥೇಯ ದಕ್ಷಿಣ ಆಫ್ರಿಕಾ ತಂಡವನ್ನು ಮಂಗಳವಾರ ಎರಡು ವಿಕೆಟ್‌ಗಳಿಂದ ಸೋಲಿಸಿ ಫೈನಲ್‌ಗೆ ದಾಪುಗಾಲಿಟ್ಟಿತು.

245 ರನ್‌ಗಳ ಬೆನ್ನತ್ತಿದ್ದ ಹಾಲಿ ಚಾಂಪಿಯನ್ ಭಾರತ 12 ಓವರ್‌ಗಳಾಗುವಷ್ಟರಲ್ಲಿ 32 ರನ್‌ಗಳಿಗೆ 4 ವಿಕೆಟ್ ಕಳೆದುಕೊಂಡು ತೀವ್ರ ಸಂಕಷ್ಟದಲ್ಲಿತ್ತು. ಈ ವೇಳೆ ಜೊತೆಗೂಡಿದ ಸಹಾರನ್ (81, 124ಎ, 4x6) ಮತ್ತು ದಾಸ್ (96, 95 ಎಸೆತ, 4x11, 6x1) ಐದನೇ ವಿಕೆಟ್‌ಗೆ 171 ರನ್ ಸೇರಿಸಿ ತಂಡವನ್ನು ವಿಜಯಪಥದಲ್ಲಿ ಮುನ್ನಡೆಸಿದರು. ನಂತರ ಮೂರು ವಿಕೆಟ್‌ಗಳು ಬಿದ್ದರೂ ಒತ್ತಡದಲ್ಲಿ ಏಳು ಎಸೆತ ಗಳಿರುವಂತೆ ತಂಡ 8 ವಿಕೆಟ್‌ಗೆ 248 ರನ್ ಹೊಡೆಯಿತು.

ನೇಪಾಳ ವಿರುದ್ಧ ಸೂಪರ್ ಸಿಕ್ಸ್ ಹಂತದ ಪಂದ್ಯದಲ್ಲೂ ಇವರಿಬ್ಬರು ಶತಕ ಬಾರಿಸಿ ತಂಡವನ್ನು ಕುಸಿತದಿಂದ ಪಾರು ಮಾಡಿದ್ದರು. ಈ ಬಾರಿ ಶತಕ ಬಾರಿಸದಿದ್ದರೂ ಅವರ ಇನಿಂಗ್ಸ್ ಮೌಲ್ಯ ಅದಕ್ಕಿಂತ ಹೆಚ್ಚಾಗಿತ್ತು.

ಗುರುವಾರ ಎರಡನೇ ಸೆಮಿಫೈನಲ್‌ನಲ್ಲಿ ಆಸ್ಟ್ರೇಲಿಯಾ ಮತ್ತು ಪಾಕಿಸ್ತಾನ ತಂಡಗಳು ಮುಖಾಮುಖಿಯಾಗಲಿವೆ. ಫೈನಲ್ ಫೆ.11 ರಂದು ನಿಗದಿಯಾಗಿದೆ.

ದಕ್ಷಿಣ ಆಫ್ರಿಕಾದ ವೇಗಿ ಕ್ವೆನಾ ಮಫಾಕ ಮೊದಲ ಓವರ್‌ನಲ್ಲೇ ಆದರ್ಶ ಸಿಂಗ್ ವಿಕೆಟ್ ಪಡೆದರು. ಮಫಾಕಾ ಜೊತೆಗಾರ ಟ್ರಿಸ್ಟಾನ್ ಲಸ್ ಮತ್ತಷ್ಟು ಹೊಡೆತ ನೀಡಿದರು. ಉತ್ತಮ ಲಯದಲ್ಲಿದ್ದ ಮುಶೀರ್ ಖಾನ್, ಅರ್ಶಿನ್ ಕುಲಕರ್ಣಿ ಮತ್ತು ಪ್ರಿಯಾಂಶು ಮೋಲಿಯಾ ಅವರು ಆಫ್ ಸ್ಟಂಪ್ ಆಚೆ ಹೋಗುತ್ತಿದ್ದ ಚೆಂಡನ್ನು ಕೆಣಕಿ ವಿಕೆಟ್ ಕಳೆದುಕೊಂಡರು.

ಆದರೆ ದಾಸ್ ಮತ್ತು ಸಹಾರನ್ ಮತ್ತೊಮ್ಮೆ ಆಪತ್ಬಾಂಧವರಾದರು. ದಾಸ್ ಆಕ್ರಮಣದ ಆಟಕ್ಕೆ ಇಳಿದರೆ, ಸಹಾರನ್ ಎಚ್ಚರಿಕೆಯಿಂದ ಆಡಿ ಅವರಿಗೆ ಬೆಂಬಲ ನೀಡಿದರು. ಸಹಾರನ್ ಈ ಟೂರ್ನಿಯಲ್ಲಿ 389 ರನ್ ಗಳಿಸಿದಂತಾಗಿದೆ.

ಇದಕ್ಕೆ ಮೊದಲು ಬ್ಯಾಟ್ ಮಾಡಲು ಕಳುಹಿಸಲ್ಪಟ್ಟ ದಕ್ಷಿಣ ಆಫ್ರಿಕಾ ತಂಡವನ್ನು ಭಾರತದ ಬೌಲರ್‌ಗಳು 244 ರನ್‌ಗಳಿಗೆ (7 ವಿಕೆಟ್‌ಗೆ) ನಿಯಂತ್ರಿಸಿದ್ದರು.

ಆರಂಭ ಆಟಗಾರ ಹಾಗೂ ವಿಕೆಟ್ ಕೀಪರ್ ಲುವಾನ್ ಡ್ರಿ ಪ್ರಿಟೋರಿಯಸ್ (76, 102 ಎಸೆತ, 4x6, 6x3) ಮತ್ತು ಮಧ್ಯಮ ಕ್ರಮಾಂಕದ ಆಟಗಾರ ರಿಚರ್ಡ್ ಸೆಲೆಟ್ಸ್‌ವೇನ್ (64, 100ಎ, 4x4, 6x2) ಉತ್ತಮ ಕೊಡುಗೆ ನೀಡಿದರು. ತಂಡ 46 ರನ್‌ಗಳಿಗೆ 2 ವಿಕೆಟ್ ಕಳೆದುಕೊಂಡಿದ್ದಾಗ ಇವರಿಬ್ಬರು ಜೊತೆಗೂಡಿ 76 ರನ್ ಸೇರಿಸಿದರು. ಆದರೆ ನಂತರ ನಿಯಮಿತವಾಗಿ ವಿಕೆಟ್‌ಗಳು ಬಿದ್ದವು.

ಕೊನೆಯಲ್ಲಿ ಜುವಾನ್ ಜೇಮ್ಸ್ (24) ಮತ್ತು ಟ್ರಿಸ್ಟಾನ್ ಲಸ್ (23) ತಂಡ ಗೌರವಾರ್ಹ ಮೊತ್ತ ತಲುಪಲು ನೆರವಾದರು. ಭಾರತದ ಪರ ವೇಗದ ಬೌಲರ್ ರಾಜ್ ಲಿಂಬಾನಿ ಮೂರು ವಿಕೆಟ್ ಪಡೆದರು.

ಸಂಕ್ಷಿಪ್ತ ಸ್ಕೋರುಗಳು: ದಕ್ಷಿಣ ಆಫ್ರಿಕಾ: 50 ಓವರುಗಳಲ್ಲಿ 7 ವಿಕೆಟ್‌ಗೆ 244 (ಲುವಾನ್ ಡ್ರಿ ಪ್ರಿಟೋರಿಯಸ್ 76, ರಿಚರ್ಡ್ ಸೆಲೆಟ್ಸ್‌ವೇನ್ 64, ಓಲಿವರ್ ವೈಟ್‌ಹೆಡ್ 22, ಜುವಾನ್ ಜೇಮ್ಸ್ 24, ಟ್ರಿಸ್ಟಾನ್ ಲಸ್ ಔಟಾಗದೆ 23; ರಾಜ್ ಲಿಂಬಾನಿ 60ಕ್ಕೆ3, ಮುಶೀರ್ ಖಾನ್ 43ಕ್ಕೆ2); ಭಾರತ: 48.5 ಓವರುಗಳಲ್ಲಿ 8 ವಿಕೆಟ್‌ಗೆ 248 (ಉದಯ್ ಸಹಾರನ್ 81, ಸಚಿನ್ ದಾಸ್ 96, ರಾಜ್ ಲಿಂಬಾನಿ ಔಟಾಗದೆ 13; ಕ್ವೆನಾ ಮಫಾಕ 32ಕ್ಕೆ3, ಟ್ರಿಸ್ಟಾನ್ ಲಸ್ 37ಕ್ಕೆ3).

ಅಬುಧಾಬಿಗೆ ಮರಳಿದ ಇಂಗ್ಲೆಂಡ್ ತಂಡ

‘ಬೂಮ್ರಾ ದಾಳಿ ನಿಭಾಯಿಸಬಲ್ಲೆವು’



ಬ್ರೆಂಡನ್ ಮೆಕ್ಕಲಂ

ನವದೆಹಲಿ (ಪಿಟಿಐ): ಎರಡನೇ ಕ್ರಿಕೆಟ್ ಟೆಸ್ಟ್‌ನಲ್ಲಿ ವೇಗದ ಬೌಲರ್ ಜಸ್‌ಪ್ರೀತ್ ಬೂಮ್ರಾ ಅವರು ಅಮೋಘ ದಾಳಿಯಿಂದ ಇಂಗ್ಲೆಂಡ್ ತಂಡವನ್ನು ಹೆಡೆಮುರಿ ಕಟ್ಟಿದ್ದಂತೂ ನಿಜ. ಆದರೆ ಭಾರತದ ಸ್ಟಾರ್ ಬೌಲರ್ ಒಡ್ಡಿರುವ ಗಂಭೀರ ಸವಾಲನ್ನು ನಿಭಾಯಿಸಲು ತಮ್ಮ ತಂಡದ ಆಟಗಾರರು ದಾರಿ ಕೊಂಡುಕೊಳ್ಳಲಿದ್ದಾರೆ ಎಂದು ಪ್ರವಾಸಿ ತಂಡದ ಕೋಚ್ ಬ್ರೆಂಡನ್ ಮೆಕ್ಕಲಂ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಆಕ್ರಮಣಕಾರಿ ಆಟದ ತಂತ್ರ ಮೈಗೂಡಿಸಿಕೊಂಡಿರುವ ಇಂಗ್ಲೆಂಡ್ ಪಡೆಯನ್ನು ಎರಡನೇ ಟೆಸ್ಟ್‌ನಲ್ಲಿ ಬೂಮ್ರಾ ತಮ್ಮ ಎಕ್ಸ್‌ಪ್ರೆಸ್ ವೇಗದಿಂದ ಕಾಡಿ ಮೊದಲ ಇನಿಂಗ್ಸ್‌ನಲ್ಲಿ 45 ರನ್ನಿಗೆ 6 ವಿಕೆಟ್ ಪಡೆದಿದ್ದರು. ಎರಡನೇ ಇನಿಂಗ್ಸ್‌ನಲ್ಲೂ ಮೂರು ವಿಕೆಟ್ ಪಡೆದು ಗೆಲುವಿಗೆ ಕಾಣಿಕೆ ನೀಡಿದ್ದರು.

ಉಳಿದಿರುವ ಮೂರು ಟೆಸ್ಟ್‌ಗಳಲ್ಲಿ ಬೂಮ್ರಾ ಅವರನ್ನು ನಿಭಾಯಿಸಲು ಇಂಗ್ಲೆಂಡ್ ತಂತ್ರವೇನು ಎಂಬ ಪ್ರಶ್ನೆಗೆ ನೇರ ಅವರು ಉತ್ತರ ನೀಡಲಿಲ್ಲ.

‘ನಮ್ಮ ಆಟಗಾರರು ಮುಕ್ತ ಮನಸ್ಸಿನಿಂದ ಆಯಾ ಸಂದರ್ಭಕ್ಕೆ ತಕ್ಕಂತೆ ಆತ್ಮವಿಶ್ವಾಸದಿಂದ ಆಡುವ ತಂತ್ರ ಅನುಸರಿಲಿದ್ದಾರೆ’ ಎಂದರು.

ಆದರೆ ಭಾರತದ ಅಗ್ರ ಬೌಲರ್‌ನ ಕೌಶಲವನ್ನು ನ್ಯೂಜಿಲೆಂಡ್ ತಂಡದ ಮಾಜಿ ನಾಯಕರೂ ಆಗಿರುವ ಮೆಕ್ಕಲಂ ಪ್ರಶಂಸಿಸಿದರು. ‘ಅವರ ಬೌಲಿಂಗ್, ಪರಿಸ್ಥಿತಿಯನ್ನು ಅವಲಂಬಿಸಿರುತ್ತದೆ. ಚೆಂಡು ಸ್ವಿಂಗ್ ಆಗುವಾಗ ಅವರು ಇನ್ನಷ್ಟು ಅಪಾಯಕಾರಿ ಆಗುತ್ತಾರೆ. ಆಟದ ಎಲ್ಲ ಮಾದರಿಯಲ್ಲಿ ಅವರೊಬ್ಬ ಅಮೋಘ ಬೌಲರ್’ ಎಂದರು.

‘ಅವರು ಉತ್ತಮ ಬೌಲರ್ ಎಂಬುದರಲ್ಲಿ ಎರಡು ಮಾತಿಲ್ಲ. ಆದರೆ ಸುಮಾರು 18 ತಿಂಗಳ ಅವಧಿಯಲ್ಲಿ ನಾವು ಅತ್ಯುತ್ತಮ ಬೌಲರ್‌ಗಳನ್ನು ಎದುರಿಸಿದ್ದೇವೆ. ಅವರನ್ನು ನಿಭಾಯಿಸುವ ದಾರಿಯನ್ನೂ ಕಂಡುಕೊಂಡಿದ್ದೇವೆ. ಅದನ್ನೇ ನಾವು ಇಲ್ಲೂ ಮಾಡಬೇಕಾಗಿದೆ’ ಎಂದರು.

ಇಂಗ್ಲೆಂಡ್ ತಂಡ ಎರಡನೇ ಟೆಸ್ಟ್ ನಂತರ ಅಬುಧಾಬಿಗೆ ಮರಳಿದೆ. ಭಾರತಕ್ಕೆ ಟೆಸ್ಟ್ ಸರಣಿಗೆ ಬರುವ ಮೊದಲು ಇಂಗ್ಲೆಂಡ್ ಅಲ್ಲಿ ನೆಲೆ ಮಾಡಿಕೊಂಡು ಶಿಬಿರ ನಡೆಸಿತ್ತು. ತಂಡವು ಫೆಬ್ರುವರಿ 12ರಂದು ಭಾರತಕ್ಕೆ ಮರಳಲಿದ್ದು, ಅಂದೇ ರಾಜಕೋಟ್‌ಗೆ ತಲುಪಲಿದೆ. ರಾಜಕೋಟ್‌ನಲ್ಲಿ ಫೆ. 15ರಿಂದ ಮೂರನೇ ಟೆಸ್ಟ್ ನಡೆಯಲಿದೆ.

ಪ್ರವಾಸಕ್ಕೆ ಮೊದಲಿನ ಶಿಬಿರಕ್ಕಿಂತ ಈ ಶಿಬಿರ ವಿಭಿನ್ನವಾಗಿರಲಿದೆ ಎಂದು ಮೆಕ್ಕಲಂ ಹೇಳಿದರು. ‘ಅಲ್ಲಿ ಬರೇ ತರಬೇತಿಯಷ್ಟೇ ಇರುವುದಿಲ್ಲ. ಇದು ಸೆಣಸಾಟದ ಬಿಸಿಯಿಂದ ದೂರವಿರುವ ಅವಕಾಶ’ ಎಂದರು.

ಮೊದಲ ಎರಡು ಟೆಸ್ಟ್‌ಗಳಲ್ಲಿ ಲಯಕ್ಕೆ ಪರದಾಡಿದ ಜೋ ರೂಟ್ ಬಗ್ಗೆ ಮಾತನಾಡಿದ ಮೆಕ್ಕಲಂ ‘ಅವರೊಬ್ಬ ವಿಶ್ವ ದರ್ಜೆಯ ಆಟಗಾರ. ಇಂಗ್ಲೆಂಡ್ ಕಂಡ ಅತ್ಯುತ್ತಮ ಆಟಗಾರರಲ್ಲಿ ಒಬ್ಬರು. ಅವರು ಮುನ್ನುಗ್ಗಿ ಆಡಬೇಕಾದ ಸನ್ನಿವೇಶವಿತ್ತು’ ಎಂದರು. ಇನ್ನೂ ಮೂರು ಟೆಸ್ಟ್‌ಗಳು ಉಳಿದಿವೆ. ಬಹಳಷ್ಟು ರನ್ ಗಳಿಸಲು ಅವರಿಗೆ ಅವಕಾಶವಿದೆ ಎಂದರು.

6.5 ಓವರುಗಳಲ್ಲಿ ಗೆದ್ದ ಆಸ್ಟ್ರೇಲಿಯಾ!



ಝೇವಿಯರ್ ಬಾರ್ಟ್ಲೆಟ್

ಕೆನ್‌ಬೆರ್ರಾ (ಎಎಫ್‌ಪಿ): ವೆಸ್ಟ್ ಇಂಡೀಸ್ ತಂಡವನ್ನು 83 ರನ್‌ಗಳಿಗೆ ಉರುಳಿಸಿದ ಆಸ್ಟ್ರೇಲಿಯಾ ತಂಡ ಆಕ್ರಮಣಕಾರಿ ರೀತಿಯಲ್ಲಿ ಮೂರನೇ ಹಾಗೂ ಅಂತಿಮ ಏಕದಿನ ಪಂದ್ಯವನ್ನು ಮಂಗಳವಾರ ಬರೇ 6.5 ಓವರುಗಳಲ್ಲಿ ಎಂಟು ವಿಕೆಟ್‌ಗಳಿಂದ ಗೆದ್ದುಕೊಂಡಿತು. ಆ ಮೂಲಕ ವೆಸ್ಟ್ ಇಂಡೀಸ್ ತಂಡ ಸರಣಿಯಲ್ಲಿ 0–3 ಅಂತರದಲ್ಲಿ ಮುಖಭಂಗ ಅನುಭವಿಸಿತು.

ಝೇವಿಯರ್ ಬಾರ್ಟ್ಲೆಟ್ 21 ರನ್ನಿಗೆ 4 ವಿಕೆಟ್ ಪಡೆದು ಪ್ರವಾಸಿ ತಂಡದ ಇನಿಂಗ್ಸ್ ಧ್ವಂಸಗೊಳಿಸಿದರು. ಆರಂಭ ಆಟಗಾರ ಅಲಿಕ್ ಅಥನೇಜ್ ಗಳಿಸಿದ 32 ರನ್‌ಗಳೇ ವೈಯಕ್ತಿಕ ಗರಿಷ್ಠಮೊತ್ತ. ಇತರೆ ರೂಪದಲ್ಲಿ ಬಂದ 13 ರನ್‌ಗಳೇ ಎರಡನೇ ಅತ್ಯಧಿಕ ಎನಿಸಿದವು. ಮೆಲ್ಬರ್ನ್‌ನಲ್ಲಿ ನಡೆದ ಸರಣಿಯ ಮೊದಲ ಏಕದಿನ ಪಂದ್ಯದಲ್ಲಿ ತಂಡಕ್ಕೆ ಪದಾರ್ಪಣೆ ಮಾಡಿದ್ದ ಬಾರ್ಟ್ಲೆಟ್ ಅಲ್ಲಿ 17 ರನ್ನಿಗೆ 4 ವಿಕೆಟ್ ಪಡೆದಿದ್ದರು.

ಮಿಚೆಲ್ ಸ್ಟಾರ್ಕ್, ಪ್ಯಾಟ್ ಕಮಿನ್ಸ್, ಜೋಶ್ ಹ್ಯಾಜಲ್‌ವುಡ್ ಇಲ್ಲದೇ ಆಸ್ಟ್ರೇಲಿಯಾ ಕಣಕ್ಕಿಳಿದರೂ, ಬಾರ್ಟ್ಲೆಟ್ ಆ ಕೊರತೆ ನೀಗಿಸಿ ‘ಪಂದ್ಯದ ಆಟಗಾರ’ ಗೌರವಕ್ಕೆ ಪಾತ್ರರಾದರು. ಸರಣಿಯಲ್ಲಿ ಎರಡು ಪಂದ್ಯಗಳಿಂದ ಎಂಟು ವಿಕೆಟ್ ಪಡೆದಿದ್ದಕ್ಕೆ ‘ಸರಣಿಯ ಆಟಗಾರ’ ಗೌರವವೂ ಅವರ ಪಾಲಾಯಿತು.

ಆಸ್ಟ್ರೇಲಿಯಾ ಪರ ಜೇಕ್ ಫ್ರೇಸರ್ ಮೆಕ್‌ಗುರ್ಕ್ 18 ಎಸೆತಗಳಲ್ಲಿ 41 ರನ್ ಚಚ್ಚಿದರೆ, ಜೋಶ್ ಇಂಗ್ಲಿಸ್ 16 ಎಸೆತಗಳಲ್ಲಿ ಅಜೇಯ 35 ರನ್ ಗಳಿಸಿ ವೆಸ್ಟ್ ಇಂಡೀಸ್ ದಾಳಿ ಧೂಳೀಪಟಗೊಳಿಸಿದರು. ಕೇವಲ 4.3 ಓವರುಗಳಲ್ಲಿ 67 ರನ್‌ಗಳು ಬಂದವು.

ಸ್ಕೋರುಗಳು: ವೆಸ್ಟ್ ಇಂಡೀಸ್: 24.1 ಓವರುಗಳಲ್ಲಿ 86 (ಅಲಿಕ್ ಅಥನೇಜ್ 32; ಝೇವಿಯರ್ ಬಾರ್ಟ್ಲೆಟ್ 21ಕ್ಕೆ4, ಲ್ಯಾನ್ಸ್ ಮಾರಿಸ್ 13ಕ್ಕೆ2, ಆ್ಯಡಂ ಜಂಪಾ 14ಕ್ಕೆ2); ಆಸ್ಟ್ರೇಲಿಯಾ: 6.5 ಓವರುಗಳಲ್ಲಿ 2 ವಿಕೆಟ್‌ಗೆ 87 (ಜೇಕ್ ಫ್ರೇಸರ್ ಮೆಕ್‌ಗುರ್ಕ್ 41, ಜೋಶ್ ಇಂಗ್ಲಿಸ್ ಔಟಾಗದೆ 35).

ತಮಿಳುನಾಡು ವಿರುದ್ಧ ಪಂದ್ಯಕ್ಕೆ ದೇವದತ್ತ ಪಡಿಕ್ಕಲ್

ತಂಡಕ್ಕೆ ಮರಳಿದ ಮಯಂಕ್

ಪ್ರಜಾವಾಣಿ ವಾರ್ತೆ



ಮಯಂಕ್ ಅಗರವಾಲ್



ದೇವದತ್ತ ಪಡಿಕ್ಕಲ್

ಬೆಂಗಳೂರು: ಹೋದ ವಾರ ಹಠಾತ್ ಅಸ್ವಸ್ಥರಾಗಿ ಒಂದು ಪಂದ್ಯವನ್ನು ಕಳೆದುಕೊಂಡಿದ್ದ ನಾಯಕ ಮಯಂಕ್ ಅಗರವಾಲ್ ಅವರು ತಮಿಳುನಾಡು ವಿರುದ್ಧ ಚೆನ್ನೈನಲ್ಲಿ ಶುಕ್ರವಾರ ಆರಂಭವಾಗಲಿರುವ ರಣಜಿ ಟ್ರೋಫಿ ‘ಸಿ’ ಗುಂಪಿನ ಪಂದ್ಯಕ್ಕೆ ಮರಳಲಿದ್ದು, ಕರ್ನಾಟಕ ತಂಡದ ನೇತೃತ್ವ ವಹಿಸಲಿದ್ದಾರೆ. ಇನ್ನೊಬ್ಬ ಪ್ರಮುಖ ಬ್ಯಾಟರ್ ದೇವದತ್ತ ಪಡಿಕ್ಕಲ್ ಕೂಡ ತಂಡಕ್ಕೆ ಹಿಂತಿರುಗಿದ್ದಾರೆ.

ಕಳೆದ ವಾರ ತಂಡದೊಡನೆ ಅಗರ್ತಲಾದಿಂದ ಸೂರತ್‌ಗೆ ಹೋಗುವ ವಿಮಾನದಲ್ಲಿ ಅವರು ನೀರು ಎಂದು ಭಾವಿಸಿ ದ್ರಾವಣವೊಂದನ್ನು ಕುಡಿದು ಅಸ್ವಸ್ಥರಾಗಿದ್ದರು. ತ್ರಿಪುರ ವಿರುದ್ಧ ಪಂದ್ಯದ ನಂತರ ಹಿಂತಿರುಗುವಾಗ ಈ ಘಟನೆ ನಡೆದಿತ್ತು.

ಅಗರ್ತಲಾದಲ್ಲಿ ಚಿಕಿತ್ಸೆ ಪಡೆದು ಅವರು ಬೆಂಗಳೂರಿಗೆ ಮರಳಿದ್ದರು. ಅವರು ರೈಲ್ವೇಸ್ ವಿರುದ್ಧ ಪಂದ್ಯದಲ್ಲಿ ಆಡಿರಲಿಲ್ಲ. ಉಪನಾಯಕ ನಿಕಿನ್ ಜೋಸ್ ಆ ಪಂದ್ಯದ ನಾಯಕತ್ವ ವಹಿಸಿದ್ದು, ಕರ್ನಾಟಕ ಒಂದು ವಿಕೆಟ್ ಅಂತರದ ರೋಚಕ ಜಯಿಸಿತ್ತು.

ವೈದ್ಯಕೀಯ ತಪಾಸಣೆಯ ನಂತರ ಅವರಿಗೆ ಸಮಸ್ಯೆಯೇನೂ ಆಗಿಲ್ಲದಿರುವುದನ್ನು ಖಚಿತವಾದ ಬಳಿಕ ತಂಡಕ್ಕೆ ಮರಳಲು ಅನುಮತಿ ನೀಡಲಾಯಿತು.

23 ವರ್ಷದ ಪಡಿಕ್ಕಲ್, ಇಂಗ್ಲೆಂಡ್ ಲಯನ್ಸ್ ವಿರುದ್ಧ ಅಹಮದಾಬಾದಿನಲ್ಲಿ ನಡೆದ ‘ಟೆಸ್ಟ್’ ಪಂದ್ಯದಲ್ಲಿ ಭಾರತ ‘ಎ’ ತಂಡದಲ್ಲಿ ಆಡಿದ್ದರು.

ಮೇಲಿನ ಇಬ್ಬರು ತಂಡಕ್ಕೆ ಮರಳಿದ್ದರಿಂದ ಆರಂಭ ಆಟಗಾರ ಡೇಗಾ ನಿಶ್ಚಲ್ ಮತ್ತು ಅಭಿಷೇಕ್ ಶೆಟ್ಟಿ ಅವರು ಸ್ಥಾನ ಕಳೆದುಕೊಂಡಿದ್ದಾರೆ.

ತಮಿಳುನಾಡು ವಿರುದ್ಧ ಪಂದ್ಯಕ್ಕೆ ಕರ್ನಾಟಕ ತಂಡ ಹೀಗಿದೆ: ಮಯಂಕ್ ಅಗರವಾಲ್ (ನಾಯಕ), ನಿಕಿನ್ ಜೋಸ್ (ಉಪ ನಾಯಕ), ದೇವದತ್ತ ಪಡಿಕ್ಕಲ್, ಆರ್.ಸಮರ್ಥ, ಮನೀಷ್ ಪಾಂಡೆ, ಶರತ್ ಶ್ರೀನಿವಾಸ್ (ವಿಕೆಟ್ ಕೀಪರ್), ಅನೀಶ್ ಕೆ.ವಿ., ವೈಶಾಖ ವಿಜಯಕುಮಾರ್, ವಾಸುಕಿ ಕೌಶಿಕ್, ಶಶಿಕುಮಾರ್ ಕೆ., ಸುಜಯ್ ಸಾತೇರಿ (ವಿಕೆಟ್ ಕೀಪರ್), ವಿದ್ವತ್ ಕಾವೇರಪ್ಪ, ವೆಂಕಟೇಶ ಎಂ, ಕಿಶನ್ ಎಸ್. ಬೆದರೆ, ರೋಹಿತ್ ಕುಮಾರ್ ಎ.ಸಿ., ಹಾರ್ದಿಕ್ ರಾಜ್. ಕೋಚ್: ಪಿ.ವಿ.ಶಶಿಕಾಂತ್.

ಟಿ20: ಜುಲೈನಲ್ಲಿ ಭಾರತ ತಂಡದಿಂದ ಜಿಂಬಾಬ್ವೆ ಪ್ರವಾಸ

ಹರಾರೆ (ಪಿಟಿಐ): ಜುಲೈ6 ರಿಂದ ಆರಂಭವಾಗಲಿರುವ ಐದು ಪಂದ್ಯಗಳ ಟಿ20 ಸರಣಿಗಾಗಿ ಎರಡನೇ ಹಂತದ ಆಟಗಾರರನ್ನು ಒಳಗೊಂಡ ಭಾರತ ತಂಡವು ಜಿಂಬಾಬ್ವೆ ಪ್ರವಾಸ ಕೈಗೊಳ್ಳಲಿದೆ ಎಂದು ಇಲ್ಲಿನ ಕ್ರಿಕೆಟ್ ಮಂಡಳಿ ಮಂಗಳವಾರ ಪ್ರಕಟಿಸಿದೆ.

ಅಮೆರಿಕ ಮತ್ತು ವೆಸ್ಟ್ ಇಂಡೀಸ್‌ನಲ್ಲಿ ಟಿ20 ವಿಶ್ವಕಪ್ ಜೂನ್ 29ರಂದು ಮುಗಿದ ತಕ್ಷಣ ನಡೆಯಲಿರುವ ಈ ಸರಣಿಯಲ್ಲಿ ಭಾರತದ ಪ್ರಮುಖ ಆಟಗಾರರು ಭಾಗವಹಿಸುವ ಸಾಧ್ಯತೆಯಿಲ್ಲ. ಈ ಹಿಂದೆಯೂ, ಈ ದಕ್ಷಿಣ ಆಫ್ರಿಕಾ ರಾಷ್ಟ್ರದ ಪ್ರವಾಸಕ್ಕೆ ಪ್ರಮುಖ ಆಟಗಾರರು ಹೋಗುತ್ತಿರಲಿಲ್ಲ.

‘ಭಾರತ ತಂಡ ಐದು ಟಿ20 ಪಂದ್ಯಗಳಿಗಾಗಿ ಜಿಂಬಾಬ್ವೆಯು ಆತಿಥ್ಯ ವಹಿಸಲಿದೆ ಎಂದು ಕ್ರಿಕೆಟ್ (ಝಡ್‌ಸಿ) ಮತ್ತು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ಮಂಗಳವಾರ ಪ್ರಕಟಿಸಿವೆ’ ಎಂದು ಝಡ್‌ಸಿ ಹೇಳಿಕೆಯಲ್ಲಿ ತಿಳಿಸಿದೆ.

ಬಿಸಿಸಿಐ ಕಾರ್ಯದರ್ಶಿ ಜಯ್ ಶಾ ಮಾತನಾಡಿ, ‘ಈ ಹಂತದಲ್ಲಿ ಜಿಂಬಾಬ್ವೆ ಕ್ರಿಕೆಟ್‌ಗೆ ನಮ್ಮ ಬೆಂಬಲ ಅಗತ್ಯವಿದೆ ಎಂಬುದನ್ನು ಅರ್ಥಮಾಡಿಕೊಂಡಿದ್ದೇವೆ’ ಎಂದರು.

ಸ್ಯಾಫ್ ಫುಟ್‌ಬಾಲ್: ಫೈನಲ್‌ಗೆ ಭಾರತ

ಢಾಕಾ (ಪಿಟಿಐ): ಉತ್ತರಾರ್ಧದಲ್ಲಿ ನೇಹಾ ಗಳಿಸಿದ ಎರಡು ಗೋಲುಗಳ ನೆರವಿನಿಂದ ಭಾರತ ತಂಡ, ಸ್ಯಾಫ್ 19 ವರ್ಷದೊಳಗಿನವರ ಮಹಿಳಾ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನ ಕೊನೆಯ ಲೀಗ್ ಪಂದ್ಯದಲ್ಲಿ ಮಂಗಳವಾರ ನೇಪಾಳ ತಂಡವನ್ನು 4–0 ಗೋಲುಗಳಿಂದ ಮಣಿಸಿ ಫೈನಲ್ ಪ್ರವೇಶಿಸಿದೆ.

ಭಾರತ ತಂಡವು ಗುರುವಾರ ನಡೆಯಲಿರುವ ಫೈನಲ್‌ನಲ್ಲಿ ಆತಿಥೇಯ ಮತ್ತು ಹಾಲಿ ಚಾಂಪಿಯನ್ ಬಾಂಗ್ಲಾದೇಶವನ್ನು ಎದುರಿಸಲಿದೆ. ಭಾರತ ಮೊದಲ ಪಂದ್ಯವನ್ನು ಭೂತಾನ್ ವಿರುದ್ಧ 10-0 ಅಂತರದಿಂದ ಗೆದ್ದಿತ್ತು, ನಂತರ ಬಾಂಗ್ಲಾದೇಶ ವಿರುದ್ಧ 0-1 ಅಂತರದಿಂದ ಪರಾಭವಗೊಂಡಿತ್ತು.

ನೇಹಾ 54 ಮತ್ತು 80ನೇ ನಿಮಿಷದಲ್ಲಿ ಗೋಲು ಗಳಿಸಿದರೆ, ಸುಲಾಂಜನಾ ರಾವುಲ್ (85ನೇ ನಿಮಿಷ) ಮತ್ತು ಸಿಂಡಿ ರೆಮ್ರುತ್‌ಪುಯಿ ಕೊಲ್ನಿ (90+3ನೇ ನಿಮಿಷ) ಗೋಲು ಗಳಿಸಿದರು.

ಎರಡನೇ ಇನಿಂಗ್ಸ್‌ನಲ್ಲೂ ಕೇನ್ ಶತಕ



ಶತಕ ಗಳಿಸಿದ ಸಂಭ್ರಮದಲ್ಲಿ ಕೇನ್ ವಿಲಿಯಮ್ಸನ್

ಮೌಂಟ್ ಮಾಂಗಾನೂಯಿ (ನ್ಯೂಜಿಲೆಂಡ್), (ಎಎಫ್‌ಪಿ): ಅನುಭವಿ ಬ್ಯಾಟರ್ ಕೇನ್ ವಿಲಿಯಮ್ಸನ್, ಮೊದಲ ಟೆಸ್ಟ್ ಪಂದ್ಯದಲ್ಲಿ ಎರಡನೇ ಶತಕವನ್ನು ಬಾರಿಸಿದ್ದು, ಆತಿಥೇಯ ನ್ಯೂಜಿಲೆಂಡ್ ತಂಡ, ಮೂರನೇ ದಿನವಾದ ಮಂಗಳವಾರ ದಕ್ಷಿಣ ಆಫ್ರಿಕಾ ವಿರುದ್ಧ ಬಿಗಿಹಿಡಿತ ಸಾಧಿಸಿದೆ.

ರನ್‌ಯಂತ್ರ ವಿಲಿಯಮ್ಸನ್ ಆಕರ್ಷಕ 109 ರನ್ (132 ಎಸೆತ, 4x12, 6x1) ಗಳಿಸಿದ ನಂತರ ಎದುರಾಳಿ ತಂಡದ ನಾಯಕ ಹಾಗೂ ಎಡಗೈ ಸ್ಪಿನ್ನರ್ ನೀಲ್ ಬ್ರಾಂಡ್ ಬೌಲಿಂಗ್‌ನಲ್ಲಿ ಸ್ಟಂಪ್ಡ್ ಆದರು. ದಿನದಾಟದ ಕೊನೆಗೆ ನ್ಯೂಜಿಲೆಂಡ್ 4 ವಿಕೆಟ್‌ಗೆ 179 ರನ್ ಗಳಿಸಿದೆ. ಒಟ್ಟಾರೆ ಮುನ್ನಡೆಯನ್ನು 528 ರನ್‌ಗಳಿಗೆ ಏರಿಸಿದೆ.

ವಿಲಿಯಮ್ಸನ್ ಮೊದಲ ಇನಿಂಗ್ಸ್‌ನಲ್ಲಿ 118 ರನ್ ಹೊಡೆದಿದ್ದರು. ಇದು ಟೆಸ್ಟ್‌ನಲ್ಲಿ ಅವರ 31ನೇ ಶತಕ. ಆದರೆ 34 ವರ್ಷದ ಆಟಗಾರ ಒಂದೇ ಟೆಸ್ಟ್‌ನಲ್ಲಿ ಎರಡು ಶತಕ ಬಾರಿಸಿದ್ದು ಇದೇ ಮೊದಲ ಸಲ.

ಇದಕ್ಕೆ ಮೊದಲು ನ್ಯೂಜಿಲೆಂಡ್‌ನ 511 ರನ್‌ಗಳಿಗೆ ಉತ್ತರವಾಗಿ, ಎರಡನೇ ದಿನದಾಟ ಮುಗಿದಾಗ 4 ವಿಕೆಟ್‌ಗೆ 80 ರನ್ ಗಳಿಸಿದ್ದ ಪ್ರವಾಸಿ ತಂಡ ಮಂಗಳವಾರ 162 ರನ್‌ಗಳಿಗೆ ಆಲೌಟ್ ಆಯಿತು. ಕೀಗನ್ ಪೀಟರ್ಸನ್ ಅತ್ಯಧಿಕ 45 ರನ್ ಗಳಿಸಿದರು. 13 ಟೆಸ್ಟ್ ಆಡಿರುವ ಅವರು ಹಾಲಿ ತಂಡದ ಅನುಭವಿ ಆಟಗಾರ ಎನಿಸಿದ್ದಾರೆ.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ನ್ಯೂಜಿಲೆಂಡ್: 511, ದಕ್ಷಿಣ ಆಫ್ರಿಕಾ: 72.5 ಓವರುಗಳಲ್ಲಿ 162 (ಡೇವಿಡ್ ಬೆಡ್ಡಿಂಗಮ್ 32, ಕೀಗನ್ ಪೀಟರ್ಸನ್ 45; ಮ್ಯಾಟ್ ಹೆನ್ರಿ 31ಕ್ಕೆ3, ಕೈಲ್ ಜೇಮಿಸನ್ 35ಕ್ಕೆ2, ಮಿಚೆಲ್ ಸ್ಯಾಂಟ್ನರ್ 34ಕ್ಕೆ3, ರಚಿನ್ ರವೀಂದ್ರ 16ಕ್ಕೆ2); 2ನೇ ಇನಿಂಗ್ಸ್: ನ್ಯೂಜಿಲೆಂಡ್: 43 ಓವರುಗಳಲ್ಲಿ 4 ವಿಕೆಟ್‌ಗೆ 179 (ಕೇನ್ ವಿಲಿಯಮ್ಸನ್ 109; ನೀಲ್ ಬ್ರಾಂಡ್ 52ಕ್ಕೆ2).

ಐಎಸ್‌ಎಲ್ ಟೂರ್ನಿ ಸೆ.14ರಿಂದ

ನವದೆಹಲಿ (ಪಿಟಿಐ): ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) 11ನೇ ಆವೃತ್ತಿಯು ಸೆಪ್ಟೆಂಬರ್ 14ರಿಂದ ಆರಂಭವಾಗಲಿದ್ದು, 2025ರ ಏಪ್ರಿಲ್ 30ರ ವರೆಗೆ ನಡೆಯಲಿದೆ ಎಂದು ಅಖಿಲ ಭಾರತ ಫುಟ್‌ಬಾಲ್ ಫೆಡರೇಶನ್ ಮಂಗಳವಾರ ಪ್ರಕಟಿಸಿದೆ.

ಎಂದಿನಂತೆ ಮುಂದಿನ ಋತುವಿನ (2024-25) ಸೀನಿಯರ್ ಸ್ಪರ್ಧೆಗಳು ಜುಲೈ 26-31 ರವರೆಗೆ ಏಷ್ಯಾದ ಅತ್ಯಂತ ಹಳೆಯ ಟೂರ್ನಿ ಡುರಾಂಡ್ ಕಪ್‌ನೊಂದಿಗೆ ಪ್ರಾರಂಭವಾಗಲಿದೆ.

ಮತ್ತೊಂದೆಡೆ ಐ-ಲೀಗ್ ಅಕ್ಟೋಬರ್ 19ರಿಂದ ಏಪ್ರಿಲ್ 30 ರವರೆಗೆ ನಡೆಯಲಿದ್ದು, ಸೂಪರ್ ಕಪ್ ಅಕ್ಟೋಬರ್ 1 ರಿಂದ ಮೇ 15 ರವರೆಗೆ ನಡೆಯಲಿದೆ.

ಐ-ಲೀಗ್ 2ಕ್ಕೆ ಅರ್ಹತಾ ಪಂದ್ಯವಾಗಿರುವ ಐ-ಲೀಗ್ 3 ಆಗಸ್ಟ್ 1 ರಿಂದ ಸೆಪ್ಟೆಂಬರ್ 30 ರವರೆಗೆ ನಡೆಯಲಿದೆ. ಐ-ಲೀಗ್ 2 ಜನವರಿ 15 ರಿಂದ ಏಪ್ರಿಲ್ 30 ರವರೆಗೆ ನಡೆಯಲಿದೆ.

ಸಂತೋಷ್ ಟ್ರೋಫಿಗಾಗಿ 78ನೇ ರಾಷ್ಟ್ರೀಯ ಫುಟ್‌ಬಾಲ್ ಚಾಂಪಿಯಷಿಪ್ ನವೆಂಬರ್ 5-15 (ಗುಂಪು ಹಂತ) ಮತ್ತು ಡಿಸೆಂಬರ್ 1-15 (ಅಂತಿಮ ಸುತ್ತು) ರ ವರೆಗೆ ನಡೆಯಲಿದೆ.

ಮದುವೆಯಾಗುವುದಾಗಿ ಹೇಳಿ ಹಾಕಿಪಟು ವಂಚನೆ: ದೂರು

ವರುಣ್ ವಿರುದ್ಧ ‘ಪೋಕ್ಸೊ’ ಪ್ರಕರಣ

ಪ್ರಜಾವಾಣಿ ವಾರ್ತೆ



ವರುಣ್

ಬೆಂಗಳೂರು: ಯುವತಿಯೊಬ್ಬರಿಗೆ ಅವರ ಬಾಲ್ಯದ ದಿನಗಳಿಂದ ಲೈಂಗಿಕ ದೌರ್ಜನ್ಯ ಎಸಗಿರುವ ಆರೋಪದಡಿ ಭಾರತ ಸೀನಿಯರ್ ಹಾಕಿ ತಂಡದ ಆಟಗಾರ ವರುಣ್ ಕುಮಾರ್ (28) ವಿರುದ್ಧ ಜ್ಞಾನಭಾರತಿ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

‘ತೆಲಂಗಾಣ ನಿವಾಸಿಯಾಗಿರುವ 22 ವರ್ಷದ ಯುವತಿ ಲೈಂಗಿಕ ದೌರ್ಜನ್ಯದ ಬಗ್ಗೆ ದೂರು ನೀಡಿದ್ದಾರೆ. ಅತ್ಯಾಚಾರ (ಐಪಿಸಿ 376), ವಂಚನೆ (420) ಆರೋಪ ಹಾಗೂ ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆ (ಪೋಕ್ಸೊ) ಕಾಯ್ದೆಯಡಿ ವರುಣ್ ಕುಮಾರ್ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

‘ವರುಣ್ ಸದ್ಯ ಪಂಜಾಬ್‌ನಲ್ಲಿದ್ದಾರೆ. ಜ್ಞಾನಭಾರತಿಯ ಭಾರತೀಯ ಕ್ರೀಡಾ ಪ್ರಾಧಿಕಾರದ ತರಬೇತಿ ಕೇಂದ್ರದಲ್ಲಿ ಕೃತ್ಯ ನಡೆದಿದೆ. ಹೀಗಾಗಿ, ಜ್ಞಾನಭಾರತಿ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ. ಆರೋಪಿಯನ್ನು ವಶಕ್ಕೆ ಪಡೆಯಲು ವಿಶೇಷ ತಂಡವೊಂದನ್ನು ಪಂಜಾಬ್‌ಗೆ ಕಳುಹಿಸಲಾಗಿದೆ’ ಎಂದರು.

ಹಿಮಾಚಲ ಪ್ರದೇಶದ ವರುಣ್, 2017ರಲ್ಲಿ ಭಾರತ ಹಾಕಿ ತಂಡಕ್ಕೆ ಆಯ್ಕೆಯಾಗಿದ್ದರು. ಟೋಕಿಯೊ ಒಲಿಂಪಿಕ್‌ನಲ್ಲಿ ಕಂಚು ಗೆದ್ದ ಹಾಗೂ 2022ರ ಬರ್ಮಿಂಗ್‌ಹ್ಯಾಮ್‌ನ ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಬೆಳ್ಳಿ ಗೆದ್ದ ಭಾರತ ತಂಡದಲ್ಲಿ ಆಡಿದ್ದರು. ಅರ್ಜುನ ಪ್ರಶಸ್ತಿ ಪುರಸ್ಕೃತ ಕೂಡ.

ದೂರಿನ ವಿವರ: ‘ನಾನು 16ನೇ ವಯಸ್ಸಿನಲ್ಲಿ ವಾಲಿಬಾಲ್ ತರಬೇತಿಗೆಂದು ಸಾಯ್ ಕೇಂದ್ರಕ್ಕೆ (2016–17) ಸೇರಿದ್ದೆ. ವಸತಿ ನಿಲಯದಲ್ಲಿ ವಾಸವಿದ್ದೆ. ಅದೇ ಕೇಂದ್ರಕ್ಕೆ ಹಾಕಿ ತರಬೇತಿಗಾಗಿ ವರುಣ್‌ಕುಮಾರ್ ಸಹ 2018ರಲ್ಲಿ ಬಂದಿದ್ದ. ಇನ್‌ಸ್ಟಾಗ್ರಾಂ ಮೂಲಕ ನನಗೆ ರಿಕ್ವೆಸ್ಟ್ ಕಳುಹಿಸಿ ಪರಿಚಯ ಮಾಡಿಕೊಂಡಿದ್ದ. ವರುಣ್ ಸಹ ನಮ್ಮ ಮನೆಯಲ್ಲಿ ಒಪ್ಪಿಸಿ ಮದುವೆಯಾಗುವುದಾಗಿ ತಿಳಿಸಿದ್ದ. ಹೀಗಾಗಿ, ವರುಣ್‌ನನ್ನು ಪ್ರೀತಿಸಲಾರಂಭಿಸಿದ್ದೆ’ ಯುವತಿ ದೂರಿನಲ್ಲಿ ಹೇಳಿದ್ದಾರೆ.

‘2019ನೇ ಜುಲೈನಲ್ಲಿ ರಾತ್ರಿ ಊಟಕ್ಕೆಂದು ಜಯನಗರ 4ನೇ ಹಂತದ ಹೋಟೆಲ್‌ವೊಂದಕ್ಕೆ ನನ್ನನ್ನು ಕರೆದೊಯ್ದಿದ್ದ. ಊಟದ ನಂತರ, ಅಲ್ಲಿಯೇ ಕೊಠಡಿಯಲ್ಲಿ ನನ್ನನ್ನು ಉಳಿಸಿಕೊಂಡು ಅತ್ಯಾಚಾರ ಎಸಗಿದ್ದ. ಮದುವೆಯಾಗುತ್ತಾನೆಂಬ ಕಾರಣಕ್ಕೆ ಯಾರಿಗೂ ವಿಷಯ ತಿಳಿಸದೇ ಸುಮ್ಮನಾಗಿದ್ದೆ. ಇದಾದ ನಂತರವೂ ವರುಣ್, ನನ್ನ ಮೇಲೆ ಹಲವು ಬಾರಿ ಅತ್ಯಾಚಾರ ಎಸಗಿದ್ದ’ ಎಂದೂ ಅವರು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

‘ವರ್ಷದ ಹಿಂದೆ ನನ್ನ ತಂದೆ ತೀರಿಕೊಂಡಾಗ ಮನೆಗೆ ಬಂದಿದ್ದ ವರುಣ್, ಸಾಂತ್ವನ ಹೇಳಿ ಹೋಗಿದ್ದ. ಆದರೆ, ಕೆಲ ತಿಂಗಳಿನಿಂದ ನನ್ನಿಂದ ಅಂತರ ಕಾಯ್ದುಕೊಳ್ಳುತ್ತಿದ್ದ. ಮದುವೆಯಾಗಲು ಒಪ್ಪಿರಲಿಲ್ಲ. ಠಾಣೆಗೆ ದೂರು ಕೊಡುವುದಾಗಿ ಹೇಳಿದಾಗ, ಚೆನ್ನಾಗಿ ಮಾತನಾಡುತ್ತಿದ್ದ. ನನ್ನ ಖಾಸಗಿ ಫೋಟೊ ಹಾಗೂ ವಿಡಿಯೊಗಳನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಅಪ್‌ಲೋಡ್ ಮಾಡುವುದಾಗಿ ಬೆದರಿಸುತ್ತಿದ್ದಾನೆ’ ಎಂದು ಯುವತಿ ದೂರಿನಲ್ಲಿ ತಿಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಪಿಸಿಬಿ ಅಧ್ಯಕ್ಷರಾಗಿ ಮೊಹ್ಸಿನ್ ನಕ್ವಿ

ಲಾಹೋರ್ (ಪಿಟಿಐ): ಹಿರಿಯ ಆಡಳಿತಗಾರ ಸೈಯ್ಯದ್ ಮೊಹ್ಸಿನ್ ರಝಾ ನಕ್ವಿ ಅವರನ್ನು ಪಾಕಿಸ್ತಾನ ಕ್ರಿಕೆಟ್ ಮಂಡಳಿಗೆ ಪೂರ್ಣಾವಧಿಗೆ ಅಧ್ಯಕ್ಷರಾಗಿ ಮಂಗಳವಾರ ಸರ್ವಾನುಮತದಿಂದ ಆಯ್ಕೆ ಮಾಡಲಾಗಿದೆ. ಅವರ ಅವಧಿ ಮೂರು ವರ್ಷ ಇರಲಿದೆ.

ಲಾಹೋರ್‌ನಲ್ಲಿರುವ ಮಂಡಳಿಯ ಗವರ್ನರ್‌ಗಳ ಸಭೆಯಲ್ಲಿ ನಡೆದ ವಿಶೇಷ ಸಭೆಯಲ್ಲಿ ಈ ಆಯ್ಕೆ ನಡೆಯಿತು.

ಮಾಧ್ಯಮ ಸಮೂಹದ ಒಡೆತನ ಹೊಂದಿರುವ 45 ವರ್ಷದ ನಕ್ವಿ ಪಿಸಿಬಿಯ 37ನೇ ಅಧ್ಯಕ್ಷ. ಪ್ರಸ್ತುತ ಪಂಜಾಬ್ ಪ್ರಾಂತದ ಉಸ್ತುವಾರಿ ಮುಖ್ಯಮಂತ್ರಿ ಆಗಿದ್ದಾರೆ.

ರಾಷ್ಟ್ರೀಯ ಕುಸ್ತಿ: ಪ್ರವೇಶ ಕಳುಹಿಸಲು ನಿರ್ದೇಶನ

ನವದೆಹಲಿ (ಪಿಟಿಐ): ಗ್ವಾಲಿಯರ್‌ನಲ್ಲಿ ನಡೆಯಲಿರುವ 15 ವರ್ಷದೊಳಗಿನ ಮತ್ತು 20 ವರ್ಷದೊಳಗಿನ ರಾಷ್ಟ್ರೀಯ ಚಾಂಪಿಯನ್‌ಷಿಪ್‌ಗೆ ಪ್ರವೇಶ ಕಳುಹಿಸುವಂತೆ ಭಾರತ ಕುಸ್ತಿ ಸಂಸ್ಥೆಯ ತಾತ್ಕಾಲಿಕ ಸಮಿತಿಯು ಎಲ್ಲಾ ರಾಜ್ಯ ಸಂಸ್ಥೆಗಳಿಗೆ ನಿರ್ದೇಶನ ನೀಡಿದೆ.

ಫೆಬ್ರವರಿ 11 ರಿಂದ 17 ರವರೆಗೆ ವಯೋಮಾನದ ಪಂದ್ಯಗಳು ನಡೆಯಲಿವೆ. ಫೆಬ್ರವರಿ 2 ರಿಂದ 5 ರವರೆಗೆ ಜೈಪುರದಲ್ಲಿ ನಡೆದ ಸೀನಿಯರ್ ಚಾಂಪಿಯನ್‌ಷಿಪ್‌ಗೆ ಪ್ರವೇಶ ಸಲ್ಲಿಸುವ ಬಗ್ಗೆ 2-3 ರಾಜ್ಯ ಸಂಸ್ಥೆಗಳೊಂದಿಗೆ ಸಮಸ್ಯೆಗಳನ್ನು ಎದುರಿಸಿದ್ದೇವೆ ಎಂದು ಅಡ್‌ಹಾಕ್ ಸಮಿತಿಯ ಮೂಲಗಳು ಸುದ್ದಿಸಂಸ್ಥೆಗೆ ತಿಳಿಸಿವೆ.

‘ನಿರ್ದಿಷ್ಟ ಸಮಯದೊಳಗೆ ರಾಜ್ಯ ಕುಸ್ತಿ ಸಂಸ್ಥೆಯಿಂದ ಯಾವುದೇ ಪ್ರವೇಶವನ್ನು ಸ್ವೀಕರಿಸದಿದ್ದರೆ, ಮೂವರು ಸದಸ್ಯರ ಸಮಿತಿಯು ಆಯಾ ರಾಜ್ಯದ ಭಾಗವಹಿಸುವಿಕೆಗಾಗಿ ಪ್ರವೇಶ ಕಳುಹಿಸುತ್ತದೆ’ ಎಂದು ಸಮಿತಿಯು ಮಂಗಳವಾರ ಹೇಳಿಕೆಯಲ್ಲಿ ತಿಳಿಸಿದೆ.

ಪ್ರೊ ಕಬಡ್ಡಿ ಲೀಗ್: ತಲೈವಾಸ್‌ಗೆ ಗೆಲುವು

ನವದೆಹಲಿ: ಅನುಭವಿ ರೈಡರ್ ನರೇಂದ್ರ ಓಶಿಯಾರ್ ಅವರ ಅಮೋಘ ಆಟದಿಂದಾಗಿ ತಮಿಳ್ ತಲೈವಾಸ್ ತಂಡವು ಪ್ರೊ ಕಬಡ್ಡಿ ಲೀಗ್‌ನಲ್ಲಿ ಮಂಗಳವಾರ 32–25ರಿಂದ ಯು.ಪಿ.ಯೋಧಾಸ್ ತಂಡವನ್ನು ಸೋಲಿಸಿತು.

ಇಲ್ಲಿನ ತ್ಯಾಗರಾಜ ಕ್ರೀಡಾ ಸಂಕೀರ್ಣದಲ್ಲಿ ನಡೆದ ಪಂದ್ಯದಲ್ಲಿ ವಿರಾಮದ ವೇಳೆಗೆ 21–16 ಪಾಯಿಂಟ್‌ಗಳಿಂದ ಮುಂದಿದ್ದ ತಲೈವಾಸ್ ತಂಡದ ಪರ ದಾಳಿಯಲ್ಲಿ ನರೇಂದ್ರ ಓಶಿಯಾರ್ (10) ಮತ್ತು ಸಾಹಿಲ್ ಸಿಂಗ್ (6) ಪಾಯಿಂಟ್ಸ್ ಪಡೆದು ಮಿಂಚಿದರು.

2026ರ ಫಿಫಾ ವಿಶ್ವಕಪ್: ದಿನಾಂಕ ನಿಗದಿ

ನ್ಯೂಯಾರ್ಕ್ (ಎಪಿ): 2026ರ ಫಿಫಾ ವಿಶ್ವಕಪ್ ಟೂರ್ನಿಯ ಫೈನಲ್ ಪಂದ್ಯವು ಜುಲೈ 19ರಂದು ಅಮೆರಿಕದ ನ್ಯೂಜೆರ್ಸಿಯ ಮೆಟ್‌ಲೈಫ್ ಕ್ರೀಡಾಂಗಣದಲ್ಲಿ ನಡೆಯಲಿದೆ.

ಇದೇ ಮೊದಲ ಮೊದಲ ಬಾರಿಗೆ 48 ರಾಷ್ಟ್ರಗಳು ಟೂರ್ನಿಯಲ್ಲಿ ಭಾಗವಹಿಸಲಿವೆ. ಮೆಕ್ಸಿಕೊದ ಕ್ರೀಡಾಂಗಣಲ್ಲಿ ಜೂನ್ 11ರಂದು ಟೂರ್ನಿಗೆ ಚಾಲನೆ ದೊರೆಯಲಿದೆ. ಮೆಕ್ಸಿಕೊ, ಅಮೆರಿಕ ಹಾಗೂ ಕೆನಡಾ ಜಂಟಿಯಾಗಿ ಟೂರ್ನಿಯ ಆತಿಥ್ಯ ವಹಿಸಿವೆ. 3 ರಾಷ್ಟ್ರಗಳ ಒಟ್ಟು 16 ತಾಣಗಳಲ್ಲಿ ಪಂದ್ಯಗಳು ನಡೆಯಲಿವೆ.

ಈ ಬಾರಿ ಪಂದ್ಯಗಳ ಸಂಖ್ಯೆಯೂ 108ಕ್ಕೆ ಏರಿಕೆಯಾಗಿದೆ. ಕಳೆದ ಬಾರಿ ಕತಾರ್‌ನಲ್ಲಿ ನಡೆದ ಟೂರ್ನಿಯಲ್ಲಿ 32 ತಂಡಗಳು 64 ಪಂದ್ಯಗಳನ್ನು ಆಡಿದ್ದವು.

ಬಾಕ್ಸಿಂಗ್: ಕ್ವಾರ್ಟರ್‌ಗೆ ಸಚಿನ್, ಸಾಗರ್

ಸೋಫಿಯಾ, ಬಲ್ಗೇರಿಯಾ (ಪಿಟಿಐ): ಮಾಜಿ ವಿಶ್ವ ಯೂತ್ ಚಾಂಪಿಯನ್ ಸಚಿನ್ ಮತ್ತು ಕಾಮನ್‌ವೆಲ್ತ್ ಗೇಮ್ಸ್ ಬೆಳ್ಳಿ ಪದಕ ವಿಜೇತ ಸಾಗರ್ ಇಲ್ಲಿ ನಡೆಯುತ್ತಿರುವ 75ನೇ ಸ್ಟ್ರಾಂಡ್ಜಾ ಸ್ಮಾರಕ ಬಾಕ್ಸಿಂಗ್ ಟೂರ್ನಿಯಲ್ಲಿ ಮಂಗಳವಾರ ಕ್ವಾರ್ಟರ್ ಫೈನಲ್‌ಗೆ ಪ್ರವೇಶಿಸಿದರು.

ಸಚಿನ್ (57 ಕೆಜಿ) ಪ್ರಿ ಕ್ವಾರ್ಟರ್‌ನಲ್ಲಿ ಉಜ್ಬೇಕಿಸ್ತಾನದ ಫೈಜೋವ್ ಖುಡೋಯ್ನಾಜರ್ ವಿರುದ್ಧ 3–2ರಿಂದ ಗೆಲುವು ಪಡೆದರು. ಶುಕ್ರವಾರ ಅವರು ಎಂಟರ ಘಟ್ಟದಲ್ಲಿ ಜಾರ್ಜಿಯಾದ ಕಪಾನಾಡ್ಜೆ ಜಾರ್ಜಿ ಅವರನ್ನು ಎದುರಿಸಲಿದ್ದಾರೆ.

ಸಾಗರ್ (92 ಕೆಜಿ) ಪ್ರಿ ಕ್ವಾರ್ಟರ್‌ನಲ್ಲಿ ಲಿಥುವೇನಿಯಾದ ಜಜೆವಿಸಿಯಸ್ ಜೋನಾಸ್ ವಿರುದ್ಧ 5–0ಯಿಂದ ಗೆಲುವು ಸಾಧಿಸಿದರು. ಅವರು ಸೆಮಿಯಲ್ಲಿ ಗುರುವಾರ ಉಜ್ಬೇಕಿಸ್ತಾನದ ಜೊಕಿರೊವ್ ಜಖೋಂಗಿರ್ ವಿರುದ್ಧ ಸೆಣಸಲಿದ್ದಾರೆ. ವಂಶಜ್ (63.5 ಕೆಜಿ) ಇರಾನ್‌ನ ಹಬಿಬಿನೆಝಾದ್ ಅಲಿ ವಿರುದ್ಧ ಪರಾಭವಗೊಂಡರು.